ತೆಗೆದುಕೊಂಡರೆ ಒಂದು ತೀರ್ಮಾನಕ್ಕೆ ಬರುವುದಕ್ಕೆ ನಿಮಗೆ ಅನುಕೂಲವಾಗುತ್ತದೆ. ಆದ್ದರಿಂದ ಆ ಸಭೆಯನ್ನು ಇವತ್ತು ಅಥವಾ ನಾಳೆ ಕರೆದರೆ ಒಳ್ಳೆಯದು.

ಶ್ರೀ ವಾಟಾಳ್ ನಾಗರಾಜ್:- ಆದಷ್ಟು ಬೇಗ ವಿರೋಧಪಕ್ಷದ ಮುಖಂಡರನ್ನು ಕರೆದು ಚರ್ಚೆಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಇವತ್ತು ಸಂಜೆಯೇ ತಾವು ಅವಕಾಶವನ್ನು ಮಾಡಿಕೊಟ್ಟರೆ ನಾವು ಮಾತನಾಡುವುದಕ್ಕೆ ಸಿದ್ಧವಾಗಿದ್ದೇವೆ.

ಶ್ರೀ ಎಂ. ವೀರಪ್ಪಮೊಯಿಲಿ:- ಇವತ್ತು ಅಥವಾ ನಾಳೆ ಮಾಡೋಣ.

1993-94ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ ಭಾರಿ ಮತ್ತು ಮಧ್ಯಮ ನೀರಾವರಿ, ವಿದ್ಯುಚ್ಛಕ್ತಿ, ಇತ್ಯಾದಿ ಇಲಾಖೆಗಳ ಬೇಡಿಕೆಗಳು

† ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ):- ಬಹಳ ಪ್ರಮುಖವಾದ ಬೇಡಿಕೆಗಳ ಬಗ್ಗೆ ಅದರಲ್ಲೂ ವಿಶೇಷವಾಗಿ ಲೋಕೋಪಯೋಗಿ, ನೀರಾವರಿ ಮತ್ತು ವಿದ್ಯುಚ್ಛಕ್ತಿ ಇಲಾಖೆಗಳ ಬಗ್ಗೆ ವಿರೋಧಪಕ್ಷದ ನಾಯಕರು ಮತ್ತಿತರ ಪ್ರಮುಖ ಸದಸ್ಯರು ಸಾಕಷ್ಟು ಸಲಹೆಗಳನ್ನು ಕೊಟ್ಟು ಇದರಲ್ಲಿರತಕ್ಕ ನ್ಯೂನತೆಗಳ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುವ ಪ್ರಯತ್ನಮಾಡಿದ್ದಾರೆ. ಈ ರಾಜ್ಯದ ಅಭಿವೃದ್ಧಿಯಾಗಬೇಕಾದರೆ ಗ್ರಾಮೀಣ ಜನರು ನೆಮ್ಮದಿಯಿಂದ ಬಾಳಿ, ನಿಟ್ಟುಸಿರು ಬಿಡದಂಥ ವಾತಾವರಣ ಉಂಟಾಗಬೇಕಾದರೆ, ನಮ್ಮ ರಾಜ್ಯದಲ್ಲಿ ಆರ್ಥಿಕ ಪರಿಸ್ಥಿತಿ ಸುಧಾರಣೆ ಆಗಬೇಕೆಂದಿದ್ದರೆ ಈ ಮೂರು ಇಲಾಖೆಗಳ ಅಭಿವೃದ್ಧಿಯ ಬಗ್ಗೆ ವಿಶೇಷವಾದ ಕಾಳಜಿಯನ್ನು ತಾವು ವಹಿಸಬೇಕಾಗುತ್ತದೆ. ಈ ಬಜೆಟ್‌ನಲ್ಲಿ ಏನು ಅನುದಾನವನ್ನು ಕೊಟ್ಟಿದ್ದೀರಿ ಇದು ಈ ಮೂರು ಇಲಾಖೆಗಳಿಗೆ ಏನೇನೂ ಸಾಲದು. ವಿಶೇಷವಾಗಿ ಹೇಳುವುದಾದರೆ ಕೃಷ್ಣಾ, ಕಾವೇರಿ ಬೇಸಿನ್‌ನ ಅಭಿವೃದ್ಧಿ ದೃಷ್ಟಿಯಿಂದ ಬಚಾವತ್ ಆಯೋಗದ ತೀರ್ಪಿನಂತೆ 2000ನೇ ಇಸವಿಯೊಳಗೆ ಈ ಕೆಲಸ ಪೂರ್ತಿಯಾಗ ಬೇಕೆಂದಿದ್ದರೆ, ಈ ಎರಡೂ ಬೇಸಿನ್‌ಗಳಿಗೆ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕು. ಕನಿಷ್ಠ 1000 ಕೋಟಿ ರೂ.ಗಳನ್ನಾದರೂ ತಾವು ಕೂಡಲೇ ನೀರಾವರಿ ಇಲಾಖೆಗೆ ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ಖರ್ಚುಮಾಡದಿದ್ದರೆ ಬಹುಶಃ ಮುಂದಿನ ಪೀಳಿಗೆ ನಿಮ್ಮನ್ನು ಕ್ಷಮಿಸುವುದಿಲ್ಲ ಎನ್ನತಕ್ಕ ಮಾತನ್ನು ನಾನು ಪದೇ ಪದೇ ಹೇಳುತ್ತಿದ್ದೇನೆ.

ದೊಡ್ಡ ಪ್ರಮಾಣದಲ್ಲಿ ಮಂತ್ರಿಮಂಡಲ ಇದೆ. ನಾನು ಸನ್ಮಾನ್ಯ ಉಪಮುಖ್ಯಮಂತ್ರಿಗಳಾದ ಕೃಷ್ಣರವರಿಗೆ ಒತ್ತಾಯ ಮಾಡುವುದೇನೆಂದರೆ ದಯವಿಟ್ಟು ಕೃಷ್ಣಾ ಬೇಸಿನ್‌ನಲ್ಲಿ ಏನು ಅಭಿವೃದ್ಧಿ ಕಾರ್ಯಗಳು ಆಗಬೇಕಾಗಿದೆ ಅದು ಎರಡು ಸಾವಿರದ ವರ್ಷದಲ್ಲಿ ಅದು ಮುಗಿಯಬೇಕಾಗಿದೆ. ಅದು ಆಗಬೇಕಾಗಿರುವಂಥ ಕಳಕಳಿ ನಿಮಗೆ ಇದ್ದರೆ ನಿಮ್ಮ ಜೊತೆಯಲ್ಲಿರತಕ್ಕಂಥ ಒಬ್ಬ ಉಪಮಂತ್ರಿಯನ್ನು, ಒಬ್ಬ ಸಹಾಯಕ ಸಚಿವರನ್ನು ಇವತ್ತು ಕೃಷ್ಣಾಬೇಸಿನ್‌ನಲ್ಲಿ ಹಾಕಿ ಅಲ್ಲಿಯ ಅಭಿವೃದ್ಧಿಯನ್ನು ನೋಡಿಕೊಳ್ಳುವುದಕ್ಕೋಸ್ಕರ ಅವರನ್ನು ನಿಯುಕ್ತಿ ಮಾಡುವಂಥದ್ದು ಅಗತ್ಯವಾಗಿದೆ ಎಂದು ನಾನು ತಿಳಿದುಕೊಂಡಿರುತ್ತೇನೆ. ಇಲ್ಲಿ ಇರುವಂಥ ಉನ್ನತ ಅಧಿಕಾರಿಗಳ ಕಮಿಟಿ ಏನು ಇದೆ ಅದಕ್ಕೆ ಸಂಬಂಧಪಟ್ಟ ಇಲಾಖೆಯವರು ಏನಿದ್ದಾರೆ ಅವರು ಬೆಂಗಳೂರಿಗೆ ಬರುವಂಥ ಅಗತ್ಯವೇನೂ ಇಲ್ಲ. ಆ ಭಾಗದಲ್ಲಿ ಅವರನ್ನು ಅಲ್ಲಿಯೇ ನಿಲ್ಲಿಸಿ ಅಲ್ಲಿ ಏನೇನು ಅಭಿವೃದ್ಧಿ ಕಾರ್ಯಗಳಾಗಬೇಕೋ ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು. ಆ ಸ್ಥಳದಲ್ಲಿಯೇ ತೀರ್ಮಾನವನ್ನು ತೆಗೆದುಕೊಂಡು ಬೆಂಗಳೂರಿಗೆ ಬರದ ರೀತಿಯಲ್ಲಿ ಏನಾದರೂ ಒಂದು ವಿಶೇಷವಾದಂಥ ವ್ಯವಸ್ಥೆಯನ್ನು ಮಾಡಿ ಈ ಕೆಲಸ ಕಾರ್ಯಗಳಲ್ಲಿ ತಾವು ಮುನ್ನುಗ್ಗಿದರೆ ಮಾತ್ರ ಈ ರಾಜ್ಯದ ಜನರಿಗೆ ಸಮಯಕ್ಕೆ ಸರಿಯಾಗಿ, ಅವರ ಹೊಲಕ್ಕೆ ನೀರನ್ನು ಕೊಡುವುದಕ್ಕೆ ಆಗುತ್ತದೆ. ಅವರ ಜೀವನಕ್ಕೆ ಒಂದು ದಾರಿ

ತೋರಿಸಿದಂತಾಗುತ್ತದೆ. ಆ ದಿಕ್ಕಿನಲ್ಲಿ ವಿಶೇಷವಾದ ಒಂದು ಪ್ರಯತ್ನ ಸರ್ಕಾರ ಮಾಡದಿದ್ದರೆ, ಬಹುಶಃ ರಾಜ್ಯದ ನೀರಾವರಿ ಯೋಜನೆಗಳನ್ನು ಅನುಷ್ಠಾನಕ್ಕೆ ತರಲು ಆಸಕ್ತಿಯನ್ನು ವಹಿಸದಿದ್ದರೆ ದೊಡ್ಡ ಅಪರಾಧವಾದೀತು; ಮುಂದಿನ ಪೀಳಿಗೆ ನಿಮ್ಮನ್ನು ಕ್ಷಮಿಸುವುದಿಲ್ಲವೆನ್ನುವಂಥ ಒಂದು ಎಚ್ಚರಿಕೆಯನ್ನು ಈ ಸಂದರ್ಭದಲ್ಲಿ ಕೊಡಲಿಕ್ಕೆ ಇಚ್ಛಿಪಡುತ್ತೇನೆ.

ನಮ್ಮ ರಾಜ್ಯದಲ್ಲಿ ದೊಡ್ಡ ದೊಡ್ಡ ಪ್ರಮಾಣದಲ್ಲಿ ಅಣೆಕಟ್ಟುಗಳನ್ನು ಕಟ್ಟಿದ್ದೇವೆ. ಆ ಅಣೆಕಟ್ಟುಗಳನ್ನು ಕಟ್ಟಿ ಹತ್ತಾರು ವರ್ಷಗಳಾದರೂ ಸಹ, ಕಾಲುವೆಗಳ ಮೂಲಕ ಆ ನೀರನ್ನು ಅವರ ಹೊಲಕ್ಕೆ ತಲುಪಿಸುವಂಥ ಪ್ರಯತ್ನವನ್ನು ಮಾಡದೆ, ಇವತ್ತು ಅದರ ಸದುಪಯೋಗವನ್ನು ನಾವು ಮಾಡಿಕೊಳ್ಳುತ್ತಿಲ್ಲ. ಸನ್ಮಾನ್ಯ ಅಧ್ಯಕ್ಷರೇ, ತಮಗೆಲ್ಲಾ ಗೊತ್ತಿರುವ ಹಾಗೆ ಕೃಷ್ಣಾ ಕೊಳ್ಳದ ಭಾಗದಲ್ಲಿ 28 ನೀರಾವರಿ ಯೋಜನೆಗಳು ಇವೆ. ಕಾವೇರಿ ಕೊಳ್ಳದಲ್ಲಿ ಸುಮಾರು 17 ಪ್ರಮುಖವಾದ ಯೋಜನೆಗಳಿವೆ. ಗೋದಾವರಿ ಕೊಳ್ಳದಲ್ಲಿ ಸುಮಾರು ಎರಡು ಯೋಜನೆಗಳಿವೆ. ಹಾಗೆಯೇ ವರಾಹಿ ನದಿ ಒಂದು ಯೋಜನೆಯನ್ನು ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಈ ರೀತಿ ಒಟ್ಟು 48 ಭಾರಿ ಹಾಗೂ ಮಧ್ಯಮ ನೀರಾವರಿ ಯೋಜನೆಗಳಿಂದ ಬಹುಶಃ ನಾವು ಪ್ರಮುಖವಾಗಿ ನೀರಾವರಿ ಯೋಜನೆಗಳನ್ನು ಜಾರಿಗೆ ತಂದು ಅಣೆಕಟ್ಟುಗಳನ್ನು ಕಟ್ಟಿ ನೀರನ್ನು ಕೊಡುವಂಥ ಪ್ರಯತ್ನ ಮಾಡಿದರೆ, ಆ ಒಂದು ಅಂದಾಜಿನ ಪ್ರಕಾರ 2 ಕೋಟಿ 29 ಲಕ್ಷ 7825 ಹೆಕ್ಟೇರ್ ಜಮೀನಿಗೆ ನೀರಾವರಿಯನ್ನು ಅಳವಡಿಸಬಹುದಾಗಿತ್ತು. ಆದರೆ ಸನ್ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ಒಂದು ಮಾತನ್ನು ಹೇಳಲು ಬಯಸುತ್ತೇನೆ. ಅರ್ಧಭಾಗದ ನೀರನ್ನೂ ಕೂಡ ಉಪಯೋಗ ಮಾಡಿಕೊಳ್ಳುವ ಪ್ರಯತ್ನ ಮಾಡಲಿಲ್ಲ. ಇದುವರೆಗೆ 2 ಲಕ್ಷ 92 ಸಾವಿರದ 292 ಹೆಕ್ಟೇರ್‌ಗೆ ಜಮೀನುಗಳಿಗೆ ಮಾತ್ರ ನೀರಾವರಿಗೆ ಒಳಪಡಿಸುವಂಥ ಪ್ರಯತ್ನ ಮಾಡಿದ್ದೇವೆ, ಇನ್ನೂ ಒಂದು ಕೋಟಿ 40 ಲಕ್ಷಕ್ಕೆ ಹೆಚ್ಚು ಹೆಕ್ಟೇರಿಗೆ ನೀರಾವರಿಯನ್ನು ಒದಗಿಸತಕ್ಕಂಥ ಅಗತ್ಯ ನಮ್ಮದಿದೆ ಎನ್ನುವುದಾದರೆ ಬಹುಶಃ ಎಷ್ಟರಮಟ್ಟಿಗೆ ನಾವು ನೀರಾವರಿ ಯೋಜನೆಗಳಲ್ಲಿ ಪ್ರಗತಿಯನ್ನು ಸಾಧಿಸಿದ್ದೇವೆ ಎನ್ನುವುದಕ್ಕೆ ಈ ಅಂಕಿ-ಅಂಶಗಳೇ ಆಧಾರವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಸನ್ಮಾನ್ಯ ಉಪಮುಖ್ಯಮಂತ್ರಿಗಳೇ, ಕೃಷ್ಣಾ ಬೇಸಿನ್ ಈ ಯೋಜನೆಯನ್ನು ಎರಡು ಸಾವಿರ ವರ್ಷದೊಳಗೆ ಮುಗಿಸಬೇಕಾದರೆ, ಕನಿಷ್ಠ 6 ಸಾವಿರ ಕೋಟಿಗೂ ಹೆಚ್ಚಿನ ಹಣ ಬೇಕಾಗುತ್ತದೆ. ಅದಕ್ಕೆ 30 ಪರ್ಸೆಂಟ್ ನೀರಾವರಿಯನ್ನು ಉಪಯೋಗ ಮಾಡಿಕೊಳ್ಳುವುದಕ್ಕೂ ಆಗಿಲ್ಲವೆನ್ನುವ ಮಾತನ್ನು ಸಹ ಸನ್ಮಾನ್ಯ ಉಪಮುಖ್ಯಮಂತ್ರಿಗಳು ಹೇಳಿರಬೇಕಾದರೆ ಬಹುಶಃ ಇನ್ನು 6 ವರ್ಷದವರೆಗೆ ಎಷ್ಟರಮಟ್ಟಿಗೆ ಕೃಷ್ಣಾ ಬೇಸಿನ್‌ನಲ್ಲಿರುವಂಥ ಯೋಜನೆಯನ್ನು ಪೂರ್ಣ ಮಾಡಲಿಕ್ಕೆ ನಮ್ಮಿಂದ ಸಾಧ್ಯವಾಗಿದೆ, ಮತ್ತು ಅದಕ್ಕೆ ಎಷ್ಟು ಅಗತ್ಯವಾದಂಥ ಹಣವನ್ನು ಸರ್ಕಾರ ಬಿಡುಗಡೆ ಮಾಡಲಿಕ್ಕೆ ಸಾಧ್ಯವಿದೆ? ಅದರ ಬಗ್ಗೆ ತುಂಬಾ ಚಿಂತನೆಯನ್ನು ಮಾಡವುದು ಅಗತ್ಯವಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ನಾವು ಖರ್ಚುಮಾಡಿರತಕ್ಕಂಥ ಹಣದಲ್ಲಿ ಅಲ್ಲಿರತಕ್ಕಂಥ ಸಿಬ್ಬಂದಿವರ್ಗಕ್ಕೆ ಸಂಬಳಸಾರಿಗೆ, ಆಫೀಸ್ ಎಸ್ಟಾಬ್ಲಿಷ್‌ಮೆಂಟ್‌ಗಳಿಗೆ ಸುಮಾರು 50 ಪರ್ಸೆಂಟ್‌ಗಿಂತ ಹೆಚ್ಚಿಗೆ ವಿನಿಯೋಗವಾಗಿದೆಯೇ ಹೊರತು ಬೇರೆ ಏನೂ ಆಗಿಲ್ಲ. ಇವತ್ತು ರಾಜ್ಯದ ಜನರಿಗೆ ಇಲ್ಲಿ ನಿಂತು ಭರವಸೆಯನ್ನು ಕೊಡಬಹುದು, ಎರಡು ಸಾವಿರ ವರ್ಷದೊಳಗಾಗಿ ಬಚಾವತ್ ಆಯೋಗದ ತೀರ್ಮಾನವನ್ನು ಮುಗಿಸುತ್ತೇವೆ ಎನ್ನುವಂಥ ಮಾತನ್ನು ಹೇಳಿದರೂ ಸಹ ಇವತ್ತು ತಮ್ಮ ಆತ್ಮಕ್ಕೆ ತಾವು ಪ್ರಶ್ನೆಯನ್ನು ಹಾಕಿಕೊಂಡರೆ ಎರಡು ಸಾವಿರ ವರ್ಷದೊಳಗೆ ಅಲ್ಲ. 25 ವರ್ಷಗಳಾದರೂ ಸಹ ನಾವು ಈ ನೀರಾವರಿ ಯೋಜನೆಗಳನ್ನು ಪೂರ್ಣ ಮಾಡಲಿಕ್ಕೆ ಸಾಧ್ಯವಿಲ್ಲವೆನ್ನುವಂಥದ್ದು ತಮಗೆ ಮನದಟ್ಟಾಗಿದೆ ಎಂದು ನಾನು ಭಾವಿಸಿದ್ದೇನೆ. ಈ ಒಂದು ಸಂದರ್ಭದಲ್ಲಿ ನೀರಾವರಿ ಯೋಜನೆಗಳ ಬಗ್ಗೆ ತುಂಬ ಕಳಕಳಿ ಇರುವಂಥ ಮತ್ತು ಮಂಡ್ಯ ಜಿಲ್ಲೆಯ ರೈತರ ಮಗನಾಗಿ ಈ ಒಂದು ಭಾಗಕ್ಕೆ

ಕಳಕಳಿ ಇರುವಂಥ ವ್ಯಕ್ತಿಯಾಗಿ, ಈ ಒಂದು ಸ್ಥಾನ ಸಿಕ್ಕಿರುವಂಥ ಸಂದರ್ಭದಲ್ಲಿಯಾದರೂ ಸಹ ಈ ಕೃಷ್ಣಾ, ಕಾವೇರಿ ಯೋಜನೆಯನ್ನು ಪೂರ್ಣ ಮುಗಿಸುವ ದೃಷ್ಠಿಯಿಂದ ಒಂದು ವಿಶೇಷವಾದಂಥ ಪ್ರಯತ್ನವನ್ನು ತಾವು ಮಾಡಬೇಕು. ಅದಕ್ಕೆ ಬೇಕಾದಂಥ ಹಣವನ್ನು ಸಹ ಈ ಸಂದರ್ಭದಲ್ಲಿ ಬಿಡುಗಡೆ ಮಾಡಬೇಕೆನ್ನುವಂಥ ಒತ್ತಾಯವನ್ನು ಸಹ ಸರ್ಕಾರಕ್ಕೆ ಮಾಡುತ್ತೇನೆ. ಹೋದ ಸಾರಿ ಈ ಇಲಾಖೆ ಮೇಲೆ ಚರ್ಚೆಯಾಗುವಂಥ ಸಂದರ್ಭದಲ್ಲಿ ಮುಖ್ಯಮಂತ್ರಿಯಾದ ಶ್ರೀ ಬಂಗಾರಪ್ಪನವರು ಹೇಳಿದರು, ವರ್ಲ್ಡ್ ಬ್ಯಾಂಕ್ ಸಹಾಯದಿಂದ ಮತ್ತಿತರ ಸಹಾಯದಿಂದ ಕನಿಷ್ಠ ಒಂದು ಸಾವಿರ ಕೋಟಿ ರೂಪಾಯಿ ಹಣ ತಂದು ಬಿಡುಗಡೆ ಮಾಡುತ್ತೇವೆ, ಬೇರೆ ಬೇರೆ ಬಾಬಿನಲ್ಲಿ ಹಣ ತಂದು ಖರ್ಚು ಮಾಡುತ್ತೇವೆಂದು ಭರವಸೆ ಕೊಟ್ಟು ಅದರಲ್ಲಿ ಅರ್ಧ ಭಾಗ ಕೂಡ ಹಣ ಕೊಡಲಿಲ್ಲ, ಖರ್ಚು ಮಾಡಲಿಲ್ಲವೆಂದರೆ ಜನರಿಗೆ ಹೇಳುವುದು ಒಂದು, ಭರವಸೆ ಕೊಡುವುದು ಒಂದು; ಅದನ್ನು ಕಾರ್ಯರೂಪಕ್ಕೆ ತರುವ ಯಾವುದೇ ಪ್ರಾಮಾಣಿಕ ಪ್ರಯತ್ನ ಮಾಡುತ್ತಿಲ್ಲವೆಂದು ನೀವೇ ಕೊಟ್ಟಿರತಕ್ಕ ಅಂಕಿಅಂಶಗಳಿಂದ ಸ್ಪಷ್ಟವಾಗಿ ನಮಗೆ ಕಾಣುತ್ತಿದೆ.

ನೀವು ಇದುವರೆಗೆ ಹೊಸ ಹೊಸ ನೀರಾವರಿ ಯೋಜನೆಗಳನ್ನು ಏನು ಮಾಡುತ್ತಿದ್ದೀರಿ, ಕಳೆದ ಎರಡು ವರ್ಷಗಳಲ್ಲಿ ಯಾವ ಯಾವ ಕಂಟ್ರಾಕ್ಟರಿಗೆ ಈ ಕೆಲಸ ವಹಿಸಿಕೊಟ್ಟಿದ್ದೀರಿ. ಈ ಬಗ್ಗೆ ಒಂದು ಮಾತು ಹೇಳುವುದಕ್ಕೆ ಇಷ್ಟಪಡುತ್ತೇನೆ. ಉಪಮುಖ್ಯಮಂತ್ರಿಗಳನ್ನು ಇದನ್ನು ಪರಿಶೀಲಿಸಿ ನೋಡಬೇಕು. ಬಹುಪಾಲು ಹೊಸ ಕಂಟ್ರಾಕ್ಟನ್ನು ಆಂಧ್ರ ಪ್ರದೇಶದ ಕಂಟ್ರಾಕ್ಟರಿಗೆ ತಾವು ಕೊಟ್ಟಿದ್ದೀರಿ. ಎರಡನೆಯ ಮಾತು ಹೇಳುತ್ತೇನೆ, ಕರ್ನಾಟಕ ರಾಜ್ಯಕ್ಕೆ ಅವರು ಯಾವಾಗ ಬಂದರು ? ಯಾವಾಗ ಕಂಟ್ರಾಕ್ಟ್ ಮಾಡುವುದಕ್ಕೆ ನೋಂದಣಿ ಮಾಡಿಕೊಂಡರು ? ಟೆಂಡರ್ ಕರೆದ ಮೇಲೆ ಕಂಟ್ರಾಕ್ಟರನ್ನು ಹೊರ ರಾಜ್ಯದಿಂದ ಕರೆದುಕೊಂಡು ಬಂದು ಕಂಟ್ರಾಕ್ಟರ್ ಕೊಡುವ ಪ್ರಯತ್ನ ಮಾಡಿರುವಂಥ ದಾಖಲೆಗಳು ನನ್ನ ಹತ್ತಿರ ಇವೆ. ತಾವು ದಾಖಲೆಗಳನ್ನು ಪರಿಶೀಲಿಸಿದರೆ ಸ್ಪಷ್ಟವಾಗುತ್ತದೆ. ಅಂದರೆ ಇದರ ಅರ್ಥ ಏನು ? ಕರ್ನಾಟಕ ರಾಜ್ಯದಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುವ ಕಂಟ್ರಾಕ್ಟರ್ ಇಲ್ಲವೇ ? ಹೊರ ರಾಜ್ಯದಿಂದ ಈ ಕಂಟ್ರಾಕ್ಟರನ್ನು ಕರೆದುಕೊಂಡು ಬರುವ ಉದ್ದೇಶವೇನು ? ತಮಗೆ ಗೊತ್ತಿರುವ ಹಾಗೆ ಆಂಧ್ರದ ಏಜೆಂಟರಾಗಿ ಕೃಷ್ಣ ಬೇಸಿನ್‌ನವರು ಕೆಲಸ ಮಾಡುತ್ತಿದ್ದಾರೆ. ವಾಸ್ತವವಾಗಿ ಕೆಲಸ ಮಾಡುತ್ತಿಲ್ಲ. ಕುಂಟು ನೆಪಗಳನ್ನು ಹೇಳಿಕೊಂಡು ಕೆಲಸ ನಿಲ್ಲಿಸುವ ಪ್ರಯತ್ನ ಮಾಡುತ್ತಿದ್ದಾರೆ. ನಾವು ನಮ್ಮ ಶಾಸಕರು ಅಲ್ಲಿ ಒಂದು ವಾರ ಪ್ರವಾಸ ಮಾಡಿ ಇಲಾಖೆಯ ಮುಖ್ಯಾಧಿಕಾರಿಗಳ ಜೊತೆ ಚರ್ಚೆ ಮಾಡಿ ಬಂದೆವು. ಇಲ್ಲಸಲ್ಲದ ಕುಂಟು ನೆಪ ಮಾಡಿಕೊಂಡು ಯಾವುದೋ ಒಂದು ಟೆಂಡರ್ ಕರೆದ ರೇಟಿಗೆ ಅಂದರೆ ಕಡಿಮೆ ರೇಟಿಗೆ ಕೆಲಸ ವಹಿಸಿಕೊಂಡು ಆಮೇಲೆ ಅದಕ್ಕೆ ಡಬಲ್ ರೇಟಿಗೆ ಕೊಟ್ಟಂಥ ಅನೇಕ ಉದಾಹರಣೆಗಳಿವೆ. ಅಲ್ಲಿರತಕ್ಕ ಅಧಿಕಾರಿಗಳು ಮತ್ತು ಕೆಲವು ರಾಜಕಾರಣಿಗಳು ಶಾಮೀಲಾಗಿ ಒಂದು ರೀತಿ ಕಮಿಷನ್ ಏಜೆಂಟರಾಗಿ ಕೆಲಸ ಮಾಡುತ್ತಿದ್ದಾರೆಯೇ ಹೊರತು ಪ್ರಾಮಾಣಿಕವಾಗಿ ಕೊಟ್ಟಂಥ ಅಲ್ಪ ಹಣವನ್ನು ಯೋಜನೆಯ ಅನುಷ್ಠಾನಕ್ಕೆ ಉಪಯೋಗ ಮಾಡಿಕೊಳ್ಳದೆ ಅನೇಕ ಭ್ರಷ್ಟಾಚಾರದ ಹಗರಣಗಳು ತಾಂಡವವಾಡುತ್ತಿರುವ ಉದಾಹರಣೆಗಳು ನಮ್ಮ ಕಣ್ಮುಂದೆ ಇವೆ. ಅದಕ್ಕೋಸ್ಕರ ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ. ಉತ್ತರ ಕೊಡುವಂಥ ಸಂದರ್ಭದಲ್ಲಿ ಎರಡು ವರ್ಷದಲ್ಲಿ ನೀರಾವರಿ ಯೋಜನೆ ಹೊಸದಾಗಿ ಯಾವುದು ಆಯಿತು, ಯಾರ್ಯಾರಿಗೆ ಕಂಟ್ರಾಕ್ಟ್ ಕೊಟ್ಟಿರಿ. ಅದರಲ್ಲಿ ಹೊರ ರಾಜ್ಯದವರು ಯಾರು, ನಮ್ಮ ರಾಜ್ಯದವರು ಯಾರು ಎಂಬ ಸ್ಪಷ್ಟ ಚಿತ್ರವನ್ನು ನಮ್ಮ ಮುಂದಿಡಬೇಕು. ಈ ರಾಜ್ಯದ ಜನರಿಗೂ ಸಹ ಇದು ಮನವರಿಕೆಯಾಗಬೇಕೆಂಬ ದೃಷ್ಠಿಯಿಂದ ನಾನು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ. ಕಾವೇರಿ ಕೊಳ್ಳದ 17 ಯೋಜನೆಗಳನ್ನು ಪೂರ್ಣ ಮಾಡುವ ಯಾವುದೇ ಪ್ರಾಮಾಣಿಕ ಪ್ರಯತ್ನ ಇವತ್ತು ಆಗುತ್ತಿಲ್ಲ. ಕಾವೇರಿ ಜಲ ವಿವಾದದ ಬಗ್ಗೆ ಟ್ರಿಬ್ಯೂನಲ್ ಏನಾಗುತ್ತದೆಂದು ಅದರ ಬಗ್ಗೆ

ಚರ್ಚೆಯಾಗುತ್ತಿದೆಯೇ ಹೊರತು ಪ್ರಾಮಾಣಿಕವಾಗಿ. ಟ್ರಿಬ್ಯುನಲ್‌ನಲ್ಲಿ ಏನು ಚರ್ಚೆಯಾಗುತ್ತದೆ, ತೀರ್ಮಾನವಾಗುತ್ತದೆ; ಎಂಬುದರ ಬಗ್ಗೆ ಇಲ್ಲ. ಅದರ ಬಗ್ಗೆ ರಾಜ್ಯದಲ್ಲಿ ಏನು ಹೋರಾಟ ನಡೆಯುತ್ತಿದೆ ಅದು ಬೇರೆ ವಿಷಯ. ಅದರೆ ಅದನ್ನು ನೆಪಮಾಡಿಕೊಂಡು ಆ ಭಾಗದಲ್ಲಿ ಏನು ನೀರಾವರಿ ಯೋಜನೆ ಅಭಿವೃದ್ಧಿಯಾಗಬೇಕಾಗಿತ್ತು. ಆ ಕಡೆ ಏನೂ ಪ್ರಾಮಾಣಿಕ ಪ್ರಯತ್ನ ಮಾಡದೆ ಕೆಲಸ ಕಾರ್ಯ ಸ್ಥಗಿತವಾಗಿರುವಂಥ ಪರಿಸ್ಥಿತಿಯನ್ನು ಕರ್ನಾಟಕ ರಾಜ್ಯದಲ್ಲಿ ನೋಡುತ್ತಿದ್ದೇವೆ. ಸುಮಾರು 3,58,319 ಹೆಕ್ಟೇರಿಗೆ ಇವತ್ತು ಮನಸ್ಸು ಮಾಡಿದರೆ 17 ಕಾವೇರಿ ಬೇಸಿನ್ ಯೋಜನೆಗಳೇನಿವೆ ಅವುಗಳ ಮೂಲಕ ನೀರನ್ನು ಉಪಯೋಗ ಮಾಡಿಕೊಳ್ಳದೆ ಇರುವ ಸಂದರ್ಭ ಇದೆ. ಅಲ್ಲಿ ಅಣೆಕಟ್ಟೆ ಕಟ್ಟಿದ್ದರೂ ಸಹ ಅದನ್ನು ಸರಿಯಾದ ರೀತಿಯಲ್ಲಿ ಮುಂದುವರಿಸಿಕೊಂಡು ಹೋಗದೆ ಇರುವ ಪರಿಸ್ಥಿತಿಯನ್ನು ಇವತ್ತು ಕಾವೇರಿ ಬೇಸಿನ್‌ನಲ್ಲಿ ಕಾಣುತ್ತಿದ್ದೇವೆ. ಅದೇ ರೀತಿ ವರಾಹಿ ಯೋಜನೆ ಬಗ್ಗೆ ಹೇಳುವುದಾದರೆ, ನನಗೆ ಗೊತ್ತಿರುವ ಪ್ರಕಾರ 15 ಸಾವಿರ ಹೆಕ್ಟೇರ್ ಭೂಮಿಯನ್ನು ನೀರಾವರಿ ಮಾಡಬಹುದು. ಈ ಒಂದು ವರಾಹಿ ಯೋಜನೆಯಲ್ಲಿ. ಈ ಯೋಜನೆಗೆ 70 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಬೇಕಾಗಿತ್ತು, ಆದರೆ ಇದುವರೆಗೆ 6 ಕೋಟಿ ರೂಪಾಯಿಗಳನ್ನು ಕೂಡ ಖರ್ಚು ಮಾಡಲಿಲ್ಲ. ಒಂದು ಎಕರೆಗೂ ನೀರು ಕೊಡುವುದಕ್ಕಾಗಿಲ್ಲ. ಅಂದರೆ ನೀರಾವರಿ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಈ ಸರ್ಕಾರಕ್ಕೆ ಕಳಕಳಿ ಇಲ್ಲ. ಅದಕ್ಕೆ ಬೇಕಾದಂಥ ಗಮನ ಕೊಡುವಂಥ ಪ್ರಾಮಾಣಿಕ ಪ್ರಯತ್ನ ಮಾಡಲಿಲ್ಲ; ಅದಕ್ಕೆ ಬೇಕಾದ ಹಣ ಕೊಡಲಿಲ್ಲ. ಕೊಟ್ಟ ಹಣ ಸದುಪಯೋಗವಾಗುವ ಕಡೆ ವಿಶೇಷ ಗಮನ ಕೊಡದೆ ಇವತ್ತು ನೀರಾವರಿ ಯೋಜನೆಗಳು ಕುಂಠಿತಗೊಂಡಿದ್ದನ್ನು ನೋಡಿದರೆ ಈ ರಾಜ್ಯದ ರೈತ ಸಮುದಾಯಕ್ಕೆ ದ್ರೋಹ ಮಾಡುವ ಕೆಲಸ ಮಾಡುತ್ತಿದೆ ಈ ಸರ್ಕಾರ. ಅದಕ್ಕೆ ಈಗಲಾದರೂ ಬರುವಂಥ ದಿನಗಳಲ್ಲಿ ಸಿಗದಿಯಾದ ಹಣವನ್ನು ತೆಗೆದಿಟ್ಟು, ಕನಿಷ್ಟ ಒಂದು ಸಾವಿರ ಕೋಟಿ ರೂಪಾಯಿಗಳನ್ನಾದರೂ ಬೇರೆ ಬೇರೆ ಬಾಬಿನಲ್ಲಿ ತಂದು ತುಂಬಿ ನೀರಾವರಿ ಯೋಜನೆಗಳನ್ನು ಆದಷ್ಟು ಬೇಗ ಪೂರ್ಣ ಮಾಡುವುದಕ್ಕೆ ವಿಶೇಷ ಕಾರ್ಯಕ್ರಮವನ್ನು ರೂಪಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಮುಖ್ಯ ಮಂತ್ರಿಗಳು ಶಿವಮೊಗ್ಗದಲ್ಲಿ ಇದ್ದಂಥ ಸಂದರ್ಭದಲ್ಲಿ ಭದ್ರ ಬಲದಂಡೆ ನಾಲೆ ಒಡೆದು ಹೋಗಿ ಎರಡು ವರ್ಷವಾಗಿತ್ತು; ಅದನ್ನು ತಾವು ನೋಡಿಕೊಂಡು ಬಂದಿದ್ದೀರಿ. ಉಪ ಮುಖ್ಯಮಂತ್ರಿಗಳು ತಾವು ಕೂಡ ಹೇಳಿದ್ದೀರಿ. ಸದನದಲ್ಲಿ ಹೇಳಿದ್ದೀರಿ ಮತ್ತು ಹೊರಗಡೆ ಮಾತನಾಡತಕ್ಕ ಸಂದರ್ಭದಲ್ಲಿ ಕೂಡ ಹೇಳಿದ್ದೀರಿ. ನಾವು ತಜ್ಞರ ಸಮಿತಿ ಮಾಡಿದ್ದೇವೆ, ಅದರ ವರದಿ ಬರಬೇಕು ಎಂದು, ನಾನು 8 ತಿಂಗಳ ಹಿಂದೆ 30–40 ಸಾವಿರ ರೈತರನ್ನು ಕರೆದುಕೊಂಡು ಹೋಗಿ ಆದಷ್ಟು ಬೇಗ ಆ ಕೆಲಸ ಆಗಬೇಕೆಂದು ಒತ್ತಾಯ ಮಾಡಿದ ಸಂದರ್ಭದಲ್ಲಿ ನಿಮ್ಮ ತಜ್ಞರ ಸಮಿತಿ ಅಲ್ಲಿತ್ತು. ಅವರ ಜೊತೆ ನಾವು ಚರ್ಚೆ ಮಾಡಿದೆವು. ಇನ್ನು ಒಂದು ತಿಂಗಳಲ್ಲಿ ವರದಿ ಕೊಡುತ್ತಾರೆ. ಕೆಲಸ ಪ್ರಾರಂಭ ಮಾಡುತ್ತೇವೆಂದು ಹೇಳಿದಿರಿ. ಈಗ ಒಂದು ಬೇಸಿಗೆ ಕಾಲ ಮುಗಿದು ಹೋಯಿತು. ನಿಮ್ಮ ತಜ್ಞರ ಸಮಿತಿ ವರದಿ ಕೊಡುವುದಕ್ಕೆ ಎರಡು ತಿಂಗಳು ಬೇಕು ಎಂದರೆ ಈ ಬೇಸಿಗೆಯಲ್ಲಿ ಕೂಡ ಕೆಲಸ ಪ್ರಾರಂಭ ಮಾಡುವುದಿಲ್ಲ ಎಂದಾಯಿತು. ನಾನು ಈ ಮಾತು ಏತಕ್ಕೆ ಹೇಳುತ್ತಿದ್ದೇನೆಂದರೆ ಸುಮಾರು 4–5 ನೂರು ಕೋಟಿ ರೂಪಾಯಿಗಳ ಬೇಸಿಗೆ ಬೆಳೆ ಸಂಪೂರ್ಣವಾಗಿ ನಾಶವಾಯಿತು.

ಸರ್ಕಾರಕ್ಕೆ ಅಭಿನಂದನೆ ಸಲ್ಲಿಸಬೇಕಾದುದು ಎಂದರೆ ಆ ಭಾಗದಲ್ಲಿ ಒಂದು ಛಾನಲ್ ಮಾಡಿ ತಾತ್ಕಾಲಿಕವಾಗಿ ನೀರನ್ನು ಒದಗಿಸಿದ್ದಾರೆ. ತಜ್ಞರನ್ನು ಕರೆದು ಚರ್ಚೆ ಮಾಡಿ. ಆ ಒಂದು ಭಾಗದಲ್ಲಿ ಹೊಸದಾಗಿ ಏನು ಛಾನಲ್ ಮಾಡಿದ್ದೀರಿ. ಅದರಿಂದ ಮೂಲ ಪ್ರಾಜೆಕ್ಟ್‌ಗೆ ಹೊಡೆತ ಆಗುವ ಸಂದರ್ಭ ಇದೆ. ಬಹಳ ವರ್ಷ ಅದನ್ನು ಮುಂದುವರಿಸಿಕೊಂಡು ಹೋಗುವುದು ಸರಿಯಲ್ಲ. ತಾತ್ಕಾಲಿಕ ವ್ಯವಸ್ಥೆ ಆದಾಗ ಮೂಲ ಛಾನಲ್‌ಗೆ ರಿಪೇರಿ ಮಾಡುವ ಕೆಲಸದ ಬಗ್ಗೆ ಸರ್ಕಾರ ಗಮನ ಕೊಡುವುದಿಲ್ಲ.

ಆದಷ್ಟು ಜಾಗ್ರತೆ ತಜ್ಞರ ವರದಿಯನ್ನು ತಾವು ತರಿಸಿಕೊಂಡು ಆ ಕೆಲಸವನ್ನು ಈ ಬೇಸಿಗೆ ಕಾಲದಲ್ಲಿ ಪ್ರಾರಂಭ ಮಾಡಬೇಕು. ಈ ಒಂದು ಯೋಜನೆಯಿಂದ 110 – 115 ಅಡಿವರೆಗೆ ನಾವು ನೀರನ್ನು ಉಪಯೋಗ ಮಾಡುತ್ತಿದ್ದೆವು. ಈಗ ಈ ಪ್ರಾಜೆಕ್ಟ್‌ನಲ್ಲಿ 140 ಅಡಿ ನೀರು ಇದ್ದರೂ ಕೂಡ ಹೊರಗೆ ಹಾಯಿಸುವ ಹಾಗೆ ಇಲ್ಲ. ಅದಕ್ಕಿಂತ ಹೆಚ್ಚು ನೀರು ಬೇಕು ಎಂದರೆ ಮಳೆ ಬರಬೇಕು. ಪ್ರಾಜೆಕ್ಟ್ ತುಂಬಬೇಕು. ಇವತ್ತು ಈ ಸ್ಥಿತಿ ಇದ್ದು ಬೇಸಿಗೆ ಬೆಳೆಗೆ ನೀರು ಕೊಡಲು. ಆಗದ ವಿಚಿತ್ರ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ಹೊಸ ಡ್ಯಾಮ್‌ಗಳು ಬೇಡ, ಕಟ್ಟಿರುವ ಡ್ಯಾಮ್‌ಗಳನ್ನು 2 ವರ್ಷದಲ್ಲಿ ರಿಪೇರಿ ಮಾಡದೇ ಹೋದರೆ ಇನ್ನು 2000 ಇಸವಿಯ ಹೊತ್ತಿಗೆ ಕೃಷ್ಣಾ ಬೇಸಿನ್‌ನಲ್ಲಿನ ಕೆಲಸ ಪೂರ್ಣ ಮಾಡುವುದಕ್ಕೆ ಸಾಧ್ಯವೇ ಹಾಗು ಜನರು ನಿಮ್ಮ ಮೇಲೆ ನಂಬಿಕೆ ಇಡುವುದಕ್ಕೆ ಸಾಧ್ಯವೇ ? ಬಲದಂಡೆ ನಾಲೆ ಬಗ್ಗೆ ಸಾಕಷ್ಟು ಹೋರಾಟ ನಡೆದಿದೆ. ರೈತರು ಕಂಗಾಲಾಗಿದ್ದಾರೆ. ಅವರ ನೆರವಿಗೆ ತಾವು ಬರಬೇಕು ಎಂದು ಹೇಳುತ್ತಾ ಮಾನ್ಯ ಸಚಿವರು ಸ್ಥಳಕ್ಕೆ ಭೇಟಿ ಕೊಟ್ಟಿರುವುದರಿಂದ ಮತ್ತು ಕಳಕಳಿ ಇರುವ ಒಬ್ಬ ವ್ಯಕ್ತಿ ಇಲಾಖೆಯ ಜವಾಬ್ದಾರಿಯನ್ನು ವಹಿಸಿಕೊಂಡಿರುವುದರಿಂದ ದಯಮಾಡಿ ಉತ್ತರ ಕೊಡುವಾಗ ಇದರ ಬಗ್ಗೆ ಯೋಚನೆ ಮಾಡಬೇಕು. ಈ ಯೋಚನೆಗೆ ಈ ಬಡ್ಜೆಟ್‌ನಲ್ಲಿ ಹಣವನ್ನು ಬಿಡುಗಡೆ ಮಾಡಿಲ್ಲ. ಈ ಬಗ್ಗೆ ಬಡ್ಜೆಟ್‌ನಲ್ಲಿ ಹಣವನ್ನು ತೆಗೆದಿಟ್ಟು ಈ ಕೆಲಸ ಪೂರ್ಣ ಮಾಡುವ ಬಗ್ಗೆ ವಿಶೇಷ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ತಜ್ಞರ ಸಲಹೆಯನ್ನು ಹೆಚ್ಚು ಕಾಲ ಕಾಯುವುದಕ್ಕಾಗುವುದಿಲ್ಲ. ಈಗಾಗಲೇ ಅನೇಕ ವರದಿಗಳು ಬಂದಿವೆ. ಸಮಿತಿ ಮಾಡಿ ಒಂದೂ ಮುಕ್ಕಾಲು ವರ್ಷ ಆಗಿದೆ. ಅದನ್ನು ಕಾರ್ಯರೂಪಕ್ಕೆ ತರಬೇಕೆಂದು ಒತ್ತಾಯ ಮಾಡುತ್ತೇನೆ. ಇನ್ನು ಅಧ್ಯಕ್ಷರೇ, ತಾವು ಕೊಟ್ಟಿರುವ ವಾರ್ಷಿಕ ವರದಿ ನೋಡಿದರೆ ಗಾಬರಿಯಾಗುತ್ತದೆ. ಇದರಲ್ಲಿ ಏನು ಹೇಳಿದ್ದೀರಿ ಎಂದರೆ, ನಾವು ಎಲ್ಲವನ್ನೂ ಮಾಡುವುದಕ್ಕೆ ಆಗದೇ ಇದ್ದರೂ ನೀವು ಏನೋ ಪ್ರೋಗ್ರೆಸ್ ಮಾಡುತ್ತೇವೆಂದು ಭರವಸೆಯನ್ನು ರಾಜ್ಯದ ಜನತೆಗೆ ಕೊಟ್ಟಿದ್ದೀರಿ. 1992–93ನೇ ಸಾಲಿನಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಯಿಂದ 57 ಸಾವಿರದ 20 ಹೆಕ್ಟೇರ್‌ಗೆ ನೀರು ಒದಗಿಸುತ್ತೇವೆ, ಸಣ್ಣ ನೀರಾವರಿ ವಿಭಾಗದಲ್ಲಿ 9706 ಎಕರೆಗೆ ನೀರು ಒದಗಿಸುತ್ತೇವೆಂದು ಹೇಳಿದ್ದೀರಿ. ಡಿಸೆಂಬರ್ ಅಂತ್ಯಕ್ಕೆ ನೀವು ಕೊಟ್ಟಿರುವ ಅಂಕಿ ಅಂಶದ ಪ್ರಕಾರ ಭರವಸೆ ಕೊಟ್ಟಿದ್ದು ಏನು ? ಸಣ್ಣ ಮತ್ತು ಮಧ್ಯಮ ಭಾರಿ ನೀರಾವರಿಯಲ್ಲಿ 66,726 ಹೆಕ್ಟೇರ್ ಅಧಿಕ ನೀರಾವರಿ ಕೊಡುತ್ತೇವೆಂದು ಹೇಳಿದ್ದುದರಲ್ಲಿ ಡಿಸೆಂಬರ್ ಕೊನೆಯವರೆಗೆ ನೀವು ಕೊಟ್ಟಿದ್ದುದು ಎಷ್ಟು ? ಡಿಸೆಂಬರ್ ಕೊನೆಯವರೆಗೆ ಭಾರಿ ಮತ್ತು ಮಧ್ಯಮ ಯೋಜನೆಯಿಂದ 19,566 ಹೆಕ್ಟೇರ್ ನೀರು ಒದಗಿಸಿದ್ದೇವೆಂದು ಹೇಳಿದ್ದೀರಿ. ಸಣ್ಣ ನೀರಾವರಿಯಿಂದ 1195 ಹೆಕ್ಟೇರ್ ಎಂದು ಹೇಳಿದ್ದೀರಿ. ಟೋಟಲ್ 20,761 ಒದಗಿಸಿದ್ದೀರಿ 66,726 ಹೆಕ್ಟೇರ್‌ಗೆ ನೀರು ಕೊಡಬೇಕಾದ ನೀವು 20,761 ಹೆಕ್ಟೇರ್‌ಗೆ ಎಂದರೆ ಮೂರನೇ ಒಂದು ಭಾಗಕ್ಕೂ ಕಡಿಮೆ ಕೊಟ್ಟಿದ್ದೀರಿ. ಇದಕ್ಕೆ ಕಾರಣ ಏನು ? ನಾನು ಅಂದುಕೊಂಡಿದ್ದೇನೆ. ಕೊನೆಯ ಪಕ್ಷ ಬಡ್ಜೆಟ್ ಚರ್ಚೆ ಆಗುವ ಸಂದರ್ಭದಲ್ಲಿ ಒಂದು ವರ್ಷದಲ್ಲಿ ಇಷ್ಟು ಸಾಧನೆ ಮಾಡುತ್ತೇವೆಂದು ಅಂಕಿ–ಅಂಶಗಳನ್ನು ಕೊಟ್ಟಮೇಲೆ ಹಣವನ್ನು ಒದಗಿಸಿ ನೀವು ಹೇಳಿದಷ್ಟು ಕಾರ್ಯರೂಪಕ್ಕೆ ತರದಿದ್ದರೆ ಈ ಸರ್ಕಾರದ ಬಗ್ಗೆ ರಾಜ್ಯದ ಜನರು ಯಾವ ರೀತಿ ಭರವಸೆ ಇಡಬೇಕು ? ಇನ್ನೊಂದು ಬಹಳ ಪ್ರಾಮುಖ್ಯವಾದ ವಿಚಾರದ ಬಗ್ಗೆ ಉಪಮುಖ್ಯಮಂತ್ರಿಗಳು ಗಮನಿಸಬೇಕು. 1991–92ನೇ ವರದಿಯನ್ನು ಕೊಟ್ಟಿದ್ದೀರಿ. 1991–92ನೇ ಸಾಲಿನಲ್ಲಿ ಭಾರಿ ಮತ್ತು ಮಧ್ಯಮ ಮತ್ತು ಸಣ್ಣ ನೀರಾವರಿ ಯೋಜನೆಯಲ್ಲಿ ತಾವು 47,145 ಹೆಕ್ಟೇರ್‌ಗೆ ನೀರನ್ನು ಒದಗಿಸಿದ್ದೀರಿ. ಹೋದವರ್ಷಕ್ಕಿಂತಲೂ ಈ ವರ್ಷ ಕಡಿಮೆ ಆಗಿದೆ. ಇನ್ನೂ 10 ಸಾವಿರ ಹೆಕ್ಟೇರ್ ಸೇರಿಸಿದರೂ ಕೂಡ ನಿಮ್ಮ ಗುರಿ 30 ಸಾವಿರ ಹೆಕ್ಟೇರ್ ದಾಟಿಲ್ಲ. ಎಂದರೆ ಅರ್ಧ ಕೂಡ ದಾಟಿಲ್ಲ. ಎರಡನೆಯದಾಗಿ ಖರ್ಚು ಮಾಡಿರುವ ಮೊತ್ತವನ್ನು ನೋಡಿ. ಇದನ್ನು ನೋಡಿದಾಗ ಗಾಭರಿ ಆಗಬಹುದು. 1992–93ನೇ ಸಾಲಿನಲ್ಲಿ ಈ

20,761 ಹೆಕ್ಟೇರ್‌ಗೆ ನೀವು ಏನು ಒದಗಿಸಿದ್ದೀರಿ, ನೀವು ಕೊಟ್ಟಿರುವ ವರದಿ ಪ್ರಕಾರ ನೀವು ಖರ್ಚು ಮಾಡಿರುವುದು ಎಷ್ಟು ಸ್ವಾಮಿ ?

12.00 ಪಿ.ಎಂ

ನೀವು ಕೊಟ್ಟಿರುವ ವರದಿ ಪ್ರಕಾರ ನೀವು ಖರ್ಚುಮಾಡಿರುವುದು 521 ಕೋಟಿ 61 ಲಕ್ಷ. ತಪ್ಪಾಗಿದ್ದರೆ ಅದು ನನಗೆ ಗೊತ್ತಿಲ್ಲ. ದಯಮಾಡಿ ಉತ್ತರ ಕೊಡುವ ಸಂದರ್ಭದಲ್ಲಿ ಪರಿಶೀಲನೆ ಮಾಡಿ ಉತ್ತರ ಕೊಡಿ. 1991–92ನೇ ಸಾಲಿನಲ್ಲಿ 47,145 ಹೆಕ್ಟೇರ್ ಭೂಮಿಗೆ ನೀರಾವರಿ ಕೊಡಲಿಕ್ಕೆ ಖರ್ಚು ಮಾಡಿರುವುದು 369 ಕೋಟಿ 24 ಲಕ್ಷ. ಅಂದರೆ 369 ಕೋಟಿ ರೂಪಾಯಿ ಖರ್ಚುಮಾಡಿ 47 ಸಾವಿರ ಹೆಕ್ಟೇರ್ ಭೂಮಿಗೆ ನೀರು ನೀವು ಕೊಟ್ಟಿದ್ದೀರಿ. ಈ ವರ್ಷ 521 ಕೋಟಿ ರೂಪಾಯಿ ಖರ್ಚುಮಾಡಿ ಕೇವಲ 20,761 ಹೆಕ್ಟೇರ್ ಭೂಮಿಗೆ ನೀರು ಕೊಟ್ಟಿದ್ದೀರಿ. ಅಂದರೆ ವರ್ಷೇ ವರ್ಷೇ ಯಾವರೀತಿ ನಿಮ್ಮ ಎಸ್ಟಾಬ್ಲಿಷ್‌ಮೆಂಟ್ ಮತ್ತು ಇತರೆ ಖರ್ಚುಗಳು ಜಾಸ್ತಿಯಾಗುತ್ತಿವೆ, ನಿಮ್ಮ ಎಸ್‌ಆರ್ ರೇಟ್ಸ್ ಜಾಸ್ತಿಯಾಗುತ್ತಿವೆ ಎಂಬುದು ಗೊತ್ತಾಗುತ್ತದೆ. ಆದರೆ ಇದರ ಪರಿಣಾಮ ಎಲ್ಲಿಗೆ ಹೋಗಿ ಮುಟ್ಟಬಹುದು, ಒಂದೊಂದು ದಿವಸ ನೀರಾವರಿ ಯೋಜನೆಗಳನ್ನು ತಡಮಾಡಿದರೂ ಸಹ ಯಾವರೀತಿ ಕುಂಠಿತವಾಗಿ ಈ ರಾಜ್ಯದ ಪ್ರಗತಿಗೆ ಅಡ್ಡಿಯಾಗುತ್ತಿದೆ ಈ ರಾಜ್ಯದ ರೈತನಿಗೆ ದೊಡ್ಡ ಅಪರಾಧ ಮಾಡಿದಂತಾಗುತ್ತದೆ ಎನ್ನುವುದನ್ನು ತಾವೇ ಕೊಟ್ಟಿರುವ ಅಂಕಿ ಅಂಶಗಳ ಮೂಲಕ ಗೊತ್ತಾಗುತ್ತದೆ. ಅದನ್ನುತಮ್ಮ ಕಣ್ಮುಂದೆ ಇಡುವ ಪ್ರಯತ್ನ ಮಾಡುತ್ತಿದ್ದೇನೆ. ನೀರಾವರಿ ಇಲಾಖೆಗೆ ಭಾರೀ ಶಸ್ತ್ರಚಿಕಿತ್ಸೆ ಅಗತ್ಯವಿದೆಯೆಂದು ನಾನು ಭಾವಿಸಿದ್ದೇನೆ. ಯಾವುದೇ ಅಧಿಕಾರಿಯಾಗಿರಲಿ, ಪ್ರಾಮಾಣಿಕವಾಗಿ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಬೇಕು. ನಿಗದಿ ಮಾಡಿದಂತಹ ಒಂದು ಪ್ರಗತಿಯನ್ನು ಸಾಧಿಸಬೇಕೆಂದು ತಮ್ಮ ಇಲಾಖೆಯಲ್ಲಿ ಜಾರಿಗೆ ತರುವಂತಹ ಒಂದು ಪ್ರಯತ್ನ ತಮ್ಮ ಇಲಾಖೆಯಲ್ಲಿ ಜಾರಿಗೆ ತರುವಂತಹ ಒಂದು ಒತ್ತಾಯ ಮಾಡುತ್ತಿದ್ದೇನೆ ನಿರ್ದಿಷ್ಟವಾದ ಗುರಿಯನ್ನು ತಾವು ಇಟ್ಟುಕೊಳ್ಳಬೇಕು. ಮಾರ್ಚಿ ಎಂಡ್‌ನಲ್ಲಿ ಬಜೆಟ್ ಅಧಿವೇಶನ ಬಂದಾಗ ಮಾತ್ರ. ಈ ಬಗ್ಗೆ ಚರ್ಚೆ ಮಾಡುತ್ತೇವೆಯೇ ಹೊರತು ಪ್ರತಿ ತಿಂಗಳು ಮಾರ್ಚಿ ಕಳೆದ ಮೇಲೆ ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಏಕೆ ಅಧಿಕಾರಿಗಳು ಇದರ ಬಗ್ಗೆ ಸರಿಯಾದ ಕ್ರಮವನ್ನು ತೆಗೆದುಕೊಳ್ಳಲಿಲ್ಲ? ಕಂಟ್ರಾಕ್ಟರುಗಳು ಯಾರೂ ಕೆಲಸ ಮಾಡುತ್ತಿಲ್ಲ.

ಇದರ ಬಗ್ಗೆ ವಿಶೇಷವಾದ ಗಮನಹರಿಸದಿದ್ದರೆ ಬಹುಶಃ ನಾವು ದೊಡ್ಡ ಅಪರಾಧ ಮಾಡಿದಂತಾಗುತ್ತದೆ. ಇದರ ಬಗ್ಗೆ ವಿಶೇಷವಾದ ಗಮನವನ್ನು ತಾವು ಹರಿಸಬೇಕೆಂದು ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುತ್ತಿದ್ದೇನೆ. ನಾನು ಒಂದು ಮಾತನ್ನು ಹೇಳಿದೆ. ಅದಕ್ಕೆ ಆಧಾರವನ್ನು ನಾನು ನಿಮಗೆ ಕೊಡುತ್ತೇನೆ. ನಾನು ಹೇಳುವಂತಹದ್ದು ನಮ್ಮ ರಾಜ್ಯದ ಕಂಟ್ರಾಕ್ಟರುಗಳನ್ನು ತಾವು ಉಪಯೋಗ ಮಾಡಿಕೊಳ್ಳದೆ ಬೇರೆ ರಾಜ್ಯದ ಜನರನ್ನು ಕರೆದುಕೊಂಡು ಬಂದು ಕಂಟ್ರಾಕ್ಟ್ ಕೊಡುವಂತಹ ಪ್ರಯತ್ನ ಮಾಡುತ್ತೀರಿ. ಆ ಕಂಟ್ರಾಕ್ಟರ್‌ಗಳೂ ಸಹ ಟೆಂಡರ್ ಕರೆಯುವುದಕ್ಕೆ ಹತ್ತಾರು ದಿವಸ ಮುಂಚೆ ರಿಜಿಸ್ಟ್ರೇಷನ್ ಮಾಡಿಸಿರುತ್ತಾರೆ. ಕಂಟ್ರಾಕ್ಟ್ ತೆಗೆದುಕೊಳ್ಳುವುದಕ್ಕೋಸ್ಕರ ರಿಜಿಸ್ಟರ್ ಮಾಡಿಸಿ ಕೆಲಸವನ್ನು ತೆಗೆದುಕೊಂಡು ಹೋಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಮತ್ತೊಂದು ಕಡೆ ಇದೇ ಕಂಟ್ರಾಕ್ಟರ್ ಯಾರು ಹೊರ ರಾಜ್ಯದಿಂದ ಬಂದಿದ್ದಾರೆ, ಅವರು ಯಾವುದನ್ನು ನಿಗದಿಯಾದ ಒಂದು ಮೊತ್ತಕ್ಕೆ ಕೆಲಸವನ್ನು ಒಪ್ಪಿಕೊಂಡಿದ್ದರೂ ಅದಕ್ಕೆ ಡಬ್ಬಲ್ ತ್ರಿಬಲ್ ಹಣವನ್ನು ಸರ್ಕಾರದ ಅಧಿಕಾರಿಗಳು ಶಾಮೀಲಾಗಿ ಕೊಟ್ಟಿರುವ ಅನೇಕ ಉದಾಹರಣೆಗಳನ್ನು ನಾನು ಇವತ್ತು ಕೊಡುತ್ತೇನೆ. ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಯಗಚಿ ಯೋಜನೆಯ ಬಗ್ಗೆ ಸರ್ಕಾರಿ ಆಜ್ಞೆ "Proceedings of the Claims Meeting held on 27.3.1992 G.O.No. PTD 191 FC–1 DT. 1.4.1992."

ಅದರಲ್ಲಿ ಏನಾಗಿದೆ ಅಂದರೆ ಕಂಟ್ರಾಕ್ಟ ಎಸ್.ಆರ್. ರೇಟ್‌ಗಿಂತ 18.56 ಪರ್ಸೆಂಟ್ ಕಡಿಮೆ ಹಾಕಿ, ಅರ್ವಿನ್ ಕನ್‌ಸ್ಟ್ರಕ್ಷನ್ಸ್ ಲಿಮಿಟೆಡ್, ಹೈದರಾಬಾದ್, ಅವರಿಗೆ ಕೆಲಸವನ್ನು ಕೊಟ್ಟರು: ಅವನ ಗುತ್ತಿಗೆ ಅವಧಿ 60 ತಿಂಗಳು. ಅವನು 60 ತಿಂಗಳಿನಲ್ಲಿ ಕೆಲಸ ಮುಗಿಸಬೇಕು. ಅವನು ಏನು ಹೇಳುತ್ತಾನೆ ಕೆಲಸ ಮಾಡಲಿಕ್ಕೆ ಸ್ಥಳ ತೆರವು ಮಾಡಿಕೊಡಲಿಲ್ಲ, ಅಲ್ಲಿ ಬೆಳೆ ಇತ್ತು: ವಿದ್ಯುತ್ ಮತ್ತು ದೂರವಾಣಿ ಸಂಪರ್ಕ ನಮಗೆ ಅನುಕೂಲ ಮಾಡಿಕೊಡಲಿಲ್ಲವೆಂದೂ, ಆದ್ದರಿಂದ ತಡವಾಯಿತು ಎನ್ನುವ ನೆಪವನ್ನು ಹೇಳುತ್ತಾನೆ. ನಿಮ್ಮ ಇಲಾಖೆಯವರಿಂದ 1990-91ರ ಎಸ್.ಆರ್. ರೇಟ್ ಪ್ರಕಾರ ಹೊಸದಾಗಿ ಕೆಲಸವನ್ನು ಕೊಡಬೇಕೆಂದು ರೆಕ್‌ಮೆಂಡೇಷನ್ ಬರುತ್ತದೆ. ಈ ಸಂಸ್ಥೆಯವರು 175 ಲಕ್ಷ ರೂಪಾಯಿ ಕೆಲಸ ಮಾತ್ರ ಮಾಡಿದ್ದಾರೆ. ಉಳಿದಂತಹ ಕೆಲಸ ಆಗಿಲ್ಲ. ಅವರು ಕಂಟ್ರಾಕ್ಟ ಹಿಡಿದಂತಹವರು 755 ಲಕ್ಷದ 37 ಸಾವಿರ ರೂಪಾಯಿ ಕೆಲಸ ಮಾಡಬೇಕಾಗಿತ್ತು. ಅಷ್ಟು ಜಾಸ್ತಿ ಮಾಡಿಕೊಟ್ಟರೆ 90-91 ಎಸ್.ಆರ್. ರೇಟ್ ಪ್ರಕಾರ 15 ಕೋಟಿ 91 ಲಕ್ಷ ರೂಪಾಯಿಗೆ ಕೊಡಬಹುದೆಂದು ರೆಕ್‌ಮಂಡ್ ಮಾಡಿ ಕೊನೆಗೆ 16.6 ಕೋಟಿ ರೂಪಾಯಿ ಕೆಲಸವನ್ನು ತಾವು ಕೊಟ್ಟಿದ್ದೀರಿ. ಆ ಗೌರ್ನಮೆಂಟ್ ಆರ್ಡರ್ ನನ್ನ ಹತ್ತಿರವಿದೆ. ಎರಡು ಮೂರು ಸಂಗತಿಗಳನ್ನು ಈ ಸಂದರ್ಭದಲ್ಲಿ ಹೇಳುವುದು ಇದೆ. ಟೆಂಡರ್ ಕರೆದ ಸಂದರ್ಭದಲ್ಲಿ ಒಂದು ಷರತ್ತಿಗೆ ಒಳಪಟ್ಟು ಕೆಲಸವನ್ನು ವಹಿಸಿಕೊಂಡ ಮೇಲೆ ಆ ಕೆಲಸ ಪೂರ್ಣವಾಗುವಂತೆ ನೋಡಿಕೊಳ್ಳುವುದು ನಿಮ್ಮ ಸರ್ಕಾರದ ಜವಾಬ್ದಾರಿ ಆಗಿತ್ತು ತಾನೇ ? ಅಲ್ಲಿ ಸಮಸ್ಯೆಗಳಿವೆ ಆ ಸಮಸ್ಯೆಗಳು ಬರದಂತೆ ಆ ಕಂಟ್ರಾಕ್ಟ್‌ದಾರರಿಂದ ಕೆಲಸ ಆಗುವಂತೆ ನೋಡಿಕೊಳ್ಳುವುದು ನಿಮ್ಮ ಕರ್ತವ್ಯ ತಾನೇ ?

ಉದ್ದೇಶಪೂರ್ವಕವಾಗಿ ನಿಮ್ಮ ಇಲಾಖೆಯವರಿಂದ ಈ ರೀತಿ ಸಮಸ್ಯೆಗಳಿವೆ ಎಂದು ಹೇಳಿ ಕಾಗದವನ್ನು ತರಿಸಿಕೊಂಡು ಹೊಸಬರಿಗೆ ಒಂದು ಎಸ್.ಆರ್. ರೇಟನ್ನು ಫಿಕ್ಸ್ ಮಾಡಿ ಸುಮಾರು ಆರೇಳು ಕೋಟಿ ರೂಪಾಯಿಗಳಷ್ಟು ಹೆಚ್ಚಿಗೆ ಈ ಕಂಟ್ರಾಕ್ಟ್‌ದಾರರಿಗೆ ಕೊಡುತ್ತೀರೆಂದು ಹೇಳುವುದಾದರೆ ನಾನು ಇವತ್ತು ಕೇಳುವುದಕ್ಕೆ ಇಚ್ಛಿಪಡುತ್ತೇನೆ; ಸನ್ಮಾನ್ಯ ಅಧ್ಯಕ್ಷರೇ, ತಾವು ಪರಿಶೀಲನೆ ಮಾಡಿ, ಈ ರೀತಿ ಹತ್ತಾರು ಘಟನೆಗಳಿವೆ. ಉದ್ದೇಶಪೂರ್ವವಾಗಿ ಆ ಕಂಟ್ರಾಕ್ಟ್‌ದಾರ ಕೆಲಸ ಮಾಡುವುದಿಲ್ಲ. ಕಡಿಮೆ ಟೆಂಡರ್ ಕರೆದು ಅವನು ಕೆಲಸ ವಹಿಸಿಕೊಳ್ಳುತ್ತಾನೆ. ನಾನು ತಮ್ಮನ್ನು ಕೇಳುತ್ತೇನೆ. ನಿಮ್ಮ ಕನ್‌ಸ್ಟ್ರಕ್ಷನ್ ಕಾರ್ಪೋರೇಷನ್ ಇದೆ. ಯಾವ ಉದ್ದೇಶದಿಂದ ಅದನ್ನು ಮಾಡಿದ್ದುದು ? ಈ ರೀತಿ ಒಬ್ಬ ಗುತ್ತಿಗೆದಾರ ಉದ್ದೇಶಪೂರ್ವಕವಾಗಿ ಮೋಸ ಮಾಡುವ ಪ್ರಯತ್ನ ಮಾಡಿದಾಗ, ಆ ಕೆಲಸವನ್ನು ನಿಮ್ಮ ಕನ್‌ಸ್ಟ್ರಕ್ಷನ್ ಕಾರ್ಪೋರೇಷನ್‌ಗೆ ವಹಿಸಿ ಆ ಕೆಲಸ ಆಗುವ ಹಾಗೆ ನೋಡಿಕೊಳ್ಳಬಹುದಾಗಿತ್ತು. ಇಲ್ಲಿಯು ವರದಿಯಲ್ಲಿ ಅವನ ಜೊತೆ ಚರ್ಚೆ ಮಾಡಿದೆವು ಎಂದು ಹೇಳಿದ್ದೀರಿ. ಆದರೆ ಅವರನ್ನು ನೆಗೋಸಿಯೇಷನ್‌ಗೆ ಕರೆದಿದ್ದಿರಾ ? ಏಕೆ ಈ ಕೆಲಸ ಮಾಡುವುದಕ್ಕೆ ಆಗುವುದಿಲ್ಲ ಎಂದು ಚರ್ಚೆ ಮಾಡುವ ಪ್ರಯತ್ನ ಮಾಡಿದಿರಾ ಅಥವಾ ಅವನಿಂದ ವರದಿಯನ್ನು ಕೊಡಿಸಿದಿರಾ ? ಈ ರೇಟಿನಲ್ಲಿ ಮಾಡುವುದಕ್ಕೆ ಆಗುವುದಿಲ್ಲ ಅವನೇ ಮಾಡಿಕೊಳ್ಳಲಿ ಅಂತ ಹೇಳಿ, ಹುಚ್ಚುಮುಂಡೆ ಮದುವೆಯಲ್ಲಿ ಉಂಡವನೇ ಜಾಣ ಅಂತ ಹೇಳಿ, ಈ ರೀತಿ ಮಾಡಿದಿರಾ ? ಇದು ಲೂಟಿಯಾಗಿರತಕ್ಕಂಥ ಹಗರಣದ ಒಂದು ಸ್ಯಾಂಪಲ್‌ನ್ನು ನಾನು ಕೊಡುತ್ತಿದ್ದೇವೆ. ಇದರ ಬಗ್ಗೆ ಪರಿಶೀಲನೆ ಮಾಡಿ. ಕೆಲವು ಪ್ರಕರಣಗಳಲ್ಲಿ ನಿಮ್ಮ ಫೈಲ್‌ನಲ್ಲಿ ಪೇಪರ್ಸೇ ಇಲ್ಲ. ಯಾವರೀತಿ ಎಸ್.ಆರ್. ರೇಟ್ ಜಾಸ್ತಿ ಮಾಡಿ ಒಂದೊಂದು ಕೆಲಸಕ್ಕೆ ಹತ್ತಾರು ಕೋಟಿ ರೂಪಾಯಿಗಳನ್ನು ಜಾಸ್ತಿ ಕೊಟ್ಟು ಒಳಗಿನ ವ್ಯವಹಾರ ಮಾಡಿ ಕಮೀಷನ್ ಹೊಡೆಯುವಂಥ ಒಂದು ಷಡ್ಯಂತ್ರ ನಡೆದಿದೆ. ಇದರ ಬಗ್ಗೆ ಸಂಪೂರ್ಣ ತನಿಖೆಯಾಗಬೇಕು. ಕಳೆದ ಎರಡು ವರ್ಷದಲ್ಲಿ ಯಾವ ಯಾವ ಹೊಸ ಕಂಟ್ರಾಕ್ಟ್‌ದಾರರಿಗೆ ಕೊಟ್ಟಿದ್ದೀರಿ ? ಯಾರಿಗೆ ಕೊಟ್ಟಿದ್ದೀರಿ ? ಯಾವ ರೇಟಿಗೆ ಅವರು ಒಪ್ಪಿಕೊಂಡಿದ್ದರು ಆಮೇಲೆ ಎಷ್ಟರಮಟ್ಟಿಗೆ ನೀವು ಜಾಸ್ತಿ ಮಾಡಿ ಯಾವ್ಯಾವ ಬಾಬಿನಲ್ಲಿ, ಯಾವ್ಯಾವ ಯೋಜನೆಯಲ್ಲಿ

ನೀವು ಜಾಸ್ತಿ ಹಣ ಕೊಟ್ಟಿದ್ದೀರಿ, ಇದರ ವಿವರಗಳನ್ನು ಸಹ ಈ ಸಂದರ್ಭದಲ್ಲಿ ಒದಗಿಸಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಬಹುಶಃ ತಾವು ಬಂದ ಮೇಲಾದರೂ ಸಹ ಇದಕ್ಕೆ ಒಂದು ಚಿಕಿತ್ಸೆ ಮಾಡಿ, ಈ ಇಲಾಖೆ ಸರಿಯಾದ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಮತ್ತು ನೀರಾವರಿ ಯೋಜನೆಗಳು, ಕೃಷ್ಣಾ–ಕಾವೇರಿ ಬೇಸಿನ್‌ನಲ್ಲಿ ಪೂರ್ಣವಾಗುವ ದೃಷ್ಟಿಯಿಂದ ವಿಶೇಷವಾದಂಥ ಗಮನಹರಿಸಬೇಕೆಂದು ಈ ಸಂದರ್ಭದಲ್ಲಿ ಒತ್ತಾಯವನ್ನು ಮಾಡುತ್ತೇನೆ. ಅಪ್ಪರ್ ತುಂಗಾ ಬಗ್ಗೆ ನಾನು ಪ್ರಸ್ತಾಪ ಮಾಡುವಂಥ ಅಗತ್ಯವಿಲ್ಲ. ಏಕೆಂದರೆ, ಯಾರದ್ದೋ ತುಟಿಗೆ ತುಪ್ಪ ಹಚ್ಚುವಂಥ ಕೆಲಸ, ಅವತ್ತು ಲೋಕಸಭಾ ಚುನಾವಣೆ ಬಂದಾಗ ಮಾಡಿದಂಥದ್ದು; ಮಾಡಿದ್ದರೆ ತುಂಬಾ ಸಂತೋಷ ಪಡುತ್ತೇನೆ. ಆದರೆ ಸುಮ್ಮನೆ ಅಲ್ಲೊಂದು ಇಲಾಖೆಯನ್ನು ತೆಗೆದು ಉದ್ಘಾಟನೆ, ಶಂಕುಸ್ಥಾಪನೆ ಅಂತ ಮಾಡಿ ಅವತ್ತಿನಿಂದ ಇವತ್ತಿನವರೆಗೆ ಹಾರೆ, ಪಿಕಾಸಿಯನ್ನೂ ಕೊಡದೇ ಇದ್ದರೆ ಏನು ಪ್ರಯೋಜನ ? ಇರುವ ನೀರಾವರಿ ಯೋಜನೆಗಳ ಬಗ್ಗೆಯೇ ನೀವು ಯೋಚನೆ ಮಾಡುತ್ತಿಲ್ಲ. ತಾವು ಉತ್ತರ ಕೊಡುವ ಸಂದರ್ಭದಲ್ಲಿ ಮಾಡುತ್ತೇವೆ ಎಂದು ಹೇಳಿದರೆ ನನಗೆ ತುಂಬಾ ಸಂತೋಷ. ಶಿಕಾರಿಪುರ ತಾಲ್ಲೂಕನ್ನು ಸರ್ವೆ ಮಾಡುವ ಸಂದರ್ಭದಲ್ಲಿ ಕೈಬಿಟ್ಟಿದ್ದಾರೆ. ನೀವು ಮಾಡುವುದಾದರೆ ಅದನ್ನು ಸೇರಿಸಿಕೊಳ್ಳಬೇಕಾಗುತ್ತದೆ. ನನ್ನ ತಾಲ್ಲೂಕನ್ನೂ ಬಿಟ್ಟರೂ ಪರವಾಗಿಲ್ಲ; ಒಬ್ಬ ಮಂತ್ರಿಯಾಗಿ, ಜವಾಬ್ದಾರಿ ಇಲಾಖೆಯ ಸಚಿವರಾಗಿ ಏನು ಹೇಳಿಕೆಯನ್ನು ಕೊಡುತ್ತೀರಿ ಕೊಡಿ.

ಶ್ರೀ ಕೆ.ಎಚ್. ರಂಗನಾಥ್:– ನಿಮ್ಮ ತಾಲ್ಲೂಕಿನಲ್ಲಿ ನೀರು ಹರಿಯುವುದಕ್ಕೆ ಸಾಧ್ಯ ಇಲ್ಲದೇ ಹೋದರೆ ಹೇಗೆ ಕೈ ಬಿಡುತ್ತಾರೆ ?

ಶ್ರೀ ಬಿ.ಎಸ್. ಯಡಿಯೂರಪ್ಪ:– ಹಿರಿಯ ಸಚಿವರಾದ ಶ್ರೀ ರಂಗನಾಥ್ ಅವರಿಗೆ ಗೊತ್ತಿದೆ. ಹಿಂದೆ ಸರ್ವೆ ಮಾಡಿದ್ದಂಥ ಸಂದರ್ಭದಲ್ಲಿ ಶಿಕಾರಿಪುರ ತಾಲ್ಲೂಕು ಸೇರಿತ್ತು. ಯಾವುದೋ ಒಂದು ರಾಜಕೀಯಕ್ಕೋಸ್ಕರ ಆ ತಾಲ್ಲೂಕನ್ನು ಬಿಟ್ಟಿದ್ದಾರೆ. ನಾನು ಈ ಸಂದರ್ಭದಲ್ಲಿ....

ಶ್ರೀ ಕೆ. ಹೆಚ್. ರಂಗನಾಥ್:– ಲೆವಲ್ ಪರ್ಮಿಟ್ ಮಾಡಿ ನೀರು ಹೋಗುವುದಿದ್ದರೆ ಯಾವ ಇಂಜಿನಿಯರ್ ತಪ್ಪಿಸಿದರೂ, ನೀರು ಹೋಗದೇ ಇರುವುದಕ್ಕೆ ಬಿಡುವುದಿಲ್ಲ. ಅದು ಹೇಗೆ ಬಿಡುವುದಕ್ಕೆ ಸಾಧ್ಯವಾಗುತ್ತೆ ? ಇಲ್ಲಿ ರಾಜಕೀಯ ಎಲ್ಲಿ ಮಾಡುವುದಕ್ಕೆ ಬರುತ್ತದೆ ?

ಶ್ರೀ ಬಿ.ಎಸ್. ಯಡಿಯೂರಪ್ಪ:– ಹಿಂದೆ ಸರ್ವೆ ಮಾಡಿದ್ದಂಥ ಕಾಲದಲ್ಲಿ ಯಾವ ಲೈನ್‌ನಲ್ಲಿ ಹೋಗಬೇಕೆಂದು ಯೋಚನೆ ಮಾಡಿದ್ದರು. ಆ ರೀತಿ ತೆಗೆದುಕೊಳ್ಳುವುದಾದರೆ ತಾವು ಇದರ ಬಗ್ಗೆ ವಿಶೇಷವಾಗಿ ಗಮನಹರಿಸಿ ಇದನ್ನು ಮಾಡಬೇಕೆಂದು ಯೋಜನೆ ಮಾಡುವುದಾದರೆ, ಶಿಕಾರಿಪುರ ತಾಲ್ಲೂಕು ಸೇರುತ್ತದೆ. ಶ್ರೀ ನರಸಪ್ಪನವರು ಸ್ಪೀಕರ್ ಇದ್ದಾಗ ಹಿಂದೆ ಸರ್ವೆ ಮಾಡಿದ್ದಕ್ಕೆ ರೆಕಾರ್ಡು ಇದೆ. ಸದನಕ್ಕೆ ನಾನು ಕೊಟ್ಟಿದ್ದೆ; ಸಂಬಂಧಪಟ್ಟ ಮುಖ್ಯಮಂತ್ರಿಗಳಿಗೆ ಕೊಟ್ಟಿದ್ದೆ. ದಯಮಾಡಿ ರೀಸರ್ವೆ ಮಾಡಿಸಿ ಶಿಕಾರಿಪುರ ತಾಲ್ಲೂಕನ್ನು ಅಳವಡಿಸಿಕೊಳ್ಳಲು ತಾವು ವಿಶೇಷ ಪ್ರಯತ್ನ ಮಾಡಬೇಕೆಂದು ಮಾತ್ರ ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್:– ಹಿರೇಕೆರೂರು ತಾಲ್ಲೂಕಿಗೆ ನೀರು ಬಂದರೆ ಶಿಕಾರಿಪುರ ತಾಲ್ಲೂಕಿಗೆ ನೀರು ಬರುತ್ತದೆಯೋ ಇಲ್ಲವೋ ? ತುಂಗಾ ಅಣೆಕಟ್ಟು ಪ್ರಕಾರ ಹಿರೇಕೆರೂರು ತಾಲ್ಲೂಕಿಗೆ ಬರುತ್ತದೆ, ಅಲ್ಲವೇ ಸ್ವಾಮಿ ? ಶಿಕಾರಿಪುರ ತಾಲ್ಲೂಕನ್ನು ಬಿಟ್ಟು ಹಿರೇಕೂರು ತಾಲ್ಲೂಕಿಗೆ ಹೇಗೆ ಹೋಗುವುದಕ್ಕೆ ಸಾಧ್ಯ ?

ಶ್ರೀ ಬಿ.ಎಸ್. ಯಡಿಯೂರಪ್ಪ:– ಈವತ್ತು ಹಿರೇಕೆರೂರು ತಾಲ್ಲೂಕಿಗೆ ನೀರು ಬಂದು ಶಿಕಾರಿಪುರ ತಾಲ್ಲೂಕನ್ನು ತಪ್ಪಿಸುವಂಥದ್ದು ಈ ವರದಿಯಲ್ಲಿದೆ. ತಾವು ಅದನ್ನು ತರಿಸಿ ನೋಡಿ. ನಾನು ಇದರಲ್ಲಿ

ಯಾವುದೇ ರಾಜಕಾರಣವನ್ನು ಬೆರೆಸುವುದಕ್ಕೆ ಇಷ್ಟಪಡುತ್ತಿಲ್ಲ. ಈಗ ನೀರಾವರಿ ಬಗ್ಗೆ ವಿಶೇಷವಾದ ಕಳಕಳಿ ಇರುವಂಥ ಸಚಿವರು ಬಂದಿರುವ ಸಂದರ್ಭದಲ್ಲಿ ನಾನು ನನ್ನ ತಾಲ್ಲೂಕಿನ ಜನರ ಹಿತದೃಷ್ಟಿಯಿಂದ ಒತ್ತಾಯ ಮಾಡುತ್ತೇನೆ. ನಮ್ಮ ತಾಲ್ಲೂಕಿಗೆ ಈ ಯೋಜನೆಯಿಂದ ಅನುಕೂಲವಾಗುವ ಹಾಗಿದ್ದರೆ ದಯವಿಟ್ಟು ರೀಸರ್ವ್ ಮಾಡಿಸಿ ಶಿಕಾರಿಪುರ ತಾಲ್ಲೂಕನ್ನು ಇದರಲ್ಲಿ ಅಳವಡಿಸಬೇಕು. ಹಿಂದಿನ ರೆಕಾರ್ಡ್ಸ್ ತೆಗೆದು ನೋಡಿದರೆ ತಮಗೆ ಮನವರಿಕೆಯಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು, ಲೋಕೋಪಯೋಗಿ ಇಲಾಖೆಯ ಬಗ್ಗೆ ಹೆಚ್ಚು ಮಾತನಾಡದಿರುವುದೇ ಕ್ಷೇಮವೆಂದು ಕಾಣುತ್ತದೆ. ಇಲ್ಲಿ ನಿಂತು ಅನೇಕ ಭರವಸೆಗಳನ್ನು ಕೊಟ್ಟರು. ನಾನು ಶಾಸಕನಾಗಿ ಏಳೆಂಟು ವರ್ಷವಾಯಿತು. ಶಿವಮೊಗ್ಗ ಜಿಲ್ಲೆಯ ಯಾವುದೇ ತಾಲ್ಲೂಕನ್ನು ತೆಗೆದು ನೋಡಿ.

ಒಂದು ಶಾಸಕರ ಕ್ಷೇತ್ರಕ್ಕೆ ಇಷ್ಟು ಲಕ್ಷ ಬಿಡುಗಡೆ ಮಾಡುತ್ತೇವೆ, ರಸ್ತೆಗಳನ್ನು ನಿರ್ಮಾಣ ಮಾಡುತ್ತೇವೆ ಎಂದು ನೀವೇನು ಭರವಸೆಯನ್ನು ಕೊಟ್ಟಿದ್ದೀರಿ, ಅದು ಯಾವುದೂ ಇದುವರೆಗೆ ಕಾರ್ಯರೂಪಕ್ಕೆ ಬಂದಿಲ್ಲ. ಕಳೆದ ಎರಡು ವರ್ಷಗಳಿಂದೀಚೆಗೆ, ಇರುವ ರಸ್ತೆಗಳು ಗುಂಡಿ ಬಿದ್ದು, ವಾಹನಗಳು ಓಡಾಟ ಮಾಡುವಂಥ ಸಂದರ್ಭ ಇಲ್ಲ. ಈ ಗುಂಡಿಗಳನ್ನು ಮುಚ್ಚುವಂಥ, ರಿಪೇರಿ ಕೆಲಸವೂ ಕೂಡ ಆಗಲಿಲ್ಲ. ಹಾಗೆಯೇ ಬಿಲ್‌ಗಳನ್ನು ಪಾವತಿ ಮಾಡಿಕೊಂಡಿರುವುದು ಇವತ್ತು ನಡೆಯುತ್ತಾ ಇದೆ. ಆದಕ್ಕಾಗಿ ನಾನು ಒತ್ತಾಯ ಮಾಡುವಂಥದ್ದು, ಅನುಭವ ಇರತಕ್ಕಂಥ ತಾವು ಸಚಿವರಾಗಿ, ಲೋಕೋಪಯೋಗಿ ಇಲಾಖೆಯನ್ನು ವಹಿಸಿಕೊಂಡಿದ್ದೀರಿ. ಇವತ್ತು, ತಾವು ಈ ಇಲಾಖೆಯನ್ನು ಏನಾದರೂ ಸರಿಪಡಿಸದಿದ್ದರೆ, ಸಿಬ್ಬಂದಿವರ್ಗಕ್ಕೆ ಸರಿಯಾದ ರೀತಿ ಬುದ್ಧಿವಾದ ಹೇಳಿ, ಕಾರ್ಯಪ್ರವೃತ್ತರಾಗುವಂತೆ ನೋಡಿಕೊಳ್ಳದಿದ್ದರೆ, ದೊಡ್ಡ ಅಪರಾಧ ಮಾಡಿದಂತಾಗುತ್ತದೆ. ದಯಮಾಡಿ, ಇದರ ಬಗ್ಗೆ ಕಾಯಕಲ್ಪ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನಮ್ಮ ಕಡೆ ಒಂದು ಗಾದೆ ಹೇಳುತ್ತಾರೆ."ಮೂಗಿಗಿಂತ ಮೂಗುತಿ ಭಾರ" ಆಯಿತು ಎಂದು. ಮಾನ್ಯ ವೀರೇಂದ್ರಪಾಟೀಲರು ಇಲ್ಲಿ ಮಾತನಾಡತಕ್ಕ ಸಂದರ್ಭದಲ್ಲಿ ಒಂದು ಮಾತು ಹೇಳಿದರು. ಸರ್ಕಾರದ ಕೆಲಸಗಳು ಯಾವ ರೀತಿಯಾಗುತ್ತಿವೆ ಎಂದರೆ, ಪ್ರತಿಯೊಂದು ಇಲಾಖೆಯಲ್ಲೂ ಅನೇಕ ಹೊಸ ಹೊಸ ಹುದ್ದೆಗಳನ್ನು ಕ್ರಿಯೇಟ್ ಮಾಡಿ. ಆ ಹುದ್ದೆಗಳನ್ನು ಭರ್ತಿ ಮಾಡಿ, ಯಾರನ್ನೋ ತೃಪ್ತಿಪಡಿಸಿ, ಸರ್ಕಾರದ ಬೊಕ್ಕಸವನ್ನು ಖಾಲಿ ಮಾಡತಕ್ಕ ಪ್ರಯತ್ನ ಆಗುತ್ತಿದೆಯೇ ಹೊರತು, ಅಗತ್ಯ ಇರುವಂಥ ಅಧಿಕಾರಿಗಳನ್ನು ನೇಮಕ ಮಾಡಿಕೊಂಡು ಕೆಲಸ ಮಾಡುವಂಥ ಪ್ರವೃತ್ತಿ ಕಡಿಮೆಯಾಗುತ್ತಿದೆ ಎಂದು ಅನೇಕ ಉದಾಹರಣೆಗಳನ್ನು ಕೊಟ್ಟು ಹೇಳಿದರು. ನಾನು ನಿಮ್ಮನ್ನು ಕೇಳುತ್ತೇನೆ. ನಿಮ್ಮದೂ ಸಹ ಒಂದು ತರದ ಮಿನಿ ಕ್ಯಾಬಿನೆಟ್ ಆಗಿದೆ. ತಮ್ಮಲ್ಲಿ 15–20 ಜನ ಸೂಪರ್‌ಟೈಂ ಸ್ಕೇಲ್ ಮುಖ್ಯ ಇಂಜಿನಿಯರ್‌ಗಳು ಇದ್ದಾರೆ. ಇವರಿಗೆ 10ಸಾವಿರಕ್ಕಿಂತ ಹೆಚ್ಚು ಸಂಬಳ ಕೊಡುತ್ತಿದ್ದೀರಿ. ಸರ್ಕಾರದಿಂದ ಕಾರು ಕೊಡುತ್ತೀರಿ, ಸರ್ಕಾರದ ಬಂಗಲೆ ಕೊಡುತ್ತೀರಿ, ಮನೆಗೆ ಆಳುಕಾಳು ಕೊಡುತ್ತೀರಿ, ಕೊಡಿ ತುಂಬಾ ಸಂತೋಷ. ಆದರೆ, ಅವರಿಂದ ನಿಮ್ಮ ಇಲಾಖೆಯಲ್ಲಿ ಏನೊಂದು ಕೆಲಸ ಕಾರ್ಯಗಳಾಗಬೇಕಾಗಿದೆ. ಅವುಗಳನ್ನು ಮಾಡಿ; ಇವರನ್ನು ಸಂಪೂರ್ಣ ಉಪಯೋಗ ಮಾಡಿಕೊಳ್ಳುತ್ತಿದ್ದಾರೆಯೇ ? ಇಷ್ಟು ಸೂಪರ್ ಟೈಂ ಸ್ಕೇಲ್ಸ್ ಇಂಜಿನಿಯರುಗಳ ಅಗತ್ಯ ಇದೆಯೇ ? ಇದರ ಬಗ್ಗೆ ಮರುಪರಿಶೀಲನೆ ಮಾಡುವುದು ತುಂಬಾ ಅಗತ್ಯ ಇದೆ. ಇವತ್ತು40 ಜನ ಮುಖ್ಯ ಇಂಜನಿಯರುಗಳು ಇದ್ದಾರೆ, ಇವರಿಗೂ ಸಹ 8–10 ಸಾವಿರ ಸಂಬಳ ಕೊಡುತ್ತೀರಿ, ಸ್ಟೇಟ್ ಕಾರು ಕೊಡುತ್ತೀರಿ, ಬಂಗಲೆ ಕೊಡುತ್ತೀರಿ, ಸಿಬ್ಬಂದಿ ಇದ್ದಾರೆ. ಇಡೀ ರಾಜ್ಯದಲ್ಲಿರುವಂಥ ಈ ಇಂಜನಿಯರುಗಳು ಎಲ್ಲಿದ್ದಾರೆಂಬುದು ಗೊತ್ತೇ. ಈ 40 ಜನರ ಪಟ್ಟಿ ತೆಗೆಸಿ ನೋಡಿ, ಬಹುತೇಕ ಜನ ಬೆಂಗಳೂರಿನಲ್ಲಿಯೇ ನೆಲೆಸಿದ್ದಾರೆ. ಅವರ ಮಕ್ಕಳ ಪಾಠ ಪ್ರವಚನ, ವಿದ್ಯಾಭ್ಯಾಸ, ಇದರ ಕಡೆಗೇ

ಅವರ ವಿಶೇಷ ಗಮನ. ನೀವೇನಾದರೂ ಎಲ್.ಒ.ಸಿ. ಬಿಡುಗಡೆ ಮಾಡಿದಾಗ, ಅಲ್ಲಿ ಹೋಗಿ ಏನಾದರೂ ಸ್ವಲ್ಪ ಕೊಟ್ಟ ಹಾಗೆ ಮಾಡಿ, ವಾಪಸ್ ಇಲ್ಲಿಗೆ ಬರುವಂತಾದ್ದು, ನಿಮ್ಮ ಇಲಾಖೆಯಲ್ಲಿ ನಡೆದುಕೊಂಡು ಹೋಗುತ್ತಿದೆ. ತುಂಬಾ ಜನ ಈ ರೀತಿ ಮುಖ್ಯ ಇಂಜಿನಿಯರುಗಳನ್ನು ನಿಯುಕ್ತಿ ಮಾಡುವುದರಿಂದ, ಅಭಿವೃದ್ಧಿ ಕಾರ್ಯವಾಗುವುದಿಲ್ಲ. ಇವತ್ತು ತೆಗೆದು ನೋಡಿ, ಲೋಕೋಪಯೋಗಿ ಇಲಾಖೆಯಲ್ಲಿ ಎಷ್ಟು ಹಣ ಖರ್ಚಾಗಿದೆ, ಸಿಬ್ಬಂದಿಗೆ ಎಷ್ಟು ಖರ್ಚು ಮಾಡಿದ್ದೀರಿ. ಅಲ್ಲಿರುವಂಥ ಒಬ್ಬ ಮುಖ್ಯ ಇಂಜಿನಿಯರೂ, ಸ್ಥಳದಲ್ಲಿ ಇರುವುದಿಲ್ಲ ಎಂದರೆ, ಇನ್ನು ಅಲ್ಲಿರುವಂಥ ಎಕ್ಸಿಕ್ಯುಟಿವ್ ಇಂಜಿನಿಯರ್, ಅಲ್ಲಿರುವಂಥ ಅಸಿಸ್ಟೆಂಟ್ ಇಂಜಿನಿಯರ್, ಅಲ್ಲಿರುವಂಥ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್, ಇರುತ್ತಾರೆಯೇ ? ಅಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಿದೆಯೇ ? ನಾನು ಏಕೆ ಈ ಮಾತನ್ನು ಪ್ರಸ್ತಾಪ ಮಾಡುತ್ತಿದ್ದೇನೆ ಎಂದರೆ, ಇವರನ್ನು ಎಲ್ಲಿ ಅಗತ್ಯ ಇದೆಯೋ ಅಲ್ಲಿ ಮಾತ್ರ ನೇಮಕ ಮಾಡಿಕೊಳ್ಳಬೇಕು. ಕೇವಲ ಯಾರಿಗೋ, ನಮಗೆ ಬೇಕಾದವರಿಗೆ ಈ ಹುದ್ದೆಗಳನ್ನು ನಿರ್ಮಾಣ ಮಾಡಿ, ಭರ್ತಿ ಮಾಡುವಂಥ ವಿಚಿತ್ರವಾದ ಪರಿಸ್ಥಿತಿ ಏನು ಒದಗಿ ಬಂದಿದೆ, ಇವತ್ತು ಇದಕ್ಕೆ ಕಡಿವಾಣ ಹಾಕಬೇಕು ಮತ್ತು ಇದಕ್ಕೆ ಕೊನೆಯನ್ನು ಮಾಡಬೇಕು. ಇಲಾಖೆಯು, ಇವರನ್ನು ಪ್ರಾಮಾಣಿಕವಾಗಿ ಉಪಯೋಗ ಮಾಡಿಕೊಳ್ಳತಕ್ಕ ವಿಶೇಷವಾದ ಪ್ರಯತ್ನವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತಿದ್ದೇನೆ. ಇನ್ನು ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು, ಬ್ಯಾಕ್‌ಲಾಗ್ ಭರ್ತಿ ಮಾಡುತ್ತೇವೆನ್ನುವ ಆಶ್ವಾಸನೆಯನ್ನು ಕೊಟ್ಟಿದ್ದರು. ನಿಮ್ಮ ಇಲಾಖೆಯಲ್ಲಿ ಎಷ್ಟು ಜನ ನೇರ ನೇಮಕಾತಿ ಹೊಂದಬೇಕಾಗಿದೆ. ತಾವು ಎಷ್ಟು ಜನರಿಗೆ ಬಡ್ತಿಯನ್ನು ಕೊಟ್ಟಿದ್ದೀರಿ. ನಿಮ್ಮ ಇಲಾಖೆಯಲ್ಲಿ ಬ್ಯಾಕ್‌ಲಾಗ್ ತುಂಬುವಂಥ ಸಂದರ್ಭ ಬಂದಾಗ, ಮುಖ್ಯಮಂತ್ರಿಗಳು ಹೇಳಿದ್ದರು. ಈ ಸದನದಲ್ಲಿ ಮುಖ್ಯಮಂತ್ರಿಗಳು ಹೇಳಿರುವಂಥದ್ದು, ಬ್ಯಾಕ್‌ಲಾಗ್ ತುಂಬುವಂಥ ವಿಶೇಷವಾದ ಪ್ರಯತ್ನ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರೂ ಸಹ, ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗದ ಜನಕ್ಕೆ ಸಂವಿಧಾನದ ಚೌಕಟ್ಟಿನಲ್ಲಿ ಏನು ಅನುಕೂಲಗಳು ಆಗಬೇಕಾಗಿತ್ತೋ ಪ್ರಮೋಷನ್ಸ್ ಸಿಗಬೇಕಾಗಿತ್ತೋ, ಅದು ಸಿಕ್ಕುತ್ತಿದೆಯೇ ? ಇವತ್ತು, ತಾವು ಇದ್ದೀರಿ, ಅದಕ್ಕಾಗಿ ಮಾಡಿ ಎಂದು ನಾನು ಹೇಳುವುದಿಲ್ಲ. ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗದವರಿಗೆ ನ್ಯಾಯಬದ್ಧವಾಗಿ ಸಿಗಬೇಕಾದ ಸವಲತ್ತು ಕೊಡದಿದ್ದರೆ, ದೊಡ್ಡ ಅಪರಾಧ ಮಾಡಿದಂತಾಗುತ್ತದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಇಲ್ಲೇನು ಭರವಸೆಯನ್ನು ಕೊಟ್ಟಿದ್ದಾರೆ. ಅದನ್ನು ಕಾರ್ಯರೂಪಕ್ಕೆ ತರುವಂಥ ವಿಶೇಷವಾದ ಪ್ರಯತ್ನವನ್ನು ತಾವು ಮಾಡಬೇಕು. ನಾನು ಈ ನಿಮ್ಮ ಇಲಾಖೆಯ ಬಗ್ಗೆ ವಿವರವಾಗಿ ಹೋಗುತ್ತಾ ಇಲ್ಲ. ನಿಮ್ಮ ಇಲಾಖೆಯಲ್ಲಿ ಇರತಕ್ಕಂಥ ಅವ್ಯವಹಾರ ಏನಿದೆ, ಅದರ ಬಗ್ಗೆ ಕೆಲವು ಸಂಗತಿಗಳನ್ನು ಮಾತ್ರ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಏಕೆಂದರೆ ಇನ್ನು ನೀವು ಈ ಇಲಾಖೆಯುನ್ನು ವಹಿಸಿಕೊಂಡು 3 ತಿಂಗಳು ಆಗಿದೆ. ನಿಮಗೆ ಕಳಕಳಿ ಇದೆ. ನಮ್ಮ ಶಾಸಕರು ಸ್ವಲ್ಪ ತಲೆ ಎತ್ತಿ ತಿರುಗಾಡುವಂತೆ ಸ್ವಲ್ಪ ರಸ್ತೆ ರಿಪೇರಿಗಳು, ರಸ್ತೆ ಡಾಂಬರೀಕರಣ ಮಾಡುವ ಕಡೆ ತಾವು ಗಮನ ಹರಿಸುತ್ತೀರಿ ಎಂದು ತಿಳಿದುಕೊಂಡು ನಾನು ಅದರ ಬಗ್ಗೆ ಹೆಚ್ಚು ಚರ್ಚೆಗೆ ಹೋಗದೆ ನಿಮ್ಮ ಇಲಾಖೆಯಲ್ಲಿ ಕೆಲವು ಮಾರ್ಪಾಡುಗಳು, ಕೆಲವು ಸಲಹೆಗಳು ಏನಿವೆ ಅದನ್ನು ಮಾತ್ರ ನಾನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ನಿಮ್ಮ ಇಲಾಖೆಯಲ್ಲಿ ಮುಖ್ಯ ವಾಸ್ತುಶಿಲ್ಪಿ ಹುದ್ದೆ ಒಂದು ಇದೆ. ಇವತ್ತು ನನಗೆ ಗೊತ್ತಿರುವ ಪ್ರಕಾರ ನಿವೃತ್ತಿ ಹೊಂದಿರುವ ಒಬ್ಬ ಅಧಿಕಾರಿಯನ್ನು ನೇಮಕ ಮಾಡಿಕೊಂಡಿದ್ದೀರಿ. ಏಕೆ ಸ್ವಾಮಿ ? ನಿಮ್ಮ ಇಲಾಖೆಯಲ್ಲಿ ಈ ಹುದ್ದೆಯಲ್ಲಿ ನಿಲ್ಲುವಂತಹ ಒಬ್ಬ ಸರಿಯಾದಂತಹ ಪ್ರಾಮಾಣಿಕ ವ್ಯಕ್ತಿ ಆ ಕೆಪಾಸಿಟಿಯವನು ಇಲ್ಲ ಅಂತ ಇದನ್ನು ಮಾಡುತ್ತಿದ್ದೀರೇನು ಅಥವಾ ಇನ್ನಾರಾದರೂ ತಮಗೆ ಬೇಕಾದಲ್ಲಿ ಒಬ್ಬರನ್ನು ಒಬ್ಬ ವ್ಯಕ್ತಿಯನ್ನು ಗುರಿ ಇಟ್ಟುಕೊಂಡು ಪ್ರಮೋಷನ್ ಕೊಟ್ಟು ಭರ್ತಿಮಾಡುವಂತಹ ಉದ್ದೇಶದಿಂದ ಏನಾದರೂ ಖಾಲಿ

ಇಟ್ಟುಕೊಂಡಿದ್ದೀರೇನು ? ಇದು ನನಗೆ ಅರ್ಥವಾಗುತ್ತಿಲ್ಲ. ಬಹಳ ದಿವಸಗಳಿಂದ ಬಹಳ ದೊಡ್ಡ ಲೋಪ ಆಗುತ್ತಿದೆ. ಇದರ ಬಗ್ಗೆ ಕೂಡ ತಾವು ವಿಶೇಷವಾದ ಗಮನಹರಿಸಬೇಕು. ನಿಮ್ಮ ಇಲಾಖೆಯಲ್ಲಿ ಜಾಗೃತ ತನಿಖೆ ಕೋಷ ಇದೆ. ಇದು ಏಕೆ ಮಾಡಿದಿರಿ ನೀವು ? ಇದರ ಉದ್ದೇಶ ತನಿಖಾ ಮಾಡಿ ಅನಿರೀಕ್ಷಿತ ಭೇಟಿ ಮಾಡಿ ಅಕ್ರಮಗಳು ಅದು ಆಗದರಂತೆ ನೋಡಿಕೊಳ್ಳಬೇಕೆಂದು ತಾವು ಮಾಡಿದ್ದೀರಿ. ಇವತ್ತು ಅದು ಆಗಿದೆಯೇ ? ತಾವು ಇವತ್ತು ತಮ್ಮ ವರದಿಯಲ್ಲಿ ಕೊಟ್ಟಿದ್ದೀರಿ, ಏನು ಕೊಟ್ಟಿದ್ದೀರಿ ಅಂದರೆ, 1992–93ನೇ ಸಾಲಿನಲ್ಲಿ 34 ಪ್ರಕರಣಗಳಲ್ಲಿ ತನಿಖೆ ಮಾಡಿದ್ದೇವೆ. 16 ಪ್ರಕರಣಗಳಲ್ಲಿ ಅಕ್ರಮಗಳು ಕಂಡು ಬಂದಿದ್ದು ಮುಂದಿನ ಕ್ರಮ ತೆಗೆದುಕೊಳ್ಳಲಾಗುತ್ತದೆ. ಅಧೀಕ್ಷಕ ಅಭಿಯಂತರರ ದರ್ಜೆಯ ಒಬ್ಬರ ನೇತೃತ್ವದಲ್ಲಿ ಒಂದು ಜಾಗೃತ ಕೋಷವನ್ನು ನೀವು ತೆಗೆದು ಅವರು ಕೇವಲ 34 ಪ್ರಕರಣ ತನಿಖೆ ಮಾಡಿದ್ದೇವೆ 16 ಪ್ರಕರಣಗಳಲ್ಲಿ ಅಕ್ರಮಗಳು ನಡೆದಿದೆ ಕ್ರಮ ತೆಗೆದುಕೊಳ್ಳುವವರಿದ್ದೇವೆ ಎಂದು ವರದಿಯನ್ನು ಕೊಟ್ಟರೆ ಈ ಇಲಾಖೆಯಲ್ಲಿ ಯಾರಾದರೂ ಭಯದಿಂದ ಪ್ರಾಮಾಣಿಕವಾಗಿ ಕೆಲಸ ಮಾಡಲು ಸಾಧ್ಯ ಇದೆಯೇ ? ಯಾವ ಕೆಲಸಕ್ಕೆ ನೀವು ಕೈ ಹಾಕಿ; ಅಲ್ಲಿ ಇಲ್ಲದ ಲೋಪದೋಷಗಳು ಅವ್ಯವಹಾರಗಳು ಇರುವಂತಹ ಈ ಸಂದರ್ಭದಲ್ಲಿ ಈ ಸಿಬ್ಬಂದಿಯನ್ನು ಜಾಸ್ತಿ ಮಾಡಿ. ಬೇರೆ ಬೇರೆ ಕಡೆ ಅನಗತ್ಯವಾದ ಸಿಬ್ಬಂದಿಗಳು ಇದ್ದಾರೋ ಅವರನ್ನು ತೆಗೆದು ಇಲ್ಲಿ ಹೆಚ್ಚಿನ ಸಿಬ್ಬಂದಿಯನ್ನು ಕೊಟ್ಟು ಸರಿಯಾದ ರೀತಿ ಈ ಒಂದು ಜಾಗ್ರತ ದಳ ಅಲ್ಲಿ ಹೋಗಿ ಯಾರ ಗಮನಕ್ಕೂ ತರದೇ ತನಿಖೆ ಮಾಡಿ ಅಲ್ಲಲ್ಲಿ ಅಗುವಂತಹ ತಪ್ಪಿಗೆ ಸರಿಯಾದ ಬರೇ ಎಳೆಯುವಂತಹ ಕೆಲಸ ನಿಮ್ಮ ಕಾಲದಲ್ಲಿ ಆಗದೆ ಇದ್ದರೆ ಮುಂದೆ ಯಾವ ಕಾಲಕ್ಕೂ ಸಹ ಲೋಕೋಪಯೋಗಿ ಇಲಾಖೆ ರಿಪೇರಿ ಆಗುವುದಕ್ಕೆ ಸಾಧ್ಯ ಇಲ್ಲ. ಇವರು ಯಾವ ರೀತಿ ಎಸ್ಟಿಮೇಟ್ ಮಾಡುತ್ತಾರೋ ಆ ಭಗವಂತನಿಗೆ ಗೊತ್ತು. ಖುಷಿ ಬಂದಷ್ಟು ಅದು 7 ಲಕ್ಷ ಅಂದರೆ 7 ಲಕ್ಷ, 10 ಲಕ್ಷ ಅಂದರೆ 10 ಲಕ್ಷ, 20 ಲಕ್ಷ ಅಂದರೆ 20 ಲಕ್ಷ, ಆಮೇಲೆ ಜಾಸ್ತಿ ಆಯಿತು ಅಂತ ಮತ್ತೆ ಮಾಡುವಂತಾದ್ದು. ಇವತ್ತು ಮನ ಬಂದಂತೆ ಎಸ್ಟಿಮೇಟ್ ಮಾಡ್ಕೊಂಡು ಅನೇಕ ದುರುಪಯೋಗಗಳು ಇವತ್ತು ನಡೆಯುತ್ತಿದೆ. ಇದನ್ನು ಸರಿಪಡಿಸುವುದಕೋಸ್ಕರ ಈ ಜಾಗ್ರತ ದಳವನ್ನು ಸ್ವಲ್ಪ ಭದ್ರಮಾಡಬೇಕು, ಇನ್ನೂ ಹೆಚ್ಚಿನ ಸಿಬ್ಬಂದಿ ಕೊಡಬೇಕು. ನಿಮ್ಮ ಇಲಾಖೆಯಲ್ಲಿ ಯಾರು ಪ್ರಾಮಾಣಿಕ ಅಧಿಕಾರಿ ಇದ್ದಾರೆಂದು ನಿಮಗೆ ಅನಿಸುತ್ತದೆಯೋ ಅಂತಹವರನ್ನು ಇದರಲ್ಲಿ ತೊಡಗಿಸಿ ಈ ಒಂದು ಜಾಗ್ರತ ಕೋಶವನ್ನು ಯಾವ ಉದ್ದೇಶದಿಂದ ನೀವು ತೆಗೆದಿದ್ದೀರೋ ಅದನ್ನು ಉಪಯೋಗವಾಗುವ ರೀತಿಯಲ್ಲಿ ತಾವು ವಿಶೇಷವಾದಂತಹ ಒಂದು ಪ್ರಯತ್ನವನ್ನು ಮಾಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ. ಇನ್ನು ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೋರೇಷನ್ ಇದೆ. ಇದು 25 ವರ್ಷಗಳ ಹಿಂದೆ ಈ ನಿಗಮವನ್ನು ಪ್ರಾರಂಭ ಮಾಡಿದಿರಿ. ಈ ಖಾಸಗಿ ಗುತ್ತೇದಾರರ ಜೊತೆ ಸರಿಯಾಗಿ ಕಾಂಪೀಟ್ ಮಾಡುವುದಕ್ಕೆ ಸ್ಪರ್ಧೆ ಮಾಡುವುದಕ್ಕೆ ಅನುಕೂಲ ಆಗಲಿ ಅವರು ಹೆಚ್ಚಿನ ದರವನ್ನು ಹಾಕಿ ಕೆಲಸ ಮಾಡಲಿಕ್ಕೆ ಮುಂದೆ ಬಾರದೇ ಇರುವ ಕಾಲದಲ್ಲಿ ಈ ನಿರ್ಮಾಣ ವೆಚ್ಚದಲ್ಲಿ ಒಂದು ಗಣನೀಯ ಆರ್ಥಿಕ ಅನುಕೂಲವಾಗಬೇಕೆನ್ನುವ ದೃಷ್ಟಿಯಿಂದ ತಾವು ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೋರೇಷನ್ ಸ್ಥಾಪನೆ ಮಾಡಿದಿರಿ. ಇವತ್ತು ನಿಮಗೆ ಗೊತ್ತಿದೆಯೇ ? ನನಗೆ ಗೊತ್ತಿರುವ ಪ್ರಕಾರ ಕಂಟ್ರಾಕ್ಟ ಕೆಲಸ ಮಾಡಿದವರಿಗೆ 40 ಕೋಟಿ ರೂಪಾಯಿಗಳ ಬಿಲ್ ಹಣ ಪಾವತಿ ಮಾಡಿಲ್ಲ ಬಾಕಿ ಇದೆ. ತಾವು ದಾಖಲೆಗಳನ್ನು ತರಿಸಿ ನೋಡಿ. ತಾವು ಅಧಿಕಾರಕ್ಕೆ ಬಂದ ಮೇಲೆ ಅಂದರೆ ಹೊಸ ಮುಖ್ಯಮಂತ್ರಿಗಳು ಬಂದ ಮೇಲೆ ನೀವು ಈ ಇಲಾಖೆಯನ್ನು ವಹಿಸಿಕೊಂಡ ಮೇಲೆ ಕಳೆದ 3 ತಿಂಗಳಿಂದ ಒಂದು ಕೆಲಸ ಅಲ್ಲಿಗೆ ಕೊಟ್ಟಿಲ್ಲ. ನಾನು ಕೆಲಸ ಕೊಡಿ ಎನ್ನುವುದಕ್ಕೆ ಒತ್ತಾಯ ಮಾಡುತ್ತಿಲ್ಲ. ಇಡೀ ರಾಜ್ಯದಲ್ಲಿ, ಯಾವುದೇ ಕಂಟ್ರಾಕ್ಟರರಿಗೆ ಹೊಸ ಹೊಸ ಯೋಜನೆಗಳು ಆಯಿತಲ್ಲಾ, ಎಷ್ಟು ಕೆಲಸಗಳನ್ನು ಕೊಟ್ಟಿದ್ದೀರಿ ಸ್ವಾಮಿ ? ಈ ಕನ್‌ಸ್ಟ್ರಕ್ಷನ್ ಕಾರ್ಪೋರೇಷನ್‌ಗೆ ಎಷ್ಟು

ನೀರಾವರಿ ಯೋಜನೆಗಳನ್ನು ನೀರಾವರಿ ಇಲಾಖೆಯವರು ವಹಿಸಿಕೊಟ್ಟಿದ್ದಾರೆ ? ಕಟ್ಟಡಗಳನ್ನು ಕಟ್ಟಿ ಎಂದು ತಾವು ಕೊಡುತ್ತೀರಿ. ಆ ಕಟ್ಟಡಗಳನ್ನು ಕಟ್ಟತಕ್ಕಂಥ ಸಂದರ್ಭದಲ್ಲಿ ನೀರಾವರಿ ಯೋಜನೆಯ ಕೆಲವು ಕೆಲಸಗಳನ್ನು ಕೊಡುವಂಥಹ ಪ್ರಯತ್ನ ಮಾಡಿದ್ದರೆ ಒಂದರಲ್ಲಿ ಲಾಸ್ ಆಗುತ್ತಿದ್ದರೆ ಇನ್ನೊಂದರಲ್ಲಿ ಅನುಕೂಲವಾಗುತ್ತಿತ್ತು. ಕಂಟ್ರಾಕ್ಟರ್ ಮುಂದೆ ಬರುತ್ತಿದ್ದರು. ಅದನ್ನು ಮುಚ್ಚಿ ಹಾಕುವಂತಹ ಪರಿಸ್ಥಿತಿ ಆ ಇಲಾಖೆಗೆ ಬಂದಿದೆ. ಸುಮಾರು 400 ಜನ ಅಲ್ಲಿ ಕೆಲಸ ಮಾಡುತ್ತಾರೆ. ಹಿಂದೆ ಸರ್ಕಾರ ಒಂದು ತೀರ್ಮಾನ ತೆಗೆದುಕೊಂಡಿತ್ತು. ನಮ್ಮ ಬಜೆಟ್‌ನಲ್ಲಿ ಏನು ಕೆಲಸಕಾರ್ಯಗಳು ಮಂಜೂರು ಆಗುತ್ತದೆ.

ಶ್ರೀ ಕೆ.ಹೆಚ್. ರಂಗನಾಥ್:– ತಮ್ಮಲ್ಲಿ ಸರಿಯಾದ ಮಾಹಿತಿ ಇಲ್ಲ ಎಂದು ಕಾಣುತ್ತದೆ. ಈವತ್ತು ಅದನ್ನು ಮುಚ್ಚತಕ್ಕಂಥ ಪರಿಸ್ಥಿತಿಯಲ್ಲಿ ಇಲ್ಲ. ಅದು ಚೆನ್ನಾಗಿ ಕೆಲಸ ಮಾಡುತ್ತಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ತಾವು ಚೆನ್ನಾಗಿ ಕೆಲಸ ಮಾಡುತ್ತಿದೆ ಎಂದು ಸರ್ಟಿಫಿಕೇಟ್ ಕೊಟ್ಟರೆ ಆಗುವುದಿಲ್ಲ, ಉತ್ತರ ಕೊಡುವಂತಹ ಸಂದರ್ಭದಲ್ಲಿ ತಾವು ಹೇಳಿ. ಕಳೆದ 3 ತಿಂಗಳಲ್ಲಿ ಅಲ್ಲಿಗೆ ಯಾವುದಾದರೂ ಕೆಲಸವನ್ನು ಎಂಟ್ರಸ್ಟ್ ಮಾಡಿದ್ದೀರಾ ?

12.30 ಪಿ ಯಂ

ಈ 40–45 ಕೋಟಿ ರೂಪಾಯಿಗಳ ಬಿಲ್ ಬಾಕಿ ಇರುವುದು ನಿಜವಲ್ಲವೇ ? ಹೀಗೆ ಬಾಕಿ ಇದ್ದರೆ ಅಲ್ಲಿ ಕೆಲಸ ಮಾಡಲು ಯಾರಾದರೂ ಕಂಟ್ರಾಕ್ಟರ್ ಮುಂದೆ ಬರಲು ಸಾಧ್ಯವಿದೆಯೇ ? ಇದು ಬಹಳ ಪ್ರಮುಖವಾಗಿರುವಂಥ ವಿಚಾರ. ಅಲ್ಲಿಗೆ ಸರಿಯಾದಂಥ ಪ್ರಾಮಾಣಿಕ ಅಧಿಕಾರಿಗಳನ್ನು ಹಾಕಿ, ಖಾಸಗಿ ಗುತ್ತಿಗೆದಾರರಿಗೆ, ಕಿರುಕುಳವನ್ನು ಕೊಟ್ಟು, ಎಸ್.ಆರ್ ರೇಟ್‌ಗೆ ಒಪ್ಪಿಕೊಂಡು ಕೆಲಸ ಮಾಡದೇ 50–60 ಪರ್‌ಸೆಂಟ್ ಏರಿಕೆ ಮಾಡಿಕೊಂಡು ಕೆಲಸ ಮಾಡದೇ ಸರಕಾರದ ಬೊಕ್ಕಸವನ್ನು ಲೂಟಿ ಮಾಡತಕ್ಕಂಥ ಸಂದರ್ಭದಲ್ಲಿ ಈ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಸ್ವಲ್ಪ ಭದ್ರ ಮಾಡಿದರೆ, ಒಳ್ಳೆಯದಲ್ಲವೇ ? ಒಂದು ವೇಳೆ ಖಾಸಗಿ ಕಂಟ್ರಾಕ್ಟರ್ ಬಾರದೆ ಇದ್ದರೆ ಈ ಸಂಸ್ಥೆಯ ಮೂಲಕ ನೀವು ಕೆಲಸವನ್ನು ಮಾಡಿಸುತ್ತೀರಾ ? ಈ ಕಾರ್ಪೊರೇಷನ್‌ನವರು ಕಡಿಮೆ ರೇಟ್‌ನಲ್ಲಿ ಕೆಲಸವನ್ನು ಮಾಡುತ್ತಾರೆ ಎಂದು ಗೊತ್ತಾದರೆ ಕಂಟ್ರಾಕ್ಟರ್‌ಗಳಿಗೆ ಸ್ವಲ್ಪ ಭಯ ಬರುತ್ತದೆ. ಸ್ವಲ್ಪ ಹದ್ದುಬಸ್ತಿನಲ್ಲಿ ಬರುತ್ತಾರೆ ಮತ್ತು ಇಲ್ಲಿರುವವರು ಕೂಡ ಸ್ವಲ್ಪ ಪ್ರಾಮಾಣಿಕವಾಗಿ ಕೆಲಸ ಮಾಡಲು ಮುಂದಾಗುತ್ತಾರೆ. ಈ ದೃಷ್ಟಿಯಿಂದ ಈ ಇಲಾಖೆಯನ್ನು ಸ್ವಲ್ಪ ಭದ್ರ ಮಾಡುವಂಥ ಅಗತ್ಯ ಇದೆ.

ಇನ್ನು ನನ್ನ ತಾಲ್ಲೂಕಿನ ಬಗ್ಗೆ ಒಂದೆರಡು ವಿಚಾರಗಳನ್ನು ಮಾನ್ಯ ಸಚಿವರುಗಳ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ನಾನು ನಿಮ್ಮ ಹತ್ತಿರ ವೈಯಕ್ತಿಕವಾಗಿ ಕೂಡ ಒಂದು ಮಾತನಾಡಿದ್ದೇನೆ. ನಿಮ್ಮ ಅಧಿಕಾರಿಗಳು ಶಿಕಾರಿಪುರದಲ್ಲಿ ಏನೋ ಒಂದು ರೀತಿಯ ಮಲತಾಯಿಧೋರಣೆಯನ್ನು ಅನುಸರಿಸುತ್ತಾ ಇದ್ದಾರೆ. ನೀವೇನೋ ಆದೇಶವನ್ನು ಕೊಟ್ಟಿದ್ದೀರಿ. ಒಂದು ವೇಳೆ ವಿರೋಧ ಪಕ್ಷದ ನಾಯಕರುಗಳ ಕ್ಷೇತ್ರವಾದುದರಿಂದ ಅಲ್ಲಿ ಏನೂ ಅಭಿವೃದ್ಧಿ ಕೆಲಸಕಾರ್ಯಗಳು ಆಗಬಾರದು ಎನ್ನುವ ದುರುದ್ದೇಶವಿದ್ದರೆ ನಾನು ಏನೂ ಹೇಳಲು ಇಚ್ಛಿಪಡುವುದಿಲ್ಲ. ನನ್ನ ವಿನಂತಿ ಏನೆಂದರೆ ಕಳೆದ ಮೂರು ವರ್ಷಗಳಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಯಾವ್ಯಾವ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ರಸ್ತೆ ನಿರ್ಮಾಣಕ್ಕೋಸ್ಕರ, ಡಾಂಬರೀಕರಣಕ್ಕೋಸ್ಕರ ಎಷ್ಟೆಷ್ಟು ಹಣ ಖರ್ಚಾಗಿದೆ ಎಂಬ ವಿವರಗಳನ್ನು ತರಿಸಿಕೊಳ್ಳಿರಿ. ಆದರೆ ನಮ್ಮ ಶಿಕಾರಿಪುರ ತಾಲ್ಲೂಕಿನಲ್ಲಿ ಮಾತ್ರ ಮಂಜೂರು ಆಗಿರುವ ಕೆಲಸಗಳನ್ನು ಕೂಡ ಪೂರ್ಣ ಮಾಡದೆ ಕೈಬಿಡುವಂಥ ಒಂದು ವಿಶೇಷವಾದಂಥ ಪ್ರಯತ್ನವನ್ನು ಅಲ್ಲಿಯ ಇಲಾಖೆ ಅಧಿಕಾರಿಗಳು ಮಾಡುತ್ತಾ ಇದ್ದಾರೆ. ಸಂಬಂಧಪಟ್ಟ ಚೀಫ್ ಇಂಜಿನೀಯರ್ ಮತ್ತಿತರ ಅಧಿಕಾರಿಗಳ ಹತ್ತಿರ ನಾನು ಅಲೆದು ಅಲೆದು ಸಾಕಾಗಿ ಹೋಗಿದ್ದೇನೆ. ಅಲ್ಲಿ ಉದ್ದೇಶಪೂರ್ವಕವಾಗಿ ಒಂದು

ಕೆಲಸವನ್ನೂ ಮಾಡುತ್ತಾ ಇಲ್ಲ. ಒಂದು ರಸ್ತೆಗೆ ಸುಮಾರು 18-20 ಕಿ.ಮೀ. ಡಾಂಬರೀಕರಣಕ್ಕೆ ಮಂಜೂರು ಆಗಿದೆ. ಆದರೆ ಮಾರ್ಚ್ ಕೊನೆಯಲ್ಲಿದ್ದರೂ ಕೂಡ ಎರಡೂ ಕಿ.ಮೀ.ನಷ್ಟು ಕೂಡ ಡಾಂಬರೀಕರಣವಾಗಿಲ್ಲ. ಕರ್ನಹಳ್ಳಿ ಮಲ್ಲೇನಹಳ್ಳಿ ರಸ್ತೆ ಇದೆ. ಎರಡು ತಿಂಗಳಿಂದ ಒಂದು ರೋಡ್‌ರೋಲರ್ ಅಲ್ಲಿ ಇದೆ. ಲೇಬರರ್ಸ್ ಬಂದಿದ್ದಾರೆ. ದಿನಕ್ಕೆ 20-30 ಅಡಿಗಳಷ್ಟೇ ಕೆಲಸ ನಡೆಯುತ್ತಾ ಇದೆ. ಶಿಕಾರಿಪುರ ತಾಲ್ಲೂಕಿನಲ್ಲಿ ಯಾವುದೇ ಕೆಲಸಕಾರ್ಯಗಳು ಆಗದೇ ಇರುವಂತೆ ಅಲ್ಲಿಯ ಅಧಿಕಾರಿಗಳು ನೋಡಿಕೊಳ್ಳುತ್ತಿದ್ದಾರೆ. ಇದರ ಉದ್ದೇಶ ಏನು ಎಂಬ ಬಗ್ಗೆ ವಿವರಗಳನ್ನು ತರಿಸಿಕೊಂಡು ಶಿಕಾರಿಪುರ ತಾಲ್ಲೂಕಿನಲ್ಲಿ ಆ ರೀತಿಯಲ್ಲಿ ಪ್ರೋಗ್ರೆಸ್ ಆಗಿಲ್ಲ ಎಂದು ಮನದಟ್ಟಾದರೆ ದಯಮಾಡಿ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಿ ರಸ್ತೆಗಳಿಗೆ, ಡಾಂಬರೀಕರಣಕ್ಕೆ ಹೆಚ್ಚಿನ ಹಣವನ್ನು ತಾವುಗಳು ಬಿಡುಗಡೆ ಮಾಡಬೇಕು, ಮಂಜೂರಾಗಿರುವಂಥ ಕಾಮಗಾರಿಗಳನ್ನು ಈ ತಿಂಗಳೊಳಗೆ ಮಾಡಿಸುವ ಕೆಲಸ ಮಾಡಬೇಕು. ಅಲ್ಲಿರುವಂಥ ಎರಡೂ ರೋಲರ್ಸ್ ಕೆಟ್ಟು ನಿಂತಿವೆ. ಇರುವ ಒಂದು ರೋಲರ್ ದಿನಕ್ಕೆ 100 ಅಡಿ ಕೆಲಸ ಮಾಡುತ್ತಾ ಇಲ್ಲ, ಅಧಿಕಾರಿಗಳು ಸಾಕಷ್ಟು ಆಸಕ್ತಿಯನ್ನು ಕೂಡ ವಹಿಸುತ್ತಾ ಇಲ್ಲ. ಆದ್ದರಿಂದ ಈ ಬಗ್ಗೆ ಸೂಕ್ತ ಗಮನವನ್ನು ಈ ಬಗ್ಗೆ ವಹಿಸಬೇಕೆಂದು ಕೇಳಿಕೊಳ್ಳುತ್ತೇನೆ. ಶಿವಮೊಗ್ಗದಲ್ಲಿ ಒಂದು ರಂಗಮಂದಿರವನ್ನು ಕುವೆಂಪುರವರು ಬದುಕಿರುವಾಗಲೇ ಅವರ ಕೈಯಿಂದಲೇ ಅದರ ಉದ್ಘಾಟನೆ ಮಾಡಿಸಬೇಕೆಂದು ಒಂದು ಪ್ರಸ್ತಾವನೆಯನ್ನು ಮಾಡಿದ್ದೇವೆ.

ಮಾನ್ಯ ಉಪ ಮುಖ್ಯಮಂತ್ರಿಯವರು ಶಿವಮೊಗ್ಗಕ್ಕೆ ಬಂದಾಗ ನಮ್ಮ ಅಲ್ಲಿನ ಹಿರಿಯರೆಲ್ಲರೂ ಮನವಿಯನ್ನು ಮಾಡಿಕೊಂಡಿದ್ದಾರೆ. ದಯಮಾಡಿ ತಮ್ಮ ವಿಶೇಷ ಪ್ರಯತ್ನಗಳನ್ನು ಮಾಡಿ ಅದಕ್ಕೆ ಬೇಕಾದಷ್ಟು ಹಣವನ್ನು ತೆಗೆದಿಟ್ಟು ಅದನ್ನು ಪೂರ್ಣಗೊಳಿಸಬೇಕೆಂದು ಅರಿಕೆಮಾಡಿಕೊಳ್ಳುತ್ತೇನೆ. ಇನ್ನು ರಾಜ್ಯದ ವಿದ್ಯುಚ್ಛಕ್ತಿ ವಲಯದ ಬಗ್ಗೆ ಒಂದೆರಡು ಮಾತುಗಳನ್ನು ಹೇಳ ಬಯಸುತ್ತೇನೆ. ಈ ಬಗ್ಗೆ ಸರಕಾರದವರು ಒಂದು ರೀತಿಯ ನಿರ್ಲಕ್ಷತಾ ಭಾವನೆಯನ್ನು ತೋರುತ್ತಾ ಇದ್ದಾರೆ. ನಮ್ಮ ಉತ್ಪಾದನೆ ಮತ್ತು ಬೇಡಿಕೆಗಳ ಅಂತರವನ್ನು ನೋಡಿದಾಗ ಯುದ್ಧೋಪಾದಿಯಲ್ಲಿ ವಿದ್ಯುತ್ ಉತ್ಪಾದನೆಗೋಸ್ಕರವಾಗಿ ಕೆಲಸಕಾರ್ಯಗಳನ್ನು ಮಾಡಬೇಕಾಗುತ್ತದೆ. ತಮಿಳುನಾಡಿನ ನೈವೇಲಿಯಲ್ಲಿ 70 ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಒಂದನ್ನು ಈ ಬಗ್ಗೆ ಮಾಡುತ್ತಿದ್ದಾರೆ ಸರಕಾರ ಮತ್ತು ಸೀಮನ್ಸ್ ಕಂಪನಿಯವರು ಒಟ್ಟು ಸೇರಿ ಅದನ್ನು ಮಾಡುತ್ತಿದ್ದಾರೆ ಎಂದು ತಿಳಿದು ಬರುತ್ತದೆ. ಅದು ಬೇಗನೆ ಪೂರ್ಣವಾಗುವ ಸಂದರ್ಭವೂ ಇದೆ. ಆ ಪ್ರಾಜೆಕ್ಟ್‌ಗೆ ಸರಕಾರವು 17 ಪರ್ಸೆಂಟ್‌ನಷ್ಟು ಹಣವನ್ನು ಮಾತ್ರ ವಿನಿಯೋಗ ಮಾಡಿ ಉಳಿದ ಬಹುಪಾಲು ಹಣವನ್ನು ಸೀಮನ್ಸ್ ಕಂಪನಿಯವರು ಮತ್ತು ಸಾರ್ವಜನಿಕರ ಹಣವನ್ನು ಉಪಯೋಗ ಮಾಡಿಕೊಂಡು ಅದನ್ನು ಪೂರ್ಣಮಾಡುವಂಥ ಪ್ರಯತ್ನವನ್ನು ಮಾಡುತ್ತಾ ಇದ್ದಾರೆ. ಹಾಗೆಯೇ ಖಾಸಗಿ ಸಹಭಾಗಿತ್ವದಲ್ಲಿ ನಮ್ಮ ರಾಜ್ಯದಲ್ಲಿಯೂ ಕೂಡ ಮಾಡುವ ಬಗ್ಗೆ ವಿಶೇಷವಾದಂಥ ಪ್ರಯತ್ನಗಳನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೆಯೇ ಈ ಥರ್ಮಲ್ ಯೂನಿಟ್‌ಗಳನ್ನು ಖಾಸಗಿಯವರಿಗೆ ವಹಿಸಿಕೊಡುವ ಮಾತುಗಳನ್ನು ನಾವು ಕೇಳುತ್ತಾ ಇದ್ದೇವೆ. ಆದರೆ ಇದನ್ನು ಕಾರ್ಯರೂಪಕ್ಕೆ ತರುವ ಒಂದು ಪ್ರಯತ್ನವು ರಾಜ್ಯದಲ್ಲಿ ಆಗುತ್ತಾ ಇಲ್ಲ, ಇದರ ಬಗ್ಗೆ ತಾವುಗಳು ಯೋಚನೆ ಮಾಡಬೇಕು. ದೈವಿಕವಾದ ಕೇಂದ್ರದ ಒಂದು ಅಪರೂಪದ ಕೊಡುಗೆ, ಮಂಗಳೂರು ಥರ್ಮಲ್‌ಪ್ಲಾಂಟ್ ಬಗ್ಗೆ ನಾನು ಮಾತನಾಡಿದ್ದೆ. ಯು.ಎಸ್.ಎಸ್.ಆರ್. ಕಣ್ಮರೆಯಾದ ಮೇಲೆ ಆ ಥರ್ಮಲ್‌ಪ್ಲಾಂಟ್ ಆಗುತ್ತದೆಯೋ ಇಲ್ಲವೋ ಎಂಬ ಪರಿಸ್ಥಿತಿಯು ಇರುವುದರಿಂದ ಬೇರೆ ಯಾವುದಾದರೂ ರೂಪದಲ್ಲಿ ಹಣವನ್ನು ತಂದು ಯೋಜನೆಯನ್ನು ಮಾಡಿ ಮುಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮುಂಬೈಯಲ್ಲಿ ಯಾವುದೇ ತಡೆಯಿಲ್ಲದೆ ವಿದ್ಯುತ್ ಪೂರೈಕೆಯು ಖಾಸಗಿ ಸಹಭಾಗಿತ್ವದಲ್ಲಿ ಆಗುತ್ತಾ ಇದೆ. ಅದೇ ರೀತಿಯಲ್ಲಿ ನಮ್ಮ ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಶಿವಮೊಗ್ಗ, ಮಂಗಳೂರು ಮುಂತಾದ ಕಡೆಗಳಲ್ಲಿಯೂ

ಮಾಡಬಹುದು. ಈಗ ವಿದ್ಯುತ್ ಕೊರತೆ ಏನಿದೆ ಅದನ್ನು ನೀಗಲು ಇಂಡಸ್ಟ್ರೀಗಳ ಹೆಚ್ಚಿನ ಪ್ರೋತ್ಸಾಹಕ್ಕಾಗಿ ಇಂಥ ಖಾಸಗಿ ವಿದ್ಯುತ್ ಉತ್ಪಾದನೆಗೆ ಉತ್ತೇಜನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಕ್ಷೇತ್ರದಲ್ಲಿನ ರಸ್ತೆ ಇತ್ಯಾದಿಗಳ ಬಗ್ಗೆ ಹೇಳಿದ್ವೆ, ಏಕೋ ಏನೋ ಗೊತ್ತಿಲ್ಲ ಶಿಕಾರಿಪುರ ತಾಲ್ಲೂಕಿನಲ್ಲಿ ನಾನು ಆಯ್ಕೆಯಾಗಿ ಬಂದುದ್ದೇ ಅಪರಾಧವಾಗಿದೆಯೋ ಏನೋ ಗೊತ್ತಿಲ್ಲ; ಅಥವಾ ಮತದಾರರು ನನ್ನನ್ನು ಆಯ್ಕೆ ಮಾಡಿದ್ದು ತಪ್ಪೋ ಎಂದು ನನಗನ್ನಿಸುತ್ತಿದೆ, ನಮ್ಮಲ್ಲಿ ಯಾವ ನಿಮಿಷದಲ್ಲಿ ವಿದ್ಯುತ್ ಹೋಗುತ್ತದೆ, ಬರುತ್ತದೆ, ಎಂಬುದು ಗೊತ್ತಾಗುವುದಿಲ್ಲ. ನಮ್ಮ ಕೆಇಬಿ ಶಿಕಾರಿಪುರ ಕಚೇರಿಗೆ ಒಂದು ಲಾರಿ ಬೇಕು ಎಂದು ಉಪ-ಮುಖ್ಯಮಂತ್ರಿಯವರನ್ನು ಕೇಳುವ ಪರಿಸ್ಥಿತಿ ಬಂತು ನಮ್ಮಲ್ಲಿ ಟ್ರಾನ್ಸ್‌ಫಾರ್ಮರ್ಸ್ ಇಲ್ಲದೆ ಬೋರ್‌ವೆಲ್‌ಗಳನ್ನು ತೆಗೆಸಿದ್ದರೂ ಕೂಡ ಉಪಯೋಗವಿಲ್ಲದ ಹಾಗೆ ಆಗಿದೆ. ಶಿಕಾರಿಪುರದಲ್ಲಿ ಜನರು ವಿದ್ಯುಚ್ಛಕ್ತಿಯ ತೊಂದರೆಯಿಂದ ಕಷ್ಟಕ್ಕೊಳಗಾಗಿದ್ದಾರೆ. ಅದನ್ನು ನೀಗಿಸಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮ್ಮನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಅಧ್ಯಕ್ಷರೇ, ಸಣ್ಣ ನೀರಾವರಿ, ವಿದ್ಯುಚ್ಛಕ್ತಿ, ಲೋಕೋಪಯೋಗಿ ಇಲಾಖೆ, ಇತ್ಯಾದಿಗಳನ್ನು ಸೇರಿಸಿ ಒಂದು ದೊಡ್ಡ ಇಲಾಖೆಗಳ ಬಗ್ಗೆ ನಾವಿಲ್ಲಿ ಚರ್ಚೆ ಮಾಡುತ್ತಾ ಇದ್ದೇವೆ. ನಮ್ಮಲ್ಲಿ ಕೆರೆಗಳ ರಕ್ಷಣೆ ಬಗ್ಗೆ ಒಂದು ವಿಶೇಷವಾದಂಥ ಯೋಜನೆ ಬೇಕಾಗಿದೆ. ಹಿಂದೆ ಸರ್.ಎಂ. ವಿಶ್ವೇಶ್ವರಯ್ಯ ಮತ್ತು ಸರ್.ಎಂ. ಮಿರ್ಜಾರವರ ಕಾಲದಲ್ಲಿ ಪ್ರತಿಯೊಂದು ಹಳ್ಳಿಗಳಲ್ಲಿ ಕೆರೆಗಳು ಧರ್ಮಛತ್ರಗಳು ಇರಬೇಕು ಎಂದು ಮಾಡಿದ್ದರು. ಇದು ಏತಕ್ಕಾಗಿ ಅಂದರೆ ಅಂದಿನ ಅವರುಗಳ ದೃಷ್ಟಿಯು ಅಮೋಘವಾಗಿತ್ತು. ಮಳೆ ಬಂದಾಗ ಕೆರೆಗಳು ತುಂಬಬೇಕು, ಅನಂತರ ಆ ನೀರನ್ನು ಜನರು ವರ್ಷವೆಲ್ಲಾ ಬಳಸಬೇಕು ಎಂಬ ಉದ್ದೇಶ ಅವರಲ್ಲಿತ್ತು. ಇವೊತ್ತು ನಮ್ಮ ಕೆರೆಗಳು ಎಷ್ಟು ಉಳಿದಿವೆ, ಎಷ್ಟು ನಾಶವಾಗಿವೆ, ಇರತಕ್ಕಂಥ ಕೆರೆಗಳನ್ನು ಅಭಿವೃದ್ಧಿಪಡಿರುವುದಕ್ಕೆ ನಾವು ಕೈಗೊಂಡ ಕ್ರಮಗಳು ಏನು? ಇದಕ್ಕಾಗಿ ಸಣ್ಣ ನೀರಾವರಿ ಇಲಾಖೆಯೂ ಇದೆ. ಇದರ ಮೂಲಕ ನಮ್ಮಲ್ಲಿರತಕ್ಕಂಥ ಸಾವಿರಾರು ಕೆರೆಗಳಲ್ಲಿ ಹೂಳೆತ್ತತಕ್ಕಂಥ ಕೆಲಸವು ನಮ್ಮಲ್ಲಿ ಆಗಿಲ್ಲ. ಪರಿಣಾಮಕಾರಿಯಾಗಿ ಆ ಕೆಲಸವನ್ನು ಮಾಡಲು ಕೆರೆಗಳ ಅಭಿವೃದ್ಧಿ ಮಂಡಳಿಯನ್ನು ರಚನೆ ಮಾಡಬೇಕೆಂದು ಸರಕಾರಕ್ಕೆ ಸಲಹೆ ಮಾಡಬಯಸುತ್ತೇನೆ. ಇವುಗಳು ಅತ್ಯಂತ ಪ್ರಾಚೀನವಾದಂಥ ಕೆರೆಗಳು ಇವೆ. ಅವುಗಳೆಲ್ಲವಕ್ಕೂ ಒಂದೊಂದು ಇತಿಹಾಸವಿದೆ, ಇಂಥ ಕೆರೆಗಳ ಇತಿಹಾಸವನ್ನು ಮರೆಯುವುದರ ಜೊತೆಗೆ ಹೂಳೆತ್ತುವ ಕಾರ್ಯವೂ ನಿಂತು ಕೆರೆಗಳು ಸಂಪೂರ್ಣವಾಗಿ ನಾಶವಾಗಿವೆ. ಇವುಗಳನ್ನು ಉಳಿಸತಕ್ಕಂಥ ಅತ್ಯಂತ ಪರಿಣಾಮಕಾರಿಯಾದ ಕ್ರಮಗಳನ್ನು ನಾವಿಂದು ಮಾಡಬೇಕಾಗಿದೆ.

ಅದಕ್ಕೆ ಒಂದು ಅಭಿವೃದ್ಧಿ ಮಂಡಲಿಯನ್ನು ಮಾಡಿ ಎನ್ನತಕ್ಕ ಒತ್ತಾಯ ತೀವ್ರತೆಯಾಗಿ ಇಲ್ಲದೆ ಇದ್ದರೂ ಸರ್ಕಾರದ ವಿಚಾರದಲ್ಲಿ ಬರಲಿ, ಇದು ಬರುವುದರಿಂದ ನಮಗೆ ಸಣ್ಣ ನೀರಾವರಿ ಇಲಾಖೆಯಲ್ಲಿ ಕೆರೆಗಳ ಮಹತ್ವ, ಮತ್ತು ಕೆರೆಗಳ ಬೆಳವಣಿಗೆ ಬಗ್ಗೆ ಕೆರೆಗಳನ್ನು ಉಳಿಸತಕ್ಕಂಥ ಬಗ್ಗೆ ಬಹಳ ಅಪಾರವಾಗಿ ನಾವು ಚಿಂತನೆಯನ್ನು ಮಾಡಬೇಕಾಗುತ್ತದೆ. ಬೆಂಗಳೂರು ನಗರದಲ್ಲಿ ಸುಮಾರು 80 ಕೆರೆಗಳು ಇದ್ದವು. ಈಗ ಆ ಕೆರೆಗಳು ಇಲ್ಲ, ಎಲ್ಲವನ್ನು ನಿವೇಶನ ಮಾಡಿ ಹಂಚಿದ್ದಾರೆ. ನಾನಾ ಕಡೆಯಿಂದ ಆ ಕೆರೆಗಳಿಗೆ ನೀರು ಬರಬೇಕು, ನೀರು ತುಂಬಬೇಕು. ಆ ನೀರಿನಿಂದ ಬೆಳೆ ಬೆಳೆಯಬೇಕು. ತರಕಾರಿ ಬೆಳೆಯನ್ನು ಬೆಳೆಯಬೇಕು. ಅನೇಕ ವಿಧದಲ್ಲಿ ಅನುಕೂಲತೆ ಇರತಕ್ಕಂಥದ್ದು. ಇವತ್ತು ಬೆಂಗಳೂರು ನಗರದ ಸುತ್ತ ಇರತಕ್ಕಂಥ ಎಲ್ಲಾ ಕೆರೆಗಳು ಸಂಪೂರ್ಣವಾಗಿ ನಾಶವಾಗಿವೆ. ಇದರ ಜೊತೆಗೆ ಜಿಲ್ಲಾ ಕೇಂದ್ರಗಳು ಮತ್ತು ತಾಲ್ಲೂಕು ಮಟ್ಟದಲ್ಲಿರತಕ್ಕಂಥ ಕೆರೆಗಳು ಎಲ್ಲಾ ಹೋಗಿವೆ. ಅದರಲ್ಲಿ ಬಹುತೇಕ ಕೆರೆಗಳು ಪ್ರತಿವರ್ಷ ಆ ಕೆರೆಗಳಲ್ಲಿ ನೀರು ಬಂದು ಆಯಾಯಾ

ಸಂಬಂಧಪಟ್ಟಂತಹ ದೇವರುಗಳನ್ನು ಪ್ರತಿವರ್ಷ ತೆಪ್ಪೋತ್ಸವ ಮಾಡಿ ಒಂದು ರೀತಿಯಲ್ಲಿ ಹಬ್ಬದ ಆಚರಣೆಯನ್ನು ಮಾಡುತ್ತಿದ್ದರು. ಇವತ್ತು ಆ ಕೆರೆಗಳಲ್ಲಿ ತೆಪ್ಪೋತ್ಸವವೂ ಇಲ್ಲ. ಕೆರೆಯಲ್ಲಿ ನೀರು ಇಲ್ಲ. ಕೆರೆಗಳಲ್ಲಿ ವ್ಯವಸ್ಥೆಯೂ ಇಲ್ಲ. ಈ ರೀತಿಯಾದಂತೆ ಪರಿಸ್ಥಿತಿಯಾಗಿದೆ. ಈ ಕೆರೆಗಳು ನಾಶವಾಗದ ರೀತಿಯಲ್ಲಿ ಉಳಿಸತಕ್ಕಂತಹ ಚಿಂತನೆ, ಒಂದು ವ್ಯವಸ್ಥೆ ಅತಿ ಮುಖ್ಯವಾಗಿ ಆಗಬೇಕಾಗಿದೆ. ಅದನ್ನು ನಾನು ಪರಿಣಾಮಕಾರಿಯಾಗಿ ತಮ್ಮ ಮೂಲಕ ಸರ್ಕಾರಕ್ಕೆ ಹೇಳುತ್ತಿದ್ದೇನೆ. ಲೋಕೋಪಯೋಗಿ ಇಲಾಖೆಯಲ್ಲಿ ಸೇತುವೆಗಳ ಬಗ್ಗೆ ಸೇತುವೆಯ ಶುಲ್ಕವನ್ನು ವಸೂಲು ಮಾಡುತ್ತಿದ್ದೀರಿ; ಸೇತುವೆಯ ಹಣ ತಮ್ಮ ಕೈಗೆ ಕೂಡಿದ ಮೇಲೆ, ನೀವು ಆಮೇಲೆ ಅದನ್ನು ಬಿಟ್ಟುಬಿಡಬೇಕು. ಹಣ ಬಂದ ನಂತರವೂ ಸಹ ಪ್ರತಿ ಸೇತುವೆಯ ಮುಂದೆ ಶುಲ್ಕವನ್ನು ವಸೂಲು ಮಾಡತಕ್ಕಂಥದ್ದು ಇದು ಸರಿಯೇ ಎನ್ನುವುದನ್ನು ತಾವು ಚಿಂತನೆ ಮಾಡಿ. ನಾನು ಇದನ್ನು ತೀವ್ರವಾಗಿ ಹೇಳುತ್ತೇನೆ. ಸೇತುವೆಯ ಹತ್ತಿರ ಹೋಗುವಾಗ ವಸೂಲಿ ಮಾಡತಕ್ಕ ಪರಿಸ್ಥಿತಿ ಏನಿದೆ ಇದು ಒಂದು ರೀತಿ ಅಲ್ಲಿ ನಡೆಯತಕ್ಕಂಥ ವ್ಯವಸ್ಥೆ, ಅದರ ಪರಿಸ್ಥಿತಿಯನ್ನು ನೋಡಿದಾಗ ನಮಗೆ ಒಂದು ತರಹ ನಾಚಿಕೆಯಾಗುತ್ತದೆ. ಆದ್ದರಿಂದ ತಾವು ಇದನ್ನು ವ್ಯವಸ್ಥಿತವಾಗಿ ವಸೂಲಿ ಮಾಡುವುದಾದರೆ ಮಾಡಬೇಕು. ಮತ್ತು ಅದರ ಹಣ ಸಂಪೂರ್ಣವಾಗಿ ಸರ್ಕಾರಕ್ಕೆ ಬಂದಿದ್ದರೆ ಅದನ್ನು ತಾವು ಕೂಡಲೇ ನಿಲ್ಲಿಸತಕ್ಕಂಥದ್ದು, ಇದರ ಬಗ್ಗೆ ತಾವು ಗಮನವನ್ನು ಹರಿಸಬೇಕೆಂದು ತಮ್ಮಲ್ಲಿ ನಾನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಬೆಂಗಳೂರು–ಮೈಸೂರು ರಸ್ತೆಯ ಪರಿಸ್ಥಿತಿ ಎಷ್ಟು ಬಹಳ ಗಂಭೀರವಾಗಿದೆ ಎಂದು ಹೇಳಿದರೆ ಈ ರಸ್ತೆಯಲ್ಲಿ ಆಗತಕ್ಕಂಥ ಅಪಘಾತಗಳು ಇತ್ತೀಚಿನ ದಿನಗಳಲ್ಲಿ ಬಹಳವಾಗಿದೆ. ಬೆಂಗಳೂರು ಮೈಸೂರಿನಲ್ಲಿ ಪ್ರವಾಸಿಗರು ಮತ್ತು ಪ್ರಯಾಣಿಕರು ಲಕ್ಷಾಂತರ ಜನ ಪ್ರತಿನಿತ್ಯ ಅಲ್ಲಿ ತಿರುಗಾಡುತ್ತಾರೆ. ಅತಿ ಹೆಚ್ಚಿನ ರೀತಿಯಲ್ಲಿ ವಾಹನಗಳು ಓಡಾಡುತ್ತವೆ, ಇದನ್ನು ತಡೆಗಟ್ಟುವುದಕ್ಕೆ ನಾನು ಎರಡು ಮೂರು ಸಲಹೆಯನ್ನು ಸರ್ಕಾರಕ್ಕೆ ಕೊಡುತ್ತೇನೆ. ಒಂದು ಪರಿಣಾಮಕಾರಿಯಾಗಿ ನಿಮ್ಮ ಕಾಲದಲ್ಲಿ ಜೋಡಿ ರಸ್ತೆಯನ್ನು ಮಾಡಿ, ಬೆಂಗಳೂರು ಮೈಸೂರು ರಸ್ತೆಯನ್ನು ಜೋಡಿ ರಸ್ತೆಯನ್ನು ಮಾಡಿ. ಅಥವಾ ಏಕಮುಖ ರಸ್ತೆ ಮಾಡುವುದಾದರೆ ಕನಕಪುರ - ಸಾತನೂರು ಮಾರ್ಗ ಈ ರಸ್ತೆಯನ್ನು ಉಪಯೋಗಿಸಿಕೊಂಡು ತಾವು ಮಾಡಬಹುದು. ಇದನ್ನು ಮಾಡತಕ್ಕಂಥ ವ್ಯವಸ್ಥೆಯನ್ನು ತಾವು ಮಾಡುವುದರಿಂದ ಅನುಕೂಲವಾಗುತ್ತೆ. ಅದು ಅತ್ಯಂತ ಹೆಚ್ಚಿನ ರೀತಿಯಲ್ಲಿ ಲಾಭದಾಯಕವಾಗುತ್ತದೆ. ಮೊನ್ನೆ ತಾನೆ ತಾವು ನೋಡಿರಬಹುದು ಒಬ್ಬ ಹಿರಿಯ ನಮ್ಮ ಐ.ಎ.ಎಸ್. ಅಧಿಕಾರಿಯ ಕಾರು ಮತ್ತು ಲಾರಿ ಅಪಘಾತದಲ್ಲಿ ಐ.ಎ.ಎಸ್. ಅಧಿಕಾರಿಯು ಸತ್ತುಹೋದರು. ಇಂತಹವು ತಿಂಗಳಲ್ಲಿ 20–25 ಅಪಘಾತಗಳು ಆಗುತ್ತವೆ. ಅಪಘಾತವಾದಾಗ ಅವರ ಪರಿಸ್ಥಿತಿಯನ್ನು ನೋಡಿದಾಗ ಅದು ಬಹಳ ಕಣ್ಣೀರಿನ ಕಥೆಯಾಗುತ್ತದೆ. ಈ ಬಗ್ಗೆ ಸರ್ಕಾರ ತೀವ್ರವಾಗಿ ಚಿಂತನೆ ಮಾಡಬೇಕು. ಮಾನ್ಯ ರಂಗನಾಥ್‌ರವರು ಆ ಇಲಾಖೆಗೆ ಬಂದಿದ್ದಾರೆ. ನಾನು ಅವರನ್ನು ಆಕ್ಷೇಪಣೆ ಮಾಡುವುದಕ್ಕೆ ಅಥವಾ ಅವರ ಮೇಲೆ ತಕ್ಷಣವೇ ಬಿಡುವುದಕ್ಕೆ ಯಾವ ಬಾಣಗಳೂ ನಮ್ಮಲ್ಲಿ ಇಲ್ಲ. ಆದರೂ ಮಾನ್ಯ ರಂಗನಾಥ್‌ರವರೂ ಸಹ ಈ ಕಡೆ ಕುಳಿತಿದ್ದಂಥವರು, ಮತ್ತು ಇದರ ಬಗ್ಗೆ ಅನೇಕ ಸಾರಿ ಚರ್ಚೆಯನ್ನು ನಡೆಸಿರತಕ್ಕಂಥವರು, ಅನೇಕ ಬಾರಿ ಕರ್ನಾಟಕ ಉದ್ದಗಲಕ್ಕೂ ರಸ್ತೆಗಳನ್ನು ನೋಡಿರತಕ್ಕಂಥವರು. ನಾನು ತಮ್ಮನ್ನು ನೇರವಾಗಿ ಕೇಳುತ್ತೇನೆ. ನಿಮ್ಮ ರಸ್ತೆಗಳು ತಮ್ಮ ಮನಸ್ಸಿಗೆ ಒಪ್ಪತಕ್ಕಂಥ ರಸ್ತೆಗಳೇ, ಏಕೆಂದರೆ ನೀವು ಇದರ ಬಗ್ಗೆ ಪ್ರಾಮಾಣಿಕವಾಗಿ ಹೇಳುತ್ತೀರಿ, ನನ್ನದೇನೂ ಇದರಲ್ಲಿ ತಕರಾರು ಇಲ್ಲ. ನಿಮ್ಮ ಮನಸ್ಸಿಗೆ ಒಪ್ಪತಕ್ಕಂಥ ರಸ್ತೆಗಳೇ, ಈಗ ನಮ್ಮಲ್ಲಿ ಕರ್ನಾಟಕದ ಉದ್ದಗಲಕ್ಕೂ ಇರತಕ್ಕಂಥ ಲೋಕೋಪಯೋಗಿ ರಸ್ತೆಗಳು ಹದಗೆಟ್ಟಿರತಕ್ಕಂಥದ್ದು ಬೇರೆ ಯಾವುದೇ ರಾಜ್ಯದಲ್ಲಿ ಹದಗೆಟ್ಟಿಲ್ಲ. ತಮಗೆ ನಾನು ಉದಾಹರಣೆಗೆ ಹೇಳುತ್ತೇನೆ. ತಮಿಳುನಾಡಿನಿಂದ ಬರುವಾಗ ಕೊಯಮತ್ತೂರು, ಕೊಯಿಮತ್ತೂರಿನಿಂದ. ಚಾಮರಾಜನಗರಕ್ಕೆ ಬರತಕ್ಕಂಥ ರಸ್ತೆ ಇದೆ. ಸಾವಿರಾರು ವಾಹನಗಳು ಆ

ರಸ್ತೆಯಲ್ಲಿ ಓಡಾಡುತ್ತವೆ ಆ ರಸ್ತೆಯ ಪರಿಸ್ಥಿತಿ ಹೇಗಿದೆ ಅಂದರೆ ಒಂದು ವಾಹನ ಮಾತ್ರ ಓಡಾಡುವುದಕ್ಕೆ ಜಾಗವಿದೆ. ತಮಿಳುನಾಡಿನ ಬಾರ್ಡರ್‌ವರೆಗೂ ಬಹಳ ಚೆನ್ನಾಗಿದೆ, ಗಡಿ ಪ್ರದೇಶದವರೆಗೂ ಒಳ್ಳೆಯ ರಸ್ತೆ. ತಮಿಳುನಾಡಿನಿಂದೀಚೆಗೆ ಕೊಯಿಮುತ್ತೂರಿನಿಂದ ಬಂದು ಅಲ್ಲಿಂದ ಚಾಮರಾಜನಗರಕ್ಕೆ ಬಂದು, ಚಾಮರಾಜನಗರದಿಂದ ನಂಜಗೂಡು, ನಂಜನಗೂಡಿನಿಂದ ಮೈಸೂರಿಗೆ ಬರುವ ರಸ್ತೆಯನ್ನು ನೋಡಿದರೆ ಗೊತ್ತಾಗುತ್ತದೆ. ಅದು ಚಾಮರಾಜನಗರದ ಮೇಲೆ ಹಾದುಹೋಗುತ್ತದೆ. ನಾವು ರಸ್ತೆಗೆ ಹಣ ಕೊಡಿ ಅಂತ ಹೇಳಿದರೆ ಇದು ಚಾಮರಾಜನಗರದ ಲೆಕ್ಕ ಅಂತ ನೀವು ಇಟ್ಟುಕೊಳ್ಳಬಾರದು. ನಮಗೆ ರಸ್ತೆ ಬೇಡವೇ ಬೇಡ, ನೀವು ಊರಿನ ಹೊರಗೆ ರಸ್ತೆಯನ್ನು ಹಾಕಿಬಿಡಿ, ನಮಗೆ ಏತಕ್ಕೆ ಆ ರಸ್ತೆ ಬೇಕು. ಆ ದೊಡ್ಡ ರಸ್ತೆ ನಮಗೆ ಬೇಡ. ಈ ರಸ್ತೆಯನ್ನು ತಾವು ನೋಡಿದರೆ ಪರಿಸ್ಥಿತಿ ಗೊತ್ತಾಗುತ್ತದೆ. ನಮಗೆ ನಾಚಿಕೆಯಾಗುವ ರೀತಿಯಲ್ಲಿ ಅವರು ಅಲ್ಲಿ ಮಾತನಾಡುತ್ತಿದ್ದಾರೆ. ಇದರ ಬಗ್ಗೆ ತಾವು ಪರಿಣಾಮಕಾರಿಯಾಗಿ ನೋಡಬೇಕು. ಈ ರಸ್ತೆ ತೀವ್ರವಾಗಿ ಹದಗೆಟ್ಟಿದೆ. ಲೋಕೋಪಯೋಗಿ ಇಲಾಖೆಯ ರಸ್ತೆ ಹೇಗಾಗಿದೆ ಅಂದರೆ ಹೊಸದಾಗಿ ನಮಗೆ ಹೆರಿಗೆ ಆಸ್ಪತ್ರೆ ಬೇಕಾಗಿಲ್ಲ. ನಿಮ್ಮ ರಸ್ತೆಗಳೇ ಸಾಕು. ಗರ್ಭಿಣಿಯಾದ ಹೆಂಗಸು ಒಂದು ವಾಹನದಲ್ಲಿ ನಿಮ್ಮ ರಸ್ತೆಯಲ್ಲಿ ಎರಡು ಕಿ.ಮೀ. ದೂರ ಹೋದರೆ ಸಾಕು, ಅಲ್ಲಿ ಹೆರಿಗೆಯಾಗುತ್ತದೆ. ಆ ಮೇಲೆ ನಮ್ಮ ವ್ಯವಸ್ಥೆ ನಿಮಗೆ ಗೊತ್ತಲ್ಲಾ, ಆದ್ದರಿಂದ ನಿಮ್ಮ ರಸ್ತೆಗಳೆಲ್ಲಾ ಹೆರಿಗೆ ಆಸ್ಪತ್ರೆಗಳಾಗಿವೆ. ಲೋಕೋಪಯೋಗಿ ಇಲಾಖೆಯ ರಸ್ತೆಗಳು ಕರ್ನಾಟಕದ ಉದ್ದಗಲಕ್ಕು ಅದೇ ಪರಿಸ್ಥಿತಿಯಲ್ಲಿದೆ. ಕಾರಿನಲ್ಲಿ ಹೋಗುವವರಿಗೆ ಸೊಂಟ ಮುರಿಯುತ್ತದೆ. ಸೊಂಟ ಮುರಿದು ಹೆರಿಗೆಯಾದಾಗ ಯಾರನ್ನು ನೆನೆದುಕೊಳ್ಳಬೇಕು, ರಂಗನಾಥ, ನೀನೇ ಕಾಪಾಡಪ್ಪ ಎಂದು ನಿಮ್ಮನ್ನು ನೆನೆದುಕೊಳ್ಳಬೇಕಾಗಿದೆ. ಇದು ಪರಿಸ್ಥಿತಿ ಇರುವುದು. ಒಂದು ಕಡೆ ರಂಗನಾಥ ಎಂದು ನೆನೆಯಬೇಕು ಮತ್ತೊಂದು ಕಡೆ ಕೃಷ್ಣ ಅಂತ ನೆನೆಯಬೇಕು. ನೀವು ಇಬ್ಬರೂ ಸೇರಿ ನಮ್ಮ ಪರಿಸ್ಥಿತಿ ಕೃಷ್ಣಾರ್ಪಣ ಆದೀತು ಎನ್ನತಕ್ಕ ನಮ್ಮ ಚಿಂತನೆಯನ್ನು ಬಹಳ ಅತ್ಯಂತ ಗಾಢವಾಗಿ ಅರ್ಥಮಾಡಿಕೊಳ್ಳಬೇಕು.

ಶ್ರೀಮತಿ ಮೋಟಮ್ಮ:– ಮಾನ್ಯ ನಾಗರಾಜ್‌ರವರಿಗೆ ಯಾವ ಅನುಭವ? ಅವರು ಕೆಲವು ಉದಾಹರಣೆಯನ್ನು ಕೊಟ್ಟು ಹೇಳಿದರು. ಮಾನ್ಯ ನಾಗರಾಜ್‌ರವರಿಗೆ ಇದು ಯಾವ ರೀತಿ ಅನುಭವ ಆಯಿತು. ಏಕೆಂದರೆ ಇಂತಹ ರಸ್ತೆಯಲ್ಲಿ ಓಡಾಡಿದರೆ ಹೆರಿಗೆ ಸುಲಭವಾಗುತ್ತೆ ಅಂತ ಹೇಳುತ್ತಾರೆ, ನಿಮಗೆ ಯಾವ ರೀತಿಯ ಅನುಭವ?

ಶ್ರೀ ವಾಟಾಳ್ ನಾಗರಾಜ್:– ನನಗೆ ಸೊಂಟ ಭದ್ರವಿರುವುದರಿಂದ ನಾನು ಉಳಿದುಕೊಂಡಿದ್ದೇನೆ. ಅನೇಕ ಸಾರಿ ಸೊಂಟ ಮುರಿದುಕೊಂಡಿರುವವರು ಬಂದು ನನಗೆ ಬಂದು ನಮ್ಮ ಹಣೆಬರಹ ಹೀಗೆ ಆಗಿದೆ ಎಂದು ಹೇಳಿದ್ದಾರೆ. ನೀವು ಕೇಳಿದ್ದು ನಿಜ ತಮ್ಮಂತಹ ಹೆಣ್ಣುಮಕ್ಕಳುಯರು ಹೆರಿಗೆಯ ಬಗ್ಗೆ ನನಗೆ ಬಂದು, ಪರಿಸ್ಥಿತಿ ಹೀಗಾಗಿದೆ ಎಂದು ಹೇಳಿದರು. ನಿಜವಾಗಿಯೂ ಆ ರಸ್ತೆಗಳ ಪರಿಸ್ಥಿತಿ ಹೀಗಾಗಿದೆ. ಆದ್ದರಿಂದ ರಸ್ತೆಗಳನ್ನು ತಾವು ಸರಿಪಡಿಸಲಿಲ್ಲ ಎಂದು ಹೇಳಿದರೆ ನಿಮಗೆ ನಿಜವಾಗಿಯೂ ಸಾರ್ವಜನಿಕರು, ಪ್ರಯಾಣಿಕರು, ಹೆಣ್ಣುಮಕ್ಕಳು ಶಾಪ ಹಾಕುತ್ತಾರೆ. ಆ ಶಾಪ ತಮಗೆ ತಗಲಬಾರದು ಎನ್ನತಕ್ಕ ಮಾತನ್ನು ನಾನು ಅತ್ಯಂತ ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ಇಡೀ ಕರ್ನಾಟಕದಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ಕೆಲಸವಾಗಿರತಕ್ಕಂಥ ಬಗ್ಗೆ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಈ ಗುತ್ತಿಗೆದಾರರಿಗೆ ಕೊಡಬೇಕಾದಂತಹ ಎಲ್.ಓ.ಸಿ ಹಣವನ್ನು ಒಂದು ವಾರದಲ್ಲಿ ಬಿಡುಗಡೆ ಮಾಡುತ್ತೇವೆಂದು ಹೇಳಿದರು. ನನಗೆ ತಿಳಿದ ಮಟ್ಟಿಗೆ ಇಡುವರೆಗೂ ಬಿಡುಗಡೆಯಾಗಿಲ್ಲ. ಮಾನ್ಯ ಲೋಕೋಪಯೋಗಿ ಸಚಿವರಾದ ತಮಗೆ ನಾನು ಹೇಳುತ್ತಿದ್ದೇನೆ, ಗುತ್ತಿಗೆದಾರರು ತಮ್ಮ ಇಲಾಖೆಯಲ್ಲಿ ಏನು ಕೆಲಸವನ್ನು ನಡೆಸಿದ್ದಾರೆ ಅವರಿಗೆ ಎಲ್.ಓ.ಸಿ ಹಣ ಏನು ಕೊಡಬೇಕಾಗಿದೆ ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಇನ್ನು ಒಂದು ವಾರದಲ್ಲಿ ಹಣವನ್ನು ಬಿಡುಗಡೆ

ಮಾಡುತ್ತೇವೆಂದು ಹೇಳಿ ಇವತ್ತಿನವರೆಗೂ ಒಂದು ನಯಾ ಪೈಸಾವನ್ನೂ ಬಿಡುಗಡೆ ಮಾಡಿಲ್ಲ. ಬಿಡುಗಡೆ ಮಾಡಿದ್ದರೆ ತಾವು ಎಷ್ಟೆಷ್ಟು ಬಿಡುಗಡೆ ಮಾಡಿದ್ದೀರಿ, ತಾವು ಏನು ಮಾಡಿದ್ದೀರಿ ಎನ್ನತಕ್ಕವನ್ನು ತಾವು ಹೇಳಿದರೆ ನನಗಂತೂ ಬಹಳ ಸಂತೋಷವಾಗುತ್ತದೆ. ಆ ಪರಿಸ್ಥಿತಿಯಲ್ಲಿ ನಿಜವಾಗಿಯೂ ನಡೆದಿಲ್ಲ ಎನ್ನತಕ್ಕ ಮಾತನ್ನು ತಮಗೆ ನಾನು ಹೇಳುತ್ತಿದ್ದೇನೆ. ರಾಷ್ಟ್ರೀಯ ಹೆದ್ದಾರಿಗಳು ನಮಗೆ ಎಷ್ಟು ಕೇಂದ್ರ ಸರ್ಕಾರ ನಮ್ಮನ್ನು ನಿಜವಾಗಿಯೂ ಮಲತಾಯಿ ಧೋರಣೆಯಲ್ಲಿ ನೋಡುತ್ತಿದ್ದಾರೆ. ಈ ಬಗ್ಗೆ ನಾವು ಒಂದು ಚಿಂತನೆಯನ್ನು ಮಾಡಬೇಕಾಗಿದೆ. ತಮಿಳುನಾಡಿಗೆ ಎಷ್ಟು ರಾಷ್ಟ್ರೀಯ ಹೆದ್ದಾರಿಯನ್ನು ಕೊಟ್ಟಿದ್ದಾರೆ, ಕೇರಳಕ್ಕೆ ರಾಷ್ಟ್ರೀಯ ಹೆದ್ದಾರಿ ಆಗಿದೆ, ಆಂಧ್ರಕ್ಕೆ ಎಷ್ಟು ರಾಷ್ಟ್ರೀಯ ಹೆದ್ದಾರಿಯನ್ನು ಕೊಟ್ಟಿದ್ದಾರೆ. ಕರ್ನಾಟಕಕ್ಕೆ ಎಷ್ಟು ಕೊಟ್ಟಿದ್ದಾರೆ ಈ ಬಗ್ಗೆ ನಾವು ಒಂದು ಚಿಂತನೆಯನ್ನು ಮಾಡಬೇಕು. ಕರ್ನಾಟಕಕ್ಕೆ ಕೊಟ್ಟಿರತಕ್ಕ ಹೆದ್ದಾರಿಗಳ ಬಗ್ಗೆ ಸರ್ಕಾರ ಒಂದು ಶ್ವೇತಪತ್ರವನ್ನು ಹೊರಡಿಸಲಿ. ರಾಜ್ಯ ರಾಜ್ಯಗಳಿಗೂ ಕೊಟ್ಟಿರತಕ್ಕಂಥ ರಾಷ್ಟ್ರೀಯ ಹೆದ್ದಾರಿಗೆ ಕೊಟ್ಟಿರತಕ್ಕಂಥ ಹಣ ಎಷ್ಟು? ನಮಗೆ ಕೊಟ್ಟಿರತಕ್ಕಂಥ ಹಣವೆಷ್ಟು? ಇದರ ಬಗ್ಗೆ ಚಿಂತನೆಯಾಗಬೇಕು. ನಮಗೆ ಕೊಟ್ಟಿರುವುದರಲ್ಲಿ ನಿಜವಾಗಿಯೂ ಅತ್ಯಂತ ಅನ್ಯಾಯ ನಡೆದಿದೆ. ಇದನ್ನು ನಾನು ಅನೇಕ ಕಡೆ ನೋಡಿದ್ದೇನೆ. ತಮಿಳುನಾಡಿಗೆ ವಿಪರೀತ ಕೊಟ್ಟಿದ್ದಾರೆ. ಆಂಧ್ರಕ್ಕೆ ಕೊಟ್ಟಿದ್ದಾರೆ, ಕೇರಳಕ್ಕೆ ಕೊಟ್ಟಿದ್ದಾರೆ, ಬೇರೆ ಬೇರೆ ಉತ್ತರದ ಪ್ರದೇಶಗಳಲ್ಲೆಲ್ಲಾ ಕೊಟ್ಟಿದ್ದಾರೆ. ಕರ್ನಾಟಕವನ್ನು ಸಂಪೂರ್ಣವಾಗಿ ಕಡೆಗಾಣಿಸಿದ್ದಾರೆ.

ಆದ್ದರಿಂದ ತಾವು ರಾಷ್ಟ್ರೀಯ ಹೆದ್ದಾರಿಗೆ ಹೆಚ್ಚಿನ ಹಣವನ್ನು ಪಡೆಯತಕ್ಕದ್ದು ಮತ್ತು ಕೆಲವು ರಾಜ್ಯದ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತನೆ ಮಾಡುವುದಕ್ಕೆ ತಾವು ಪರಿಣಾಮಕಾರಿಯಾಗಿ ಕೆಲಸಮಾಡಬೇಕು. ಕರ್ನಾಟಕದಲ್ಲಿ ಸುಮಾರು ರಸ್ತೆಗಳು ರಾಷ್ಟ್ರೀಯ ಹೆದ್ದಾರಿಗಳು ಆಗಬೇಕಾಗಿದೆ. ಇದರ ಬಗ್ಗೆ ತಾವು ಒಂದು ನಿಯೋಗವನ್ನು ಬೇಕಾದರೂ ತಮ್ಮ ನಾಯಕತ್ವದಲ್ಲಿ ಕೇಂದ್ರದ ಜೊತೆ ಮಾತನಾಡುವುದಕ್ಕೆ ಸದನದ ಮೂಲಕ ತೆಗೆದುಕೊಂಡು ಹೋಗತಕ್ಕದ್ದು ಒಳ್ಳೆಯದೆಂದು ನಾನು ತಮಗೆ ಅತ್ಯಂತ ಕಳಕಳಯಿಂದ, ಪ್ರಾಮಾಣಿಕವಾದ ಮಾತನ್ನು ಹೇಳುತ್ತಿದ್ದೇನೆ. ಇದು ಆಗಲಿಲ್ಲ ಎಂದರೆ ನಿಜವಾಗಲೂ ನಾವು ಒಂದೇ ಸಮನೆ ಕೇಂದ್ರದವರ ತುಳಿತಕ್ಕೆ ಸಿಕ್ಕಿದ್ದೇವೆ. ಕೇಂದ್ರದವರು ಕರ್ನಾಟಕಕ್ಕೆ ಏಕೆ ಇಷ್ಟು ಅನ್ಯಾಯ ಮಾಡುತ್ತಿದ್ದಾರೆ ಎಂದು ನಾವು ಭಾವಿಸಬೇಕಾಗುತ್ತದೆ.

ಶ್ರೀಮತಿ ಮೋಟಮ್ಮ:- ಈಗ ರಾಷ್ಟ್ರೀಯ ಹೆದ್ದಾರಿಗೆ ಬರಬೇಕಾಗಿದ್ದಂತಹ ಹಣಕ್ಕೆ ಯಾರೂ ಅಷ್ಟೊಂದು ಹೋರಾಟ ಮಾಡುತ್ತಿಲ್ಲ. ಆದ್ದರಿಂದ ನೀವು ಏನಾದರೂ ಪಾರ್ಲಿಮೆಂಟಿಗೆ ಹೋಗಿ ಈ ಕನ್ನಡದ ಕಹಳೆಯನ್ನು ಊದಿದರೆ ಆ ಹಣವೇನಾದರೂ ಬರುವುದಕ್ಕೆ ಸಾಧ್ಯ.

ಶ್ರೀ ವಾಟಾಳ್ ನಾಗರಾಜ್:- ಏಕಮ್ಮ ನಾನು ಇಲ್ಲಿಂದ ಹೊರಟು ಹೋಗಬೇಕು ಎಂದು ತೀರ್ಮಾನ ಮಾಡಿದ್ದೀರಾ? ಅವರು ನನ್ನನ್ನು ಇಲ್ಲಿಂದ ಕಳುಹಿಸಬೇಕೆಂದು ತೀರ್ಮಾನ ಮಾಡಿದ್ದಾರೆ. ನಿಜ, ಅಧ್ಯಕ್ಷರೇ, ಮೋಟಮ್ಮನವರ ಮಾತಿಗೆ ನಾನು ಧ್ವನಿಗೂಡಿಸುತ್ತೇನೆ. ಇದರಲ್ಲಿ ಏನಾಗಿದೆ ಎಂದರೆ ನಮ್ಮ ರಾಜ್ಯಕ್ಕೆ ಬರಬೇಕಾದಂತಹ ಹಣದ ಬಗ್ಗೆ ನಮ್ಮ ಲೋಕಸಭಾ ಸದಸ್ಯರು, ಮತ್ತು ನಮ್ಮ ಮಂತ್ರಿಗಳಿಗೆ ಚಿಂತನೆ ಇಲ್ಲ. ಕೇಂದ್ರ ಸರ್ಕಾರದವರಿಗೆ ಹೊಸದಾಗಿ ರಾಷ್ಟ್ರೀಯ ಹೆದ್ದಾರಿಗಳನ್ನು ಕೊಡತಕ್ಕಂತಹ ಚಿಂತನೆ ಇಲ್ಲವೆಂದರೆ, ಕರ್ನಾಟಕದ ಜನ, ಕರ್ನಾಟಕ ಭಾರತದ ಭೂಪಟದಲ್ಲಿ ಇಲ್ಲವೆಂಬ ದೃಷ್ಟಿಯಲ್ಲಿ ಕೇಂದ್ರ ಸರ್ಕಾರ ತಿಳಿದುಕೊಂಡಿದೆಯೇ? ಇದು ಅತ್ಯಂತ ಶೋಚನೀಯ ಪರಿಸ್ಥಿತಿ. ಈ ಪರಿಸ್ಥಿತಿಯನ್ನು ಹೋಗಲಾಡಿಸಬೇಕಾದರೆ ಕೇಂದ್ರಸರ್ಕಾರದವರ ಮೇಲೆ ನಾವು ಒಂದು ರೀತಿಯ ಯುದ್ಧವನ್ನೇ ಘೋಷಣೆ ಮಾಡಬೇಕಾಗುತ್ತದೆ. ರಾಜಕೀಯ ಯುದ್ಧ, ರಾಜಕೀಯ ಸಮರ,

ನಾವು ಮಾಡಲಿಲ್ಲ ಎಂದರೆ ಕೇಂದ್ರದವರು ನಮ್ಮನ್ನು ಕಣ್ಣು ತೆರೆದು ನೋಡುವುದಿಲ್ಲ. ಅದಕ್ಕಾಗಿ ನಾನು ತಮಗೆ ಹೇಳುತ್ತಿದ್ದೇನೆ. ಕಾಂಗ್ರೆಸ್ ಪಕ್ಷ ನಾವು ನೀವು ಎನ್ನುವಂತಹ ಪಕ್ಷ ಭೇದವನ್ನು ಮರೆತು ನಮ್ಮ ರಾಜ್ಯಕ್ಕೆ ಆಗಬೇಕಾದಂತಹ ರಾಷ್ಟ್ರೀಯ ಹೆದ್ದಾರಿಗಳ ಬಗ್ಗೆ ಹೆಚ್ಚಿನ ಹಣವನ್ನು ಕೊಡಿ ಎಂದು ಹೇಳಿ ಒಂದು ದೊಡ್ಡ ರಾಜಕೀಯ ಸಮರವನ್ನು ಕೇಂದ್ರದ ವಿರುದ್ಧ ನಾವು ಘೋಷಣೆ ಮಾಡಬೇಕಾಗುತ್ತದೆ ಎಂದು ಹೇಳುತ್ತೇನೆ. ಕೃಷ್ಣ, ಕಾವೇರಿ ಬಗ್ಗೆ ಸರ್ಕಾರದ ನಿಲುವು ಏನೆಂಬುದನ್ನು ನಾವು ಒಂದೇ ಸಮನೆ ಈ ಸರ್ಕಾರದಲ್ಲಿ ಕೇಳುತ್ತಾ ಇದ್ದೇನೆ. ಈ ಬಗ್ಗೆ ಮಾನ್ಯ ಉಪಮುಖ್ಯಮಂತ್ರಿಗಳಾದ ಎಸ್.ಎಂ. ಕೃಷ್ಣರವರು ಕರ್ನಾಟಕಕ್ಕೆ ಅನ್ಯಾಯವಾಗದ ರೀತಿಯಲ್ಲಿ ನಡೆದುಕೊಳ್ಳುತ್ತಾರೆ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದಾರೆ. ನಾವು ಎಲ್ಲರಿಂದಲೂ ಕರ್ನಾಟಕಕ್ಕೆ ಅನ್ಯಾಯವಾಗುವುದಿಲ್ಲ, ತೊಂದರೆಯಾಗುವುದಿಲ್ಲ ಎನ್ನತಕ್ಕಂಥ ಮಾತನ್ನು ಕೇಳುತ್ತಿದ್ದೇವೆ. ಈಗ ತೆಲುಗು ಗಂಗಾ ಯೋಜನೆಯಿಂದ ನಮಗೆ ಅನ್ಯಾಯವಾಗಿಲ್ಲವೇ ? ಈ ಚಿಂತನೆ ಸರ್ಕಾರಕ್ಕೆ ಇದೆಯೇ ? ತೆಲುಗು ಗಂಗಾವನ್ನು ಆಂಧ್ರಪ್ರದೇಶದಲ್ಲಿ ಸ್ಥಾಪನೆ ಮಾಡುವಾಗ ಯಾವ ಸರ್ಕಾರ ಕರ್ನಾಟಕದಲ್ಲಿ ಇತ್ತು. ಆ ಸರ್ಕಾರ ತೀವ್ರವಾಗಿ ಅದನ್ನು ವಿರೋಧ ಮಾಡಬೇಕಾಗಿತ್ತು. ತೆಲುಗು ಗಂಗಾಗೆ ನಾವು ಒಪ್ಪುವುದಿಲ್ಲ, ತೆಲುಗು ಗಂಗಾಗೆ ನಮ್ಮ ಅನುಮತಿ ಇಲ್ಲವೆಂದು ತೀವ್ರವಾಗಿ ಒತ್ತಾಯ ತರಬೇಕಾಗಿತ್ತು. ನಾನು ಇದನ್ನು ತಮ್ಮ ಮೇಲೆ ಹೊರಿಸುತ್ತಿಲ್ಲ. ಇದರಿಂದ ನಮಗೆ ಮಾರಕವಾಗುತ್ತದೆ. ಇದು ಎಂದಿದ್ದರೂ ನಮಗೆ ಆಘಾತವೇ. ಇದು ಕನ್ನಡಿಗರ ಕಣ್ಣೀರಿನ ಕಥೆಯಾಗಿದೆ. ತೆಲುಗು ಗಂಗಾ ನಮ್ಮನ್ನು ಮೀರಿಸುತ್ತದೆ. ನಮಗೆ ಅನ್ಯಾಯವಾಗುತ್ತದೆ. ತೆಲುಗು ಗಂಗಾ ಮೂಲಕ ನಮ್ಮ ನೀರನ್ನು ಪಡೆಯತಕ್ಕ ಕುತಂತ್ರ ತೀವ್ರವಾಗಿ ನಡೆದಿದೆ. ಮೊದಲನೆಯದಾಗಿ ತೆಲಗು ಗಂಗಾ ನಮ್ಮದಲ್ಲ. ತೆಲುಗು ಗಂಗಾ ಯೋಜನೆಗೆ ನಮ್ಮ ಕರ್ನಾಟಕ ಸರ್ಕಾರದ ಮತ್ತು ಕರ್ನಾಟಕದ ಜನತೆಯ ಅನುಮತಿ ಇಲ್ಲ ಎಂಬುದನ್ನು ಮೊದಲಿನಿಂದ ಹೇಳಬೇಕಾಗಿತ್ತು. ಹೇಳಲಿಲ್ಲ. ಹೀಗೇ ಮಾಡಿಕೊಂಡು ಬರುತ್ತಿದ್ದಾರೆ. ನಿಜವಾಗಲೂ ಇದು ನೋವಿನ ಪ್ರಸಂಗ, ತೆಲಗು ಗಂಗಾ ಯೋಜನೆಯನ್ನು ನೀರಿನ ಕಾರಣಕ್ಕೋಸ್ಕರ ಮಾಡಿದರು. ಕುಡಿಯುವ ನೀರಿನ ನೆಪದಲ್ಲಿ, ಕರ್ನಾಟಕದ ನೀರನ್ನು ಸಂಪೂರ್ಣವಾಗಿ ಬಳಸಿಕೊಳ್ಳುವಂತಹ ಒಂದು ತಂತ್ರ, ಪಿತೂರಿ ಇವತ್ತು ನಡೆದಿದೆ.

ಇದಕ್ಕೆ ಮೊದಲಿನಿಂದಲೂ ಕೇಂದ್ರದವರ ಆಶೀರ್ವಾದ ಇದೆ. ಇದನ್ನು ನಾನು ಯಾವುದೇ ಪಕ್ಷದ ಮೇಲೆ ಹೊಣೆ ತರುತ್ತಾ ಇಲ್ಲ. ಮತ್ತು ಯಾರ ಮೇಲೂ ಸಹ ಹೊಣೆ ತರುತ್ತಾ ಇಲ್ಲ. ಇಂದು ಪ್ರಧಾನ ಮಂತ್ರಿಯಾಗಿರುವವರು ಯಾರು ? ಆಂಧ್ರದೇಶದವರು, ಏನೇ ಆದರೂ ನಾವು ಅವರಿಗೆ ಒಂದು ರೀತಿ ಮಲತಾಯಿಯ ಮಕ್ಕಳು ಇದ್ದಹಾಗೆ. ಅವರಿಗೆ ಎಷ್ಟೇ ಆದರೂ ಆಂಧ್ರದ ಮೇಲಿನ ಪ್ರೀತಿ ಇದೆ, ಆಂಧ್ರದ ಮೇಲೆ ವಿಶ್ವಾಸವಿದೆ. ಇವತ್ತು ಪ್ರಧಾನ ಮಂತ್ರಿಯವರು ಹೇಳಲಿ 'ನಾವು ತೆಲುಗು ಗಂಗಾಗೆ ಅನುಮತಿ ಕೊಡುವುದಿಲ್ಲವೆಂದು.' ಅವರು ಹೇಳುವುದಕ್ಕೆ ತಯಾರಾಗಿಲ್ಲ. ಅದರ ಬಗ್ಗೆ ಅವರು ಸ್ಪಷ್ಟವಾಗಿ ತೆರೆಮರೆಯಲ್ಲಿ ಬೆಂಬಲ ಕೊಡತಕ್ಕಂಥ ನೀತಿಯಲ್ಲಿ ಅವರು ಇದ್ದಾರೆಯೇ ಹೊರತು ಅದರ ಬಗ್ಗೆ ಬೇರೆ ಮಾತಿಲ್ಲ. ಆದುದರಿಂದ ತಾವು ಒಂದು ಸ್ಪಷ್ಟವಾದಂತಹ ಒಂದು ನೀತಿಯನ್ನು ಅನುಸರಿಸಬೇಕು. ತೆಲುಗು ಗಂಗಾಗೆ ನಾವು ಒಪ್ಪಿರತಕ್ಕದ್ದು, ಆ ಸಂದರ್ಭದಲ್ಲಿ ಯಾವ ಉದ್ದೇಶಕ್ಕೋಸ್ಕರ ? ಕುಡಿಯುವ ನೀರಿಗೆ ಮಾತ್ರ, ಅನ್ನತಕ್ಕದ್ದನ್ನು, ಅದರ ಮೇಲೆ ನೀವು ಏನೇ ನೀರು ಬಳಸಿದರೂ ನಾವು ಕೊಡುವುದಕ್ಕೆ ಆಗುವುದಿಲ್ಲ ಎನ್ನುವುದು ಒಂದು, ಮತ್ತು ಈವತ್ತಾದರೂ ನೀವು ಹೇಳಬೇಕು, ಹಿಂದಿನ ಸರ್ಕಾರದ ಒಪ್ಪಿಗೆ ಇರಬಹುದು. ಆದರೆ ನಮ್ಮ ಈಗಿನ ಕರ್ನಾಟಕ ಸರ್ಕಾರದ ಒಪ್ಪಿಗೆ ಇಲ್ಲ ಎಂದು. ನಾವು ತೆಲುಗು ಗಂಗಾವನ್ನು ಒಪ್ಪುವುದಿಲ್ಲ ಎನ್ನುವ ಸ್ಪಷ್ಟವಾದಂತಹ ಒಂದು ಉತ್ತರವನ್ನು ಈ ಸದನದಲ್ಲಿ ತಾವು ನೀಡಬೇಕು ಎಂದು ತಮ್ಮಲ್ಲಿ ನಾನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ:– ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳುತ್ತಿರುವುದು ಕಡತಕ್ಕೆ ಹೋಗುತ್ತಿದೆ. ಹಿಂದಿನ ಸರ್ಕಾರದವರು ಒಪ್ಪಿಲ್ಲ. ದಯಮಾಡಿ ಇದು ಕಡತಕ್ಕೆ ಹೋಗಬಾರದು. ನಾವು ಕೇವಲ ಕುಡಿಯುವ ನೀರಿಗೋಸ್ಕರ ಒಪ್ಪಿದ್ದೇವೆ ಅಷ್ಟೇ ಹೊರತು ನೀರಾವರಿಗೋಸ್ಕರ ಒಪ್ಪಿಲ್ಲ. ಯಾವುದೇ ಸರ್ಕಾರ ಒಪ್ಪಿಲ್ಲ: ಆದುದರಿಂದ ಹಿಂದಿನ ಸರ್ಕಾರ ಒಪ್ಪಿದೆ ಎನ್ನುವುದು ಕಡತಕ್ಕೆ ಹೋಗಬಾರದು ಅಷ್ಟೆ.

ಶ್ರೀ ವಾಟಾಳ್ ನಾಗರಾಜ್:– ನಾನು ಹಿಂದಿನ ಸರ್ಕಾರ ತೆಲುಗು ಗಂಗಾ ನೀರಾವರಿಗೆ ಒಪ್ಪಿದೆ ಎಂದು ಎಲ್ಲೂ ಹೇಳಿಲ್ಲ. ಕುಡಿಯುವ ನೀರಿನ ವಿಚಾರದಲ್ಲಿ ಹಿಂದಿನ ಸರ್ಕಾರ ಒಪ್ಪಿದೆ. ಅದನ್ನು ಒಪ್ಪಬಾರದಾಗಿತ್ತು. ತೆಲುಗು ಗಂಗಾ ಹೆಸರನ್ನೇ, ಆ ನೀತಿ, ಆ ಯೋಜನೆಯನ್ನೇ ಒಪ್ಪಬಾರದು ಎಂದು ನಾನು ಹೇಳುವುದು. ಅದರಲ್ಲಿ ಎರಡು ಅಭಿಪ್ರಾಯವಿಲ್ಲ. ಆ ಬಗ್ಗೆ ನಾನು ಸ್ಪಷ್ಟವಾಗಿ ಹೇಳುತ್ತೇನೆ. ಆದರಲ್ಲೇನೂ ಬೇರೆ ಚಿಂತನೆ ಇಲ್ಲ. ಮತ್ತು ಕೃಷ್ಣಾ ನಿಲುವಿನ ಬಗ್ಗೆ ಹೇಳುವುದಾದರೆ, 2 ಸಾವಿರ ವರ್ಷ ಬಹಳ ಅತೀ ಸಮೀಪವಾಗಿ ಬರುತ್ತಿದೆ. ನನಗೆ ಅನಿಸುತ್ತದೆ ಇದು ಯಾವ ಮಾಯ ಮಂತ್ರದಿಂದ ನಾವು ಕಾಮಗಾರಿ ಕೆಲಸವನ್ನು ಮಾಡುವುದಕ್ಕೆ ಆಗುವುದಿಲ್ಲ. ಇದಕ್ಕೆ ಸ್ಪಷ್ಟವಾದಂಥ ಒಂದು ನಿಲುವು ಬೇಕು. ಸ್ಪಷ್ಟವಾದಂತಹ ಯೋಜನೆ ಬೇಕು. ಆದಕ್ಕೆ ಈ ವರ್ಷದಲ್ಲಿ ಇಷ್ಟಿಷ್ಟು ಮಾಡುತ್ತೇವೆ ಎನ್ನುವಂತಹ ಸರ್ಕಾರದ ಒಂದು ನಿರ್ದಿಷ್ಟವಾದಂತಹ ನಿಲುವು ಬೇಕು. ಇವಲ್ಲದೆ ಅನೇಕ ಸದಸ್ಯರು ಇಲ್ಲಿ ತಮ್ಮ ಅನುಮಾನ ವ್ಯಕ್ತಪಡಿಸಿದ್ದಾರೆ. ನಾನೂ ಸಹ ಅವರ ಜೊತೆಯಲ್ಲಿ ಧ್ವನಿಗೂಡಿಸುತ್ತೇನೆ. ಕೃಷ್ಣ ಯೋಜನೆ ಕಾಮಗಾರಿ ಕೆಲಸಗಳು 2 ಸಾವಿರ ವರ್ಷದೊಳಗಾಗಿ ಮುಗಿಯುತ್ತವೆ ಎಂದು ನಾನು ತಿಳಿದುಕೊಂಡಿಲ್ಲ, ಮತ್ತು ಆ ಧೈರ್ಯವೂ ಸಹ ಇಲ್ಲ. ಆದುದರಿಂದ ತಮಗೆ ಹೇಳುತ್ತಿದ್ದೇನೆ ಯಾವ ಮೂರು ಜನ ಮುಖ್ಯಮಂತ್ರಿಗಳು ಸಭೆ ಸೇರಬೇಕಾಗಿತ್ತು....

ಶ್ರೀ ಎಸ್.ಎಂ. ಕೃಷ್ಣ:– ಯಾವ ವಿಷಯವಾಗಿ ಸೇರಬೇಕು ಎಂದು ಹೇಳುತ್ತಿದ್ದೀರಿ ?

ಶ್ರೀ ವಾಟಾಳ್ ನಾಗರಾಜ್:– ಕೃಷ್ಣಾದ ಬಗ್ಗೆ ಹೇಳುತ್ತಿದ್ದೇನೆ.

ಶ್ರೀ ಎಸ್.ಎಂ. ಕೃಷ್ಣ:– ಮಾನ್ಯ ಅಧ್ಯಕ್ಷರೇ, ಪ್ರೊ: ನಂಜುಂಡಸ್ವಾಮಿಯವರು ಹೇಳಿದ ರೀತಿಯಲ್ಲಿ ನಾನು ಅವರ ವಾದಕ್ಕೆ ಧ್ವನಿಗೂಡಿಸುತ್ತೇನೆ. ಕರ್ನಾಟಕದ ಯಾವ ಸರ್ಕಾರವು ಕೂಡ ತೆಲುಗು ಗಂಗಾ ಎಂದು ಏನು ನಾಮಾಂಕಿತವಾಗಿದೆ. ಆ ಯೋಜನೆಗೆ ಒಪ್ಪಿಲ್ಲ. ಹಿಂದಿನ ಸರ್ಕಾರ ಮತ್ತು ಈ ಸರ್ಕಾರನ್ನೂ ಒಪ್ಪಿಲ್ಲ. ನಾವು ಒಪ್ಪಿರುವುದು ಕೇವಲ ನಮ್ಮ ಹದ್ದುಬಸ್ತಿಗೆ ಬರತಕ್ಕಂತಹ 5 ಟಿಎಂಸಿಎಫ್‌ಟಿ ನೀರನ್ನು ಮಾತ್ರ ಮದ್ರಾಸ್‌ಗೆ ಕುಡಿಯುವ ನೀರಿನ ಸರಬರಾಜು ಮಾಡುವುದಕ್ಕೋಸ್ಕರ ಒಪ್ಪಿದ್ದೇವೆ. ಅದಕ್ಕೆ ಇವತ್ತೂ ಕೂಡ ನಾವು ಬದ್ಧರಾಗಿದ್ದೇವೆ.

ಶ್ರೀ ವಾಟಾಳ್ ನಾಗರಾಜ್:– ಅವರು ಕುಡಿಯುವ ನೀರನ್ನು ಬಿಟ್ಟು ನೀರಾವರಿಗೋಸ್ಕರ ಎಷ್ಟು ಪ್ರಮಾಣದಲ್ಲಿ ತೆಲುಗುಗಂಗಾ ಕಾಲುವೆಯನ್ನು ತೋಡುತ್ತಿದ್ದಾರೆ ಎನ್ನುವ ಬಗ್ಗೆ ನೀವು ತಕರಾರು ತೆಗೆದಿದ್ದೀರಾ ? ಅದರ ಬಗ್ಗೆ ಎಷ್ಟು ತಕರಾರು ತೆಗೆದಿದ್ದೀರಿ ? ಸರ್ಕಾರದ ತಕರಾರೂ ಏನು ? ಅದು ನಮಗೆ ಬೇಕಾಗಿದೆ, ಅದು ಅತೀ ಪ್ರಾಮುಖ್ಯವಾದುದು. ಇದರ ಬಗ್ಗೆ ನಿಮಗೆ ಸ್ಪಷ್ಟವಾದಂತಹ ನಿಲುವು ಇರಬೇಕು ಮತ್ತು ಕಾವೇರಿ ನ್ಯಾಯಮಂಡಲಿಯ ಬಗ್ಗೆ ತಮ್ಮ ಸರ್ಕಾರ ಬಂದ ನಂತರ ಕೃಷ್ಣ 2 ಸಾವಿರ ವರ್ಷದೊಳಗಾಗಿ ತಾವು ಮುಗಿಸುವುದಕ್ಕೆ ನಿಮ್ಮ ಪ್ರಯತ್ನಗಳು ಏನು ? ನಿಮ್ಮ ಬಹಳ ಪರಿಣಾಮಕಾರಿ ಪ್ರಯತ್ನ ಏನು ? ಅದು ಯಾವುದೋ ಒಂದು ನಿಮ್ಮ ಹೇಳಿಕೆಯಲ್ಲಿ ಇರಬಾರದು ಅಥವಾ ನಿಮ್ಮ ಯೋಜನೆಯಲ್ಲೇ ಇರಬಾರದು. ಇಷ್ಟು ದಿವಸದೊಳಗಾಗಿ ಇಷ್ಟು ಹಣ ಇಟ್ಟಿದ್ದೇವೆ, ನಮ್ಮ ಯೋಜನೆಯ ಗುರಿ ಇಷ್ಟಿದೆ ಎನ್ನುವಂಥದನ್ನು ತಾವು ಪ್ರಾಮಾಣಿಕವಾಗಿ ಹೇಳಬೇಕು. ಏಕೆಂದರೆ ತಮಗೂ ಇದರ ಬಗ್ಗೆ ಆಸಕ್ತಿ ಇದೆ, ಅದನ್ನು ನಾವು ತಳ್ಳಿ ಹಾಕುವುದಿಲ್ಲ. ಈ ಇವರ ಬಗ್ಗೆ ತಮಗೂ

ಪ್ರಾಮಾಣಿಕವಾದಂತಹ ಚಿಂತನೆ ಇದೆ, ಆಸಕ್ತಿ ಇದೆ, ಅದರಲ್ಲಿ ಎರಡು ಅಭಿಪ್ರಾಯವಿಲ್ಲ. ನಾವು ಈ ವರ್ಷ ಇಷ್ಟು ಮಾಡುತ್ತೇವೆ, ಮುಂದಿನ ವರ್ಷ ಇಷ್ಟು ಮಾಡುತ್ತೇವೆ. ಎನ್ನುವಂತಹ ಒಂದು ನಿರ್ಧಾರ ತಮ್ಮಲ್ಲಿ ಪ್ರಕಟವಾಗಬೇಕು. ಆ ನಿರ್ಧಾರದ ಪ್ರಕಾರವೇ ಕಾರ್ಯಕ್ರಮಗಳು ರೂಪಿತವಾಗಬೇಕು ಎನ್ನುವಂತಹ ಮಾತನ್ನು ತಮಗೆ ಹೇಳುತ್ತಿದ್ದೇನೆ. ಕಾವೇರಿ ನ್ಯಾಯಮಂಡಲಿಯನ್ನು ಬಹಿಷ್ಕಾರ ಮಾಡಬೇಕು ಎಂದು ನಾವು ಎಲ್ಲಾ ವಿರೋಧ ಪಕ್ಷಗಳು ಮತ್ತು ಅನೇಕ ಹೊರಗಡೆ ಇರತಕ್ಕಂತವರು ಸೇರಿದಂತೆ ಸರ್ಕಾರವನ್ನು ಅನೇಕ ಸಾರಿ ಒತ್ತಾಯ ಮಾಡಿದ್ದೇವೆ. ಮತ್ತು ಹಿಂದಿನ ಸರ್ಕಾರದ ಶ್ರೀಮಾನ್ ಬಂಗಾರಪ್ಪನವರ ಸರ್ಕಾರ ನ್ಯಾಯಮಂಡಲಿಯನ್ನು ಬಹಿಷ್ಕಾರ ಮಾಡದೇ ಇರತಕ್ಕಂತಹ ನಿಲುವನ್ನು ತೆಗೆದುಕೊಂಡಾಗ ನಾವು ಅವರು ಕರೆಯತಕ್ಕಂತಹ ಸಭೆಗಳಿಗೂ ಸಹ ಹೋಗಬಾರದು ಎಂದು ಪ್ರತಿಭಟನೆ ಮಾಡಿ ಹೊರಗಡೆ ಉಳಿದದ್ದು ಆಯಿತು.

ಇವತ್ತು ತಮ್ಮ ಸರ್ಕಾರ ಬಂದನಂತರ ಈ ನಿಲುವಿನಲ್ಲಿ ತಾವು ಬದಲಾವಣೆಯಾಗಿದ್ದೀರಾ? ಅಥವಾ ಏನು ನಿಮ್ಮದು ಚಿಂತನೆ? ಈ ಬಗ್ಗೆ ನಾವು ಕಾವೇರಿ ನೀತಿಯ ಬಗ್ಗೆ ನಿಮ್ಮ ಸರ್ಕಾರದ ನಿಲುವಿನ ಬಗ್ಗೆ ತಾವು ಯಾವುದಾದರೂ ಒಂದು ಸಭೆಯನ್ನು ನೀವು ಕರೆದಿದ್ದೀರಾ? ಕರೆದಿಲ್ಲ. ಮಂಡ್ಯದಲ್ಲಿ ಒಂದು ನಿರ್ಣಯವಾಯಿತು. ಅದರಲ್ಲಿ ತಾವು ಭಾಗವಹಿಸಿದ್ದಿರಿ. ಮಂಡ್ಯದ ನಿರ್ಣಯ ಬಹಳ ಚರಿತ್ರಾರ್ಹವಾದ ನಿರ್ಣಯ. ಇದು ಮೊದಲನೆಯ ಸಮ್ಮೇಳನ. ನಂತರ ಎರಡನೇ ಸಮ್ಮೇಳನದಲ್ಲಿ ತಾವು ಭಾಗವಹಿಸಿದಿರಿ. ನಾನೂ ಭಾಗವಹಿಸಿದ್ದೆ. ಅಲ್ಲಿ ನಿರ್ಣಯ ಏನು ಆಯಿತು. ಆ ನಿರ್ಣಯಕ್ಕೆ ತಾವು ಬದ್ಧರಾಗಿದ್ದೀರಾ ಇಲ್ಲವೇ ಎನ್ನತಕ್ಕಂಥದ್ದು. ನ್ಯಾಯಮಂಡಲಿಯನ್ನು ಕರ್ನಾಟಕ ಸರ್ಕಾರ ಬಹಿಷ್ಕಾರ ಮಾಡಬೇಕು ಎನ್ನತಕ್ಕಂಥದ್ದು ಹೊರಗಡೆ ನಿರ್ಣಯ. ಈ ಸದನದಲ್ಲಿ ನ್ಯಾಯಮಂಡಲಿ ಕೊಟ್ಟಂಥ ತೀರ್ಪನ್ನು ನಾವು ಒಪ್ಪುವುದಿಲ್ಲ ಎನ್ನತಕ್ಕಂಥ ಸರ್ವಾನುಮತದ ನಿರ್ಣಯ ಇಲ್ಲಿ ಆಗಿದೆ. ಇದೆಲ್ಲಾ ಆಗಿರತಕ್ಕಂಥ ಪರಿಸ್ಥಿತಿಯನ್ನು ಚಿಂತನೆ ಮಾಡುವುದಕ್ಕೆ ನೀವು ವಿರೋಧಪಕ್ಷಗಳವರ ಸಭೆಯನ್ನು ನೀವು ಇವತ್ತಿಗೂ ಕರೆದಿಲ್ಲ. ಕರೆದು ನಮ್ಮ ಮಾರ್ಗದರ್ಶನ ಏನು, ಮತ್ತು ನಮ್ಮ ಸರ್ಕಾರದ ನಿಲುವೇನು ಮತ್ತು ನಾವು ಏನು ಮಾಡಬೇಕು ಎನ್ನುವುದು ಗೊತ್ತಾಗಲಿಲ್ಲ. ಇದರ ಬಗ್ಗೆ ಸುಮಾರು 150–160 ಜನರ ಒಂದು ತಜ್ಞರ ಸಮಿತಿಯನ್ನು ಮಾಡಿದ್ದೀರಿ. ಆ ಸಮಿತಿಯನ್ನು ತಾವು ಕರೆಯಲಿಲ್ಲ. ಪತ್ರಿಕೆಯಲ್ಲಿ ನೋಡಿದೆ, ಹಿರಿಯ ವಕೀಲರಾದ ನಾರಿಮನ್‌ರವರ ಜೊತೆಯಲ್ಲಿ ಮುಖ್ಯಮಂತ್ರಿಗಳು ಒಂದು ಮರದ ಕೆಳಗೆ ನಡೆದು ಹೋಗುತ್ತಾ ಅವರಿಗೆ ಹೇಳುತ್ತಿರತಕ್ಕಂಥದ್ದು, ಯಾವುದೋ ಒಂದು ಚಿತ್ರ ನೋಡಿದೆವು. ಅದು ನಮಗೆ ಅವರು ಮಾತುಕತೆಗೆ ಹೋಗಿದ್ದಾರೆ ಎಂದು ಅನಿಸಿತು. ಅದು ಇರಲಿ, ತಾವು ಆ ವಕೀಲರನ್ನು ಭೇಟಿ ಮಾಡಿದ್ದೀರಿ ಎಂದು ನನಗನ್ನಿಸಿದೆ. ಮತ್ತು ನಿಮ್ಮ ಮುಂದಿನ ಮಾರ್ಗದರ್ಶನದ ಬಗ್ಗೆ ಚಿಂತನೆಯ ಬಗ್ಗೆ ನಾವು ಯಾವುದಾದರೂ ಕಾರ್ಯಕ್ರಮವನ್ನು ಕೈಗೊಂಡಿದ್ದೇವೆ. ನಮ್ಮ ಸರ್ಕಾರದ ನೀತಿ ಇದು ಇದೆ. ಕಾವೇರಿಯ ಬಗ್ಗೆ ನಮ್ಮ ನಿಲುವು ಈ ರೀತಿ ಇದೆ ಎನ್ನತಕ್ಕಂಥದ್ದನ್ನು ತಿಳಿಸುವುದಕ್ಕೆ ನೀವು ಸಭೆಯನ್ನು ಇದುವರೆಗೂ ಕರೆದಿಲ್ಲ. ಏತಕ್ಕೋಸ್ಕರ ನೀವು ಸಭೆಯನ್ನು ಕರೆಯಲಿಲ್ಲ? ನಿಮ್ಮ ನಿಲುವೇನು, ಇದನ್ನು ಸ್ಪಷ್ಟಪಡಿಸಬೇಕು. ನಿಮ್ಮ ಸರ್ಕಾರ ಬಂದು ಈಗಾಗಲೇ ಸುಮಾರು ನೂರು ದಿನ ದಾಟಿ ಮುಂದಕ್ಕೆ ಹೋಗುತ್ತಿದೆ. ಇದುವರೆಗಾದರೂ ಒಂದು ಸಾರಿ ಸಭೆಯನ್ನು ಕರೆಯಬೇಕಾಗಿತ್ತು. ಇದು ನಿಮ್ಮಿಂದ ಆಗಿಲ್ಲ. ಇದನ್ನು ಸ್ಪಷ್ಟಪಡಿಸಬೇಕೆಂದು ತಮ್ಮಲ್ಲಿ ಕಳಕಳಿಯ ಮನವಿ ಮಾಡುತ್ತಿದ್ದೇವೆ. ಕಾವೇರಿ ಮತ್ತು ಕೃಷ್ಣ ಇವೆರಡು ಕರ್ನಾಟಕದ ಜೀವನ್ಮರಣದ ಪ್ರಶ್ನೆ. ತಾವು ಈ ಬಗ್ಗೆ ಮುಚ್ಚುಮರೆ ಇಲ್ಲದೆ ಯಾವ ಒಂದು ದೃಷ್ಟಿಯೂ ಇಲ್ಲದೆ ಪರಿಣಾಮಕಾರಿಯಾದ ಕ್ರಮವನ್ನು ಕೈಗೊಳ್ಳುತ್ತೀರಿ ಎಂದು ನಾನಂದುಕೊಂಡಿದ್ದೇನೆ. ಈ ಬಗ್ಗೆ ನಿಮ್ಮ ದೃಷ್ಟಿ, ನಿಮ್ಮ ದಾರಿ ಬಹಳ ನೇರವಾಗಿರಲಿ ಎನ್ನತಕ್ಕಂಥ ಮಾತನ್ನು ತಮ್ಮಲ್ಲಿ ಸ್ಪಷ್ಟಪಡಿಸುತ್ತಿದ್ದೇನೆ. ಸ್ವಾಮಿ ಕಪಿಲಾ ಎರಡನೇ ಹಂತ, ಇದು ಹಿಂದೆ ಶ್ರೀಮಾನ್

ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗ ನಂಜನಗೂಡಿನ ಹತ್ತಿರ ಶಂಕುಸ್ಥಾಪನೆ ಮಾಡಿದರು. ಸುಮಾರು ಒಂಭತ್ತು ವರ್ಷ ಕಳೆದಿದೆ ಎಂದು ನನಗನಿಸುತ್ತಿದೆ. ಅದರ ಬಗ್ಗೆ ಏನಾಗಿದೆ, ತಾವು ಆ ಯೋಜನೆಯನ್ನು ಕೈಗೆತ್ತಿಕೊಳ್ಳುತ್ತೀರಾ ? ಆ ಯೋಜನೆಯನ್ನು ನೀವು ಮಾಡುತ್ತೀರಾ ? ಆ ಯೋಜನೆ ಬಗ್ಗೆ ನಿಮ್ಮ ಚಿಂತನೆಯೇನು ? ಏನು ಅದರ ವರ್ಕ್ ಬಗ್ಗೆ ಒಂದು ಚಕಾರ ಸಹಾ ಇದುವರೆಗೂ ಬಂದಿಲ್ಲ. ಇದು ಕಾರ್ಯಗತವಾಗಲೇಬೇಕು. ಇದು ಕಾರ್ಯಗತವಾಗುವುದರಿಂದ ನೂರಾರು, ಸಾವಿರಾರು ಹಳ್ಳಿಗಳು, ಚಾಮರಾಜನಗರ ತಾಲ್ಲೂಕು, ಗುಂಡ್ಲುಪೇಟೆ, ನಂಜನಗೂಡು ಈ ಪ್ರದೇಶದ ಜನಗಳಿಗೆ ಆ ಬಿಸಿಲಿನ ಒಂದು ಒಣ ಭೂಮಿಗೆ ತಾವು ನೀರನ್ನು ಕೊಟ್ಟಂತಾಗುತ್ತದೆ. ಆ ಒಂದು ಹೆಚ್ಚಿನ ರೀತಿಯಲ್ಲಿ ತಮಗೆ ಶಕ್ತಿ ಬರುತ್ತದೆ, ಕೀರ್ತಿ ಬರುತ್ತವೆ, ಇದನ್ನು ನಾವು ಒಂದು ಸಾರಿ ಶಂಕುಸ್ಥಾಪನೆ ಮಾಡಿ ಈ ಯೋಜನೆಯನ್ನು ಸರ್ಕಾರ ಒಂದು ತೀರ್ಮಾನ ಮಾಡಿದಾಗ ಈ ಯೋಜನೆಯನ್ನು ಇದುವರೆಗೂ ಕೈಬಿಟ್ಟಿದ್ದೀರಿ ? ಈ ಯೋಜನೆಯ ಬಗ್ಗೆ ನಿಮಗೆ ಕಾಳಜಿ ಇಲ್ಲವೇ ? ಕಬಿನಿ ಎರಡನೇ ಹಂತ ಕೈಗೆತ್ತಿಕೊಳ್ಳದೇ ಇರುವಂಥ ಕಾರಣವೇನು ? ಹಿಂದಿನ ಮುಖ್ಯಮಂತ್ರಿಗಳು ಇದು ಬಗ್ಗೆ ಒಂದು ಯೋಜನೆಯನ್ನು ತಯಾರು ಮಾಡಿದ್ದರು. ನೀವು ಏತಕ್ಕೆ ಈ ರೀತಿ ಮಾಡುತ್ತೀರಿ ? ಇದರ ಆದ ಮೇಲೆ ನಾವು ವರುಣಾ ನಾಲೆ ಬಗ್ಗೆ ಸಹ ಸ್ವಲ್ಪ ಹೆಚ್ಚಿನ ಗಮನ ಹರಿಸಬೇಕು. ಏಕೆಂದರೆ ಅಲ್ಲಿ ಅನೇಕ ಕೆಲಸ ನಡೆಯುತ್ತಿವೆ, ನಡೆಯುತ್ತಿಲ್ಲ ಎಂದಲ್ಲ. ಯಾವ ಪ್ರಮಾಣದಲ್ಲಿ ಎಷ್ಟು ಬೇಗದಲ್ಲಿ ಆಗಬೇಕಾಗಿತ್ತೋ ಅಷ್ಟು ಬೇಗ ಅದು ಆಗುತ್ತಾ ಇಲ್ಲ.

ಆದ್ದರಿಂದ ಬಹಳ ಎಚ್ಚರ ರೀತಿಯಲ್ಲಿ ಬೇಗ ಈ ಕಾರ್ಯವನ್ನು ಮುಗಿಸಬೇಕು ಎಂದು ತಮ್ಮಲ್ಲಿ ನಾನು ಮನವಿ ಮಾಡುತ್ತಿದ್ದೇನೆ. ಈ ಲೋಕೋಪಯೋಗಿ ಇಲಾಖೆಯವರು ರಸ್ತೆಗಳು, ಸಾರ್ವಜನಿಕ ಕಟ್ಟಡಗಳು ಮತ್ತು ಸರ್ಕಾರೀ ಕಟ್ಟಡಗಳ ರಿಪೇರಿ ಬಗ್ಗೆ ತೀವ್ರವಾದ ಗಮನವನ್ನು ಹರಿಸಬೇಕಾಗುತ್ತದೆ. ಅನೇಕ ಕಡೆ ಈ ರೀತಿಯ ಪರಿಸ್ಥಿತಿ ಇವತ್ತು ನಿನ್ನೆ ಬಂದಿದ್ದು ಅಲ್ಲ. ಅಥವಾ ಕೇವಲ ಮೂರು ತಿಂಗಳ ಹಿಂದೆ ಬಂದಿದ್ದು ಎನ್ನತಕ್ಕದ್ದೂ ಅಲ್ಲ. ಆದ್ದರಿಂದ ಇದರ ಬಗ್ಗೆ ಒಂದು ಚಿಂತನೆ ನಡೆಸಿ. ಇಷ್ಟು ದಿವಸದೊಳಗಾಗಿ ಇದನ್ನು ಮುಗಿಸುತ್ತೇವೆ ಎಂದು ಒಂದು ಕಾಲಮಿತಿ ಹಾಕಿ ಮುಗಿಸತಕ್ಕ ಒಂದು ವ್ಯವಸ್ಥೆಯನ್ನು ತಾವು ಮಾಡಬೇಕೆಂದು ನಾನು ಹೇಳುತ್ತೇನೆ. ನಾನು ನೀರಾವರಿ ಸಚಿವರಲ್ಲಿ ಒಂದು ಮನವಿ ಮಾಡುತ್ತಿದ್ದೇನೆ.

ಮಾನ್ಯ ನಿಜಲಿಂಗಪ್ಪನವರ ಕಾಲದಿಂದ ಇಲ್ಲಿಯವರೆಗೆ ನೀರಾವರಿ ಇಲಾಖೆಯನ್ನು ಯಾರ್ಯಾರು ವಹಿಸಿಕೊಂಡಿದ್ದರು. ಯಾರ್ಯಾರ ಕಾಲದಲ್ಲಿ ಈ ನೀರಾವರಿಗೋಸ್ಕರವಾಗಿ ಎಷ್ಟು ಕೆಲಸ ಆಗಿದೆ ಎಷ್ಟು ಪ್ರಗತಿ ಆಗಿದೆ ಎನ್ನುವ ಬಗ್ಗೆ ಈ ಸದನದಲ್ಲಿ ಒಂದು ಶ್ವೇತಪತ್ರವನ್ನು ತಾವು ಇಡಬೇಕು ಎಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತೇನೆ. ಏಕೆಂದರೆ ಹೊರಗಡೆ ಎಲ್ಲರೂ ನನ್ನ ಕಾಲದಲ್ಲಿ ಅಷ್ಟು ಆಯಿತು. ನಾನು ನೀರಾವರಿಗೆ ಇಷ್ಟು ಮಾಡಿದೆ, ನಾನು ಹೀಗೆ ಮಾಡಿದೆ ಎಂದು ಎಲ್ಲಾ ಕಥೆಗಳನ್ನು ಹೇಳುತ್ತಿದ್ದಾರೆ. ಈ ಕಥೆಗಳೆಲ್ಲಾ ಬಹಿರಂಗವಾಗಿ ಬಿಡಲಿ, ಅದಕ್ಕೋಸ್ಕರ ನೀವು ಶ್ವೇತ ಪತ್ರ ಇಟ್ಟುಬಿಡಿ. ಸುಮ್ಮನೇ ಹೇಳುವುದ ಬೇಡ. ಇದು ಒಂದು ತೀರ್ಮಾನ ಆಗಲಿ. ಇದು ಹೊರಗಡೆ ಬಂದು ಬಿಟ್ಟರೆ ನನ್ನ ಕಾಲದಲ್ಲಿ ಸೂರ್ಯ ಈ ಕಡೆ ಮೂಡಿತ್ತು ಇನ್ನೂ ಯಾರೂ ಮಾಡಲಿಲ್ಲ ಎಂದು ಹೇಳುತ್ತಿದ್ದಾರೆ. ಆದ್ದರಿಂದ ತಮಗೆ ನಾನು ಹೇಳುತ್ತಿದ್ದೇನೆ. ಅನೇಕ ವೇದಿಕೆಗಳಲ್ಲಿ ಏನು ಹೇಳುತ್ತಿದ್ದಾರೆ. ಎಂದರೆ ಈಗ ಬಂದಿರುವವರು ಸರಿ ಇಲ್ಲ ನಾನೇ ಮಾಡಿದ್ದು ನನ್ನ ಬಿಟ್ಟರೆ ಇಲ್ಲ ಇಂತಹ ವಾದಗಳು, ಇಂತಹ ಧ್ವನಿಗಳು ಬರುತ್ತಿವೆ. ಆದ್ದರಿಂದ ಅವರ ಬಣ್ಣ ಬಯಲಾಗಿಬಿಡಲಿ. ದಯಮಾಡಿ ಯಾರ್ಯಾರು ಪ್ರಾಮಾಣಿಕವಾಗಿ ಈ ನೀರಾವರಿ ಇಲಾಖೆಯಲ್ಲಿದ್ದು ಈ ಕೃಷ್ಣಾ ಕಾವೇರಿ ಮಿಕ್ಕ ಎಲ್ಲಾ ಜಲಾಶಯಗಳಿಗೆ ಕರ್ನಾಟಕದ ಪರವಾಗಿ ನಾವೇನು ಮಾಡಿದ್ದೇವೆ ಎಷ್ಟು ಹಣ ಒದಗಿಸಿದ್ದೇವೆ, ನನ್ನ ಕಾಲದಲ್ಲಿ ಎಷ್ಟು

ಪ್ರಗತಿ ಎನ್ನತಕ್ಕದ್ದು ಗೊತ್ತಾಗಲಿ. ತಮ್ಮಲ್ಲಿ ಅಂಕಿ ಅಂಶ ಸ್ಪಷ್ಟವಾಗಿದೆ. ಅದನ್ನು ತಾವು ಕೂಡಲೇ ಒದಗಿಸಬೇಕು ಎಂದು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ.

ಈ ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಕರಾರು ಪತ್ರ ಸುಮಾರು ಒಂದು ಮಹಾಭಾರತ ಇದ್ದ ಹಾಗೆ ಇಷ್ಟು ದಪ್ಪ ಇರುತ್ತದೆ. ಅದರಲ್ಲಿ ಸಹಿ ತೆಗೆದುಕೊಳ್ಳುತ್ತಾರೆ, ತಾವು ನೋಡಬೇಕು. ನಮಗೆ ಆತುರದಲ್ಲಿ ಕಂಬ ಬೇಕು, ತಂತಿ ಬೇಕು ಎಂದು ಹೇಳಿ ನಾನೇ ಒಂದು ಇಪ್ಪತ್ತು ಕಡೆ ಸಹಿ ಹಾಕಿಬಿಟ್ಟಿದ್ದೇನೆ ಬಿಡಿ. ಓದದೇ ಸರಸರನೇ ಸಹಿ ಹಾಕಿ ಕೊಟ್ಟಿದ್ದೇನೆ. ಮೊನ್ನೆ ಅದನ್ನು ಹರಿದು ಎಸೆದೆ. ಈಗ ಏನು ಪರಿಸ್ಥಿತಿ ಇದೆ ಎಂದರೆ ಯಾರಿಗೆ ಆ ಕರಾರು ಪತ್ರದ ಮೂಲಕ ನಾವು ವಿದ್ಯುಚ್ಛಕ್ತಿ ಕೊಡುತ್ತೇವೆ, ಅದು ಕನ್ನಡದಲ್ಲಿಯೇ ಅದನ್ನು ಕನ್ನಡದಲ್ಲಿ ಒದಗಿಸಬೇಕು. ಆ ಪತ್ರವನ್ನು ಸುಮ್ಮನೇ ಒಂದು ಪುಟ ಮಾಡಲಿ. 25 ಪುಟ ಮಾಡಿ ಅವನ ಜುಟ್ಟು ಜನಿವಾರ, ಶಿವದಾರ ಉಡಿದಾರ ಎಲ್ಲವನ್ನು ಹಿಡಿದು ಅದರಲ್ಲಿ ಬರೆಯಿಸಿ ದೊಡ್ಡದಾಗಿ ಗಂಭೀರವಾಗಿ ಅವನನ್ನು ತಮ್ಮ ವಶಪಡಿಸಿಕೊಂಡು ಬಿಡುತ್ತಾರೆ. ಇದನ್ನು ನಮ್ಮ ವಿದ್ಯುಚ್ಛಕ್ತಿ ಇಲಾಖೆಯವರು ಸ್ವಲ್ಪ ಸರಳೀಕರಣ ಮಾಡಬೇಕು. ಈ ಬಗ್ಗೆ ಹೊಸ ಚಿಂತನೆ ಆಗಲಿ. ಪ್ರತಿಯೊಂದು ಪುಟಪುಟಕ್ಕೂ ಸಹಿ ಹಾಕಬೇಕು. ಅದು ಬದಲಾವಣೆ ಆಗಬೇಕು. ಆಗಲಿಲ್ಲ ಎಂದು ಹೇಳಿದರೆ, ಈ ಕಾಲದಲ್ಲೂ ಬದಲಾವಣೆ ಆಗಲಿಲ್ಲ ಎಂದರೆ ಅದು ಒಳ್ಳೆಯ ಚಿಂತನೆ ಅಲ್ಲ. ಈಗ ವ್ಯವಸಾಯಕ್ಕೆ, ನೀರಾವರಿ ಬಗ್ಗೆ ನಾವು ಇಷ್ಟಿಷ್ಟು, ಕೊಳವೆ ಬಾವಿಗಳಿಗೆ ಇಷ್ಟು, ಕೊಳವೆಗಳಿಗೆ ನಾವು ವಿದ್ಯುತ್ತನ್ನು ಕೊಡುತ್ತೇವೆ ಈ ವರ್ಷ 60 ಸಾವಿರ. ಮುಂದಿನ ವರ್ಷ 70 ಸಾವಿರ ಕೊಡುತ್ತೇವೆ. ಈ ತರಹ ನಾವು ಇಲ್ಲಿ ಘೋಷಣೆ ಮಾಡುತ್ತಿದ್ದೇವೆ ಇಲ್ಲಿ. ಈ ಘೋಷಣೆ ಬದಲು ನಾವು ಪ್ರಾಮಾಣಿಕವಾಗಿ ಎಷ್ಟನ್ನು ಕೊಡುತ್ತೇವೆ, ನಮ್ಮಲ್ಲಿರತಕ್ಕ ವಿದ್ಯುಚ್ಛಕ್ತಿ ಎಷ್ಟು? ನಾವು ಎಷ್ಟು ಹಣ ಕೊಡುತ್ತೇವೆ ಎನ್ನತಕ್ಕ ಒಂದು ನಿರ್ಧಾರ ಮಾಡಲಿಲ್ಲ ಎಂದು ಹೇಳಿದರೆ ಬಹಳ ಕಷ್ಟ ಆಗುತ್ತದೆ. ಈ ಬಗ್ಗೆ ಒಂದು ಚಿಂತನೆ ಆಗಬೇಕು. ಹಿಂದಿನ ಬಂಗಾರಪ್ಪರವರ ಸರ್ಕಾರ 60 ಸಾವಿರ, ಪಂಪುಸೆಟ್ಟುಗಳಿಗೆ ಇಡೀ ರಾಜ್ಯದಲ್ಲಿ ವಿದ್ಯುತ್‌ಛಕ್ತಿ ಕೊಡುತ್ತೇವೆಂದು ಹೇಳಿದರು, ಅದಾದ ಮೇಲೆ ಹಿಂದೆ ಇದ್ದಂಥ ಮಂಡಲಿ ಅಧ್ಯಕ್ಷರು 60 ಸಾವಿರ ದಾಟದೆ ಸ್ವಾಮಿ, 70 ಸಾವಿರ ಆಗಿದೆ ಎಂದು ಹೇಳಿದರು. ಹೇಗೆ ಇದು ಆಗುತ್ತದೆ? ಏನು ಮಾಯಾಜಾಲವೋ ಇದು. ನೀವು ಕರೆಂಟ್ ಕೊಡುವ ಹಾಗೆ ಇಲ್ಲ. ವೋಲ್ಟೇಜ್ ಇರುವುದಿಲ್ಲ. ಇಂತಹದರಲ್ಲಿ ನೀವು 70 ಕೊಟ್ಟಿದ್ದೇನೆ 80 ಕೊಟ್ಟಿದ್ದೇನೆ ಎಂದು ಹೇಳಿದರೆ, ಇದಕ್ಕೆ ಒಂದು ನಿರ್ದಿಷ್ಟವಾದ ಒಂದು ನಿಲುವು ಬೇಕು. ನಿಮ್ಮಲ್ಲಿ ಒಂದು ನಿಲುವು ನಿರ್ದಿಷ್ಟವಾದ ಕಾರ್ಯಕ್ರಮ ಬೇಕು. ಇದು ಇಲ್ಲ ಎಂದರೆ ಬಹಳ ಕಷ್ಟ ಆಗುತ್ತದೆ. ಆದ್ದರಿಂದ ನಾನು ತಮಗೆ ಹೇಳುತ್ತಿದ್ದೇನೆ. ಇನ್ನು ಮುಂದಾದರೂ ನೀವು ವರ್ಷಕ್ಕೆ ಇಷ್ಟು ನೀರಾವರಿ ಬಾವಿಗಳಿಗೆ ವಿದ್ಯುತ್ ಕೊಡುತ್ತೇವೆ, ಬೇರೆಯವರಿಗೆ ಎಷ್ಟು ಕೊಡುತ್ತೇವೆ, ನಮ್ಮಲ್ಲಿರ ತಕ್ಕ ಬಂಡಾವಾಳವೆಷ್ಟು? ನಮ್ಮಲ್ಲಿರತಕ್ಕ ವಿದ್ಯುಚ್ಛಕ್ತಿ ಎಷ್ಟು ನಾವೆಷ್ಟು ಕೊಡುತ್ತೇವೆ, ಎನ್ನತಕ್ಕ ಒಂದು ಪರಿಣಾಮಕಾರಿಯಾದಂತಹ ಕ್ರಮ ತಮ್ಮಲ್ಲಿ ಆಗಬೇಕಾಗಿದೆ. ನಾವು ಕೈಗಾರಿಕೆಗಳಿಗೆ ಸಂಪೂರ್ಣವಾಗಿ ವಿದ್ಯುಚ್ಛಕ್ತಿ ಕೊಡಬೇಡಿ ಎಂದು ಹೇಳತಕ್ಕ ಪರಿಸ್ಥಿತಿಗೆ ಹೋಗಲು ಆಗುವುದಿಲ್ಲ. ಅವರೂ ಬೆಳೆಯಬೇಕಲ್ಲಾ.

ಕೈಗಾರಿಕೆಗಳು ಬರಲಿ ಎಂದು ಎಲ್ಲಾ ಕಡೆಯಿಂದ ನಾವು ಕರೆಯುತ್ತಿದ್ದೇವೆ. ನಾವು ವಿದ್ಯುಚ್ಛಕ್ತಿ ಕೊಡುತ್ತೇವೆ, ನೀರು ಕೊಡುತ್ತೇವೆ, ನೆಲ ಕೊಡುತ್ತೇವೆ ಎಲ್ಲಾ ಹೇಳುತ್ತೇವೆ. ನಿಮ್ಮನ್ನು ನಂಬಿ ನಾವು ಇಲ್ಲಿ ಬರುತ್ತೇವೆ. ಬಂದ ನಂತರ ಏನಾಗುತ್ತದೆ? ಬ್ಯಾಂಕ್‌ನಲ್ಲಿ ಸಾಲ ತೆಗೆದುಕೊಳ್ಳುತ್ತೇವೆ. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಲ್ಲಿ ಸಾಲ ತೆಗೆದುಕೊಳ್ಳುತ್ತೇವೆ. ಸಾಲ ತೆಗೆದುಕೊಂಡ ತಕ್ಷಣ ನೀವು ವಿದ್ಯುತ್‌ಚಕ್ತಿ ಕೊಡುವುದಿಲ್ಲ. ನಮ್ಮ ಕೈಗಾರಿಕೆಗಳು ನಡೆಯುವುದಿಲ್ಲ. ಕೊನೆಗೆ ಕೈಗಾರಿಕೆಗಳನ್ನು ಹರಾಜು ಹಾಕುತ್ತಾರೆ; ಬ್ಯಾಂಕ್‌ನಲ್ಲಿ ಬಡ್ಡಿಗೋಸ್ಕರ. ಈ ಪರಿಸ್ಥಿತಿ ಒಂದರಿಂದ ಒಂದು

ಉದ್ಭವವಾಗುತ್ತದೆ. ಅದಕ್ಕೆ ನಮ್ಮಲ್ಲಿ ಉತ್ಪಾದನೆಯೂ ಸಹ ಅತೀ ಪ್ರಾಮುಖ್ಯವಾಗಿ, ಪ್ರಾಮಾಣಿಕವಾಗಿ ಆಗಬೇಕು. ನಮ್ಮ ಕರ್ನಾಟಕ ವಿದ್ಯುಚ್ಛಕ್ತಿ ನಿಗಮ ಏನು ಇದೆ, ಈ ನಿಗಮ ಸಹ ಸ್ವಲ್ಪ ಶಕ್ತಿಯುತವಾಗಬೇಕು. ನಮ್ಮಲ್ಲಿ ತಯಾರಾಗತಕ್ಕ ಉತ್ಪಾದನೆ ಏನು ಮಾಡುತ್ತಿದ್ದೇವೆ, ಇದು ಸುಮ್ಮನೆ ಒಂದು ರೀತಿ ಬೇಜವಾಬ್ದಾರಿ ಆಗಬಾರದು. ಇದಕ್ಕೊಂದು ಹೊಸ ಕಾಯಕಲ್ಪ ಕೊಟ್ಟು, ವಿದ್ಯುತ್ ಉತ್ಪಾದನೆ ಏನಾಗುತ್ತಿದೆ, ಅದು ಇನ್ನೂ ಹೆಚ್ಚಿನ ರೀತಿಯಲ್ಲಿ ಆಗುವಂತೆ ಪರಿಣಾಮಕಾರಿ ವ್ಯವಸ್ಥೆಯಿಟ್ಟುಕೊಂಡು, ಹಂಚಿಕೆಯೂ ಸಹ ಧಾರಾಳವಾಗಿ ಮಾಡತಕ್ಕಂಥ ವ್ಯವಸ್ಥೆಯನ್ನು ಕೈಗೊಳ್ಳಬೇಕೆಂದು ತಮ್ಮಲ್ಲಿ ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಾ, ಕೃಷ್ಣಾ ಹಾಗೂ ಕಾವೇರಿ ಬಗ್ಗೆ ನೀವು ಪರಿಣಾಮಕಾರಿಯಾದ ಒಂದು ಚಿಂತನೆ ನಡೆಸಬೇಕೆಂದು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಸಭೆ ಈಗ ಮುಂದೂಡಲ್ಪಟ್ಟು ಮತ್ತೆ 2 ಗಂಟೆಗೆ ಸೇರುವುದು.

(ಸದನವನ್ನು 1.01 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ಮಧ್ಯಾಹ್ನ 2.00 ಗಂಟೆಗೆ ಸೇರಲು ನಿಶ್ಚಯಿಸಿತು).

ಸಭೆಯು 2.20ಕ್ಕೆ ಸಮಾವೇಶಗೊಂಡಿತು ಶ್ರೀ ವಿ.ಎಸ್. ಕೌಜಲಗಿಯವರು ಪೀಠವನ್ನು ಅಲಂಕರಿಸಿದರು.

1993-94ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ (ಮುಂದುವರಿದುದು)

† ಶ್ರೀ ಸಿ. ಬೈರೇಗೌಡ (ವೇಮಗಲ್):- ಮಾನ್ಯ ಅಧ್ಯಕ್ಷರೇ, ಈ ದಿವಸ ಅತಿ ಮುಖ್ಯವಾದಂಥ ಬೇಡಿಕೆಗಳ ಮೇಲೆ ನಾವು ಈ ಸದನದಲ್ಲಿ ಚರ್ಚೆ ಮಾಡುತ್ತಿದ್ದೇವೆ, ಏತಕ್ಕೆ ಅತೀ ಮುಖ್ಯವಾದದ್ದು ಎಂದು ನಾನು ಹೇಳುತ್ತಿದ್ದೇನೆಂದರೆ ಮನುಷ್ಯನು ಮೊದಲು ಪ್ರಾರಂಭ ಮಾಡಿದಂಥ ಕಸುಬು ವ್ಯವಸಾಯ. ಈ ವ್ಯವಸಾಯಕ್ಕೆ ನೀರು ಇಲ್ಲದೆ ವ್ಯವಸಾಯ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಅಂಥ ನೀರನ್ನು ಕೊಡತಕ್ಕಂಥ ಇಲಾಖೆ ನೀರಾವರಿ ಇಲಾಖೆ. ಈಗ ವ್ಯವಸಾಯವೂ ಮುಂದುವರಿದಿದೆ. ಒಂದು ಕಾಲದಲ್ಲಿ ವಿದ್ಯುತ್ ಎನ್ನತಕ್ಕಂಥದ್ದನ್ನು ನಾವು ಚಿಕ್ಕಂದಿನಲ್ಲಿದ್ದಾಗ ಅಪರೂಪಕ್ಕೆ ಎಲ್ಲೋ ಕಾಣುತ್ತಿದ್ದೆವು. ಆದರೆ ಇವತ್ತಿನ ದಿವಸ ಏನಾಗಿದೆ ಎಂದರೆ ವಿದ್ಯುತ್ ಇಲ್ಲದಿದ್ದರೆ ವ್ಯವಸಾಯ ಇಲ್ಲವೇ ಇಲ್ಲ. ಆ ಪರಿಸ್ಥಿತಿಗೆ ವ್ಯವಸಾಯ ಅಭಿವೃದ್ಧಿ ಹೊಂದಿದೆ. ಆದ್ದರಿಂದ ನಾನು ಒಬ್ಬ ವ್ಯವಸಾಯಗಾರನಾಗಿ ನನಗೆ ಅತ್ಯಂತ ಮುಖ್ಯವಾಗಿರತಕ್ಕಂಥ ಈ ರಾಜ್ಯದ ದೇಶದ ಜನತೆಯ ಬದುಕಿಗೆ ಸಮಾಜದ ಅಭಿವೃದ್ಧಿಗೆ. ದೇಶದ ಅಭಿವೃದ್ಧಿಗೆ ಅತಿ ಮುಖ್ಯವಾಗಿರತಕ್ಕಂಥ ಈ ಎರಡು ಬೇಡಿಕೆಗಳ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ನಾನು ಈ ಬಾರಿ ನೀರಾವರಿ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಅನೇಕ ಮಾನ್ಯ ಸದಸ್ಯರು ಈ ವಿಚಾರದಲ್ಲಿ ಮಾತನಾಡಿದ್ದಾರೆ. ಮಾತನಾಡಿರತಕ್ಕಂಥದ್ದನ್ನೇ ಮಾತನಾಡುವುದರಿಂದ ಪುನರ್ ಉಚ್ಚಾರದಿಂದ ನನಗೆ ಅದರಲ್ಲಿ ನಂಬಿಕೆ ಇಲ್ಲ. ಆದ್ದರಿಂದ ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ಭಾರೀ ನೀರಾವರಿ ಬಗ್ಗೆ ಒಂದು ಮಾತನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ತಂತ್ರಜ್ಞರು ಏನಾಗಿದ್ದಾರೆ ಎಂದರೆ ನೀರಾವರಿ ಎಂದರೆ ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ಕಟ್ಟತಕ್ಕಂಥದ್ದು, ಸಾವಿರಾರು ಎಕರೆ ಭೂಮಿಯನ್ನು ಮುಳುಗಿಸತಕ್ಕಂಥದ್ದು, ನೂರಾರು, ಸಾವಿರಾರು ಕೋಟಿ ರೂಪಾಯಿಗಳನ್ನು ವೆಚ್ಚ ಮಾಡತಕ್ಕಂಥದ್ದು, ದೊಡ್ಡ ಯೋಜನೆಗಳನ್ನು ಕಟ್ಟತಕ್ಕಂಥದ್ದು ನೀರಾವರಿ ಎನ್ನತಕ್ಕಂಥದ್ದು ಎಂದು ನಮ್ಮ ತಜ್ಞರು ಆ ಒಂದು ಅಭಿಪ್ರಾಯದಲ್ಲಿ ಇವತ್ತಿನ ದಿವಸ ಇದ್ದಾರೆ. ಅದು ಬೇಕು. ಆದರೆ ಅದರ ಜೊತೆಯಲ್ಲಿ ನಮ್ಮಂಥ ಭಾಗಗಳಲ್ಲಿ ಈ ನೀರಾವರಿಗೆ ಅವಕಾಶ ಇಲ್ಲದೇ ಇರತಕ್ಕಂಥ ಕಡೆ ನಾವು ಆಕಾಶ ಮತ್ತು ಭೂಮಿ ಒಳಗಡೆ ಇರತಕ್ಕಂಥ ನೀರನ್ನು ಕಾಣತಕ್ಕಂಥವರು. ಆಕಾಶದಿಂದ ಮಳೆ ಬಿದ್ದಾಗ ನೀರನ್ನು

ಕಾಣುತ್ತೇವೆ, ಭೂಮಿಯಿಂದ ಹೊರಗಡೆ ಬಂದಾಗ ನೀರನ್ನು ಕಾಣುತ್ತೇವೆ, ಇಂಥ ಭಾಗಗಳಿಗೆ ಅನುಕೂಲವಾಗತಕ್ಕಂಥದ್ದಕ್ಕೆ ಎಂದರೆ ಈ ಜಿನುಗು ನೀರಾವರಿ, ಈ ತುಂತುರು ನೀರಾವರಿ, ಹನಿ ನೀರಾವರಿ ಇಂಥದ್ದಕ್ಕೂ ಕೂಡ ನಾವು ಎಷ್ಟು ಪ್ರಮಾಣದಲ್ಲಿ ಈ ಭಾರಿ ನೀರಾವರಿಗಳಿಗೆ ಆದ್ಯತೆಯನ್ನು ಕೊಡುತ್ತಿದ್ದೇವೋ ಅದೇ ಪ್ರಮಾಣದಲ್ಲಿ ಈ ಭಾಗದ ನೀರಾವರಿಗೂ ಕೂಡ ತುಂತುರು, ಹನಿ, ನೀರಾವರಿ ಮತ್ತು ಜಿನುಗು ನೀರಾವರಿಗೂ ಕೂಡ ಆದ್ಯತೆಯನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಈ ದೊಡ್ಡ ದೊಡ್ಡ ನೀರಾವರಿ ಯೋಜನೆಗಳ ಅಡಿಯಲ್ಲಿ ಸಾಕಷ್ಟು ನೀರು ಪೋಲಾಗುತ್ತಿದೆ. ಪೋಲಾಗಿ ಅದು ಒಂದು ಪ್ರವಾಹದ ರೀತಿಯಲ್ಲಿ ಇವತ್ತಿನ ದಿವಸ ಹೋಗುತ್ತಿದೆ. ಅದನ್ನು ಕೂಡ ತಡೆಯತಕ್ಕಂಥದ್ದು ಅತೀ ಅವಶ್ಯಕತೆ ಇರತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ ನಾವು ಏನು ಹರಿಯುವ ನೀರನ್ನು ನಾವು ಏನು ಇವತ್ತಿನ ದಿವಸ ಬಳಕೆ ಮಾಡಿಕೊಳ್ಳುತ್ತಿದ್ದೇವೆ. ಈ ಹರಿಯುವ ನೀರನ್ನು ಸಹ ಕೊಳವೆಗಳ ಮೂಲಕ ಬಿಡತಕ್ಕಂಥದ್ದು, ಆ ಹರಿಯುವ ನೀರನ್ನು ಕೂಡ ಈ ಜಿನುಗು ನೀರಾವರಿ ಮತ್ತು ಹನಿ ನೀರಾವರಿಯಲ್ಲಿ ತೊಡಗಿಸತಕ್ಕಂಥದ್ದನ್ನು ಮಾಡಿದರೆ ಇವತ್ತು ಇರತಕ್ಕಂಥ ಯೋಜನೆಗಳಲ್ಲಿ ಕನಿಷ್ಠ ನನ್ನ ಅಂದಾಜಿನ ಪ್ರಕಾರ ಶೇಕಡ ನೂರಕ್ಕೆ ನೂರರಷ್ಟು ಹೆಚ್ಚಿಗೆ ಪ್ರದೇಶವನ್ನು ನಾವು ನೀರಾವರಿಗೆ ಇವತ್ತು ತೊಡಗಿಸಬಹುದು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಭಾರಿ ನೀರಾವರಿಯನ್ನು ಅಷ್ಟಕ್ಕೆ ಬಿಡುತ್ತೇನೆ. ನಮಗೆ ಇವತ್ತು ಅತೀ ಮುಖ್ಯವಾಗಿ ಬೇಕಾಗಿರತಕ್ಕದ್ದು ಸಣ್ಣ ನೀರಾವರಿ ಯೋಜನೆಗಳು; ನಮ್ಮಲ್ಲಿರತಕ್ಕಂಥವು. ನಮ್ಮ ಕೋಲಾರ ಜಿಲ್ಲೆ ಮತ್ತು ಈ ಭಾಗದ ಬೆಂಗಳೂರು, ತುಮಕೂರು, ಚಿತ್ರದುರ್ಗ, ಇನ್ನೂ ಕೆಲವು ಜಿಲ್ಲೆಗಳಲ್ಲಿ ನಾವು ಅಕಸ್ಮಾತ್ತಾಗಿ ಮಳೆ ಬಂದಾಗ ನೀರು ಕಾಣತಕ್ಕದ್ದು ಕೆರೆಗಳಲ್ಲಿ, ಆ ಕೆರೆಗಳ ಪರಿಸ್ಥಿತಿ ಏನು ಇದೆ ? ಕೋಡಿ ಇದ್ದರೆ ತೂಬು ಸರಿ ಇರುವುದಿಲ್ಲ. ತೂಬು, ಕೋಡಿ ಎರಡೂ ಸರಿ ಇದ್ದರೆ ಕಟ್ಟೆ ಸರಿ ಇರುವುದಿಲ್ಲ ಮತ್ತು ಇವೆಲ್ಲವೂ ಸರಿ ಇದ್ದರೆ, ಅದು ಆಟದ ಮೈದಾನವಾಗಿ ಪರಿಣಾಮ ಆಗಿರತಕ್ಕದ್ದು. ಹೊರಗಡೆಯಿಂದ ಹೂಳು ಬಂದು ತುಂಬಿ ಅನೇಕ ಕೆರೆಗಳು ಇವತ್ತಿನ ದಿವಸ ಆಟದ ಮೈದಾನವಾಗಿವೆ.

ಇದಕ್ಕೆ ನಾವು ಮೊದಲಿನಿಂದಲೂ ಸಹ ಒಂದು ವ್ಯವಸ್ಥಿತವಾದಂತಹ ರೀತಿಯಲ್ಲಿ ದುರಸ್ತಿ ಪಡಿಸುವುದಕ್ಕೆ ಆಗ್ರಹಪಡಿಸುತ್ತಲೇ ಇದ್ದೇವೆ. ಆದರೂ ಕೂಡ ಅದು ಸಮರ್ಪಕವಾದ ರೀತಿಯಲ್ಲಿ ಆಗಲಿಲ್ಲ. ಆದ್ದರಿಂದ ಇವತ್ತಿನ ದಿವಸ ನಮ್ಮ ಭಾಗದಲ್ಲಿ ಏನು ಆಗುತ್ತಿದೆ ಎಂದರೆ, ನಾವು ಚಿಕ್ಕಂದಿನಲ್ಲಿ ಇದ್ದಾಗ 30 ಅಡಿ 40 ಅಡಿಯಲ್ಲಿ ನಮಗೆ ಬಾವಿ ತೆಗೆಸಿದರೆ ನೀರು ಸಿಗುತ್ತಿತ್ತು. ಇವತ್ತು ಅಂತಹ ಬಾವಿಗಳಲ್ಲಿ ಒಂದು ಹಕ್ಕಿ ಕುಡಿಯುವುದಕ್ಕೆ ಸಹ ನೀರು ಸಿಗುವುದಿಲ್ಲ. ಗಿಡ ಬೆಳೆದುಕೊಂಡಿರುತ್ತವೆ ಬಾವಿ ತಣ್ಣಗಾಗಿ. ಆ ಮೂವತ್ತು ನಲವತ್ತು ಅಡಿಯಲ್ಲಿ ನೀರು ಸಿಗುತ್ತಿದ್ದ ಬಾವಿ ಇವತ್ತಿನ ದಿವಸ 300 ಅಡಿ, ನಾಲ್ಕೂನೂರು ಅಡಿಗಳಿಗೆ ಹೋಗಿದೆ. ಇದಕ್ಕೆ ನಮ್ಮ ಕೆರೆಗಳು ಹಾಳಾಗಿರುವುದೇ ಕಾರಣ. ಅದರಿಂದ ನಾನು ಸರ್ಕಾರಕ್ಕೆ ಇವತ್ತಿನ ದಿವಸ ಒತ್ತಾಯ ಮಾಡುತ್ತಿದ್ದೇನೆ. ನಾವು ವಿಶ್ವ ಬ್ಯಾಂಕಿನ ಅಡಿಯಲ್ಲಿ ಸಣ್ಣ ನೀರಾವರಿ ಕೆರೆಗಳನ್ನು ದುರಸ್ತಿ ಮಾಡುವುದಕ್ಕೆ ಆದ್ಯತೆಯನ್ನು ಕೊಡುತ್ತೇವೆ ಎಂದು ಸರ್ಕಾರದವರು ಹೇಳಿದ್ದಾರೆ. ನಿಜ ಮಾಡುತ್ತಾ ಇದ್ದೀರಿ. ಆದರೆ ಇವತ್ತು ಅವಶ್ಯಕತೆ ಎಷ್ಟು ಇದೆ ? ಆಗುತ್ತಾ ಇರತಕ್ಕ ಅನಾಹುತ ಎಷ್ಟು ಇದೆ ? ಅವಶ್ಯಕತೆ ಮತ್ತು ಅನಾಹುತಕ್ಕೆ ತಕ್ಕಂತೆ ಈ ಕೆಲಸ ಆಗುತ್ತಾ ಇಲ್ಲ. ಅದನ್ನು ಗಮನಿಸಿ ನೀವು ಸಣ್ಣ ನೀರಾವರಿಯನ್ನು ಅಭಿವೃದ್ಧಿಪಡಿಸತಕ್ಕದ್ದಕ್ಕೆ ಗಮನ ಕೊಡಬೇಕು ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಹತ್ತಿರ ಎಲ್ಲಾ ಸದಸ್ಯರಿಗೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಒಂದು ಕಾಗದ ಬರೆದರು. ನಿಮ್ಮ ನಿಮ್ಮ ಕ್ಷೇತ್ರಗಳಲ್ಲಿ ಏನಾದರೂ ಅಂದರೆ ಮುಂದಿನ ವರ್ಷದ ಬಜೆಟ್‌ನಲ್ಲಿ ಸೇರಿಸತಕ್ಕ ಕೆಲಸಗಳು ಯಾವುದಾದರೂ ಇದ್ದರೆ ಅದರ ಒಂದು ಪಟ್ಟಿಯನ್ನು ಕಳುಹಿಸಿ ಎಂದು ಹೇಳಿದರು. ನಾನು ಏನೋ

ಆಗುತ್ತದೆ, ಇದು ಮೊದಲನೆಯ ಸಾರಿ ಮುಖ್ಯಮಂತ್ರಿಗಳು ಬಂದಿದ್ದಾರೆ. ಇವರು ಏನೋ ಮಾಡುತ್ತಾರೆ. ನಮ್ಮ ಕೆಲಸಗಳನ್ನು ಸೇರಿಸುತ್ತಾರೆ ಎಂದು ಬಹಳ ಆಸೆಯಿಂದ ನಾವೆಲ್ಲಾ ಆತುರಾತುರವಾಗಿ ಪಟ್ಟಿಯನ್ನು ಮುಖ್ಯಮಂತ್ರಿಗಳಿಗೆ ಕಳಿಸಿದ್ದೇವೆ. ಆ ಪಟ್ಟಿಯಲ್ಲಿ ಇರತಕ್ಕ ಒಂದು ಕೆಲಸವೂ ಕೂಡ ಸೇರಿಲ್ಲ. ಈಗ ಅದಕ್ಕೆ ನಾವು ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟರು. ನಿಮ್ಮನ್ನೆಲ್ಲಾ ಕೇಳುತ್ತೇವೆ, ಪುನಃ ಕೂಡ ಕೇಳುತ್ತೇವೆ. ಒಂದು ಕ್ಷೇತ್ರದಲ್ಲಿ 20 ಲಕ್ಷ ಅಥವಾ ಅದೆಷ್ಟೋ ಕೆಲಸ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ನೋಡಬೇಕು ಅದು ಏನಾಗುತ್ತದೆ ಎಂದು. ಏಕೆಂದರೆ ಇದರಲ್ಲಿ ನಮಗೆ ನಂಬಿಕೆ ಹೊರಟು ಹೋಗಿದೆ. ಕಳೆದ ಮೂರು ವರ್ಷದಿಂದ ಒಂದೊಂದು ಕ್ಷೇತ್ರದಲ್ಲಿ ಮೊದಲು 12 ಲಕ್ಷ ರೂಪಾಯಿ ಕೆಲಸ ತೆಗೆದುಕೊಳ್ಳುತ್ತೇವೆಂದು ಹೇಳಿದರು. ಆಮೇಲೆ 12 ಇದ್ದುದ್ದು 20ಕ್ಕೆ ಹೋಯಿತು. 20ರಿಂದ ಅದು 25ಕ್ಕೆ ಹೋಯಿತು. ಯಾವ್ಯಾವ ಕ್ಷೇತ್ರದಲ್ಲಿ ಎಷ್ಟೆಷ್ಟು ಆಗಿದೆಯೋ ಗೊತ್ತಿಲ್ಲ. ನಮಗಂತೂ ಗೊತ್ತಿಲ್ಲ. ಏನೋ ನಮ್ಮ ಅಧಿಕಾರಿಗಳು ಸ್ವಲ್ಪ ವಿಶೇಷವಾದ ಮಮತೆ ಇದ್ದುದರಿಂದ 20 ಲಕ್ಷ ರೂಪಾಯಿ ಒಂದು ರಸ್ತೆ ಕೆಲಸ ತೆಗೆದುಕೊಳ್ಳಿ ಎನ್ನತಕ್ಕದ್ದಕ್ಕೆ ಕೆಲವು ಅಧಿಕಾರಿಗಳು ನಮ್ಮ ಮೇಲೆ ಕೃಪೆ ಇಟ್ಟು ನಮ್ಮಂಥಹ ಕಡೆ ಸ್ವಲ್ಪ ಕೆಲಸ ಆಯಿತು. ಅಷ್ಟು ಬಿಟ್ಟು ಬಿಟ್ಟರೆ ಇವತ್ತು ರಸ್ತೆಗಳು, ಕೆರೆಗಳು, ಹಾಳಾಗಿ ಹೋಗಿದೆ. ಇಷ್ಟೆಲ್ಲಾ ಇದ್ದರೂ ಸಹ ನಮ್ಮ ಭಾಗದಲ್ಲಿಯಂತೂ ಕೆಲಸಗಳು ಆಗುತ್ತಾ ಇಲ್ಲ. ಅದೇ ರೀತಿಯಲ್ಲಿ ಈವತ್ತಿನ ದಿವಸ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು 120ಕ್ಕೂ ಮೇಲ್ಪಟ್ಟು ನಿಮ್ಮ ಅಪೆಂಡಿಕ್ಸ್ 'ಈ' ತೆಗೆದು ನೋಡಿದರೆ ಗೊತ್ತಾಗುತ್ತದೆ, ನಾನು ಬಜೆಟ್ ದಿವಸ ನಿದ್ದೆ ಮಾಡಲಿಲ್ಲ. ಏನೇನು ಆಗಿದೆ ಎಂದು ಅಪೆಂಡಿಕ್ಸಗಳನ್ನೆಲ್ಲವನ್ನೂ ತೆಗೆದು ನೋಡಿದೆ. ಈ ವರ್ಷ ಸುಮಾರು 120 ಕ್ಕೂ ಮೇಲ್ಪಟ್ಟು ಹೊಸ ಕೆಲಸಗಳನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೇರಿಸಿದ್ದೀರಿ. ನಮ್ಮ ಜಿಲ್ಲೆಯಲ್ಲಿ 120 ಬೇಡ, 20 ಕೆಲಸ ತೆಗೆದುಕೊಳ್ಳುವುದು ಬೇಡವೇ ? ಏಕೆ ಈ ಅನ್ಯಾಯ ಇದು ? ನೀವು ಅಪೆಂಡಿಕ್ಸ್ 'ಈ' ತೆಗೆದು ನೋಡಿ ಗೊತ್ತಾಗುತ್ತದೆ. 120ಕ್ಕೂ ಮೇಲ್ಪಟ್ಟು...

ಶ್ರೀ ಹೆಚ್. ಏಕಾಂತಯ್ಯ:– ನಾವು ನಮ್ಮ ಕಡೆ ಎಷ್ಟು ಸೇರಿಸುತ್ತಾರೆ ಎಂಬುದನ್ನು ನೋಡುತ್ತಿದ್ದೇವೆ.

ಶ್ರೀ ಸಿ. ಬೈರೇಗೌಡ:– ಅಲ್ಲಿ 120 ಬೇಡ ಸ್ವಾಮಿ ಇಪ್ಪತ್ತು ಮಾಡಲಿ. ಏನೋ ಮುಖ್ಯಮಂತ್ರಿಗಳು ಅವರ ಜಿಲ್ಲೆಯವರು ಆಗಿದ್ದಾರೆ. ಪಾಪ, ಅವರ ಜಿಲ್ಲೆಯಲ್ಲಿ ಮಾಡಕೊಳ್ಳಬೇಕು ಅಥವಾ ಅವರೇನು ತಮ್ಮ ಸ್ವಂತಕ್ಕೆ ಮಾಡಿಕೊಂಡರು ಎಂದು ನಾನು ಹೇಳುವುದಿಲ್ಲ. ಆದರೆ ನಮ್ಮ ಜಿಲ್ಲೆಗಳಲ್ಲಿಯೂ ಸಹ ಕೊನೆಯ ಪಕ್ಷ ಒಂದು ಇಪ್ಪತ್ತು ಕೆಲಸ ಆದರೂ ಸೇರಿಸತಕ್ಕಂಥ ಔದಾರ್ಯ ತೋರದೇ ಇದ್ದರೆ ಹೇಗೆ ? ಅಗ ನಮ್ಮ ಕರ್ನಾಟಕದಲ್ಲಿ ಏನು ನಡೆಯುತ್ತಿದೆ, ಒಂದು ಕಡೆ ಹೈದರಾಬಾದ್ ಕರ್ನಾಟಕ ಎನ್ನುತ್ತಾರೆ, ಇನ್ನೊಂದು ಕಡೆ ಬಾಂಬೆ ಕರ್ನಾಟಕ ಎಂದು ಹೇಳುತ್ತಾರೆ. ಇದು ದಕ್ಷಿಣ ಕನ್ನಡ ಉತ್ತರ ಕನ್ನಡ ಎಂದು ಹೇಳುತ್ತಾರೆ. ಮೊದಲು ಹಳೆಯ ಮೈಸೂರು ಎಂದು ಹೇಳುತ್ತಿದ್ದರು. ಈ ಏನು ಭಾವನೆಗಳು ಬರುತ್ತಿವೆ ಈ ರೀತಿಯ ಭಾವನೆಗಳಿಗೆ ಈ ರೀತಿಯಾಗಿ ಮುಖ್ಯಮಂತ್ರಿ ಆಗಿರತಕ್ಕವರು ನಡೆದುಕೊಂಡರೆ ಆ ಭಾವನೆಗಳಿಗೆ ಉತ್ತೇಜನ ಕೊಟ್ಟ ಹಾಗೆ ಆಗುತ್ತದೆ.

ದಯವಿಟ್ಟು ಅದಕ್ಕೆ ಅವಕಾಶ ಕೊಡಬೇಡಿ. ಒಂದು ಜಿಲ್ಲೆಯಲ್ಲಿ 120ಕ್ಕೂ ಮೇಲ್ಪಟ್ಟು ಕೆಲಸಗಳನ್ನು ತೆಗೆದುಕೊಂಡು, ಇತರ ಜಿಲ್ಲೆಗಳಲ್ಲಿ ತೆಗೆದುಕೊಳ್ಳುವುದಿಲ್ಲವೆಂದರೆ, ಹೇಗೆ ? ನಮ್ಮನ್ನೂ ಕೇಳುವವರಿದ್ದಾರೆ. ನಮ್ಮ–ನಿಮ್ಮ ಮಾಸ್ತರುಗಳು, ಒಡೆಯರು ನಮ್ಮನ್ನು ಕೇಳತಕ್ಕಂಥವರಿದ್ದಾರೆ, ಏನು ಕೆಲಸ ಮಾಡಿಸಿದ್ದೀರಿ, ಎಂದು ಕೇಳುತ್ತಾರೆ. ಅದಕ್ಕೆ ಉತ್ತರ ನಾವು ಏನು ಹೇಳಬೇಕು ? ಇವೊತ್ತು ನಾವು ಉತ್ತರ ಹೇಳತಕ್ಕಂಥ ಪರಿಸ್ಥಿತಿಯಲ್ಲಿಲ್ಲ. ಏನೋ ಜನರ ಕಣ್ಣೊರೆಸುವುದಕ್ಕೆ 20 ಲಕ್ಷ

ರೂಪಾಯಿಗಳ ಕೆಲಸವನ್ನು ಕೈಗೆತ್ತಿಕೊಳ್ಳುತ್ತೇವೆನ್ನತಕ್ಕಂಥ ಮಾತನ್ನು ಮುಖ್ಯಮಂತ್ರಿಗಳು ಹೇಳಿದ್ದೀರಿ. ಬಕಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯಂತೆ ಕೆಲವು ಕಡೆ 20 ಲಕ್ಷ ರೂಪಾಯಿಗಳ ಕೆಲಸ ತೆಗೆದುಕೊಂಡು, ಮತ್ತೊಂದು ಕಡೆ ಕೋಟ್ಯಾಂತರ ರೂಪಾಯಿಗಳ ಕೆಲಸ ತೆಗೆದುಕೊಳ್ಳುವ ತಾರತಮ್ಯವೇನಿದೆ, ಈ ರೀತಿ ಮಾಡಿದರೆ ಇದು ಬಹಳ ದಿವಸ ಉಳಿಯುವುದಿಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಅಧ್ಯಕ್ಷರೇ, ಸಣ್ಣ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಇವೊತ್ತು ನಮ್ಮ ಜಿಲ್ಲೆಗೆ ಒಬ್ಬ ಜಿಲ್ಲಾಧಿಕಾರಿಗಳು ಬಂದಿದ್ದಾರೆ. ಅವರು ಹೊಸದಾದ ಒಂದು ವ್ಯವಸ್ಥೆ ಮಾಡಬೇಕೆಂದು ಹೆಚ್ಚು ಹುರುಪಿನಿಂದ ಕೆಲಸ ಮಾಡುತ್ತಿದ್ದಾರೆ. ಮೊದಲನೆಯದಾಗಿ ತಾತ್ಕಾಲಿಕವಾಗಿ ಕೆರೆಗಳಲ್ಲಿನ ಹೂಳು ತೆಗೆಯತಕ್ಕಂಥ ಕೆಲಸ ಹಮ್ಮಿಕೊಂಡಿದ್ದಾರೆ. ನಾವು ಹೇಳುತ್ತಿದ್ದೇವೆ. ಇದನ್ನು ನೋಡಿ, ತೀವ್ರವಾಗಿ ಅದನ್ನು ಪರೀಕ್ಷೆಗೆ ಗುರಿಪಡಿಸಿ, ಇಲ್ಲಿ ಬಂದಿರುವಂಥದ್ದು ಏನಿದೆ, ಇದರಿಂದ ಪ್ರತಿಫಲವಾಗುತ್ತದೆ ಎನ್ನತಕ್ಕಂಥದ್ದು, ಇದನ್ನು ಸರ್ಕಾರ ವೈಜ್ಞಾನಿಕವಾಗಿ ಅಭ್ಯಾಸ ಮಾಡಿ ಆ ಯೋಜನೆಯನ್ನು ಕೊನೆಯ ಪಕ್ಷ ಒಂದು ಜಿಲ್ಲೆಯಲ್ಲಾದರೂ ತೆಗೆದುಕೊಳ್ಳಬೇಕೆನ್ನತಕ್ಕಂಥದ್ದು ನಮ್ಮ ಆಗ್ರಹವಾಗಿದೆ. ಅದನ್ನು ಮಾಡುತ್ತೀರೋ, ಬಿಡುತ್ತೀರೋ ಗೊತ್ತಿಲ್ಲ. ಆದರೆ, ಅದರ ಬಗ್ಗೆ ಕೇಳಿದರೆ, ಅದನ್ನು ವಿಶ್ವಬ್ಯಾಂಕಿನ ಯೋಜನೆಗಳಲ್ಲಿ ಸೇರಿಸಿದ್ದೇವೆ. ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದಾರೆ. ಈಗ ಇದೊಂದು ಕಲ್ಪನೆ ಬಂದಿದೆ. ತೆಗೆದುಕೊಳ್ಳತಕ್ಕಂಥ ಪ್ರತಿಯೊಂದು ಕೆಲಸವನ್ನು ಈ ಕೂಲಿ ಜನರಿಂದ ಮಾಡಬೇಕಾಗುತ್ತದೆಂದು ಇದೆ. ಆ ಕಲ್ಪನೆಯ ಕಾಲ ಈಗ ಹೋಗಿದೆ. ನಮ್ಮ ಕಡೆ ಇವೊತ್ತಿನ ದಿವಸ ಒಂದು ದಿವಸಕ್ಕೆ 50 ರೂಪಾಯಿಗಳ ಕೂಲಿ ಸಿಗುತ್ತಿದೆ. ಕೆಲಸ ಮಾಡದಿದ್ದರೂ ಕೆರೆ ಹೂಳು ತೆಗೆದಿದ್ದೇವೆಂದು ಹೇಳುತ್ತಾರೆ. ಯಂತ್ರಗಳನ್ನು ಉಪಯೋಗಿಸಿ, ಅವುಗಳ ಮೂಲಕ ಹೂಳು ತೆಗೆಯತಕ್ಕಂಥ ವ್ಯವಸ್ಥೆಯನ್ನು ದಯವಿಟ್ಟು ಮಾಡಬೇಕು. ಇದರಿಂದ ಕೆಲಸವೂ ಆಗುತ್ತದೆ, ಪೋಲಾಗತಕ್ಕಂಥಾದ್ದು ಕೂಡ ಕಡಿಮೆಯಾಗುತ್ತದೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅನಂತರ, ಲೆಕ್ಕಪತ್ರಗಳ ಸಮಿತಿಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ನಾವು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯಲ್ಲಿ ಕುಳಿತು ಸಾಕಾಗಿ ಒಂದೊಂದು ಸಾರಿ ಎಷ್ಟು ಸಿಟ್ಟು ಬರುತ್ತದೆಂದರೆ, ವ್ಯವಸ್ಥೆ ಬಗ್ಗೆ ನಾವು ಎಷ್ಟೆಲ್ಲಾ ತಲೆ ಉಪಯೋಗಿಸಿ ಕೆಲಸ ಮಾಡಿದರೂ ಕೂಡ ಏನನ್ನೂ ಇವೊತ್ತು ಸಾಧನೆ ಮಾಡುವುದಕ್ಕೆ ಆಗುತ್ತಿಲ್ಲವಲ್ಲಾ, ಏನೂ ಒಳ್ಳೆಯ ಕೆಲಸವನ್ನು ಮಾಡುವುದಕ್ಕಾಗುತ್ತಿಲ್ಲವಲ್ಲಾ ಎನ್ನುವ ಭಾವನೆ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ ಮುಂದೆ ಕುಳಿತಾಗ ಬರುತ್ತದೆ.

ಬಜೆಟ್‌ನಲ್ಲಿ ಸೇರತಕ್ಕಂಥ ಎಸ್ಟಿಮೇಟ್ ಸ್ಯಾಂಕ್ಷನ್ ಆಗಬೇಕಾಗಿದ್ದರೆ ವರ್ಷಾನುಗಟ್ಟಲೆ ಹಿಡಿಯುತ್ತದೆ. ನನ್ನ ಕ್ಷೇತ್ರದಲ್ಲಿ ಒಂದು ಸಣ್ಣ ಕೆರೆ ಕಾಮಗಾರಿಗಾಗಿ ಒಂದೂವರೆ ಲಕ್ಷ ರೂಪಾಯಿಗಳ ಈ ಯೋಜನೆ 1984–85ನೇ ಸಾಲಿನಲ್ಲಿ ಬಜೆಟ್‌ನಲ್ಲಿ ಸೇರಿತ್ತು. ಇಲ್ಲಿಯವರೆಗೂ ಕೂಡ ಅದು ಮಂಜೂರಾಗಿಲ್ಲ. ಈ ವರ್ಷದಲ್ಲಿ ಮೊನ್ನೆ ಅಧಿಕಾರಿಗಳ ಮೇಲೆ ತೀವ್ರವಾಗಿ ಮಾತನಾಡಿದ ನಂತರ ಈ ಕೆರೆ ಯೋಜನೆ ಮಂಜೂರಾಯಿತು. ಅಂದು ಒಂದೂವರೆ ಲಕ್ಷ ರೂಪಾಯಿಗಳ ಅಂದಾಜಿದ್ದ ಈ ಯೋಜನೆ ಇವೊತ್ತು 9ಲಕ್ಷ ರೂಪಾಯಿಗಳಾಗಿದೆ. ಕಾಗದದಲ್ಲಿ ಕೆರೆ ಕಟ್ಟ ಬೇಕಾಗಿದ್ದರೆ 7--8ವರ್ಷಗಳು ಬೇಕಾಗುತ್ತದೆ. ಇನ್ನು ಮಣ್ಣು, ಕಲ್ಲು ಇನ್ನಿತರ ವಸ್ತುಗಳನ್ನು ಉಪಯೋಗಿಸಿ ಕೆರೆ ಕಟ್ಟಬೇಕಾದರೆ ಇನ್ನೆಷ್ಟು ವರ್ಷ ಬೇಕಾಗುತ್ತದೆ ? ಇದರ ಬಗ್ಗೆ ಆಲೋಚನೆ ಮಾಡಬೇಕು. ಇದಕ್ಕೆ ಅನೇಕ ಕಾರಣಗಳಿವೆ. ಮೊದಲನೆಯದಾಗಿ, ಪ್ರಾಜೆಕ್ಟ್ ತಯಾರಾಗುತ್ತಿದೆಯೆ ? ಪ್ರಾಜೆಕ್ಟ್ ತಯಾರು ಮಾಡುವುದಕ್ಕೆ ಮೊದಲು ಅದಕ್ಕೆ ಇನ್‌ವೆಸ್ಟಿಗೇಷನ್, ಮತ್ತೊಂದು ಎಲ್ಲಾ ಮಾಡಬೇಕಾಗುತ್ತದೆ, ಡಿಸೈನ್ಸ್ ಏನೇನಿದೆಯೋ ಅದನ್ನು ಕೊಡಬೇಕಾಗುತ್ತದೆ. ಇದೆಲ್ಲಾ ಆದ ನಂತರ ಟೆಂಡರ್ ಇಡಬೇಕಾಗುತ್ತದೆ.

ಏನೋ ಒಂದು ಎಸ್ಟಿಮೇಟ್ ಇರುತ್ತದೆ. ಅದರ ಮೇಲೆ ಟೆಂಡರ್ ಇಟ್ಟು, ಅನೇಕ ಸಲ ಇಟ್ಟಂಥ ಟೆಂಡರ್ ಏನಾಗುತ್ತದೆಂದರೆ ಪೋಸ್ಟಪೋನ್ ಆಗುತ್ತಿರುತ್ತದೆ.

ಏಕೆಂದರೆ, ಅದಕ್ಕೆ ಡಿಸೈನ್ಸ್ ಬಂದಿರುವುದಿಲ್ಲ, ಹೈಡ್ರಾಲಿಕ್ ಟೆಸ್ಟ್ ಆಗಿರುವುದಿಲ್ಲ, ಸಾಯಿಲ್ ಟೆಸ್ಟ್ ಆಗಿರುವುದಿಲ್ಲ, ಇವೆಲ್ಲವನ್ನೂ ಮಾಡಬೇಕಾಗಿರತಕ್ಕಂಥವರು ಯಾರು ? ಈ ಕೆಲಸವನ್ನು ಮಾಡಬೇಕಾಗಿರತಕ್ಕಂಥವರು ಇಲಾಖೆಯವರು. ಬೇರೆ ಯಾರೂ ಬಂದು ಮಾಡುವುದಿಲ್ಲ. ಇನ್ನು ಇಲಾಖೆಯಲ್ಲಿ ಅಂದಾಜು ಮಾಡತಕ್ಕಂಥದ್ದು ಒಂದು ವಿಭಾಗವಿದ್ದರೆ ಇದನ್ನೆಲ್ಲ ನೋಡಿಕೊಳ್ಳತಕ್ಕಂಥಾದ್ದಕ್ಕೆ ಬೇರೆ ವಿಭಾಗವಿದೆ. ಒಂದೊಂದು ವಿಭಾಗಗಳಿಗೆ ಪರಸ್ಪರ ಸಾಮರಸ್ಯವಿಲ್ಲದೆ, ಇವೊತ್ತು ಒಂದೂವರೆ ಲಕ್ಷ ರೂಪಾಯಿಗಳು ಆಗಬೇಕಾಗಿರತಕ್ಕಂಥ ಕೆರೆ ಕೆಲಸಕ್ಕೆ ನನ್ನ ಕ್ಷೇತ್ರದಲ್ಲಿ ಸುಮಾರು 9 ಲಕ್ಷ ರೂಪಾಯಿಗಳಿಗೆ ಏರಿದೆ. ಈ ರೀತಿ ಸಣ್ಣ–ಸಣ್ಣ ಯೋಜನೆಗಳಿಗೆ ಮಾತ್ರ ಆಗುತ್ತಿಲ್ಲ, ದೊಡ್ಡ–ದೊಡ್ಡ ಯೋಜನೆಗಳಿಗೂ ಕೂಡ ಆಗಿದೆ. ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿರತಕ್ಕಂಥ ಯೋಜನೆಗಳು ಕೂಡ ಇದೇ ಪರಿಸ್ಥಿತಿಯಲ್ಲಿದೆ. ಆದುದರಿಂದ, ನಾನು ಮಾನ್ಯ ಲೋಕೋಪಯೋಗಿ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಒಂದು ಪ್ರಾಜೆಕ್ಟ್ ಅನ್ನು ನೀವು ಎಸ್ಟಿಮೇಟ್ ಮಾಡಬೇಕಾಗಿದ್ದರೆ, ಅದಕ್ಕೆ ವಿವರವಾದ ಎಲ್ಲಾ ಇನ್‌ವೆಸ್ಟಿಗೇಷನ್ ಮಾಡಬೇಕಾಗುತ್ತದೆ. ಅದಾದ ನಂತರ ಏನೇನು ಆಗಬೇಕು ಎನ್ನತಕ್ಕಂಥಾದ್ದನ್ನೆಲ್ಲಾ ಸರಿಯಾದ ರೀತಿಯಲ್ಲಿ ಡಿಸೈನ್ ಮಾಡತಕ್ಕಂಥಾದ್ದು, ಮತ್ತು ಏನೇನು ಟೆಸ್ಟ್ ಆಗಬೇಕೋ, ಅದನ್ನೆಲ್ಲಾ ಮಾಡುವಂತೆ ಕಡ್ಡಾಯಗೊಳಿಸಬೇಕು. ಕಡ್ಡಾಯಗೊಳಿಸಿದರೆ ಮಾತ್ರ ಏನಾದರೂ ಆಗುತ್ತದೆ. ಆದುದರಿಂದ ಅದನ್ನು ಕಡ್ಡಾಯಗೊಳಿಸಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ರಸ್ತೆಗಳ ಬಗ್ಗೆ ಹೇಳುವುದಾದರೆ, ಅನೇಕ ರಸ್ತೆಗಳು ಯಾವ ಕಾಲದಲ್ಲಾಗಿದೆಯೋ ಗೊತ್ತಿಲ್ಲ. ಅದಕ್ಕೆ ನಾಲ್ಕು ಮಂಕರಿ ಮಣ್ಣನ್ನು ಹಾಕುವ ಕೆಲಸವಾಗಿಲ್ಲ. ಬೆಂಗಳೂರನ್ನು ನಿರ್ಮಾಣ ಮಾಡಿದ್ದಂಥ ಕೆಂಪೇಗೌಡರ ಕಾಲದಲ್ಲಿ ಮಾಡಿದಂಥ ರಸ್ತೆಗಳಿಗೂ ಸಹ ನಾಲ್ಕು ಮಂಕರಿ ಮಣ್ಣನ್ನು ಹಾಕುವ ಕೆಲಸವಾಗಿಲ್ಲ. ಅದರ ಬಗ್ಗೆ ಕೇಳಿದರೆ ಹಣವಿಲ್ಲವೆಂದು ಹೇಳುತ್ತಾರೆ. ಹೌದು ಹಣವಿಲ್ಲ, ಹಣವಿಲ್ಲದೆ ಹೇಗೆ ಕೆಲಸವಾಗುತ್ತದೆ ಎಂಬ ಬಗ್ಗೆ ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಆ ಬೇಡಿಕೆಗಳು ಬಂದಂಥ ಸಂದರ್ಭದಲ್ಲಿ ಆ ವಿಚಾರವನ್ನು ಹೇಳುತ್ತೇನೆ, ಅಲ್ಲಿ ಪೋಲು ಆಗತಕ್ಕ ಹಣವನ್ನು ಇಲ್ಲಿ ಬಳಕೆಗೆ ತಂದರೆ ಅದರಿಂದ ಪ್ರಯೋಜನವಾಗುತ್ತದೆ. 1983–84ರ ಬಜೆಟಿನಲ್ಲಿ ಸೇರಿಸಿರತಕ್ಕಂಥ ರಸ್ತೆಗಳು, ಅದರಲ್ಲಿಯೂ ನನ್ನ ಕ್ಷೇತ್ರದಲ್ಲಿಯೇ ಅನೇಕ ರಸ್ತೆಗಳು ಆಗಿಲ್ಲ, ಈ ರೀತಿ ರಸ್ತೆಗಳ ಕೆಲಸವನ್ನು ಮಾಡುವುದಕ್ಕೆ ವರ್ಷಗಟ್ಟಲೆ ಹಿಡಿದರೆ ನೂರು ರೂಪಾಯಿಯಲ್ಲಿ ಆಗಬೇಕಾದ ಕೆಲಸಕ್ಕೆ ಈಗ 500 ರೂಪಾಯಿಗಳು ಆಗುತ್ತದೆ, ಸಾಮಾನ್ಯವಾಗಿ ಬೆಲೆಗಳು ಜಾಸ್ತಿಯಾಗುತ್ತಿರುತ್ತದೆ. ಆದ್ದರಿಂದ ಅಂದು 100 ರೂಪಾಯಿಯಲ್ಲಿ ಆಗಬೇಕಾದ ಕೆಲಸ ಇಂದು 500 ರೂಪಾಯಿ ಆಗುತ್ತದೆ. ಇದನ್ನು ದಯಮಾಡಿ ಲೋಕೋಪಯೋಗಿ ಸಚಿವರಿಗೆ ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಈಗ ಮತ್ತೊಂದು ಹೊಸ ವಿಧಾನವನ್ನು ಜಾರಿಗೆ ತಂದಿದ್ದಾರೆ. ಅದೇನೆಂದರೆ ಇಲಾಖೆಯ ಮೂಲಕ ನಾವು ಮಾಡಿಸತಕ್ಕ ಕೆಲಸವನ್ನು ಪಡೆಯತಕ್ಕದ್ದು. ಈ ವ್ಯವಸ್ಥೆಯನ್ನು ತಕ್ಷಣ ನಿಲ್ಲಿಸಬೇಕಾದ ಅವಶ್ಯಕತೆ ಇದೆ. ಕಾರಣವೇನೆಂದರೆ ಲಕ್ಷಾಂತರ ರೂಪಾಯಿಯ ಅಂದಾಜು ಆಗಿರತಕ್ಕ ಕೆಲಸವನ್ನೂ ಸಹ ಇಲಾಖೆಯ ಮೂಲಕ ಮಾಡುತ್ತಿದ್ದಾರೆ. ಏಕೆಂದರೆ ಇದನ್ನು ಇಲಾಖೆಯವರೇ ಮಾಡುವುದಿಲ್ಲ, ಮೊದಲು ಗುತ್ತಿಗೆಯನ್ನು ಟೆಂಡರ್ ಮೂಲಕ ತೆಗೆದುಕೊಳ್ಳುತ್ತಿದ್ದ ಗುತ್ತಿಗೆದಾರನೇ ಈ ಕೆಲಸ ಮಾಡುತ್ತಾನೆ, ಅವನಿಗೆ ಇಲಾಖೆಯ ಮೂಲಕ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಇಲಾಖೆಯ ಮೂಲಕ ಕೊಟ್ಟರೆ ಏನಾಗುತ್ತದೆಂದರೆ ಸಿಮೆಂಟ್, ಕಬ್ಬಿಣ, ಟಾರ್

ಮುಂತಾದುವುಗಳಿಗೆಲ್ಲಾ ಸೇಲ್ಸ್ ಟ್ಯಾಕ್ಸನ್ನು ಕೊಡಲು ಬರುವುದಿಲ್ಲ, ಇವುಗಳನ್ನೆಲ್ಲಾ ಇಲಾಖೆಯ ಮುಖಾಂತರ ಕೊಡುತ್ತೀರಿ, ಈಗ ಏನೋ ಹೊಸದಾಗಿ ಆ ರೀತಿ ಕೊಡುವುದಿಲ್ಲವೆಂದು ತೀರ್ಮಾನವನ್ನು ತೆಗೆದುಕೊಂಡು ಮಾಡಿದ್ದೀರಿ, ಅದು ಎಷ್ಟು ದಿನ ಕೆಲಸ ಮಾಡುತ್ತದೆ ಎಂಬುದನ್ನು ನೋಡೋಣ. ಅದು ಬೇರೆ ವಿಷಯವಾಯಿತು ಮತ್ತೆ ಆದಕ್ಕೆ ಆದಾಯ ತೆರಿಗೆಯೂ ಇಲ್ಲ ಮತ್ತು ಮಣ್ಣು, ಕಲ್ಲು ಮುಂತಾದುವುಗಳಿಗೆ ರಾಯಲ್ಟಿಯನ್ನು ಕೊಡುವಂತೆ ಇಲ್ಲ. ಇವೆಲ್ಲವನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಅಲ್ಲಿ ಶೇಕಡ 15 ರಿಂದ 20ರಷ್ಟು ಹಣ ಗುತ್ತಿಗೆದಾರನಿಗೆ ಉಳಿಯುತ್ತದೆ. ಆ ಹಣವನ್ನು ಗುತ್ತಿಗೆದಾರ ಮತ್ತು ಸಂಬಂಧಪಟ್ಟ ಅಧಿಕಾರಿಗಳು ಸೇರಿ ಹಂಚಿಕೊಳ್ಳುತ್ತಾರೆ. ಏಕೆಂದರೆ ಬಿಲ್ಲನ್ನು ಮಾಡುವವರು, ಅಂದಾಜನ್ನು ಮಾಡುವವರು ಮತ್ತು ಪೇಮೆಂಟ್‌ನ್ನು ಮಾಡುವವರು ಎಲ್ಲಾರೂ ಆ ಅಧಿಕಾರಿಗಳೇ ಆಗಿರುತ್ತಾರೆ. ಈ ರೀತಿ ಸಾಕಷ್ಟು ಹಣ ಪೋಲು ಆಗುತ್ತಿದೆ. ದಯಮಾಡಿ ಇದನ್ನು ತಕ್ಷಣ ನಿಲ್ಲಿಸತಕ್ಕ ಅವಶ್ಯಕತೆ ಇದೆ ಎನ್ನತಕ್ಕ ಮಾತನ್ನು ಲೋಕೋಪಯೋಗಿ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ವಿದ್ಯುತ್ ಬಗ್ಗೆ ಹೇಳಬೇಕಾದರೆ, ಇದರ ಬಗ್ಗೆ ಇಲ್ಲಿ ಸಾಕಷ್ಟು ಚರ್ಚೆಯಾಗಿದೆ. ನಮ್ಮ ರಾಜ್ಯದಲ್ಲಿ ವಿದ್ಯುತ್ ಬಗ್ಗೆ ಏನಾಗಿದೆ ಎಂದರೆ ಸಾಮಾನ್ಯವಾಗಿ ಕೆ.ಇ.ಬಿ. ಒಂದೇ ಇದಕ್ಕೆಲ್ಲಾ ಕಾರಣವೆಂದು ಜನರ ಗಮನಕ್ಕೆ ಬಂದಿದೆ. ಅಲ್ಲಿ ಆಗಿರತಕ್ಕ ಅವ್ಯವಹಾರಗಳಿಗೆ ಸಾಮಾನ್ಯ ಜನರಲ್ಲಿ ಕೆ.ಇ.ಬಿ. ಒಂದೇ ಕಾರಣ ಎಂಬ ಭಾವನೆ ಬಂದಿದೆ. ಆದರೆ ವಿದ್ಯುತ್ ಮಂಡಳಿಗೆ ಅದನ್ನು ಉತ್ಪಾದನೆ ಮಾಡತಕ್ಕ ಸಾಮರ್ಥ್ಯವಿಲ್ಲ. ಅದು ಎಲ್ಲೋ ಅಲ್ಪಸ್ವಲ್ಪ ಅಲ್ಲಿ ಇಲ್ಲಿ ಕೆಲವು ಕಡೆ ಉತ್ಪಾದನೆ ಮಾಡುತ್ತಿದ್ದಾರೆ. ಆದರೆ ಬಹುಭಾಗ ವಿದ್ಯುತ್ ಸರಬರಾಜು ಆಗುವುದು ಕರ್ನಾಟಕ ಪವರ್ ಕಾರ್ಪೊರೇಷನ್‌ನಿಂದ. ನಾವು ಸಿಕ್ಕಾಪಟ್ಟೆ ಇಲ್ಲಿ ಆಗಲಿ ಅಥವಾ ಹೊರಗಡೆ ಆಗಲಿ ಆಕ್ರೋಶ ತೋರಿಸುವುದು ಕೆ.ಇ.ಬಿ. ಯ ಮೇಲೆ. ಏಕೆಂದರೆ ಎಲ್ಲಾ ತಾಲ್ಲೂಕಿನಲ್ಲಿ ಕೆ.ಇ.ಬಿ. ಕಛೇರಿ ಇದೆ, ಲೈನ್‌ಗಳು ಕಾಣಿಸುತ್ತದೆ. ಸಬ್‌ಸ್ಟೇಷನ್ ಕಾಣಿಸುತ್ತದೆ, ಇದನ್ನು ಕಂಡ ತಕ್ಷಣ ನಮಗೆ ಸಿಟ್ಟು ಬರುತ್ತದೆ, ಅದನ್ನು ಕಂಡಾಗ ಕೈಲಿ ಆಗದ ಜನರು ಇದ್ದಾರೆಂದು ಸಿಟ್ಟುಬರುತ್ತದೆ. ಆಮೇಲೆ ಅದರ ಬಾಗಿಲನ್ನು ಹಾಕುತ್ತೇವೆ, ಬೆಂಕಿಯನ್ನು ಇಡುತ್ತೇವೆ, ಕಾಗದಪತ್ರಗಳನ್ನು ಹೊರಗೆ ಹಾಕುತ್ತೇವೆ 2-3 ಕಡೆ ಅಧಿಕಾರಿಗಳಿಗೂ ಹೊಡೆಯುವ ಕೆಲಸ ಮಾಡುತ್ತೇವೆ.

ಆದರೆ ಇದಕ್ಕೆ ಮೂಲ ಕಾರಣವೇನು? ವಿದ್ಯುಚ್ಛಕ್ತಿ ಮಂಡಲಿಯಲ್ಲಿ ಕೂಡ ಸಾಕಷ್ಟು ಅವ್ಯವಹಾರಗಳಿವೆ. ಇಲ್ಲಿ ಕಂಭ ತಿನ್ನುವವರು, ಕಂಬಿ ತಿನ್ನುವವರು, ಟ್ರಾನ್ಸ್‌ಫಾರ್ಮರ್ಸ್ ತಿನ್ನುವವರಿದ್ದರೆ, ಇವರನ್ನೂ ಮೀರಿಸುವಂಥ ಜನರು ಕರ್ನಾಟಕ ಪವರ್ ಕಾರ್ಪೋರೇಷನ್‌ನಲ್ಲಿದ್ದಾರೆ. ಅವರು ಪ್ರಾಜೆಕ್ಟ್‌ಗಳನ್ನೇ ನುಂಗಿಬಿಡುತ್ತಾರೆ. ಇವತ್ತು ವಿದ್ಯುಚ್ಛಕ್ತಿ ಅನಾಹುತದಿಂದ ನಮಗೆ ಇಷ್ಟೊಂದು ತೊಂದರೆಯಾಗುತ್ತಿದೆ. ರೈತರಿಗೆ ಸಾವಿರಾರು ಕೋಟಿ ರೂ. ನಷ್ಟವಾಗಿದೆ. ರೈತರು ಬೆಳೆದ ಬೆಳೆಗೆ ಎಷ್ಟರ ಮಟ್ಟಿನ ಬೆಲೆ ಸಿಕ್ಕುತ್ತಿದೆ ಎಂಬುದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅದರ ಬಗ್ಗೆ ಪ್ರತ್ಯೇಕವಾಗಿ ಮಾತನಾಡುತ್ತೇನೆ. ಆದ್ದರೆ ಇವತ್ತು ಅಸಮರ್ಪಕ ವಿದ್ಯುಚ್ಛಕ್ತಿ ಸರಬರಾಜಿನಿಂದ ರೈತರು ಸಾವಿರಾರು ಕೋಟಿ ರೂ. ನಷ್ಟವನ್ನು ಅನುಭವಿಸುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ವಿದ್ಯುಚ್ಛಕ್ತಿ ಗ್ರಾಹಕರು 59.2 ಲಕ್ಷ ಇದ್ದಾರೆ. ಇದರಲ್ಲಿ ಐ.ಪಿ.ಸೆಟ್ಸ 8,58,466 ತಾ:28-2-93ರವರೆಗೆ ಇವೆ. ಇದೇರೀತಿ ಕೆ.ಇ.ಬಿ.ಯವರ ಅಂಕಿಅಂಶಗಳ ಪ್ರಕಾರ 91-92ರ ಸಾಲಿನಲ್ಲಿ 92,879 ಪಂಪ್‌ಸೆಟ್ಟುಗಳಿಗೆ ಸರ್ವಿಸ್ ಕೊಟ್ಟಿದ್ದಾರೆಂದು ತಿಳಿದು ಬಂದಿದೆ. ಇಷ್ಟೊಂದು ಅನಾಹುತ ಏತಕ್ಕೆ ಆಗುತ್ತಿದೆ ಎಂದರೆ ವಿದ್ಯುಚ್ಛಕ್ತಿ ಮಂಡಲಿಯವರು ಎಷ್ಟು ಪಂಪ್‌ಸೆಟ್ಟುಗಳಿಗೆ ಸರ್ವೀಸ್ ಕೊಡುತ್ತಾರೆ ಅದಕ್ಕೆ ತಕ್ಕಂತೆ ಲೈನ್ಸ್, ಸಬ್ ಸ್ಟೇಷನ್ಸ್ ಆಗಬೇಕು. ಆದರೆ ಅದು ಆಗಿಲ್ಲ. ಸಾಮಾನ್ಯವಾಗಿ ವರ್ಷಕ್ಕೆ 25 ಸಾವಿರ ಪಂಪ್‌ಸೆಟ್ಸ್ ಸರ್ವೀಸಿಂಗ್ ಕೆಪ್ಯಾಸಿಟಿ ಇರತಕ್ಕದ್ದು. ಆದರೆ ಇದು 40 ಸಾವಿರಕ್ಕೆ ಹೋಯಿತು. ಅನಂತರ 60 ಸಾವಿರಕ್ಕೆ ಹೋಯಿತು. ಇವರಿಗೆ ಖುಷಿ ಬಂದಂತೆಲ್ಲಾ ಪಂಪ್‌ಸೆಟ್ಟುಗಳಿಗೆ ಸರ್ವೀಸ್ ಕೊಟ್ಟಿದ್ದರಿಂದ

ಇವತ್ತು ಯಾರಿಗೂ ಕೂಡ ಸರಿಯಾಗಿ ಪವರ್ ಇಲ್ಲದಂತಾಗಿದೆ! ಇದರ ಬಗ್ಗೆ ಅಲ್ಲಿರತಕ್ಕ ಆಡಳಿತವನ್ನು ನಡೆಸುವವರು, ತಂತ್ರಜ್ಞರು ಇವರಿಗೆ ಹೇಳಬೇಕು. ಇಷ್ಟು ಪಂಪ್‌ಸೆಟ್ಟುಗಳಿಗೆ ಸರ್ವೀಸ್ ಕೊಡಬೇಕಾದರೆ ಇಂಥಿಂಥಾದ್ದು ಮಾಡಬೇಕು, ಇಲ್ಲದಿದ್ದರೆ ಎಲ್ಲರೂ ಹಾಳಾಗುತ್ತಾರೆಂದು ಹೇಳಬೇಕು. ಚೀಪ್ ಪಾಪ್ಯುಲಾರಿಟಿಗೆ ಒಳಗಾಗಿ ನಾವು ಸಿಕ್ಕಾಪಟ್ಟೆ ಕೊಟ್ಟು ಆ ಸಿಸ್ಟಂಗೆ ಎಷ್ಟು ಕೆಪ್ಯಾಸಿಟಿ ಇದೆ ಆ ಶಕ್ತಿಯನ್ನು ಮೀರಿ ನಾವು ಈವತ್ತು ಪಂಪ್‌ಸೆಟ್‌ಗಳನ್ನು ಎನರ್ಜೈಸ್ ಮಾಡಿದ್ದೇವೆ. ಅದರ ಪ್ರತಿಫಲವನ್ನು ಇವತ್ತು ಎಲ್ಲರೂ ಅನುಭವಿಸುತ್ತಿದ್ದಾರೆ. ಇದರಲ್ಲಿ ಹೊಸಬರೂ ಮತ್ತು ಬಹಳ ಹಿಂದಿನಿಂದ ಪಂಪ್‌ಸೆಟ್ಟುಗಳನ್ನು ಇಟ್ಟುಕೊಂಡಿರುವವರೂ ಅನುಭವಿಸುತ್ತಿದ್ದಾರೆ. ಯಾರೂ ಸರಿಯಾದ ಪ್ರಯೋಜನವನ್ನು ಪಡೆಯುತ್ತಿಲ್ಲ. ಮಾನ್ಯ ಮಂತ್ರಿಗಳಲ್ಲಿ ನನ್ನ ವಿನಂತಿ ಏನೆಂದರೆ, ಆದ್ಯತೆಯ ಮೇಲೆ ತಾವು ಕರೆಂಟ್‌ನ್ನು ಕೊಡಲೇಬೇಕು.

ಏಕೆಂದರೆ ಬೋರ್‌ವೆಲ್ ಹಾಕಿದ 3–4 ತಿಂಗಳೊಳಗೆ ಅದಕ್ಕೆ ಸರ್ವೀಸ್ ಕೊಡದಿದ್ದರೆ ಬೋರ್‌ವೆಲ್ ಮುಚ್ಚಿಹೋಗುತ್ತದೆ. ಒಂದು ಬೋರ್‌ವೆಲ್‌ಗೆ ಸುಮಾರು 25–30 ಸಾವಿರ ರೂ. ಖರ್ಚಾಗುತ್ತದೆ. ಬಡ ರೈತ ಇಷ್ಟೊಂದು ಹಣವನ್ನು ತರಬೇಕಾದರೆ ಅಷ್ಟು ಸುಲಭವಲ್ಲ. ಆ ರೈತ ತನ್ನ ಮನೆಯಲ್ಲಿನ ಎಲ್ಲಾ ಸಾಮಾನನ್ನೂ ಮಾರಿ ಹಣವನ್ನು ತಂದು ಸುರಿದಿರುತ್ತಾನೆ. ಆದುದರಿಂದ ಇವನಿಗೆ ಆದ್ಯತೆಯ ಮೇಲೆ ವಿದ್ಯುಚ್ಛಕ್ತಿಯನ್ನು ಕೊಡಬೇಕಾಗುತ್ತದೆ. ಇದಕ್ಕೆ ಬೇರೆ ವ್ಯವಸ್ಥೆಯನ್ನು ಬಲಪಡಿಸಿಕೊಳ್ಳಬೇಕು. ಇದು ನಿಮ್ಮ ಕರ್ತವ್ಯ. ಕೇಳಿದವರಿಗೆಲ್ಲಾ ನಾವು ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳುವುದಾದರೆ, ಪಂಪ್‌ಸೆಟ್ಟುಗಳಿಗೆ ಸರ್ವೀಸ್ ಕೊಡದಿದ್ದರೆ ಎಷ್ಟು ಜನ ರೈತರಿಗೆ ತೊಂದರೆಯಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ನೀವು ಯಾವುದೇ ನಿಬಂಧನೆಯನ್ನೂ ಹಾಕದೇ ವಿದ್ಯುಚ್ಛಕ್ತಿ ಕೊಡಬೇಕು. ಇದಕ್ಕೆ ನಿಮ್ಮ ಸಿಸ್ಟಂನ್ನು ಉತ್ತಮಪಡಿಸಿಕೊಳ್ಳಬೇಕು. 91–92ನೇ ಸಾಲಿನಲ್ಲಿ ಸರ್ವೀಸ್ ಮಾಡಿ ಇವರ ಸಿಸ್ಟಂ ಇಂಪ್ರೂವ್‌ಮೆಂಟ್, ಸಬ್ ಸ್ಟೇಷನ್ಸ್ ಎಷ್ಟು ಆಡ್ ಮಾಡಿದ್ದಾರೆಂದರೆ ಅತ್ಯಲ್ಪ. ತಮಗೆ ಹೇಳುವುದಾದರೆ, 220 ಕೆ.ವಿ.ಸ್ಟೇಷನ್ಸ್ ಒಂದನ್ನೂ ಮಾಡಿಲ್ಲ. 110 ಕೆ.ವಿ.ಸ್ಟೇಷನ್ ಎರಡನ್ನು ಮಾಡಿದ್ದಾರೆ, 66 ಕೆ.ವಿ.ಯದು 6 ಸಬ್ ಸ್ಟೇಷನ್ಸ್, 33 ಕೆ.ವಿ.ಯದು ಕೇವಲ 2 ಮಾತ್ರ ಸಬ್ ಸ್ಟೇಷನ್ಸ್ ಮಾಡಿದ್ದಾರೆ. ಅದೇರೀತಿ ಇವರು ಲೈನ್ ಹಾಕಿರತಕ್ಕದ್ದೂ ಕೂಡ 220 ಕೆ.ವಿ.ಲೈನ್ 22 ಕಿ.ಮೀ. 110 ಕೆ.ವಿ.ಲೈನ್ನು 34.25 ಕಿ.ಮೀಟರ್, 66 ಕೆ.ವಿ.ಲೈನ್ ಹಾಕಿರತಕ್ಕದ್ದು ಕೇವಲ 27 ಕಿ.ಮೀ ಮಾತ್ರ ಮತ್ತು 33 ಕೆವಿ. ಲೈನ್ 27 ಕಿ.ಮೀ. ಮಾತ್ರ. ಅದನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ವಿದ್ಯುಚ್ಛಕ್ತಿಯ ಅವಶ್ಯಕತೆ ಎಷ್ಟಿದೆ ಅದಕ್ಕನುಗುಣವಾಗಿ ನಿಮ್ಮ ಸಿಸ್ಟಂನ್ನು ಬಲಪಡಿಸಿಕೊಳ್ಳುವ ವ್ಯವಸ್ಥೆ ಆಗಿಲ್ಲವೆಂಬುದಕ್ಕೆ ಇವರು ಕೊಟ್ಟಿರತಕ್ಕ ಅಂಕಿಅಂಶಗಳೇ ಸಾಕ್ಷಿ. ಪವರ್ ಕೊಡುತ್ತಿದ್ದೇವೆಂದು ಎಲ್ಲರನ್ನೂ ಹಾಳುಮಾಡತಕ್ಕಂಥ ಕೆಲಸ ಇಲ್ಲಿಯವರೆಗೂ ಕೂಡ ಆಗುತ್ತಾ ಬಂದಿದೆ. ಆದರೆ ಇಷ್ಟು ಪಂಪ್‌ಸೆಟ್ಟುಗಳಿಗೆ ಪವರ್‌ನ್ನು ಕೊಡಬೇಕಾದರೆ ಯಾವ ಯಾವ ಪವರ್ ಸ್ಟೇಷನ್‌ನ್ನು ಎಷ್ಟು ಕೊಡಬೇಕಾಗಿತ್ತು, ಅಷ್ಟತಕ್ಕಂಥದ್ದನ್ನು ಈ ಲೆಕ್ಕವನ್ನು ದಯವಿಟ್ಟು ಮಾನ್ಯ ಮಂತ್ರಿಗಳು ಕೊಡಬೇಕೆಂದು ಈ ಸಂದರ್ಭದಲ್ಲಿ ಇಷ್ಟಪಡುತ್ತೇನೆ. ಮತ್ತೆ ಈ ಕೆ.ಇ.ಬಿ.ಯಿಂದ ಯಲಹಂಕದಲ್ಲಿ ಏನಾಗಿದೆ ಎಂಬುದಕ್ಕೆ ನಾನೂ ಈಗಾಗಲೇ ಹೇಳಿದ್ದೇನೆ. ನಮ್ಮ ಯೋಜನೆಗಳಲ್ಲಿ ಯಾವ ರೀತಿ ತಲೆಕೆಳಗಾಗುತ್ತವೆ ಎಂಬುದನ್ನು ಹೇಳಿದ್ದೇನೆ. ನೀರಾವರಿ ಅಥವಾ ಲೋಕೋಪಯೋಗಿ ಇಲಾಖೆಯಲ್ಲಿ ನಡೆಯುವುದಷ್ಟೇ ಅಲ್ಲ, ಇಲ್ಲೂ ಕೆ.ಇ.ಬಿ.ಯಲ್ಲೂ ನಡೆಯುತ್ತಿದೆ. ಈ ಯಲಹಂಕ ಪವರ್ ಸ್ಟೇಷನ್ ಒಂದರಲ್ಲಿ 120 ಮೆಗಾವ್ಯಾಟ್ ಉತ್ಪಾದನೆ ಮಾಡತಕ್ಕಂಥ ಡೀಸಲ್ ಜನರೇಟಿಂಗ್ ಸ್ಟೇಷನನ್ನು ಇವತ್ತಿನ ದಿವಸ ಹಾಕಿದ್ದಾರೆ. ಇದರ ಮೊದಲ ಅಂದಾಜು ಕೇವಲ 120 ಕೋಟಿ ರೂಪಾಯಿಗಳು. ಇವತ್ತು ಎಷ್ಟು ಆಗಿದೆ ಎಂದರೆ 250 ಕೋಟಿ ರೂಪಾಯಿಗಳಾಗಿದೆ. 100ಕ್ಕೆ 100 ರಷ್ಟು ಇದರ ಬೆಲೆ ಜಾಸ್ತಿಯಾಗಿರತಕ್ಕಂಥದ್ದನ್ನು ನಾವು ಕಾಣುತ್ತಿದ್ದೇವೆ. ನಿನ್ನೆ ಮೊನ್ನೆ ಪತ್ರಿಕೆಗಳಲ್ಲಿ

ನೋಡಿದ್ದು ಏನೆಂದರೆ ಈಗ ಇದರ ಟ್ರಯಲ್ ರನ್ ಸ್ಟಾರ್ಟ್ ಆಗಿದೆ ಎನ್ನುವುದು. ಕೆ.ಪಿ.ಸಿ. ಆಗಲಿ, ಅಥವಾ ಕೆ.ಇ.ಬಿ ಆಗಲಿ ಯಾವ ಯೋಜನೆಗಳು ಎಷ್ಟೆಷ್ಟು ಹಂತದಲ್ಲಿ ಮುಗಿಯ ಬೇಕೆನ್ನತಕ್ಕಂಥದ್ದಕ್ಕೆ ಇಂಟರ್‌ನ್ಯಾಷನಲ್ ಸ್ಟಾಂಡರ್ಡ್ ಇದೆ. ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್ ಆದರೆ ಅದು ಏಳು ವರ್ಷದಲ್ಲಿ ಪ್ರಾರಂಭವಾದಾಗಿನಿಂದ ಮುಗಿಯಬೇಕು. ಥರ್ಮಲ್ ಆದರೆ ಮೂರು ವರ್ಷದಲ್ಲಿ ಮುಗಿಯಬೇಕು. ಡೀಸಲ್ ಆದರೆ ಕೇವಲ ಒಂದು ವರ್ಷ ಸಾಕಾಗುತ್ತದೆ. ಆದರೆ ಇದು ನಮ್ಮ ಯಲಹಂಕ ಪವರ್ ಸ್ಟೇಷನ್ ಪ್ರಾರಂಭವಾಗಿದ್ದು ಯಾವಾಗ ಅಂದರೆ ಸುಮಾರು 5–6 ವರ್ಷಗಳ ಹಿಂದೆ. ಇವತ್ತಿನ ದಿವಸ ಅದರ ಬೆಲೆ 100ಕ್ಕೆ 100 ಪಟ್ಟು ಜಾಸ್ತಿಯಾಗಿದೆ. ಇದು ನಮ್ಮ ಎಫಿಷಿಯನ್ಸಿ; ಮಾನ್ಯ ಮಂತ್ರಿಗಳು ಬಹಳ ಆಧುನಿಕವಾದಂಥ ಅಭಿಪ್ರಾಯಗಳನ್ನು ಉಳ್ಳತಕ್ಕಂಥವರು. ಮಾನ್ಯ ಉಪಮುಖ್ಯಮಂತ್ರಿಗಳಾಗಿರತಕ್ಕಂಥ ಎಸ್.ಎಂ. ಕೃಷ್ಣರವರು ಅವರು ಒಳ್ಳೆಯ ಸೈನ್‌ಟಿಫಿಕ್ ವಿಚಾರಗಳನ್ನು ಯೋಚನೆ ಮಾಡತಕ್ಕಂಥವರು, ಅವರು ಇದಕ್ಕೆ ಗಮನಹರಿಸಿ ಇವತ್ತು ಇರತಕ್ಕಂಥ ನಾನಾಯೋಜನೆಗಳು ಅವೆಲ್ಲವನ್ನೂ ಕೂಡ ಏನು ಟೈಮ್ ಷೆಡ್ಯೂಲ್ ಇದೆ ಆ ಟೈಮ್ ಷೆಡ್ಯೂಲ್ ಪ್ರಕಾರ ಆಗುವುದಕ್ಕೆ ಎಲ್ಲಾ ಪ್ರಯತ್ನಗಳನ್ನು ಕೂಡ ಮಾಡಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮಾನ್ಯ ಅಧ್ಯಕ್ಷರೇ, ಈ ಕೆ.ಇ.ಬಿ.ಯಲ್ಲಿ ಏನಾಗಿದೆ ಎಂದರೆ ಇಲ್ಲಿ ದಾಯಾದಿ ಮತ್ಸರ ವಿಪರೀತವಾಗಿ ಇದೆ. ಅಲ್ಲಿ ಲೆಕ್ಕಪತ್ರಗಳು ಅಕೌಂಟ್ಸ್ ಎನ್ನತಕ್ಕಂಥದ್ದು ಒಂದು ಬ್ರಾಂಚ್. ಈ ಅಕೌಂಟ್ಸ್‌ನವರಿಗೂ, ಯಾರು ಇದನ್ನೆಲ್ಲಾ ಎಕ್ಸಿಕ್ಯೂಟ್ ಮಾಡುತ್ತಾರೆ, (ಎಕ್ಸಿಕ್ಯೂಟೀವ್ಸ್), ಇವರಿಬ್ಬರಿಗೂ ದಾಯಾದಿ ಮತ್ಸರ. ಅವರು ಒಂದು ಹೇಳಿದರೆ ಇವರು ಇನ್ನೊಂದು ಹೇಳುತ್ತಾರೆ. ಅವರು ಹೇಳಿದ್ದನ್ನು ಮಾಡದೆ ಇವರು ಮತ್ತೊಂದನ್ನು ಮಾಡುತ್ತಾರೆ. ಹೀಗಾಗಿ ಏನಾಗುತ್ತಿದೆ ಎಂದರೆ ಇವರಿವರ ತಿಕ್ಕಾಟ ಜಗ್ಗಾಟದಿಂದ ಅನೇಕ ಯೋಜನೆಗಳು, ಕಾರ್ಯಕ್ರಮಗಳು ಆಗುವುದಕ್ಕೆ ತಡವಾಗುತ್ತಿದೆ. ಆದ್ದರಿಂದ ಅಕೌಂಟ್ಸ್‌ಗೂ, ಎಕ್ಸಿಕ್ಯೂಟೀವ್‌ಲೈನ್‌ನಲ್ಲಿರತಕ್ಕಂಥವರಿಗೆ ಏನು ಜಗ್ಗಾಟ ನಡೆಯುತ್ತಿದೆ ಇದನ್ನು ಸರಿಪಡಿಸತಕ್ಕಂಥ ಕೆಲಸವಾಗಬೇಕೆನ್ನುವುದನ್ನು ನಾನು ಹೇಳುತ್ತಿದ್ದೇನೆ. ಇನ್ನೊಂದು ವಿಷಯ ಗಮನಿಸಿದ್ದು ಕೆ.ಇ.ಬಿ.ಯಲ್ಲಿ ಏನಾಗಿದೆ ಎಂದರೆ ಓ ಅಂಡ್ ಎಂ. ಎನ್ನತಕ್ಕಂಥ ಒಂದು ವಿಭಾಗ ಇದೆ. ಅದು ಏನೆಂದರೆ ಲೈನ್‌ಗಳನ್ನು ಹಾಕತಕ್ಕಂಥದ್ದು, ಸರ್ವೀಸ್ ಮಾಡತಕ್ಕಂಥದ್ದು, ಆಪರೇಷನ್ಸ್, ಅಂಡ್ ಮೈನ್‌ಟನೆನ್ಸ್ ಒಂದು ವಿಭಾಗ, ಇನ್ನೊಂದು ಸ್ಟೇಷನನ್ನು ನೋಡಿಕೊಳ್ಳುವುದು ಮತ್ತು ಮೇಜರ್ ವರ್ಕ್ಸ್ ಏನಿದೆ ಅದನ್ನು ನೋಡಿಕೊಳ್ಳಲು ಮೇಜರ್ ಕನ್‌ಸ್ಟ್ರಕ್ಷನ್ ಡಿವಿಜನ್ ಎನ್ನತಕ್ಕಂಥದ್ದು ಇದೆ. ಅಲ್ಲಿ ಏನಾಗುತ್ತದೆ ಎಂದರೆ ಓ ಅಂಡ್ ಎಂ ನಲ್ಲಿ ಕೈ ಎಲ್ಲಿ ಇಟ್ಟರೆ ಅಲ್ಲೆಲ್ಲಾ ಕಾಸು ಸಿಗುತ್ತದೆ. ಎಷ್ಟುಬೇಕಾದರೂ ಕೂಡ ಅನೇಕರಿಗೆ ಸಿಗುತ್ತದೆ. ಯಾರೂ ನೋಡಿದರೂ ಕೂಡ ಅವರ ಅಪ್ಪನಾಣೆ ಯಾರ ಕೈಯೋ ಕಾಲೋ ಹಿಡಿದು ಸಾವಿರ, ಐವತ್ತು ಸಾವಿರ, ಲಕ್ಷ ಕೊಡುತ್ತಾರೋ, ಎಷ್ಟು ಕೊಡುತ್ತಾರೋ, ನನಗೆ ಗೊತ್ತಿಲ್ಲ. ಇಂತಹ ಜಾಗಗಳಲ್ಲಿಯೇ ಇರುವುದಕ್ಕೆ ಪ್ರಯತ್ನ ಪಡುತ್ತಾರೆ. ಅವರನ್ನು ಮೇಜರ್ ವರ್ಕ್ಸ್ ಕನ್‌ಸ್ಟ್ರಕ್ಷನ್ ಡಿವಿಜನ್‌ನಲ್ಲಿ 24 ಗಂಟೆಗಳ ಕಾಲ ಮೀಟರ್ ಇಟ್ಟುಕೊಂಡು ಏನೇನು ತೋರಿಸುತ್ತದೆ ಅದನ್ನು ನೋಡಿಕೊಂಡು ಕುಳಿತಿರಬೇಕು. ಆ ಜಾಗಕ್ಕೆ ಹಾಕಬೇಕು.

2.50 ಪಿಎಂ

ಅಲ್ಲಿಗೆ ಯಾರೂ ಹೋಗುವುದಿಲ್ಲ. ಅನೇಕ ಕಡೆ ಇವತ್ತಿನ ದಿವಸ ವೇಕನ್ಸಿ ಆಗಿದೆ. ಅಲ್ಲಿಗೆ ಹಾಕಿದರೂ ಹೋಗುವುದಿಲ್ಲ; ವರ್ಗ ಮಾಡಿದರೂ ಹೋಗುವುದಿಲ್ಲ. ಎಲ್ಲಿ ಹಣ ಸಿಗುತ್ತದೋ ಅಲ್ಲೇ ಇರುತ್ತಾರೆ. ಓ ಅಂಡ್ ಎಂ 'ಅಂದರೆ ಅದು ಒಂದು ಷೆಡ್ಯೂಲ್ ಎಲ್ಲಾ ಇತ್ತು ಹಿಂದೆ. ಒಂದು ಯೂನಿಟ್ಟಿಗೆ 2–3 ರೂಪಾಯಿ ಕೊಡಬೇಕು. ಅದೇ ರೀತಿ ಸಬ್–ಡಿವಿಜನ್ ಓ ಅಂಡ್ ಎಂ.ನಲ್ಲಿ ಹಾಕಬೇಕಾದರೆ ಇಷ್ಟು, ಡಿವಿಜನ್‌ನಲ್ಲಿ ಹಾಕಬೇಕಾದರೆ ಇಷ್ಟು, ಸರ್ಕಲ್‌ನಲ್ಲಿ ಹಾಕಬೇಕಾದರೆ ಇಷ್ಟು

ಎಂದು ಷೆಡ್ಯೂಲ್ ಎಲ್ಲಾ ಕೆ.ಇ.ಬಿ.ಯಲ್ಲಿದೆ. ಆದುದರಿಂದ ಏನು ಇವತ್ತು ಕೆಇಬಿಯಲ್ಲಿ ನಡೆಯುತ್ತಿದೆ ಎಂಬುದನ್ನು ನೋಡಬೇಕಾಗಿದೆ. ಒಂದು ಕಡೆ ಸ್ಟೇಷನ್ ಮೆಯಿಂಟೆನೆನ್ಸ್ ಕೂಡ ಅಷ್ಟೇ ಮುಖ್ಯವಾಗಿರತಕ್ಕದ್ದು. ಇವತ್ತು ಏನು ವ್ಯಾಪಾರ ನಡೆಯುತ್ತಿದೆ ಅದರಿಂದ ಸ್ಟೇಷನ್ಸ್ ನೋಡಿಕೊಳ್ಳತಕ್ಕದ್ದು. ಕನ್‌ಸ್ಟ್ರಕ್ಷನ್ ಮಾಡಬೇಕಾದುದು ಏನಿದೆ ಅದು ಕುಂಠಿತವಾಗುತ್ತಿದೆ. ಅದನ್ನು ಸರಿಪಡಿಸುವುದಕ್ಕೆ ಮಂತ್ರಿಗಳು ಪ್ರಯತ್ನ ಮಾಡಬೇಕು. ಇದೆಲ್ಲಾ ಮೊದಲು ನನಗೆ ಗೊತ್ತಿರಲಿಲ್ಲ. ಇತ್ತೀಚೆಗೆ ಕೆಲವು ಕೆಲಸಗಳು ನಡೆಯುತ್ತಿವೆ. ಮೇಜರ್ ವರ್ಕ್ಸ್‌ನಲ್ಲಿರತಕ್ಕ ಅಸಿಸ್ಟೆಂಟ್ ಇಂಜಿನಿಯರ್ಸ್, ಎಕ್ಸಿಕ್ಯೂಟೀವ್ ಇಂಜಿನಿಯರ್ಸ್ ಲಾರಿಗಳಲ್ಲಿ ಓಡಾಡುವುದನ್ನು ನಾನು ನೋಡಿದ್ದೇನೆ. ಏನು ಲಾರಿಯಲ್ಲಿ ತಿರುಗಾಡುತ್ತೀರಿ ಅಂದರೆ ನಮಗೆ ಗಾಡಿ ಇಲ್ಲವೆಂದು ಹೇಳುತ್ತಾರೆ. ಅವರಿಗೆ ಬೇಕಾಗಿರತಕ್ಕ ಸವಲತ್ತುಗಳು ಇಲ್ಲ. ಅವರಿಗೆ ಬೇಕಾದ ಸ್ಟಾಫ್ ಇಲ್ಲ. ಸಾಕಷ್ಟು ವೇಕೆನ್ಸಿಗಳು ಇವೆ. ಅದನ್ನು ಭರ್ತಿ ಮಾಡುವ ಕೆಲಸವನ್ನು ದಯವಿಟ್ಟು ಮಾಡಬೇಕು. ಅದನ್ನೆಲ್ಲಾ ತಕ್ಷಣ ಸರಿಪಡಿಸಬೇಕೆಂದು ಮಂತ್ರಿಗಳಿಗೆ ಸಲಹೆ ಕೊಡುತ್ತೇನೆ. ಕೆ.ಇ.ಬಿ. ಬಗ್ಗೆ ಏನು ಹೇಳಬೇಕೆಂದು ಗೊತ್ತಿಲ್ಲ. ಅದೂ ಪ್ರಜಾಪ್ರಭುತ್ವ ಕಾಲದಲ್ಲಿ ಸಹ ಈ ಸರ್ವಾಧಿಕಾರಿಗಳ ಆಡಳಿತ ಎರಡು ವರ್ಷಗಳ ಕಾಲ ನಡೆಯಿತು. ಇಲ್ಲಿ ಹೇಳುವವರು ಕೇಳುವವರು ಇರಲಿಲ್ಲ. ಅದಕ್ಕೆ ಸದನದ ಸಮಿತಿ ರಚನೆ ಆಗಬೇಕೆಂದು ಹೇಳಿದ್ದು; ಈಗ ಸದನದ ಸಮಿತಿ ರಚನೆಯಾಗಿದೆ. ವಿವರವಾಗಿ ನಾವು ಅಲ್ಲಿ ಅಭ್ಯಾಸ ಮಾಡುತ್ತೇವೆ. ಆದರೆ ಸರ್ವಾಧಿಕಾರಿ ಆಡಳಿತದಲ್ಲಿ ಆಗಿರತಕ್ಕ ಅನಾಹುತಗಳು ಏನಿದ್ದಾವೆ ಎಂಬುದನ್ನು ನೋಡಬೇಕು. ಉದಾಹರಣೆಗೆ ಹಿಂದಿನ ಅಧ್ಯಕ್ಷರಾಗಿರದ್ದವರು ಏರ್‌ಪೋರ್ಟ್‌ಗೆ ಹೋಗತಕ್ಕ ಸಂದರ್ಭದಲ್ಲಿ ಏರ್‌ಪೋರ್ಟನ್ನು ಎರಡು ಗಂಟೆಗಳ ಕಾಲ ಕತ್ತಲಲ್ಲಿ ಇರಿಸಿದ್ದರು. ಈ ಸದನದಲ್ಲಿ ಕೂಡ ಅದು ಚರ್ಚೆಯಾಯಿತು. ಇಲ್ಲಿಯವರೆಗೆ ಸಮರ್ಪಕವಾಗಿ ನಮಗೆ ಉತ್ತರ ಬರಲಿಲ್ಲ. ಎರಡು ಗಂಟೆಗಳ ಕಾಲ ಏರ್‌ಪೋರ್ಟನ್ನು ಕತ್ತಲಲ್ಲಿ ಇಡಬೇಕಾದ ಅವಶ್ಯಕತೆ ಏನಿತ್ತು, ಅದಕ್ಕೆ ಕಾರಣವೇನೆಂಬುದರ ಬಗ್ಗೆ ಇದುವರೆಗೆ ಉತ್ತರ ಬಂದಿಲ್ಲ. ಯಾವ ಕಾರಣದಿಂದ ಆ ರೀತಿ ಆಯಿತು ಏನು ಎಂದು ಹೇಳಬೇಕಾಗುತ್ತದೆ. ಅವತ್ತು ನೆಪ ಒಡ್ಡಿ ತಪ್ಪಿಸಿಕೊಂಡು ಹೋದರು. ಕಾರಣ ಅದಲ್ಲ. ಅಲ್ಲಿ ಇದ್ದ ಕಾರಣ ಬೇರೆ. ತಾವು ಇವತ್ತಿನ ದಿವಸ ನಿಜ ಏನು ಎಂದು ಹೇಳಬೇಕು. ಈಗ ಸಮಿತಿ ರಚನೆಯಾಗಿರುವುದರಿಂದ ನಾನು ಎಲ್ಲಾ ವಿವರಗಳಿಗೂ ಹೋಗುವುದಿಲ್ಲ. ಒಂದೊಂದು ಕಿಲೋಮೀಟರ್ ತಂತಿ ಕೊಂಡುಕೊಳ್ಳ ಬೇಕಾದರೆ ಕಡಿಮೆ ದರ ಕೊಟ್ಟಿರುವ ಕಂಪನಿಯನ್ನು ಬಿಟ್ಟು ಹೆಚ್ಚಿಗೆ ದರವನ್ನು ಕೊಟ್ಟಿರುವ ಕಂಪನಿಗಳಿಗೆ ಕೊಟ್ಟಿರತಕ್ಕದ್ದು. ಹೀಗಾಗಿ ಒಂದು ಲಕ್ಷ ಕಿಲೋಮೀಟರೆ ತಂತಿಯನ್ನು ಈ ಬೆಲೆಯಲ್ಲಿ ಕೊಂಡುಕೊಂಡಿದ್ದಾರೆ. ಇದರಲ್ಲಿ 3–4 ವಿಧದ ತಂತಿ ಬರುತ್ತದೆ. ಒಂದು ಲಕ್ಷ ಕಿಲೋಮೀಟರ್‌ನಷ್ಟು ತಂತಿಯನ್ನು ಹೆಚ್ಚಿಗೆ ಬೆಲೆ ಕೊಟ್ಟು ಕೊಂಡಿದ್ದಾರೆ. ಇದರಲ್ಲಿ ಯಾರ್‍ಯಾರ ಪಾಲು ಏನೇನೆಂದು ತಿಳಿಸಬೇಕೆಂದು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ. ಟ್ರಾನ್ಸ್‌ಫಾರ್ಮರ್ ವಿಷಯ ಅನೇಕ ಸಾರಿ ಅರ್ಥವಾಗುತ್ತಿಲ್ಲ. ಹೊಸ ಟ್ರಾನ್ಸ್‌ಫಾರ್ಮರ್ ತರಿಸುತ್ತಾರೆ. ಏರಿಸಿರುತ್ತಾರೆ. ಏರಿಸಿ ಇಳಿಸುವುದು ಅಷ್ಟೇ ಇವರ ಕೆಲಸ. ಏತಕ್ಕೆಂದರೆ ಅದು ಕೆಲಸ ಮಾಡುತ್ತಿಲ್ಲ. ಕೇಳಿದರೆ ಸುಟ್ಟು ಹೋಗಿದೆ ಎಂದು ಹೇಳುತ್ತಾರೆ. ಹೊಸದು ಹೇಗೆ ಸುಟ್ಟುಹೋಗುತ್ತದೆ ? ಬರತಕ್ಕ ಟ್ರಾನ್ಸ್‌ಫಾರ್ಮರ್ಸ್ ಆ ರೀತಿ ಅನೇಕ ಬಂದಿವೆ. ನನ್ನ ಕ್ಷೇತ್ರದಲ್ಲಿ ಹತ್ತಾರು ಇನ್‌ಸ್ಟೆನ್‌ಸಸ್ ಈ ತರಹ ನಡೆದಿರತಕ್ಕಂಥದ್ದು ಇದೆ. ಇದಕ್ಕೆ ಅಧಿಕಾರಿಗಳನ್ನ ಕೇಳಿದರೆ ಏನು ಹೇಳುತ್ತಾರೆ. ಇದಕ್ಕೆ ಎರಡು ವರ್ಷ ವಾರಂಟಿ ಪೀರಿಯಡ್ ಇದೆ ಎಂದು ಹೇಳುತ್ತಾರೆ. ಅಷ್ಟರಲ್ಲಿ ಏನಾದರೂ ಆದರೆ ರಿಪೇರಿ ಮಾಡಿಕೊಡುತ್ತಾರೆಂದು ಹೇಳುತ್ತಾರೆ. ವಾರಂಟಿ ಪೀರಿಯಡ್ ಇರಬಹುದು. ಆದರೆ ಅದರಿಂದ ಆದಂಥಾ ನಷ್ಟವನ್ನು ರೈತರಿಗೆ ತುಂಬಿಕೊಡತಕ್ಕವರು ಯಾರು ? ನಷ್ಟ ಏತಕ್ಕೆ ಆಗುತ್ತದೆ ? ಈ ಟ್ರಾನ್ಸ್‌ಫಾರ್ಮರ್ ರಿಪೇರಿ ಮಾಡತಕ್ಕ ವ್ಯವಸ್ಥೆ ಏನಿದೆ ಅಂದರೆ ಯಾರಿಗೋ 4 ಜನಬೇಕಾದವರಿಗೆ ಕೊಟ್ಟು ರಿಪೇರಿ ಮಾಡಿಸಿ ಅದನ್ನು ತರಿಸಿ ಹಾಕತಕ್ಕದ್ದು. ಇದು

ಸಾರೋದ್ಧಾರವಾಗಿ ನಡೆದಿದೆ. ಎಷ್ಟು ಟ್ರಾನ್ಸ್‌ಫಾರ್ಮರ್ಸ್, ಫೈಲ್ ಆಗಿದೆ ಅಂದರೆ 30 ಸಾವಿರ ಫೈಲ್ ಆಗಿದೆ ಎಂದು ಹೇಳಿದರು. ಸಿಸ್ಟಂನಲ್ಲಿ ಓವರ್‌ಲೋಡ್ ಆದಾಗ ಟ್ರಾನ್ಸ್‌ಫಾರ್ಮರ್ ಫೈಲ್ ಆಗುತ್ತದೆಂದು ನೀಡಿದ್ದಾರೆ. ಅದು ಒಂದು ಕಾರಣ, ಒಪ್ಪುತ್ತೇನೆ. ಅದರ ಜೊತೆಗೆ ಅವ್ಯವಹಾರ ನಡೆದಿರತಕ್ಕದ್ದು ಕಾರಣ ಇದೆ. ಇದಕ್ಕೆ ಜವಾಬ್ದಾರರು ಯಾರಿದ್ದಾರೆ ಅವರನ್ನು ಗುರಿ ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಅಧ್ಯಕ್ಷರೇ, ಇನ್ನು ಕೆಪಿಸಿ ವಿಚಾರವಾಗಿ...

ಅಧ್ಯಕ್ಷರು:– ಟೈಮ್ ಆಯಿತು. ಇನ್ನು ಎರಡು ನಿಮಿಷದಲ್ಲಿ ಮುಗಿಸಿ.

ಶ್ರೀ ಸಿ. ಬೈರೇಗೌಡ:– 10 ನಿಮಿಷದಲ್ಲಿ ಮುಗಿಸುತ್ತೇನೆ. ಇವತ್ತು ಕೆಪಿಸಿ ಬಗ್ಗೆ ಹೇಳಬೇಕೆಂದರೆ, ಕೆಇಬಿ ಬಗ್ಗೆ ನಾನು ಆಗಲೇ ಹೇಳಿದೆ. ಇಲ್ಲಿಯ ಅವ್ಯವಹಾರದಲ್ಲಿ ಕಂಬಿ ನುಂಗುತ್ತಾರೆ, ಬೋಲ್ಟ್ ನುಂಗುತ್ತಾರೆ ಎಂದು. ಆದರೆ ಕೆಪಿಸಿಯಲ್ಲಿ ಪ್ರಾಜೆಕ್ಟ್ ಅನ್ನೇ ನುಂಗುತ್ತಾರೆ. ಇಲ್ಲಿಯ ಬೇಜವಾಬ್ದಾರಿಯ ಪರಮಾವಧಿ ಎಷ್ಟು ಎಂದರೆ ಈ ತಿಂಗಳ 12ನೇ ತಾರೀಖು ನಮ್ಮ ವಿದ್ಯುತ್ ಉತ್ಪಾದಕ ಘಟಕಗಳ ಸ್ಥಿತಿ ಏನಿತ್ತು ಎನ್ನುವ ಬಗ್ಗೆ 4–5 ಸ್ಟೇಷನ್‌ಗಳ ವಿವರ ಇಲ್ಲಿ ಕೊಡಬಯಸುತ್ತೇನೆ. ರಾಯಚೂರಿನಲ್ಲಿ 3 ಯೂನಿಟ್ಸ್ ಇದ್ದು ಅದರಲ್ಲಿ 2 ಕೆಲಸ ಮಾಡುತ್ತಿವೆ. ಶರಾವತಿಯಲ್ಲಿ 10ರಲ್ಲಿ 7ಕೆಲಸ ಮಾಡುತ್ತಿವೆ. ಲಿಂಗನಮಕ್ಕಿಯಲ್ಲಿ ಎರಡರಲ್ಲಿ ಒಂದು ಕೆಲಸ ಮಾಡುತ್ತಿದೆ. ನಾಗ್ಝರಿಯಲ್ಲಿ 6ರಲ್ಲಿ 4ಕೆಲಸ ಮಾಡುತ್ತಿವೆ. ವಾರಾಹಿಯಲ್ಲಿ ಎರಡರಲ್ಲಿ ಒಂದು ಕೆಲಸ ಮಾಡುತ್ತಿದೆ. ಇಷ್ಟೂ ಸೇರಿ ಸರಿಯಾದ ಕೆಪ್ಯಾಸಿಟಿ ಉಪಯೋಗಿಸಿಕೊಂಡಿದ್ದರೆ 2800 ಮೆಗಾವಾಟ್ಸ್ ಕರೆಂಟನ್ನು ಉತ್ಪಾದನೆ ಮಾಡಬಹುದಾಗಿತ್ತು. ಆದರೆ ಉತ್ಪಾದನೆ ಆಗಿರತಕ್ಕದ್ದು ಕೇವಲ 1662 ಮೆಗಾವಾಟ್ಸ್. ಇನ್ನು ರಾಯಚೂರಿನಲ್ಲಿ ಇರತಕ್ಕದ್ದು 3ರಲ್ಲಿ 2 ಕೆಲಸ ಮಾಡುತ್ತಿವೆ. ಇನ್ನು ಒಂದು ಏಕೆ ಕೆಲಸ ಮಾಡುತ್ತಿಲ್ಲ ಎಂದರೆ ಕಲ್ಲಿದ್ದಲು ಇಲ್ಲ ಎಂದು ಹೇಳುತ್ತಾರೆ. ನಿನ್ನೆ ಮೊನ್ನೆ ಈ ಥರ್ಮಲ್ ಪ್ಲಾಂಟ್ ಪ್ರಾರಂಭ ಮಾಡಿದಿರಾ? ಕೋಟ್ಯಾಂತರ ರೂಪಾಯಿ ಹಣ ಖರ್ಚು ಮಾಡಿ ಪ್ರಾರಂಭ ಮಾಡಿದ ಮೇಲೆ ಕಲ್ಲಿದ್ದಲು ತರಿಸಿಕೊಳ್ಳಬೇಕಾದುದು ಯಾರ ಜವಾಬ್ದಾರಿ? ಲೋಕಸಭೆಯಲ್ಲಿ ಸಂಬಂಧಪಟ್ಟ ಮಂತ್ರಿಗಳು ಹೇಳಿದ್ದಾರೆ. ಈ ಕೆ.ಇ.ಬಿಗಳು ಹಾಗೂ ಪವರ್ ಕಾರ್ಪೊರೇಷನ್‌ನವರು ಅವರಿಗೆ ಕೊಡಬೇಕಾಗಿರತಕ್ಕ ಹಣ ಕೊಟ್ಟಿಲ್ಲ ಎಂದು ಹೇಳಿದ್ದಾರೆ. ಇವರು ಸಮಯಕ್ಕೆ ಸರಿಯಾಗಿ ಹಣ ಕೊಟ್ಟಿದ್ದರೆ ಕಲ್ಲಿದ್ದಲು ಬರುತ್ತಾ ಇತ್ತು. ಇನ್ನೊಂದು ಈಗ ಭೀಕರವಾದ ಸ್ಥಿತಿ ಬೇಸಿಗೆಯಲ್ಲಿ ಇದೆ. ಕಲ್ಲಿದ್ದಲು ಇಲ್ಲ ಎಂದು ಒಂದು ಯೂನಿಟ್‌ಅನ್ನು ನಿಲ್ಲಿಸುತ್ತೇವೆಂದರೆ ಇಂತಹ ಅವಮಾನಕರವಾದ ಪ್ರಸಂಗ ಬೇರೆ ಇನ್ನೊಂದು ಇಲ್ಲ. ಕಲ್ಲಿದ್ದಲು ತರುವುದಕ್ಕೆ ಆಗುವುದಿಲ್ಲ ಎಂದರೆ ಈ ಕೆಪಿಸಿ ಏಕೆ ಇರಬೇಕು? ಅಲ್ಲಿ ಜನ ಏನು ಕೆಲಸ ಮಾಡುತ್ತಿದ್ದಾರೆ? ಅನೇಕ ಸಂದರ್ಭದಲ್ಲಿ ನಾವು ಹಗಲಿರುಳೂ ರಾತ್ರಿ ನಿದ್ರೆ ಇಲ್ಲದೇ ಕಣ್ಣಲ್ಲಿ ಕಣ್ಣು ಇಟ್ಟು ನೋಡುತ್ತಿದ್ದೇವೆ. ಅಧಿಕಾರಿಗಳಲ್ಲಿ ಈ ಬೇಜವಾಬ್ದಾರಿತನ ಏಕೆ? ಕಲ್ಲಿದ್ದಲು ಇಲ್ಲದೇ ಒಂದು ಯುನಿಟ್ ನಿಂತು ಹೋಯಿತು ಅಂದರೆ ಅರ್ಥ ಏನು? ಇದು ಕೆಪಿಸಿಯಲ್ಲಿ ಒಂದು ಸಣ್ಣ ಉದಾಹರಣೆ. ಇದರ ಬಗ್ಗೆ ಅನೇಕ ವರದಿಗಳು ಇವೆ. ಈ ಸದನದ ವರದಿಗಳು ಇವೆ. ವರದಿಗಳನ್ನು ಮಾನ್ಯ ಉಪಮುಖ್ಯ ಮಂತ್ರಿಗಳು ತರಿಸಿ ನೋಡಬೇಕು. ಇನ್ನೂ ಕೂಡಾ ಅವೆಲ್ಲಾ ಸರ್ಕಾರದ ಪರಿಶೀಲನೆಯಲ್ಲಿ ಇವೆ ಎಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಬೂದಿಯನ್ನು ವಿತರಣೆ ಮಾಡತಕ್ಕ ವಿಚಾರವಾಗಿ ಒಂದು ಹೊಸ ವ್ಯವಸ್ಥೆಗೆ ಹೊಸ ಟೆಕ್ನಾಲಜಿಯನ್ನು ಎಲ್ ಅಂಡ್ ಟಿ ಅವರು ಕೋಟ್ ಮಾಡುತ್ತಾರೆ. ಅದು ಒಂದು 16 ಕೋಟಿ ರೂಪಾಯಿಯ ವ್ಯವಸ್ಥೆ. ಮಾನ್ಯ ವೀರೇಂದ್ರ ಪಾಟೀಲರ ಕಾಲದಲ್ಲಿ ಕೆಪಿಸಿ ಟೆಕ್ನಿಕಲ್ ಡೈರೆಕ್ಟರ್‌ನ್ನು ಕರೆದುಕೊಂಡು ಹೋಗಿ ಹೊರದೇಶದಲ್ಲಿ ನೋಡಿಕೊಂಡು ಬಂದಿರುತ್ತಾರೆ. ಮತ್ತೆ ಟಾಟಾ

ಕನ್‌ಸಲ್ಟೆಂಟ್ಸ್‌ನವರು ಇದು ಸಾಧ್ಯ ಆಗುತ್ತದೆಂದೂ ಕೂಡಾ ಹೇಳುತ್ತಾರೆ. ಇದನ್ನು ಟೆಂಡರ್‌ಗೆ ಇಡುತ್ತಾರೆ. ಆ ಟೆಂಡರ್‌ನ್ನು ಯಾರಿಗೆ ಕೊಡಬೇಕು ? ನಿಮ್ಮ ಟೆಕ್ನಿಕಲ್ ಕಮಿಟಿಯವರು ಅಪ್ರೂ ಮಾಡುತ್ತಾರೆ. ಆದರೆ ಕೊನೆಯ ಹಂತದಲ್ಲಿ ಲೋಯೆಸ್ಟ್ ಕೋಟ್ ಮಾಡಿರುವವರಿಗೆ ಕೊಡದೇ ಇನ್ನೊಂದು ಕಂಪೆನಿಯವರಿಗೆ ಕೊಡುವುದಕ್ಕೆ ಡಿಸೈನ್ ಚೇಂಜ್ ಮಾಡುತ್ತರೆ, ಸಿಸ್ಟಂ ಅನ್ನೇ ಚೇಂಜ್ ಮಾಡುತ್ತಾರೆ. ಏಕೆ ಎಂದರೆ ಒಳವ್ಯವಹಾರಕ್ಕೆ ಇದೆಲ್ಲಾ. ಲಕ್ಷಾಂತರ ರೂಪಾಯಿ ಭ್ರಷ್ಟಾಚಾರದ ವ್ಯವಹಾರ ನಡೆದಿರುವುದರಿಂದ ಈ ಸಿಸ್ಟಮ್‌ನ್ನೇ, ಟೆಕ್ನಾಲಜಿಯನ್ನೇ ಇನ್ನೊಬ್ಬ ಕಂಟ್ರಾಕ್ಟರಿಗೆ ಸೂಟ್ ಆಗುವ ಹಾಗೆ ಮಾಡಿಷ್ಟೆ ಮಾಡಿ ಆ ಕಂಟ್ರಾಕ್ಟರಿಗೆ ಕೊಡುವ ರೀತಿಯಲ್ಲಿ ಆಗುತ್ತಿದೆ. ಬಹುಶಃ ಅದು ಇನ್ನೂ ತೀರ್ಮಾನವಾಗಿಲ್ಲ. ಅದು ಸರ್ಕಾರದ ಪರಿಶೀಲನೆಯಲ್ಲಿದೆಯೆಂದು ನನಗೆ ಮಾಹಿತಿ ಬಂದಿದೆ. ಅದು ನಿಜವೋ ಸುಳ್ಳೋ ಗೊತ್ತಿಲ್ಲ. ಮಾನ್ಯ ರಂಗನಾಥ್‌ರವರು ಮತ್ತು ಅನೇಕ ಜನ ಮಂತ್ರಿಗಳಾಗಿರತಕ್ಕವರು, ಹಿಂದಿನ ಸರ್ಕಾರಗಳ ಮೇಲೆ ಅನೇಕ ಆರೋಪಗಳನ್ನು ಮಾಡಿದ್ದರು. ಮೆಮೋರಾಂಡಮ್ ತೆಗೆದುಕೊಂಡು ದೆಹಲಿಗೆ ಸಹ ಹೋಗಿ ಬಂದಿದ್ದೀರಿ. ಪ್ರಧಾನಮಂತ್ರಿಗಳಿಗೆ ನೀವೇ ಮೆಮೋರಾಂಡಮ್ ಕೊಟ್ಟಿದ್ದೀರಿ. ಆರೋಪ ಮಾಡಿರತಕ್ಕವರು ಇವತ್ತು ಅಧಿಕಾರವನ್ನು ಚಲಾಯಿಸುತ್ತಾ ಇದ್ದೀರಿ. ಏನು ದುರ್ವ್ಯವಹಾರ ನಡೆದಿದೆ ಅದನ್ನು ಸರಿಪಡಿಸದಿದ್ದರೆ ನೀವು ಕೇವಲ ಆರೋಪದ ಚಟಕ್ಕೋಸ್ಕರ ಮಾಡಿದ್ದೀರಿ ಅಥವಾ ಮಂತ್ರಿ ಕುರ್ಚಿಯಲ್ಲಿ ಕುಳಿತುಕೊಳ್ಳುವುದಕ್ಕೋಸ್ಕರ ಮಾಡಿದ್ದೀರಿ ಎನ್ನುವ ತೀರ್ಮಾನಕ್ಕೆ ನಾವು ಬರಬೇಕಾಗುತ್ತದೆ. ಆದ್ದರಿಂದ ರಾಯಚೂರು ಪವರ್‌ಸ್ಟೇಷನ್‌ನಲ್ಲಿ ನಡೆದಿರತಕ್ಕ ಅವ್ಯವಹಾರ, ಈ ಬೂದಿಯನ್ನು ಡಿಸ್‌ಪೋಸ್ ಮಾಡತಕ್ಕ ವ್ಯವಸ್ಥೆ ಏನಿದೆ ಅಲ್ಲಿ ನಡೆದಿರತಕ್ಕ ಅವ್ಯವಹಾರವನ್ನು ಬಯಲಿಗೆಳೆದು ಅವ್ಯವಹಾರ ನಡೆದಿದ್ದರೆ ಅದನ್ನು ಸರಿಪಡಿಸಬೇಕು ಎಂದು ಈ ಸಂದರ್ಭದಲ್ಲಿ ಆಗ್ರಹಪಡಿಸುವುದಕ್ಕೆ ಇಚ್ಛೆಪಡುತ್ತೇನೆ.

ಅಧ್ಯಕ್ಷರು: ಬಹಳ ಆಯಿತು. ಮಾನ್ಯ ಸದಸ್ಯರು ಎಲೆಕ್ಟ್ರಿಸಿಟಿ ಬಗ್ಗೆ ಅಷ್ಟೇ ಮಾತನಾಡುತ್ತೇನೆಂದು ಹೇಳಿದಿರಿ. ನೀರಾವರಿ, ಸಣ್ಣದು, ದೊಡ್ಡದು ಎಲ್ಲಾ ಆಯಿತು. ಉಳಿದ ಸದಸ್ಯರು ಮಾತನಾಡಬೇಕು.

ಶ್ರೀ ಸಿ. ಬೈರೇಗೌಡ: ಕರ್ನಾಟಕ ಪವರ್ ಕಾರ್ಪೊರೇಷನ್‌ದವರು ಎಷ್ಟು ಸುಳ್ಳು ಹೇಳುತ್ತಾರೆ ಹೇಗೆ ಅಂಕಿ–ಅಂಶಗಳನ್ನು ಮರೆಮಾಚುತ್ತಾರೆ. ವಾರ್ಷಿಕ ವರದಿಯಲ್ಲಿ ಏನು ಹೇಳುತ್ತಾರೆಂದರೆ ಅದಕ್ಕೆ ಸವಾಲು ರೂಪದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಶರಾವತಿಯಲ್ಲಿರುವ 10 ಯೂನಿಟ್‌ಗಳಲ್ಲಿ 89.01 ಮೆಗಾವಾಟ್‌ನಿಂದ 103.5 ಮೆಗಾವಾಟ್‌ಗೆ ಹೆಚ್ಚಿಸಲಾಗಿದೆಯೆಂದು ಹೇಳಿದ್ದಾರೆ. ಇದು ಅಪ್ಪಟ ಸುಳ್ಳು ಹಸಿ ಸುಳ್ಳು. ಅಲ್ಲಿ ಏನಾಗಿದೆ ಅಂದರೆ ನಿಮ್ಮ ಜನರೇಟರ್ ಏನಿದೆ ಅದನ್ನು ರಿವೈಂಡ್ ಮಾಡಬೇಕಾಗುತ್ತದೆ. ಯಾರ ಕೈಯಲ್ಲೋ ಹಣವನ್ನು ಕೊಡಿಸಿ ಅದರ ಕೆಪ್ಯಾಸಿಟಿ ಜಾಸ್ತಿ ಆಯಿತು. ಅದು ಆದಮೇಲೆ ಇನ್ನೊಂದು ಬರುತ್ತದೆ. ಟೆಕ್ನಿಕಲ್ ಟರ್ಮ್ ಇದೆ, ವೈಬ್ರೇಟರ್ ಎಂದು ಏನೋ ಹೇಳುತ್ತಾರೆ. ಅದು it is not–withstanding the load, 103.5 ಮೆಗಾವಾಟ್ ಎಂದು ಹೇಳುತ್ತಾರೆ. ಅಷ್ಟು ಕೆಲಸ ಮಾಡುತ್ತಿಲ್ಲ. ಕೇವಲ 90 ಮೆಗಾವಾಟ್ ಯೂನಿಟ್ ಉತ್ಪಾದನೆ ಮಾಡತಕ್ಕ ಸಾಮರ್ಥ್ಯವಿದೆ. ಸುಳ್ಳು ಹೇಳಿ ನಿಮ್ಮನ್ನು ದಾರಿ ತಪ್ಪಿಸುವ ಕೆಲಸ ಇವತ್ತು ಕರ್ನಾಟಕ ಪವರ್ ಕಾರ್ಪೊರೇಷನ್‌ನಲ್ಲಿ ನಡೆದಿದೆ. ಸುಳ್ಳು ಅಂಕಿಅಂಶಗಳನ್ನು ಕೊಡತಕ್ಕ ಕೆಲಸ ಅಲ್ಲಿ ನಡೆದಿದೆ. ಅಷ್ಟು ಕರೆಂಟ್ ಇವತ್ತು ಅಲ್ಲಿ ಉತ್ಪಾದನೆಯಾಗುತ್ತಿಲ್ಲ. 90 ಮೆಗಾವಾಟ್ ಮಾತ್ರ ಉತ್ಪಾದನೆಯಾಗುತ್ತಿದೆ. ಯಾರನ್ನು ಫೂಲ್ ಮಾಡುವುದಕ್ಕೆ ಈ ತರಹ ಅಂಕಿಅಂಶಗಳನ್ನು ಕೊಡುತ್ತಾರೆ ? ನಾನು ಚಾಲೆಂಜ್ ಮಾಡುತ್ತೇನೆ ಈ ತರಹ ಅಂಕಿಅಂಶಗಳನ್ನು ಕೊಡತಕ್ಕದ್ದು ಶರಾವತಿಯಲ್ಲೇ ಮಾತ್ರವಲ್ಲ. ಅದೇ ರೀತಿಯಲ್ಲಿ ವರಾಹಿಯಲ್ಲೂ ಕೂಡ ನಡೆದಿದೆ. ಅದನ್ನು ನಾನು ಅಭ್ಯಾಸಮಾಡಿ ತಂದಿದ್ದೇನೆ. ವರಾಹಿಯಲ್ಲಿ ಕೂಡ ಅದೇ ಪರಿಸ್ಥಿತಿ ಇದೆ. ಇರತಕ್ಕ ಎರಡು ಯೂನಿಟ್‌ಗಳಲ್ಲಿ ಒಂದು ಯೂನಿಟ್ ಮಾತ್ರ ಕೆಲಸ ಮಾಡುತ್ತಿದೆ. ಹೀಗಾದರೆ ಏಕಿರಬೇಕು ಕರ್ನಾಟಕ ಪವರ್ ಕಾರ್ಪೊರೇಷನ್ ಎಂದು

ಪ್ರಶ್ನೆ ಮಾಡಬೇಕಾಗಿದೆ. ನಮ್ಮಲ್ಲಿ ಕರೆಂಟ್ ಇಲ್ಲ ಹೊರಗಡೆ ತರಬೇಕೆಂದು ಏನೇನೋ ಹೇಳುತ್ತಾರೆ. ನಮ್ಮಲ್ಲಿರತಕ್ಕ ನಾವೇ ಉತ್ಪತ್ತಿ ಮಾಡತಕ್ಕ ಶಕ್ತಿ ಎಷ್ಟರಮಟ್ಟಿಗೆ ಬಳಕೆಯಾಗಿದೆ? ಇವತ್ತು ಬಳಕೆಯಾಗಿಲ್ಲ. ಇವತ್ತು ವರಾಹಿಯಲ್ಲಿರತಕ್ಕ ಎರಡು ಯೂನಿಟ್‌ಗಳಲ್ಲಿ ಒಂದು ಯೂನಿಟ್ ಕೆಲಸ ಮಾಡುತ್ತಿಲ್ಲ. ಅಲ್ಲಿ ನಡೆದಿರತಕ್ಕ ಅವ್ಯವಹಾರ ದುರ್ವ್ಯವಹಾರ ಸಾಕಷ್ಟು ನಡೆದಿದೆ. ನಾನು ವಿವರವಾಗಿ ಹೇಳುವುದಕ್ಕೆ ಕಾಲ ಇಲ್ಲ. ಇವತ್ತಿನ ದಿವಸ ಅದೇ ಪರಿಸ್ಥಿತಿ ಕಾಳೀನದಿ ಯೋಜನೆಗಳಲ್ಲಿ ಆಗಿದೆ. ನಾನು ಬಹಳ ಹೋಮ್‌ವರ್ಕ್ ನಡೆಸಿಕೊಂಡು ಬಂದಿದ್ದೇನೆ. ಆ ವಿವರಗಳನ್ನೆಲ್ಲಾ ತಂದಿದ್ದೇನೆ. ನಾನು ಸರ್ಕಾರದಲ್ಲಿ ಆಗ್ರಹಪಡಿಸತಕ್ಕದ್ದು ಏನೆಂದರೆ, ಮಾನ್ಯಮಂತ್ರಿಗಳು ಬಹಳ ಉದಾರದಿಂದ ಕೆಇಬಿ ಬಗ್ಗೆ ಪ್ರೋಬ್ ಮಾಡುವುದಕ್ಕೆ ಸದನ ಸಮಿತಿ ಮಾಡುವುದಕ್ಕೆ ಒಪ್ಪಿದ್ದಾರೆ. ಅದೇ ಸಮಿತಿಯಲ್ಲಿ ಕರ್ನಾಟಕ ಪವರ್ ಕಾರ್ಪೊರೇಷನ್ನ್ ಅನ್ನೂ ದಯವಿಟ್ಟು ಸೇರಿಸಬೇಕು.

ಇದರ ಆರೋಗ್ಯ ಕೂಡ ಸರಿ ಇಲ್ಲ. ಏಕೆಂದರೆ ಇದು ನಮ್ಮ ಯಾರ ಕಣ್ಣಿಗೂ ಬೀಳುತ್ತಾ ಇರಲಿಲ್ಲ. ಇದು ಮಳ್ಳಿ ಇದ್ದಹಾಗೆ. ನಾವು ಕಣ್ಣುಬಿಟ್ಟು ನೋಡಿದರೆ ಗೊತ್ತಾಗುತ್ತದೆ ಯಾರು ರಿಯಲ್ ಕಲ್‌ಪ್ರಿಟ್ಸ್ ಅಂತ. ಈ ಮಳ್ಳಿಯನ್ನು ಹೊರಗೆಳೆಯಬೇಕಾಗಿದೆ. ಆದ್ದರಿಂದ ಮಾನ್ಯ ಮಂತ್ರಿಗಳು ಇದಕ್ಕೆ ಒಪ್ಪಲೇಬೇಕು. ಒಪ್ಪದಿದ್ದರೆ ನಾವು ನಿಮ್ಮನ್ನು ಸುಮ್ಮನೆ ಬಿಡುವುದಿಲ್ಲ. ಇದನ್ನು ಎಲ್ಲಿಯವರೆಗೆ ಪ್ರತಿಭಟಿಸಬೇಕೋ ಅಲ್ಲಿಯವರೆಗೆ ಪ್ರತಿಭಟಿಸುತ್ತೇವೆ. ಈ ಕೆ.ಪಿ.ಸಿ. ಎನ್ನುವ ಮಳ್ಳಿ ಇದೆಯಲ್ಲಾ....

ಶ್ರೀ ಕೆ.ಎಚ್. ರಂಗನಾಥ್:- ಮಾನ್ಯ ಸದಸ್ಯರು he is not fair to the other sex. ಎಲ್ಲೋ ಒಂದು ಸಾರಿ ಬಾಯಿ ತಪ್ಪಿ ಮಳ್ಳಿ ಅಂತ ಹೇಳಿದರೆ ಪರವಾಗಿರಲಿಲ್ಲ. ಆದರೆ ಮೇಲಿಂದ ಮೇಲೆ ಮಳ್ಳಿ ಮಳ್ಳಿ ಅಂದರೆ..... ನಾನು ನಿಮ್ಮಿಂದ ಈ ಮಾತನ್ನು ಬಯಸಿರಲಿಲ್ಲ.

ಶ್ರೀ ಸಿ. ಬೈರೇಗೌಡ:- ನಾವು ಹಳ್ಳಿಯಿಂದ ಬಂದಿರತಕ್ಕವರು ಸ್ವಾಮಿ. ಆದ್ದರಿಂದ ಇದನ್ನು ಹೊರಗೆ ಎಳೆಯಬೇಕಾಗಿದೆ. ಸರ್ಕಾರ ಇದಕ್ಕೆ ದಯವಿಟ್ಟು ಒಪ್ಪಿಕೊಳ್ಳಲೇಬೇಕು. ಇದರ ಬಗ್ಗೆ ಕೂಡ ನಾನು ಆಳವಾಗಿ ಅಭ್ಯಾಸ ಮಾಡಿ ಇಲ್ಲೇನು ಅವ್ಯವಹಾರಗಳು ನಡೆದಿವೆ, ಅವುಗಳು ಬಯಲಿಗೆ ಬರಬೇಕಾದ ಅವಶ್ಯಕತೆ ಇದೆಯೆಂದು ತಿಳಿದುಕೊಂಡು ಬಹಳ ವಿಚಾರಗಳ ಬಗ್ಗೆ ನಾನು ಮಾತನಾಡಬೇಕಿತ್ತು, ಏಕೆಂದರೆ, ಕೊನೆಯಲ್ಲಿ ನಾನು ಒಂದು ಮಾತು ಹೇಳತಕ್ಕದ್ದು ಅಗತ್ಯ. ಇಷ್ಟೆಲ್ಲಾ ಇಲ್ಲಿ ವಿದ್ಯುತ್ ಸರಬರಾಜು ಬಗ್ಗೆ ಚರ್ಚೆಯಾಯಿತು. ಮಾನ್ಯ ಮಂತ್ರಿಗಳೂ ಸಹ ಉತ್ತರವಾಗಿ ಕಾರ್ಖಾನೆಗಳಿಗೆ ಪವರ್‌ಕಟ್ ಜಾಸ್ತಿ ಮಾಡಿದರು. ಇದರಿಂದ ಏನೂ ಪ್ರಯೋಜನವಾಗಿಲ್ಲ. ನಿಮಗೆ ನನ್ನ ಮೇಲೆ ಏನಾದರೂ ಸೇಡು ಇದೆಯೋ ಏನೋ. ಇಲ್ಲಿ ಎಷ್ಟು ನಾವು ಮಾತನಾಡುತ್ತೇವೆ, ಅಷ್ಟು ಪರಿಸ್ಥಿತಿ ಇನ್ನೂ ಬಿಗಡಾಯಿಸುತ್ತಿದೆ. ಇವತ್ತು 150-160 ವೋಲ್ಟ್‌ಗಿಂತ ಮೇಲೆ ನಮ್ಮ ಕ್ಷೇತ್ರದಲ್ಲಿ ಹೋಗಿಲ್ಲ. ಅಲ್ಲಿ ಬಹಳ ಕಡಿಮೆಯಾಗುತ್ತಿದೆ. ಇದನ್ನು ಪುನರ್ ಪರಿಶೀಲಿಸಬೇಕಾದ ಅವಶ್ಯಕತೆ ಇದೆ. ಇರತಕ್ಕಂಥ ಬೆಳೆಯನ್ನು ಕಾಪಾಡಬೇಕಾಗುತ್ತದೆ ಮತ್ತು ತಾವು ನಮ್ಮ ರಕ್ಷಣೆಗೂ ಬರಬೇಕು ಎನ್ನತಕ್ಕಂಥ ಮಾತನ್ನು ಕೊನೆಯಲ್ಲಿ ಹೇಳಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಡಾ॥ ಎನ್. ಬಿ. ನಂಜಪ್ಪ (ಶ್ರವಣಬೆಳಗೊಳ):- ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ನಾವು ಎಲ್ಲರೂ ಕೂಡ ವಿದ್ಯುಚ್ಛಕ್ತಿ, ನೀರಾವರಿ ಮತ್ತು ಲೋಕೋಪಯೋಗಿ ಇಲಾಖೆಗಳ ಬೇಡಿಕೆಗಳು ಏನಿವೆ, ಅವುಗಳ ಮೇಲೆ ಮಾತನಾಡುತ್ತಿದ್ದೇವೆ ಮತ್ತು ಈಗಾಗಲೇ ನಮ್ಮಲ್ಲಿ ಅನೇಕರು ಮಾತನಾಡಿದ್ದಾರೆ. ಈ ಬೇಡಿಕೆಗಳನ್ನು ಮಂಡಿಸಿರತಕ್ಕಂಥ ಸಂದರ್ಭದಲ್ಲಿ ನಾನಾದರೂ ಕೂಡ ಬಹಳ ವಿವರವಾಗಿ ಇದರ ಬಗ್ಗೆ ಹೋಗದೆ ಬಹಳ ಮುಖ್ಯವಾಗಿ, ತಮಗೆಲ್ಲಾ ಗೊತ್ತಿದೆ ಕರ್ನಾಟಕ ರಾಜ್ಯದ 1 ಲಕ್ಷದ 91 ಸಾವಿರದ 773 ಚದರ ಕಿಲೋಮೀಟರ್ ಇರತಕ್ಕಂಥ ಪ್ರದೇಶದಲ್ಲಿ ಅನೇಕ ನದಿಗಳು ಹರಿಯುತ್ತಿವೆ. ಆ ನದಿಗಳಲ್ಲಿ ಇರುವ ನೀರನ್ನು ನಮ್ಮ ಕರ್ನಾಟಕ ರಾಜ್ಯಕ್ಕೆ ಸಾಕಾದಷ್ಟು ಉಪಯೋಗ

ಮಾಡಬೇಕೆಂದು ಹೇಳಿ ಈಗಾಗಲೇ ಯೋಜನೆಗಳು ತಯಾರಾಗಿದ್ದು, ಸುಮಾರು 55 ಲಕ್ಷ ಹೆಕ್ಟೇರ್‌ಗೆ ನೀರಾವರಿ ಮಾಡಬಹುದು ಎನ್ನತಕ್ಕಂಥ ಯೋಜನೆಯನ್ನು ನಮ್ಮ ಸರ್ಕಾರ ಹಾಕಿಕೊಂಡಿದೆ. ಈ 47 ವರ್ಷಗಳಲ್ಲಿ ಎಷ್ಟು ಸಾಧನೆಯಾಗಿದೆ ಎಂದು ನೋಡಿದಾಗ ನನಗಾದರೂ ಕೂಡ ಆಶ್ಚರ್ಯವಾಗುತ್ತದೆ. 23.5 ಲಕ್ಷ ಹೆಕ್ಟೇರ್ ಮಾತ್ರ ಇವತ್ತುಮಾಡಿದ್ದೇವೆ ಎಂದು ಹೇಳತಕ್ಕಂಥ ಒಂದು ಸ್ಥಿತಿಗೆ ನಾವು ಬಂದಿದ್ದೇವೆ. ಇದು ಮೈನರ್ ಇರಿಗೇಷನ್, ಕೆರೆಕಟ್ಟೆಗಳು, ಕುಂಟೆಗಳು ಎಲ್ಲಾ ಸೇರಿ. ಹೀಗಿರುವಾಗ ನಾವು ಇದರ ಬಗ್ಗೆ ಹೆಚ್ಚು ಪ್ರಗತಿ ಹೊಂದಿಲ್ಲ ಎಂಬುದು ಇದರಿಂದ ಗೊತ್ತಾಗುತ್ತದೆ. ಪಕ್ಕದ ರಾಜ್ಯಗಳ ನೀರಾವರಿ ಪ್ರದೇಶಗಳನ್ನು ಹೋಲಿಕೆ ಮಾಡಿದಾಗ ಇದರಿಂದ ಗೊತ್ತಾಗುತ್ತದೆ. ನಾವು ಎಷ್ಟೇ ಮಾತನಾಡಿದರೂ ಕೂಡ, ಅನೇಕ ಅಣೆಕಟ್ಟುಗಳನ್ನು ಕಟ್ಟುವುದಕ್ಕೆ ಪ್ರಯತ್ನ ಮಾಡಿದರೂ ಕೂಡ ಏನು ಬೇಸಿಕ್ ಆಗಿ ಬರಡು ಭೂಮಿ ಇರತಕ್ಕಂಥ ಕರ್ನಾಟಕ ರಾಜ್ಯವನ್ನು ನೀರಾವರಿಗೆ ಒಳಪಡಿಸಬೇಕೆಂದು ಸಾಕಾದಷ್ಟು ಪ್ರಮಾಣದಲ್ಲಿ ಏನು ಪ್ರಯತ್ನವನ್ನು ನಡೆಸಿದ್ದೇವೆಯೋ, ಇದರಲ್ಲಿ ಎಲ್ಲರೂ ಕೂಡ ವಿಫಲರಾಗಿದ್ದೇವೆಂಬ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಕಾವೇರಿ ಡಿಸ್‌ಪ್ಯೂಟ್ ಬಂದಿದೆ. ನಾವು ಮೊದಲಿಂದಲೂ ಸರಿಯಾಗಿ ಗಮನಕೊಟ್ಟುಕೊಂಡು ಬಂದಿದ್ದರೆ ಇಷ್ಟರೊಳಗೆ ನಮ್ಮ ಪ್ರಾಜೆಕ್ಟ್‌ಗಳೆಲ್ಲಾ ಮುಗಿದಿದ್ದರೆ ಯಾವುದೇ ತೊಂದರೆ ಇರುವುದಕ್ಕೆ ಸಾಧ್ಯ ಇರಲಿಲ್ಲ. ನನಗೆ ಗೊತ್ತಿರುವಹಾಗೆ, ಇಷ್ಟು ವರ್ಷಗಳಲ್ಲಿ ಇಷ್ಟು ಜನ ಆಳಿ, ಸುಮಾರು 47 ವರ್ಷಗಳಲ್ಲಿ ನಾವು 10–15 ಪರ್ಸೆಂಟ್ ಮಾತ್ರ ಇರತಕ್ಕಂಥ ನದಿಗಳಲ್ಲಿ ಹರಿಯತಕ್ಕಂಥ ನೀರನ್ನು ಉಪಯೋಗಿಸಿಕೊಂಡು ನೀರಾವರಿಯನ್ನು ಮಾಡಿದ್ದೇವೆ.

ಇನ್ನು ಮುಂದಾದರೂ ಕೂಡ ಕೆಲಸ ಸರಿಯಾಗಿ ನಡೆಯುತ್ತದೆಂದು ಕಾಣುತ್ತದೆ. ಈ ವರ್ಷದ ಬಜೆಟ್‌ನ್ನು ನೋಡಿದಾಗ, ಸಾಕಾದಷ್ಟು ಹಣವನ್ನು ಕೊಟ್ಟಿದ್ದಾರೆಂದು ನಾನಾದರೂ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಆದರೆ, ಮೊದಲಿನಿಂದಲೂ ಏನನ್ನು ತಪ್ಪು ಮಾಡಿಕೊಂಡು ಬಂದಿದ್ದೇವೆ ಎನ್ನುವುದರ ಬಗ್ಗೆ ಸರ್ಕಾರದವರು ಬಹಳಷ್ಟು ಗಮನಹರಿಸಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಸುಮಾರು 515 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಈ ಹೇಮಾವತಿ ಪ್ರಾಜೆಕ್ಟ್ ನಡೆಯುತ್ತಾ ಇದೆ. ಎಷ್ಟು ವರ್ಷಗಳಿಂದ ನಡೆಯುತ್ತಾ ಇದೆ, ನಾನು ಚಿಕ್ಕ ಹುಡುಗನಾಗಿದ್ದಾಗಿನಿಂದ ಈ ಹೇಮಾವತಿ ಪ್ರಾಜೆಕ್ಟ್ ನಡೆಯುತ್ತಾ ಇದೆ. ಇನ್ನೂ ಕೂಡ, ಚನ್ನರಾಯಪಟ್ಟಣದ ಹತ್ತಿರ, ಅಂದರೆ, ಕೇವಲ 100 ಕಿಲೋಮೀಟರ್ ದೂರದಲ್ಲಿ 60–70ಕಿಲೋಮೀಟರ್ ದೂರದಲ್ಲಿ ಕೂಡ ಕೆನಾಲ್ ಪೂರ್ಣವಾಗಿಲ್ಲ. What sort of arrangement?

ಮಾನ್ಯ ಉಪ ಮುಖ್ಯಮಂತ್ರಿಗಳೂ ಕೂಡ ಈ ತಿಂಗಳು ಅಲ್ಲಿಗೆ ಬಂದಿದ್ದರು, ಪೂರ್ಣವಾಗಿ ನಾಲೆಯ ಕೆಲಸಕಾರ್ಯಗಳನ್ನು ನೋಡಿದರು, ಬಾಗೂರು ನವಿಲೆ ಟನಲ್ ಮಾಡಿದರು. ಈ ಬಾಗೂರು ನವಿಲೆ ಟನಲ್‌ನಲ್ಲಿ, ಒಂದು ದೊಡ್ಡ, ಅಗಾಧವಾದ ಕೆಲಸವನ್ನು ಮಾಡಿದರು. 10 ಕಿಲೋಮೀಟರ್ ಉದ್ದದ, 240 ಅಡಿ ಆಳದಲ್ಲಿ ಹೋಗಿರತಕ್ಕ ಟನಲ್‌ನ್ನು ಮಾಡಿದರು. ಈ ಟನಲ್ ಕೆಲಸ ಪ್ರಾರಂಭದಿಂದ ಮಾಡಿದರೂ ಕೂಡ ಈ ಕೆಲಸ ಪೂರ್ಣವಾಗಲಿಲ್ಲ, ಎಕ್ಸಿಟ್‌ನಲ್ಲೂ ಕೂಡ ಕೆಲಸ ಪೂರ್ಣವಾಗಲಿಲ್ಲ. ಆಮೇಲೆ, ಕಾಲುವೆ ನೀರು ನಿಲ್ಲಿಸಿ ಸುಮಾರು 4 ತಿಂಗಳಾಯಿತು. ಇನ್ನು ಗೊರೂರು ಡ್ಯಾಮ್‌ನಿಂದ ಶುರುವಾಗುವಂಥ ಹೇಮಾವತಿ, ಅಲ್ಲಿಂದ ಇಲ್ಲಿಯವರೆಗೆ ಕೆನಾಲ್ ಕೆಲಸಕ್ಕೆ, even level taking, broadening of the main Canal ಈ ಕೆಲಸಗಳನ್ನು ಇವತ್ತು ಮಾಡುತ್ತಿದ್ದಾರೆ. ಅಂದಮೇಲೆ, ನೀವು ಯೋಚನೆ ಮಾಡಬಹುದು. ಎಷ್ಟು ವೈಜ್ಞಾನಿಕ ಆಧಾರದ ಮೇಲೆ ಇಲ್ಲಿಯವರೆಗೂ ಇವರು ಕೆಲಸ ಮಾಡಿಕೊಂಡು ಬಂದಿದ್ದಾರೆ, ಇಲ್ಲಿ ಡಿಸ್ಟ್ರಿಬ್ಯೂಟರಿಗಳನ್ನು ಕಂಪ್ಲೀಟ್ ಮಾಡಿಕೊಂಡು, ನೀರು ಕೊಡತಕ್ಕ ವ್ಯವಸ್ಥೆ, ಲೈನಿಂಗ್ ಕೆಲಸ ಪೂರ್ಣ ಮಾಡತಕ್ಕ ವ್ಯವಸ್ಥೆ ಮಾಡಿದ್ದಾರೆ. ಈ ರೀತಿ ಮಾಡಿಕೊಂಡು, ಒಂದು ಕಡೆಯಿಂದ ಡೆವಲಪ್‌ಮೆಂಟ್ ಮಾಡುವಂಥ ಕೆಲಸವನ್ನು

ಬಿಟ್ಟುಬಿಟ್ಟು, ಅಲ್ಲಿ ಟನಲ್ ಕೆಲಸವೂ ಪೂರ್ಣವಾಗಲಿಲ್ಲ. ಕೆನಾಲ್ ಕೆಲಸವೂ ಪೂರ್ಣವಾಗಲಿಲ್ಲ ಈಗಾಗಲೇ ಗುಬ್ಬಿ ಹತ್ತಿರ Distributory ತೆಗೆದುಕೊಳ್ಳುತ್ತಿದ್ದಾರೆ. ಈ ರೀತಿಯಾಗಿ ಖರ್ಚು ಮಾಡುವಂಥ ಹಣವನ್ನು ಸರಿಯಾದ ರೀತಿಯಲ್ಲಿ ಸದುಪಯೋಗ ಮಾಡಿಕೊಂಡು ಬಂದಿದ್ದರೆ ನಮಗೆ ಈ ಗತಿ ಬರುತ್ತಿರಲಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಆದ್ದರಿಂದ, ಈಗಿರತಕ್ಕ ಮುಖ್ಯಮಂತ್ರಿಗಳು ಮತ್ತು ಉಪಮುಖ್ಯಮಂತ್ರಿಗಳು ಇದರ ಬಗ್ಗೆ ಯೋಚನೆ ಮಾಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಮಾಡುತ್ತೇನೆ. ನಮ್ಮ ಇರಿಗೇಷನ್ ಮಂತ್ರಿಗಳು ನೋಡಿದ ಪ್ರಕಾರ, 240 ಅಡಿ ಆಳದಲ್ಲಿ, ಬಾಗೂರು ನವಿಲೆ ಟನಲ್ ಹೋಗಿದೆ. ಎರಡು ಕಡೆಯ ಪಕ್ಕಗಳಲ್ಲೂ ಸುಮಾರು 6 ಕಿಲೋಮೀಟರುಗಳಿಗಿಂತ ದೂರ ಎಲ್ಲವೂ ಕೂಡ ಬರಡಾಗಿದ್ದರೂ ನೀರು ಸೋರಿ ಹೋಗುತ್ತಿದೆ. ಇವತ್ತು, ಅಲ್ಲಿನ ರೈತರಿಗೆ, 15–20 ಊರುಗಳಲ್ಲಿ, ಎಲ್ಲಿಯೂ ಕುಡಿಯುವುದಕ್ಕೆ ನೀರು ಸಹ ಇಲ್ಲವೆಂದು ಅನೇಕ ಸಾರಿ ಸರ್ಕಾರದಲ್ಲಿ ಕೇಳಿಕೊಂಡಿದ್ದೇನೆ. ಆದರೂ ಕೂಡ ಇದರ ಬಗ್ಗೆ ಯಾರೂ ಚಿಂತನೆ ಮಾಡುತ್ತಾ ಇಲ್ಲ. ಕುಡಿಯುವ ನೀರಿನ ವ್ಯವಸ್ಥೆ ಮಾಡುವುದಕ್ಕೂ ಕೂಡ ಚಿಂತನೆ ಮಾಡುತ್ತಾ ಇಲ್ಲ. ಎರಡು ಲಿಫ್ಟ್ ಇರಿಗೇಷನ್ ಕೆಲಸ ಪ್ರಾರಂಭವಾಯಿತು. ಆ ಕೆಲಸವೂ ಕೂಡ ಸ್ಥಗಿತವಾಗಿದೆ. ಆ ಭಾಗದ ಜನರು ಬಹಳಷ್ಟು ಸಫರ್ ಮಾಡುತ್ತಿದ್ದಾರೆ. ಇದರ ಬಗ್ಗೆ ಅನೇಕ ಸಾರಿ ಸರ್ಕಾರವನ್ನು ಕೇಳಿಕೊಂಡಿದ್ದೇನೆ. ದಯಮಾಡಿ ಮಾನ್ಯ ಮಂತ್ರಿಗಳು, ನನ್ನ ಕ್ಷೇತ್ರದಲ್ಲಿ ನೊಂದಿರತಕ್ಕ ರೈತರಿಗೆ, ಭೂಮಿಯನ್ನು ಕಳೆದುಕೊಂಡವರಿಗೆ ಅಲ್ಲಿ ಜಾಗವನ್ನು ಕೊಡಬೇಕು. ಎಲ್ಲಿ ನೀರು ಸೋರಿ ಹೋಗುತ್ತಿದೆ, ಆ ಜಾಗದಲ್ಲಿ ನೊಂದವರಿಗೆ ಸರಿಯಾದ ಬೆಳೆ ಪರಿಹಾರ ಕೊಡುವಂಥಾದ್ದು, ಮತ್ತು ಅವರಿಗೆ ನೀರಿನ ವ್ಯವಸ್ಥೆ ಮಾಡುವಂಥ ಗುರುತರ ಜವಾಬ್ದಾರಿ ಸರ್ಕಾರದ ಮೇಲೆ ಬಿದ್ದಿದೆ. ಈ ಕೆಲಸಗಳನ್ನು ಮಾಡಿಕೊಡಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ನಮ್ಮ ಯಗಚಿ. ಇದು ಪ್ರಾರಂಭವಾಗಿ ಬಹಳಷ್ಟು ವರ್ಷಗಳಾದರೂ ಕೂಡ, ಹಾಸನ ಜಿಲ್ಲೆಯಲ್ಲಿ ಈ ಯಗಚಿ ಕೆಲಸ ಸ್ಥಗಿತವಾಗಿದೆ. ಅಲ್ಲಿಯೂ ಕೂಡ ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಾ ಇಲ್ಲ. ಹಾಸನ ತಾಲ್ಲೂಕು ಮತ್ತು ಬೇಲೂರು ಇವೆಲ್ಲವೂ ಮಳೆಬೀಳುವ ಪ್ರದೇಶಗಳು ಮತ್ತು ಬಹಳಷ್ಟು ತೋಟಗಳಿಲ್ಲದೆ, ಬರೀ ಹೊಲ ಇರತಕ್ಕಂಥ, ಬೋರೇ ಇರತಕ್ಕಂಥ ಜಮೀನು. ಇದನ್ನೂ ಕೂಡ ತಾವು ದಯಮಾಡಿ ಆದಷ್ಟು ಬೇಗ ಮುಗಿಸಿ, ನೀರನ್ನು ಕೊಡುವ ಕಾರ್ಯ ಮಾಡಿಕೊಟ್ಟರೆ, ಬಹಳಷ್ಟು ಅನುಕೂಲವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಕೃಷ್ಣಾ, ಕಬಿನಿ ಇದರ ಬಗ್ಗೆ ಎಲ್ಲರೂ ಮಾತನಾಡಿದ್ದಾರೆ. ನಾನು ಅದರ ಬಗ್ಗೆ ಹೆಚ್ಚಿಗೆ ಮಾತನಾಡುವುದಿಲ್ಲ. ನನ್ನ ಕ್ಷೇತ್ರಕ್ಕೆ ಆಗಿರತಕ್ಕ ತೊಂದರೆಯನ್ನು ಮಾತ್ರ ಹೇಳುತ್ತೇನೆ. ಏಕೆಂದರೆ, ಈಗಾಗಲೇ ನಾವು ಸಾಕಾದಷ್ಟು ಭೂಮಿಯನ್ನು ಕಳೆದುಕೊಂಡಿದ್ದೇವೆ. ನಮಗೆ ಈಗಿರತಕ್ಕ ನೀರಿನ ಅನುಕೂಲ ಬಹಳ ಕಡಿಮೆ. ಇನ್ನೂ ಎರಡು ಏತ ನೀರಾವರಿ ಯೋಜನೆಗಳನ್ನು ಕೇಳಿದ್ದೇನೆ. ನಮ್ಮಲ್ಲಿರತಕ್ಕ ಏನು ಸೀಪೇಜ್ ವಾಟರ್ ಇದೆ, ಅದು ಹೋಗಿ ನದಿಗೆ ಬೀಳುತ್ತಿದೆ, ಈ ನೀರನ್ನು ಉಪಯೋಗ ಮಾಡಿಕೊಂಡು, ಲಿಫ್ಟ್ ಇರಿಗೇಷನ್ ವ್ಯವಸ್ಥೆ ಮಾಡಿಕೊಡಬೇಕು; So that we can conserve water, not only conserve water, we can use that water for the agriculture purpose. ಈ ದೃಷ್ಟಿಯಿಂದ ನಾನು ಎರಡು ಸಲಹೆಗಳನ್ನು ಕೊಟ್ಟಿದ್ದೇನೆ. ನಾನು ಕಳಿಸಿದ ಕೆಲಸಗಳಿಗೆ ಈಗ ಪ್ರಿಲಿಮನರಿ ಸರ್ವೆ ಆಗಿದೆ. ಇದರ ಜೊತೆಗೆ ಆ ಎರಡು ಏತ ನೀರಾವರಿಗಳನ್ನು ಮಾಡಿ ಕೊಟ್ಟರೆ ಏನು ಮಳೆಯಿಂದಲೇ ವ್ಯವಸಾಯ ಮಾಡಬೇಕಾಗಿದೆ. ಆ ಪ್ರದೇಶಗಳಿಗೂ ಕೂಡ ನೀರನ್ನು ಒದಗಿಸಿದಂತೆ ಆಗುತ್ತದೆ. ಕೇವಲ 30 ಸಾವಿರ ಎಕರೆ ಮಾತ್ರ ನಮಗೆ ಆಗಿದೆ. ನಾಗಮಂಗಲ ತಾಲ್ಲೂಕಿನಲ್ಲಿ ಎಷ್ಟೋ ದೂರದಲ್ಲಿರತಕ್ಕಂಥ ಒಂದೂವರೆ

ಲಕ್ಷ ಎಕರೆ ಪ್ರದೇಶಕ್ಕೆ ನೀರನ್ನು ನಾವು ನಮ್ಮ ಚಾನಲ್ ಮೂಲಕ ಕೊಡುತ್ತಿದ್ದೇವೆ. ತುಮಕೂರು ಡಿಸ್ಟ್ರಿಕ್ಟ್‌ಗೆ ನೀರನ್ನು ಕೊಡುತ್ತಿದ್ದೇವೆ. We have suffered enough from the beginning.

ನಾವು 14 ಸಾವಿರ ತೆಂಗಿನ ಗಿಡ ಕಳೆದುಕೊಂಡಿರುವುದು ಅಲ್ಲದೆ ಸೀಪೇಜ್ ವಾಟರ್‌ನಿಂದ ಅಫೆಕ್ಟ್ ಆಗಿ ಸುಮಾರು 10–15 ಊರುಗಳು ಮುಳುಗಿ ಹೋಗಿವೆ. ನಾವು ಇಷ್ಟೆಲ್ಲಾ ಕಷ್ಟ ಅನುಭವಿಸುತ್ತಿದ್ದೇವೆ. ಇದರ ಬಗ್ಗೆ ಸರ್ಕಾರ ಗಮನಹರಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಸರ್ಕಾರ ನಮ್ಮ ಕಡೆ ಗಮನಹರಿಸದಿದ್ದರೆ ಎಜಿಟೇಷನ್ ಮಾಡುವುದಕ್ಕೆ ಅಥವಾ ಸತ್ಯಾಗ್ರಹ ಮಾಡುವುದಕ್ಕೂ ಕೂಡ ಸಿದ್ಧವಾಗಿದ್ದೇವೆ ಎಂದು ನಾನು ಈ ಸಂದರ್ಭದಲ್ಲಿ ಏತಕ್ಕೆ ಹೇಳುತ್ತಿದ್ದೇನೆಂದರೆ We have suffered enough. ಆದ್ದರಿಂದ ರಾಮಯ್ಯನವರೇನೋ ನೀರು ತೆಗೆದುಕೊಂಡು ಹೋಗುತ್ತಾರೆ. ಆದರೆ We are the sufferers.

ಆದ್ದರಿಂದ ಸರ್ಕಾರಕ್ಕೆ ಮಾನ್ಯ ಅಧ್ಯಕ್ಷರ ಮೂಲಕ, ನಮ್ಮ ಎರಡು ಏತ ನೀರಾವರಿ ಕೆಲಸಗಳನ್ನು ಮಾಡಿಕೊಡಬೇಕೆಂದು ಹೇಳಿ ನಾನು ಪ್ರಾರ್ಥಿಸುತ್ತೇನೆ.

ಶ್ರೀ ವೈ.ಕೆ. ರಾಮಯ್ಯ:– ಒಂದೇ ಒಂದು ಡಾ|| ನಂಜಪ್ಪನವರು ಹೇಮಾವತಿ ಕಾರ್ಯದ ಬಗ್ಗೆ ಎಷ್ಟು ತಿಳಿದುಕೊಂಡಿದ್ದಾರೋ ನನಗೆ ಗೊತ್ತಿಲ್ಲ. ಅದನ್ನು ನಾನು ಪ್ರೆಸ್ ಮಾಡುತ್ತಿಲ್ಲ. But there is a Clause in the Hemavathy estimate and its programmes that until the completion of a flow irrigation, no lift irrigation should be taken up. ಅದನ್ನು enforce– ಮಾಡಿ ಎಂದು ನಾನು ಮಂತ್ರಿಗಳನ್ನು ಕೇಳುತ್ತಿಲ್ಲ.

But there is a Clause which reads like this. "No lift irrigation should be taken up until completion of flow irrigation."

ಡಾ|| ಎನ್.ಬಿ. ನಂಜಪ್ಪ:– ಮಾನ್ಯ ರಾಮಯ್ಯನವರು ಏತ ನೀರಾವರಿ ಬಗ್ಗೆ ಕಾನೂನು ಮಾತನಾಡುತ್ತಾರೆ. ಇವರು ತಮಿಳುನಾಡಿಗೆ ನೀರು ಕೊಡಬೇಕಾದರೆ ಯಾರೋ ಮಹಾರಾಜ ಅಗ್ರಿಮೆಂಟ್ ಮಾಡಿಕೊಂಡಿದ್ದ ಅವನು ಅನ್‌ಎಜುಕೇಟೇಡ್ ಎಂದು ಮಾತನಾಡುತ್ತಾರೋ ? I cannot understand this dual policy of Mr. Ramaiah.

ಈಗ ನಮಗೆ ತೊಂದರೆ ಆಗಿರತಕ್ಕಂಥದ್ದನ್ನು ಮಾಡಬೇಕು. ಒಟ್ಟಿನಲ್ಲಿ ನಾನು ಹೇಳುವುದಾದರೆ ಬೇರೆ ಪಕ್ಕದ ರಾಜ್ಯಗಳಿಗೆ ಹೋಲಿಸಿದರೆ ನಾವು ಬಹಳಷ್ಟು ಹಿಂದೆ ಬಿದ್ದಿದ್ದೇವೆ. ಅದನ್ನು ಈಗ ಇರತಕ್ಕಂಥ ಮಂತ್ರಿಗಳು ಗಮನಿಸಬೇಕು. ವೆಸ್ಟರ್ನ್ ಘಾಟ್ಸ್‌ನಲ್ಲಿ ಬಹಳಷ್ಟು ನೀರು ಹಾಳಾಗಿ ಅದು ಅರೇಬಿಯನ್ ಸಮುದ್ರಕ್ಕೆ ಸೇರುವುದರಿಂದ ಆ ನೀರನ್ನು ಉಪಯೋಗಿಸಿಕೊಳ್ಳತಕ್ಕಂಥ ಒಂದು ಯೋಜನೆಯನ್ನು ಮಲೆನಾಡು ಡೆವಲಪ್‌ಮೆಂಟ್ ಕಾರ್ಪೋರೇಷನ್ ಮಾಡಿರುವುದರಿಂದ ಅಲ್ಲಿ ಎಷ್ಟು ನೀರು ನಮಗೆ ಸಿಕ್ಕುತ್ತದೆ ಎನ್ನುವುದನ್ನು ನೋಡಿ ಅದನ್ನು ಪೂರ್ವಕ್ಕೆ ತಿರುಗಿಸಿದ್ದೇ ಆದರೆ ಅದರಿಂದ ಬಹಳ ಅನುಕೂಲವಾಗುತ್ತದೆ ಎಂದು ನಾನು ಕೇಳಿದ್ದೇನೆ. ಇನ್ನು ಎನರ್ಜಿ. ಈ ಬಗ್ಗೆ ಬಹಳಷ್ಟು ಜನರು ಮಾತನಾಡಿದ್ದಾರೆ. ನಾನಾದರೂ ಕೂಡ ಹೇಳುವುದಾದರೆ there is no co–ordination between the power corporation and the KEB. ಇದು ಎಲ್ಲರಿಗೂ ಗೊತ್ತಿರತಕ್ಕಂಥಾದ್ದು. ಇವತ್ತು ಕೆ.ಇ.ಬಿ. ಬಹಳ ಪೇಚಿಗೆ ಸಿಕ್ಕಿಹಾಕಿಕೊಂಡಿದೆ. ನಮಗೆ ಗೊತ್ತಿರುವ ಹಾಗೇ ಪವರ್ ಸಪ್ಲೈ ಅವರಿಂದ ಬರಬೇಕು. ಡಿಸ್ಟ್ರಿಬ್ಯೂಷನ್ ಇವರಿಂದ ಆಗಬೇಕು. ಡಿಸ್ಟ್ರಿಬ್ಯೂಷನ್ ಆಗತಕ್ಕಂಥ ಸಮಯದಲ್ಲಿ ಏನಾಗಿದೆ because of lot of demands from the ryots as well as from the industrialists, ಅದನ್ನು ಎಕ್ಸಟೆಂಡ್ ಮಾಡುತ್ತಾ ಹೋದರು. ಎಕ್ಸಟೆಂಡ್ ಮಾಡತಕ್ಕಂಥ

ಸಂದರ್ಭದಲ್ಲಿ ಏನು ಶೇಖರಣೆ ಮತ್ತು ಡಿಸ್ಟ್ರಿಬ್ಯೂಷನ್ ಇದೆಯೋ ಇದರಲ್ಲಿ ತಾರತಮ್ಯಗಳಾಗಿ ಇವತ್ತಿನ ದಿವಸ ಗಂಭೀರ ಪರಿಸ್ಥಿತಿಯನ್ನು ಸಾಲ್ವ್ ಮಾಡಲಿಕ್ಕೆ ಆಗದಂತಹ ಒಂದು ಸ್ಥಿತಿ ತಲುಪಿದೆ. ಮಂತ್ರಿಗಳು ಹೇಗೆ ಸಾಲ್ವ್ ಮಾಡುತ್ತಾರೆ ಅಂತ ನನಗೆ ಗೊತ್ತಿಲ್ಲ, ಈಗ ಆಗಬೇಕಾದ ಕೆಲಸಗಳು ಸಬ್‌ಸ್ಟೇಷನ್ಸ್ ಆಗತಕ್ಕಂಥಾದ್ದು ಹೈಯರ್ voltage ಟ್ರಾನ್ಸ್‌ಫಾರ್ಮರ್ಸ್‌ಗಳನ್ನು ಇನ್‌ಸ್ಟಾಲ್ ಮಾಡತಕ್ಕಂಥಾದ್ದು ಡಿಸ್ಟ್ರಿಬ್ಯೂಷನ್ 110ನಿಂದ 220ಗೆ ಕನ್‌ವರ್‌ಷನ್ ಮಾಡತಕ್ಕಂಥಾದ್ದು ಮಾಡದೇ ಹೋದರೆ ಖಂಡಿತ ಡಿಸ್ಟ್ರಿಬ್ಯೂಷನ್ ಸರಿ ಹೋಗುವುದಿಲ್ಲ. ಇವತ್ತು ಕರ್ನಾಟಕ ರಾಜ್ಯದಲ್ಲಿ 17 ಸಾವಿರ ಟ್ರಾನ್ಸ್‌ಫಾರ್ಮರ್ಸ್ ಸುಟ್ಟುಹೋಗಿವೆ. ಇದನ್ನು ನಾವು ತಡೆಗಟ್ಟುವುದಕ್ಕೂ ಆಗುವುದಿಲ್ಲ, ಏನೂ ಕೂಡ ಮಾಡುವುದಕ್ಕಾಗುವುದಿಲ್ಲ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಕಳೆದ 3 ದಿವಸಗಳಿಂದ ಕುಡಿಯಲು ನೀರೂ ಸಹ ಇಲ್ಲ ಕಾರಣ ಲೋ ವೋಲ್ಟೇಜ್‌ನಿಂದ ಮೋಟರುಗಳು ಸ್ಟಾರ್ಟ್ ಆಗದೇ ಇರುವುದರಿಂದ ಅದರಲ್ಲಿಯೂ ಚನ್ನರಾಯಪಟ್ಟಣ ಟೌನ್‌ನಲ್ಲಿ ನಿನ್ನೆ ಬಹಳ ದೊಡ್ಡ ಗಲಾಟೆ ಆಗಿದೆ, ಎಲ್ಲರೂ ಕೂಡಿ ಸತ್ಯಾಗ್ರಹ ಮಾಡಿದ್ದಾರೆ. ಲೋ ವೋಲ್ಟೇಜ್ ಪ್ರಾಬ್ಲಮ್‌ನಿಂದ ಇದು ಆಗಿದೆಯೇ ಹೊರತು ಬೇರೇನೂ ಇಲ್ಲ. ಇದನ್ನು ಸರಿಪಡಿಸಬೇಕು ಎನ್ನುವ ಮಾತನ್ನು ಹೇಳಿ ನಾನು ಕಾಲಾವಕಾಶ ಇಲ್ಲದೆ ಇರುವುದರಿಂದ ಒಟ್ಟಾಗಿ ಹೇಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇರಿಗೇಷನ್ ಪಂಪ್‌ಸೆಟ್ಸ್ ಏನು ಇವೆ.

3.20 ಪಿಯಂ.

ಅದಕ್ಕೆ ಡೀಸೆಲ್ ಜನರೇಟರ್ಸ ಬಂದಿವೆ. ಅದಕ್ಕೆ ಸರಕಾರವು ಸಬ್ಸಿಡಿಯನ್ನು ಕೊಟ್ಟಿದ್ದೇ ಆದರೆ ಸಾಕಷ್ಟು ಸಮಸ್ಯೆಗಳನ್ನು ಪರಿಹಾರಮಾಡಿಕೊಳ್ಳಬಹುದೆಂದು ನಾನು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ. ಏಕೆಂದರೆ ಒಂದು ಜನರೇಟರ್‌ಗೆ 50–60 ಸಾವಿರ ರೂಪಾಯಿಗಳ ತನಕ ಆಗುತ್ತದೆ. ಅದಕ್ಕೆ 50 ಪರ್‌ಸೆಂಟ್‌ನಷ್ಟು ಸಬ್ಸಿಡಿಯನ್ನು ಕೊಟ್ಟರೆ ಅದರಿಂದ ಒಂದು ಕಡೆ ಎನರ್ಜಿಯನ್ನು ಸೇವ್ ಮಾಡಬಹುದು, ಇನ್ನೊಂದು ಕಡೆ ನಮ್ಮ ಸ್ಟ್ಯಾಂಡಿಂಗ್ ಕ್ರಾಪ್‌ಗಳನ್ನು ಕೂಡ ಉಳಿಸಿಕೊಳ್ಳಬಹುದು. ಹೀಗೆ ಎರಡು ಕಡೆ ನಮಗೆ ಲೀನ್ ಪಿರಿಯಡ್‌ನಲ್ಲಿ ಜನರೇಟರ್‌ನ್ನು ಯಾರು ಕೊಂಡುಕೊಳ್ಳುವುದಕ್ಕೆ ಶಕ್ತಿ ಇದೆಯೋ ಅವರಿಗೆ ಜನರೇಟರ್‌ನ್ನು ಕೊಂಡುಕೊಳ್ಳುವ ಹಾಗೆ ಮಾಡಿದರೆ, ಅವರಿಗೆ ಸರಕಾರದವರು ಸಬ್ಸಿಡಿಯನ್ನು ಕೊಟ್ಟರೆ ಇದರಿಂದ ಎರಡು ರೀತಿಯಲ್ಲಿ ಸಹಾಯವಾಗುತ್ತದೆ. ಇದರ ಬಗ್ಗೆ ಸರಕಾರದವರು ಯೋಚನೆ ಮಾಡಬೇಕು. ಇದರಿಂದ ಒಂದು ಕಡೆಯಲ್ಲಿ ಪ್ರೊಡಕ್ಷನ್ ಸಫರ್ ಆಗುವುದಿಲ್ಲ, ಇನ್ನೊಂದು ಕಡೆ We can save electricity ಈ ತರಹದ ಅನುಕೂಲಗಳು ಆಗುತ್ತವೆ ಎಂಬುದನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಪಿಡಬ್ಲ್ಯೂಡಿ ವಿಚಾರವಾಗಿ ನನ್ನ ಕೆಲವು ಮಾತುಗಳನ್ನು ಹೇಳಿ ಮುಗಿಸುತ್ತೇನೆ. P.W.D. is a gone case ನನ್ನ ಪ್ರಕಾರ. ಏಕೆಂದರೆ ಯಾವ ರಸ್ತೆಯೂ ಕೂಡ ನಮ್ಮ ರಾಜ್ಯದಲ್ಲಿ ಸರಿಯಾಗಿ ಇಲ್ಲ. ಯಾವಾಗ ಜಿಲ್ಲಾಪರಿಷತ್‌ನ್ನು, ಪಿಡಬ್ಲ್ಯೂಡಿ ಎಂದು ಮಾಡಿ, ಕೆಲವು ರಸ್ತೆಗಳನ್ನು ಕೊಟ್ಟ ಮೇಲೆ ಯಾವ ರಸ್ತೆಯೇ ಆಗಲಿ ಸರಿಯಾಗಿ ಉಳಿದಿಲ್ಲ.

ಶ್ರೀ ಆರ್. ದಯಾನಂದರಾವ್:– ತಾವುಗಳು ಗಾನ್‌ಕೇಸ್ ಎಂದು ಹೇಳಿದ್ದೀರಿ, ಹಾಗೆಂದರೇನು ?

ಡಾ. ಎನ್.ಬಿ. ನಂಜಪ್ಪ:– ಏಕೆ ಹಾಗೆ ಹೇಳಿದ್ದೇನೆ ಅಂದರೆ ನಾನು ಶಾಸಕನಾಗಿ ಮೂರು ವರ್ಷಗಳು ಆದುವು. ನನ್ನ ಕ್ಷೇತ್ರದಲ್ಲಿ ಐದು ಕಿ.ಮೀ. ರಸ್ತೆಯನ್ನು ಕೂಡ ರಿಪೇರಿ ಮಾಡಿಲ್ಲ. ರಸ್ತೆಯಲ್ಲಿ ಹೋದರೆ ಜನರಿಂದ ಬೈಯ್ಸಿಕೊಂಡು ವಾಪಸ್ ಬರಬೇಕಾಗಿದೆ. ನ್ಯಾಯವಾಗಿ ಹೋಗಿ ಊರನ್ನು ಸೇರುವ ಹಾಗಿಲ್ಲ. ನನ್ನ ಪ್ರಕಾರ ಇದನ್ನು ಹಾಳು ಮಾಡುವುದಕ್ಕೆ ಜನತಾದಳದವರೇ ಕಾರಣ.

ಮಾನ್ಯ ಅಧ್ಯಕ್ಷರೇ, 7-8 ವರ್ಷಗಳಿಂದ ಒಂದು ರಸ್ತೆಯನ್ನು ಕೂಡ ಅವರು ರಿಪೇರಿ ಮಾಡಿಲ್ಲ. ಒಂದು ರಸ್ತೆಯ ಗುಂಡಿ ಮುಚ್ಚಿಲ್ಲ, ರಿಪೇರಿ ಮಾಡಿಲ್ಲ, ಎಲ್ಲಾ ಬೈಫರ್ಕೇಟ್ ಮಾಡಿ, ಜಿಲ್ಲಾಪರಿಷತ್ ಒಂದು ಕಡೆ, ಪಿಡಬ್ಲ್ಯುಡಿ ಒಂದು ಕಡೆ ಎಂದು ಮಾಡಿ, ಎಲ್ಲವನ್ನೂ ಗುಡಿಸಿ ಗುಂಡಾರ ಮಾಡಿ ನಮ್ಮ ತಲೆಯ ಮೇಲೆ ಹಾಕಿ ನಾವುಗಳು ಇವೊತ್ತು ಊರಿನಲ್ಲಿ ತಿರುಗಾಡದ ಹಾಗೆ ಮಾಡಿಬಿಟ್ಟಿದ್ದಾರೆ.

(ಗೊಂದಲ)

ನಾನು ಇದನ್ನು ರಾಜಕೀಯಕ್ಕೋಸ್ಕರವಾಗಿ ಮಾತನಾಡುತ್ತಾ ಇಲ್ಲ. ಇರುವ ತಪ್ಪನ್ನು ಒಪ್ಪಿಕೊಳ್ಳಬೇಕು. ನಾನು ಮಾತನಾಡುತ್ತಿರುವುದು ರಾಜ್ಯದ ಜನತೆಗೋಸ್ಕರವಾಗಿ ಮಾತ್ರ. ಇವೊತ್ತು 50 ಕಿ.ಮೀ. ರಸ್ತೆಗಳನ್ನು ಶಾಸಕರಿಗೆ ಕೊಟ್ಟಿದ್ದೀರಿ. ಹಣವನ್ನು ಕೊಡುತ್ತೇವೆ ಎಂದು ಹೇಳಿದ್ದೀರಿ. ಆದರೆ 20 ಲಕ್ಷ ರೂಪಾಯಿಗಳನ್ನು ಕೊಟ್ಟು ನೀವು ಯಾವ ರಸ್ತೆ ಬೇಕೋ ಅದನ್ನು ಮಾಡಿಸಿಕೊಳ್ಳಬಹುದು ಎಂದು ಹೇಳಿದರು. ನಾವುಗಳು ಇದನ್ನು ಎರಡು ಮೂರು ವರ್ಷಗಳಿಂದ ಕೇಳಿ ಕೇಳಿ ಸಾಕಾಗಿದೆ. ಈಗ ಜನರು ಅದನ್ನು ಕೂಡ ನಮ್ಮ ಹತ್ತಿರ ಕೇಳುತ್ತಿದ್ದಾರೆ. ನಿಮ್ಮ ಕೋಟಾದಲ್ಲಿ ನಮ್ಮ ರಸ್ತೆ ಮಾಡಿಸಿಕೊಡಿ ಎಂದು ಕೇಳುತ್ತಿದ್ದಾರೆ. ಹೀಗೆ ತಾವುಗಳು ಹೇಳದಿದ್ದರೆ ಚೆನ್ನಾಗಿರುತ್ತಾ ಇತ್ತು. ಜನರು ನಮ್ಮ ಹತ್ತಿರ ಅರ್ಜಿ ತೆಗೆದುಕೊಂಡು ಬರುತ್ತಿದ್ದಾರೆ. ನೀವು ಹೇಳದೇ ಇದ್ದಲ್ಲಿ ನಾವಾದರೂ ನೆಮ್ಮದಿಯಿಂದ ಇರಬಹುದಾಗಿತ್ತು.

ಶ್ರೀ ಕೆ.ಹೆಚ್. ರಂಗನಾಥ್:- ತಾವುಗಳು ಪಿಡಬ್ಲ್ಯುಡಿ ಗ್ರಾಂಟ್ ಕೇಸ್ ಎಂದು ಹೇಳಿದ್ದೀರಿ, ಈಗ ಅರ್ಜಿ ತರುತ್ತಿದ್ದಾರೆ ಎಂದು ಕೂಡ ಹೇಳುತ್ತಿದ್ದೀರಿ.

ಡಾ: ಎಸ್.ಬಿ. ನಂಜಪ್ಪ:- ನೀವು 40 ಲಕ್ಷ ಕೊಡುತ್ತೇವೆ ಎಂದು ಹೇಳಿದ್ದೀರಲ್ಲಾ? ಅದಕ್ಕೆ ಜನರು ಬಂದು ನಿಮ್ಮ ಹತ್ತಿರ 40 ಲಕ್ಷ ರೂ.ಗಳು ಇದೆಯಂತೆ ಅದರಲ್ಲಿ ನಮ್ಮ ರಸ್ತೆ ಮಾಡಿಸಿಕೊಡಿ ಎಂದು ಕೇಳುತ್ತಿದ್ದಾರೆ. ಆದ್ದರಿಂದ ತಾವುಗಳು ಅದರ ಬಗ್ಗೆ ಗಮನಿಸಿ, ಯಾವ ರಸ್ತೆಗಳು ಬಹಳ ಹಾಳಾಗಿವೆಯೋ, ಅವುಗಳನ್ನು ರಿಪೇರಿ ಮಾಡಿಸಬೇಕು. ಅದೇ ರೀತಿಯಲ್ಲಿ ನಮಗೆ 50 ಕಿ.ಮೀ. ರಸ್ತೆಗಳನ್ನು ನಮಗೆ ಹೊಸದಾಗಿ ಸೇರಿಸಿದ್ದೀರೋ ಆ ರಸ್ತೆಗಳ ಕೆಲಸವನ್ನು ಆದಷ್ಟು ಬೇಗ ಪ್ರಾರಂಭ ಮಾಡಿ ನಮಗೆ ಈ ರಸ್ತೆ ಮತ್ತು ವಿದ್ಯುಚ್ಛಕ್ತಿ, ಇರಿಗೇಷನ್, ಇವುಗಳು ಬಹಳ ಮುಖ್ಯವಾಗಿದ್ದು, ಈ ಎರಡೂ ಕೆಲಸಗಳನ್ನು ದಯಮಾಡಿ ಮಾಡಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಂಡು ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ನಾರಾಯಣ ಸ್ವಾಮಿ (ಬೇತಮಂಗಲ):- ಮಾನ್ಯ ಸಭಾಧ್ಯಕ್ಷರೇ, ನೀರಾವರಿ ಇಲಾಖೆಯ ಮೇಲೆ ನನ್ನ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಅನೇಕ ಗೌರವಾನ್ವಿತ ಸದಸ್ಯರುಗಳು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಕಾವೇರಿ, ಕೃಷ್ಣ, ತುಂಗಾ, ಅಪ್ಪರ್‌ತುಂಗಾ, ಬಗೆಗೂ ಕೂಡ ಅನೇಕ ಜನರು ಹೇಳಿದ್ದಾರೆ. ಆದರೆ ನಮ್ಮ ಭಾಗದವರು ನತದೃಷ್ಟರು ಎಂದು ಹೇಳಬೇಕಾಗುತ್ತದೆ. ಏಕೆಂದರೆ ನಮ್ಮ ಕೋಲಾರ ಜಿಲ್ಲೆಯು ಬಹಳ ಹಿಂದುಳಿದ ಪ್ರದೇಶ. ನಾವುಗಳು ಕೃಷ್ಣ, ಕಾವೇರಿ, ತುಂಗಾಗಳಿಂದ ವಂಚಿತರಾಗಿದ್ದೇವೆ. ಸರಕಾರದವರು ಕಾವೇರಿಯನ್ನು ಮಾಡಲಿ, ತುಂಗಾ ಯೋಜನೆಯನ್ನು ಮಾಡಲಿ, ಅಲ್ಲದೆ ಇಂಥ ನೂರಾರು ಪ್ರಾಜೆಕ್ಟ್ಸ್ ಅನ್ನು ಮಾಡಲಿ. ಆದರೆ ನದಿಗಳೇ ಇಲ್ಲದ ಕೋಲಾರದಲ್ಲಿ ಇರುವ ಕೆರೆಗಳನ್ನು ಸರಿಪಡಿಸಿಕೊಡುವ ಕೆಲಸವನ್ನು ಮಾಡಲಿ ಎಂದು ಪ್ರಾರ್ಥಿಸಿಕೊಳ್ಳುತ್ತೇನೆ. ನಾನೂ ಕೂಡ ಒಬ್ಬ ರಾಜ್ಯದ ಮೊದಲ ಮುಖ್ಯಮಂತ್ರಿಗಳಾಗಿದ್ದ ಕೆ.ಸಿ.ರೆಡ್ಡಿಯವರ ಊರಿನವನಾಗಿ, ನನ್ನ ಸ್ವಂತ ಊರಿನಿಂದ ಯಾರು ಮುಖ್ಯಮಂತ್ರಿಯಾದರೋ, ಆ ಊರಿನ ಪ್ರಗತಿಯು ಇವೊತ್ತಿಗೂ ಆಗಿಲ್ಲ. ಉದಾಹರಣೆಗೆ ಬಂಗಾರುಪೇಟೆ ತಾಲ್ಲೂಕಿನಲ್ಲಿ ನಾಲ್ಕು ಮೇಜರ್ ಟ್ಯಾಂಕ್ಸ್ ಇವೆ. ರಾಮಸಾಗರಟ್ಯಾಂಕ್, ಮಾರ್ಕೆರೆ ಟ್ಯಾಂಕ್, ಕಾಮಸಮುದ್ರಟ್ಯಾಂಕ್ ಹಾಗೂ

ಮುಸಳ್ಳಿಟ್ಯಾಂಕ್ ಇದೆ. ಅಲ್ಲಿ 1800 ಹೆಕ್ಟೇರ್‌ಗಳಷ್ಟು ಬೆಳೆ ಬೆಳೆಯತಕ್ಕಂಥ ಪರಿಸ್ಥಿತಿಯೂ ಇದೆ. ನಮ್ಮ ಸರಕಾರದವರು ಕಟ್ಟಿದ್ದು ಅಲ್ಲ, ಇದನ್ನು ಇಂಗ್ಲೀಷರು ಕಟ್ಟಿಸಿದ್ದರು. ಇವುಗಳನ್ನು ಕಟ್ಟಿ 44 ವರ್ಷಗಳಾದರೂ ಕೂಡ ಅಲ್ಲಿ ಚಾನಲ್ ಕಟ್ಟ ತಕ್ಕಂಥ ಕೆಲಸಗಳನ್ನು ಇನ್ನೂ ಸರಕಾರದವರು ಮಾಡಿಲ್ಲ. ನಾವು ನೀರಾವರಿಯ ಮೂಲಕ ಕರ್ನಾಟಕದಲ್ಲಿ ಹೆಚ್ಚಿನ ಬೆಳೆವಣಿಗೆಯನ್ನು ಮಾಡುವತ್ತ ಗಮನಹರಿಸಿದ್ದೇವೆ...

ಶ್ರೀ ಕೆ. ಹೆಚ್. ರಂಗನಾಥ್:- ಕೋಲಾರದಲ್ಲಿರುವ ಕೆರೆಗಳನ್ನು ಇಂಗ್ಲೀಷರು ಕಟ್ಟಿಸಿದ್ದಲ್ಲ, ಮೈಸೂರಿನ ಮಹಾರಾಜರ ಕಾಲದಲ್ಲಿ ಕಟ್ಟಿಸಿದ್ದರು.

ಶ್ರೀ ಎಂ. ನಾರಾಯಣ ಸ್ವಾಮಿ:- ಮಹಾರಾಜರು ಕಟ್ಟಿಸಿದ್ದರು. ಆದರೆ ನಮ್ಮ ಸರಕಾರದವರು ಅದರ ದುರಸ್ತಿ ಮತ್ತು ನಾಲೆಯ ಕಾಮಗಾರಿಗಳ ಕೆಲಸವನ್ನು ಇದುವರೆಗೂ ತೆಗೆದುಕೊಂಡಿಲ್ಲ. ಮಾನ್ಯ ಕೆ.ಸಿ. ರೆಡ್ಡಿಯವರ ಜ್ಞಾಪಕಾರ್ಥವಾಗಿ ಇದುವರೆಗೂ ಕೂಡ ಒಂದು ಕೆರೆಯಾಗಲೀ, ಒಂದು ರಸ್ತೆಯಾಗಲೀ, ಇಲ್ಲ. ನಮ್ಮಲ್ಲಿ ದೊಡ್ಡ ದೊಡ್ಡ ಕೆರೆಗಳು ಇವೆ. ನಮ್ಮ ಬಂಗಾರಪೇಟೆ ತಾಲ್ಲೂಕಿನಿಂದ ಆಂಧ್ರ ಮತ್ತು ಮದ್ರಾಸಿಗೆ ನೀರು ಹರಿದು ಹೋಗುತ್ತದೆ. ಆ ಬಗ್ಗೆ ಒಂದು ಪ್ರಶ್ನೆ ಕೇಳಿದರೆ ಅದಕ್ಕೆ ಉತ್ತರವನ್ನು ಕೂಡ ಸರಕಾರದವರು ಕೊಟ್ಟಿಲ್ಲ. ರಾಮಸಮುದ್ರ ಟ್ಯಾಂಕ್‌ನಿಂದ ಆಂಧ್ರದ ಗಡಿಗೆ ಹೋಗುತ್ತಾ ಇದೆ, ಉಳಿದ ಟ್ಯಾಂಕ್‌ಗಳಿಂದ ಮದ್ರಾಸಿಗೆ ಹರಿದು ಹೋಗುತ್ತಾ ಇದೆ. ಹೀಗೆ ವೇಸ್ಟ್ ಆಗುತ್ತಾ ಇರುವ ನೀರಿಗೆ ಏಕೆ ಪಿಕ್‌ಅಫ್ ಕಟ್ಟಬಾರದು ? ಅಲ್ಲಿ ಏತಕ್ಕೆ ಹೊಸಟ್ಯಾಂಕ್‌ನ್ನು ನಿರ್ಮಾಣ ಮಾಡಬಾರದು ಎಂದು ನಾನು ಇಲ್ಲಿ ಪ್ರಶ್ನೆ ಕೇಳಿದರೂ ಕೂಡ ನನಗೆ ಉತ್ತರ ಕೊಡಲಿಲ್ಲ. ನಮ್ಮಲ್ಲಿ ನೂರಾರು ಎಕರೆ ಪ್ರದೇಶಗಳಿಗೆ ನೀರು ಕೊಡತಕ್ಕಂಥ ಕೆಲಸವನ್ನು ಪಿಕ್‌ಅಪ್ ಟ್ಯಾಂಕ್‌ಗಳಿಂದ ಮಾಡಬಹುದು. ಹೊಸ ಟ್ಯಾಂಕ್‌ಗಳನ್ನು ಕಟ್ಟತಕ್ಕಂಥ ಕೆಲಸವನ್ನು ಮಾಡಬಹುದು. ಅನೇಕ ಕೆರೆಗಳಲ್ಲಿ ಹೂಳು ಬಂದಿರತಕ್ಕಂಥದ್ದನ್ನು ತೆಗೆಯುವ ಕೆಲಸವೂ ಆಗಿಲ್ಲ.

ಇನ್ನು ಅನೇಕರು ಮುಖ್ಯಮಂತ್ರಿಗಳಾದರೆ, ಮಂತ್ರಿಗಳಾದರೆ ಅವರ ಭಾಗದ ಅನೇಕ ಕಾಮಗಾರಿಗಳು ಇರುತ್ತವೆ. ನಾವೇನೂ ಅದಕ್ಕೆ ಬೇಡ ಎಂದು ಹೇಳುವುದಿಲ್ಲ. ಬಜೆಟ್‌ನ ಯಾವ ಪೇಜ್ ನೋಡಿದರೂ ಕೂಡ ಅವರದ್ದೇ ಇರುತ್ತದೆ. ಆದರೆ ನಮ್ಮಂಥ ಭಾಗದವರ ಕ್ಷೇತ್ರಕ್ಕೂ ಕೂಡ ಒಂದೆರಡು ಕೆಲಸವನ್ನು ಮಾಡಿಕೊಡಬೇಕಾಗುತ್ತದೆ. ಇತ್ತೀಚೆಗೆ ನಮ್ಮ ತಾಲ್ಲೂಕಿನ ಮಾರ್ಕನಳ್ಳಿ ಟ್ಯಾಂಕ್‌ಗೆ 23ಲಕ್ಷ ರೂ.ಗಳನ್ನು ಮಂಜೂರು ಮಾಡಿದರು. ಮುಸ್ಲಳ್ಳಿ ಟ್ಯಾಂಕ್‌ಗೆ 16 ಲಕ್ಷ ರೂ.ಗಳನ್ನು ಮಂಜೂರು ಮಾಡಿದರು, ಕಾಮಸಮುದ್ರ ಟ್ಯಾಂಕ್‌ಗೆ 25 ಲಕ್ಷ ರೂ.ಗಳನ್ನು ಮಂಜೂರು ಮಾಡಿದರು. ಆದರೆ ಕೆಲಸವನ್ನು ಇವೊತ್ತಿನವರೆಗೂ ಸ್ವಲ್ಪವೂ ಮಾಡಿಲ್ಲ. ಈ ಕುರಿತು ನಾನು ಸಂಬಂಧಪಟ್ಟವರನ್ನು ಭೇಟಿ ಮಾಡಿದಾಗ Head of Account 4702ರಲ್ಲಿ 300 ಲಕ್ಷಗಳ ಪ್ರೋಗ್ರಾಂನಲ್ಲಿ ನಿಮ್ಮ ಕೆಲಸವನ್ನು ಕೂಡ ಸೇರಿಸಿಕೊಂಡಿದ್ದೇವೆ ಎಂದು ಹೇಳಿದ್ದಾರೆ. ಆದರೆ ಇನ್ನೂ ಕೂಡ ಮಾಡಿಲ್ಲ, ಇದನ್ನು ನಾನು ಏತಕ್ಕಾಗಿ ಹೇಳುತ್ತಾ ಇದ್ದೇನೆ ಅಂದರೆ, ಕಾವೇರಿ ಬಗ್ಗೆ ಬೇಕಾದಷ್ಟು ಹಣವನ್ನು ಖರ್ಚು ಮಾಡಲಿ. ಆದರೆ ನಮ್ಮ ಸಣ್ಣ ಕೆರೆಗಳನ್ನು ನಿರ್ಲಕ್ಷ್ಯ ಮಾಡಬಾರದು. ಈ ಇರಿಗೇಷನ್ ಯೋಜನೆಗಳಲ್ಲಿ ಸಣ್ಣ ಕೆರೆಗಳ ಅಭಿವೃದ್ಧಿ ಕೆಲಸವನ್ನು ಹೆಚ್ಚು ಮಾಡಬೇಕು. ಜಿಲ್ಲಾಪರಿಷತ್ ವ್ಯವಸ್ಥೆಯಿಂದ ಎಲ್ಲಾ ಅಸ್ತವ್ಯಸ್ತವಾಯಿತು ಎಂದು ಮಾನ್ಯ ಸದಸ್ಯರೊಬ್ಬರು ಹೇಳಿದರು. ಜಿಲ್ಲಾಪರಿಷತ್‌ನವರು ಮಾಡಲಿಲ್ಲ. ಅದನ್ನ ಒಪ್ಪುತ್ತೇನೆ. ಆದರೆ ನಿಮ್ಮ ಇರಿಗೇಷನ್ ಡಿಪಾರ್ಟ್‌ಮೆಂಟಿನ ವತಿಯಿಂದ ಎಷ್ಟು ಕೆರೆಗಳನ್ನು ಮಾಡಿದ್ದೀರಿ ಎಂಬುದನ್ನು ಹೇಳಬೇಕು. ಒಂದು ಕೆರೆಯ ಅಭಿವೃದ್ಧಿ ಕೂಡ ನಮ್ಮಲ್ಲಿ ಆಗಿಲ್ಲ. ಆದ್ದರಿಂದ ನಮ್ಮ ಗಡಿಪ್ರದೇಶಗಳಲ್ಲಿಯೂ ಕೂಡ ಅಭಿವೃದ್ಧಿ ಕೆಲಸಕಾರ್ಯಗಳನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಎಲ್ಲಾ ಸದಸ್ಯರುಗಳು ನಾವೆಲ್ಲರೂ ಕಾವೇರಿ, ಕೃಷ್ಣ ಯೋಜನೆಗಳ ಬಗ್ಗೆ ಸಾಕಷ್ಟು

ಹಣವನ್ನು ಕೊಡಬೇಕೆಂದು ಹೇಳುತ್ತೇವೆ. ಅದೇ ರೀತಿಯಲ್ಲಿ ಗಡಿ ಪ್ರದೇಶಗಳ ಅಭಿವೃದ್ಧಿ ಕೆಲಸಕಾರ್ಯಗಳ ಬಗ್ಗೆಯೂ ಕೂಡ ನಿಗಾವಹಿಸಿ ಕೆಲಸಕಾರ್ಯಗಳನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ಅಧಿಕಾರಿಗಳು, ಇವರು ಹೋಗಿದ್ದೇ ದಾರಿ, ಬಂದಿದ್ದೇ ದಾರಿ, ದಕ್ಷ ಅಧಿಕಾರಿಗಳು ಕೆಲವರು ಇದ್ದಾರೆ. ನಾನು ಇಲ್ಲ ಅಂತ ಹೇಳುವುದಿಲ್ಲ. ಆದರೂ ಕೆಲವರು ಈ ಅಧಿಕಾರ ಕಿತ್ತಾಟದಿಂದ ಅವರ ಇಷ್ಟಾನು ಸಾರವಾಗಿ ನಡೆಯತಕ್ಕಂಥ ಸಂದರ್ಭದಲ್ಲಿ ನಮ್ಮ ಅಭಿವೃದ್ಧಿ ಕಾರ್ಯಗಳು ಏನೂ ನಡೆಯುವುದಿಲ್ಲ ಎಂದು ನನ್ನ ಭಾವನೆಯಾಗಿದೆ. ನೀರಾವರಿ ಕೆರೆಗಳನ್ನು ಅನೇಕ ಜನರು ಒತ್ತುವರಿ ಮಾಡಿಕೊಂಡಿದ್ದಾರೆ. ಯಾವುದೇ ಪಕ್ಷ ಇರಲಿ, ಕಾಂಗ್ರೆಸ್‌ನವರು ಇರಬಹುದು, ನಾವು ಇರಬಹುದು, ಯಾರ ಮೇಲೂ ಕೂಡ ಯಾವುದೇ ಅಧಿಕಾರಿ ಕ್ರಮ ತೆಗೆದುಕೊಳ್ಳದೆ ಇರತಕ್ಕಂಥ ನಿದರ್ಶನವನ್ನು ನಾವು ನೋಡುತ್ತಿದ್ದೇವೆ. ಅನೇಕ ಕಡೆ ಸಾಗುವಳಿ ಮಾಡುತ್ತಿದ್ದಾರೆ. ಅದನ್ನು ಕೂಡ ಇವತ್ತಿನವರೆಗೂ ಬಿಡುಗಡೆ ಮಾಡುವಂತಹ ಕೆಲಸವನ್ನು ನಾವು ಮಾಡಿಲ್ಲ. ಬಜೆಟ್‌ನಲ್ಲಿ ನಮ್ಮ ಜಿಲ್ಲೆಗೆ ಮತ್ತು ಬಂಗಾರಪೇಟೆ ತಾಲ್ಲೂಕಿಗೆ ಅತಿ ಹೆಚ್ಚಿಗೆ ಹಣವನ್ನು ಮಂಜೂರು ಮಾಡಲಿ ಎಂದು ನಾನು ಕೇಳುತ್ತಿದ್ದೇನೆ.

ಇನ್ನು ಕೆ.ಇ.ಬಿ ವಿಚಾರದಲ್ಲಿಯೂ ಕೂಡ ಕೆಲವು ವಿಷಯಗಳನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಮ್ಮ ಕ್ಯಾಸಂಬಳ್ಳಿಗೆ 1990ರಲ್ಲಿ ಟೆಕ್ನಿಕಲ್ ಕಮಿಟಿ ಬಂದಿತು. ಆಗ ನಾನು ಮನವಿಯನ್ನು ಕೊಟ್ಟಿದ್ದೆ. ನಾನು ಮೊನ್ನೆ ಪ್ರಶ್ನೆಯನ್ನು ಕೇಳಿದಾಗ ಇನ್ನು ಸರ್ವೇ ಮಾಡುತ್ತಿದ್ದೇವೆಂದು ಹೇಳಿದರು. ಹಿಂದೆ ಮೊದಲು ಐ.ಎ.ಎಸ್ ಅಧಿಕಾರಿಯೊಬ್ಬರು ಇದ್ದರು. ಅವರ ಊರು ಕ್ಯಾಸಂಬಳ್ಳಿ, ಅದಕ್ಕಾದರೂ ಸ್ವಲ್ಪ ಪ್ರಯತ್ನ ಮಾಡುತ್ತೇನೆಂದು ಹೇಳಿದರು. ಅದಕ್ಕಾಗಿ ಮಾಡಬೇಡಿ, ಅಲ್ಲಿ ಫೀಸಿಬಲ್ ಇದ್ದರೆ ಮಾಡಿ ಇಲ್ಲದಿದ್ದರೆ ಮಾಡಬೇಡಿ ಅಂತ ಹೇಳಿದೆ. ಆದರೆ 1990ನೇ ಇಸವಿಯಿಂದ ಇವತ್ತಿಗೂ ಕೂಡ ಅಲ್ಲಿ ಕೆ.ಇ.ಬಿ.ಎಂ.ವೈ ಸ್ಟೇಷನ್ ಮಾಡುವುದಕ್ಕೆ ಆಗಲಿಲ್ಲ. ಈ ವಿಷಯ ಅನೇಕ ಸಾರಿ ಬೋರ್ಡಿಗೆ ಹೋಗಿತ್ತು. ಬೋರ್ಡಿನಲ್ಲಿ ದುಡ್ಡಿಲ್ಲ; ಮುಂದಿನ ವರ್ಷ ಮಾಡುತ್ತೇವೆಂದು ಹೇಳಿದರು. ನಂತರ 1991ರಲ್ಲಿ ಕೇಳಿದೆ. ಈ ಸಾರಿ ಆಗುವುದಿಲ್ಲ, ಮುಂದಿನ ಸಾರಿ ಮಾಡುತ್ತೇವೆಂದು ಆಮೇಲೆ ಮೊನ್ನೆ ಕೇಳಿದೆ ಈ ಸಾರಿ ಆಗುವುದಿಲ್ಲ, ಮುಂದಿನಸಾರಿ ಮಾಡುತ್ತೇವೆಂದು ಹೇಳಿದರು. ಇದರ ಬಗ್ಗೆ ಒಂದು ಪತ್ರವನ್ನು ಮಾನ್ಯ ಮಂತ್ರಿಯವರಿಗೆ ನಾನು ಬರೆದಿದ್ದೇನೆ. ದಯಮಾಡಿ ಅದನ್ನು ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಕೆ.ಇ.ಬಿಯ ವಿಚಾರದಲ್ಲಿ ಇನ್ನೊಂದನ್ನು ಹೇಳಬೇಕಾದರೆ ಅಲ್ಲಿ ಅನೇಕ ಕರ್ಮಕಾಂಡವಾಗಿದೆ. ಈ ಟ್ರಾನ್ಸ್‌ಫಾರ್ಮರ್ಸ್‌ಗಳು ಸಾವಿರಾರು ಸುಡುತ್ತಿದೆ. ಅವರ ವರದಿಯ ಆಧಾರದಮೇಲೆ ಸಾವಿರಾರು ಟ್ರಾನ್ಸಫಾರ್ಮರ್‌ಗಳು ಸುಟ್ಟುಹೋಗಿವೆ. ಅದಕ್ಕೆ ಕಾರಣವೇನು ? ಅಲ್ಲಿ ಏನಾದರೂ ಟೆಕ್ನಿಕಲ್ ಆಗಿ ತೊಂದರೆ ಇದೆಯೇ ಎನ್ನುವುದನ್ನು ನೋಡಬೇಕಾಗುತ್ತದೆ. ಇನ್ನು ಈ ಕೆ.ಇ.ಬಿನಲ್ಲಿರುವ ಕಂಟ್ರಾಕ್ಟ್ ಸಿಸ್ಟಂ ಅನ್ನು ಮೊದಲು ರದ್ದು ಮಾಡಬೇಕು.

ನಾನು ಕಂಟ್ರಾಕ್ಟ್ ಸಿಸ್ಟಂ ಏತಕ್ಕೆ ರದ್ದು ಮಾಡಬೇಕೆಂದು ಕೇಳುತ್ತೇನೆ. ಅಂದರೆ ಎಲ್ಲಿ ಗುತ್ತಿಗೆದಾರರು ಇದ್ದಾರೆ ಅವರೆಲ್ಲರೂ ಕೂಡ ರೈತನಿಗೆ ಮೋಸಮಾಡುತ್ತಾರೆ. ಒಂದು ಕಂಬ ಬೇಕಾದರೆ, ಒಂದು ವೈರ್ ಬೇಕಾದರೆ, ಒಂದು ಟ್ರಾನ್ಸ್‌ಫಾರ್ಮರ್ ಬೇಕಾದರೆ ಅಥವಾ ಯಾವುದೇ ಒಂದು ಟ್ರಾನ್ಸ್‌ಫಾರ್ಮರ್ ಬೇಕಾದರೂ ಕೊಡ ರೈತನ ಎತ್ತು, ರೈತರ ನೇಗಿಲು, ರೈತನ ಕೂಲಿ ಬೇಕಾಗಿದೆ. ಆ ಗುಣಿಯನ್ನು ಅಗೆಯಬೇಕಾದರೂ ಕೂಡ ರೈತನೆ ಹೋಗಿ ಅಗೆಯಬೇಕು. ಆ ಕಂಬವನ್ನು ಹಾಕಬೇಕು. ಮಾಡಿದ್ದು ಆದಮೇಲೆ ಆ ದುಡ್ಡನ್ನು ಬರೀ ಗುತ್ತಿಗೆದಾರರು ತೆಗೆದುಕೊಳ್ಳುತ್ತಾರೆ. ಲೈನನ್ನು ಸರಿಯಾಗಿ ಇದೆಯೋ

ಎನ್ನುವುದನ್ನು ನೋಡುವುದಿಲ್ಲ. 6 ಅಡಿ ಅಥವಾ 5.5 ಅಡಿಯಲ್ಲಿ ಹೂಳಬೇಕಾದಂತಹ ಗುಂಡಿಯನ್ನು ಬರೀ 3 ಅಡಿ, 2.5 ಅಡಿ ಅಗೆದು ಆದಮೇಲೆ ಅಲ್ಲಿ ಕ್ವಾಲಿಟಿ ಕೂಡ ಮೆಂಟೇನ್ ಮಾಡುವುದಿಲ್ಲ. ಆ ಫ್ಯೂಸ್ ತೆಗೆದುಕೊಳ್ಳಲಿ, ಆ ಲೈನ್ ಇರಲಿ, ಅಥವಾ ಕ್ರಾಸ್ ಆದರೂ ಬರಲಿ, ಯಾವುದೂ ಸರಿಯಾಗಿ ಇರುವುದಿಲ್ಲ. ಆದ್ದರಿಂದ ಬರೀ ಹಾಳಾಗತಕ್ಕಂಥ ವ್ಯವಸ್ಥೆಯಾಗಿದೆ. ಅದನ್ನು ಸರಿಮಾಡಿಸತಕ್ಕಂಥ ಕೆಲಸ ಆಗಬೇಕು.

ಆಮೇಲೆ ಪವರ್ ಕಾರ್ಪೊರೇಷನ್ ವಿಚಾರದಲ್ಲಿಯೂ ನಾನು ಹೋದಸಲ ಫೆಬ್ರವರಿಯಲ್ಲಿ ಅಸೆಂಬ್ಲಿ ನಡೆದಾಗ ಒಂದು ವಿಚಾರವನ್ನು ತೆಗೆದೆ, ಬೂದಿ ಸಾಗಾಣಿಕೆ ಕೇಂದ್ರದ ಬಗ್ಗೆ 14 ಕೋಟಿ ರೂಪಾಯಿಗೆ ದೆಹಲಿಯವರಿಗೆ ಕೊಟ್ಟಿದ್ದೀರಿ, ಅದರ ಬಗ್ಗೆ ಒಂದು ಸ್ಟೇಟ್‌ಮೆಂಟ್ ಮಾಡಬೇಕೆಂದು ಕೇಳಿದ್ದೆ, 14ಕೋಟಿ ರೂಪಾಯಿಯ ಅವ್ಯವಹಾರವಾಗಿದೆ. ತಂತಿ ಪರ್ಚೇಸ್‌ನಲ್ಲಿಯೂ 5 ಕೋಟಿ ರೂಪಾಯಿ ಅಸ್ತವ್ಯಸ್ತವಾಗಿದೆ. ಅದನ್ನು ವಿಚಾರಣೆ ಮಾಡಬೇಕೆಂದು ನಾನು ಕಳೆದ ಅಸೆಂಬ್ಲಿಯಲ್ಲಿ ಕೇಳಿದಾಗ ಸರ್ಕಾರದ ವತಿಯಿಂದ ಸ್ಟೇಟ್‌ಮೆಂಟ್ ಮಾಡುತ್ತೇವೆಂದು ಮಾನ್ಯ ಹಾರ್ನಳ್ಳಿ ರಾಮಸ್ವಾಮಿಯವರು ಹೇಳಿದರು. ಅದರ ಬಗ್ಗೆ ಇನ್ನೂ ಸ್ಟೇಟ್‌ಮೆಂಟ್ ಮಾಡಿಲ್ಲ, ಸ್ಟೇಟ್‌ಮೆಂಟ್ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಹಣದ ಕೊರತೆ ಎಂದು ಹೇಳುತ್ತಿದ್ದಾರೆ, ಆದರೂ ಕೂಡ ನಮ್ಮ ಕಾಮಸಮುದ್ರ ಸುಮಾರು 151 ಕಿ.ಮೀ ಬಾರ್ಡರ್ ಬರುತ್ತಿದೆ. ಕಾಮಸಮುದ್ರದಲ್ಲಿಯೂ ಒಂದು ಸ್ಟೇಷನ್ ಆಗಬೇಕು. ಅದರ ಅಗತ್ಯ ಇದೆ ಅಂತ ನಾನು ಮಾನ್ಯ ಸಚಿವರನ್ನು ಕೇಳುತ್ತೇನೆ. ಅದನ್ನು ಮಾಡಿಕೊಡಬೇಕೆಂದು ಹೇಳುತ್ತೇನೆ.

ಇನ್ನು ಲೋಕೋಪಯೋಗಿ ಇಲಾಖೆಯ ಬಗ್ಗೆ ಒಂದೆರಡು ಮಾತನ್ನು ಹೇಳುತ್ತೇನೆ. ನಾನು ಇದರ ಬಗ್ಗೆ ಹೆಚ್ಚಿಗೆ ಮಾತನಾಡುವುದಿಲ್ಲ. ತಾವು ಈಗಾಗಲೇ ಕಟ್ಟಪ್ಪಣೆಯನ್ನು ಮಾಡಿದ್ದೀರಿ. ಹೆಚ್ಚಿಗೆ ಸಮಯವನ್ನು ತೆಗೆದುಕೊಳ್ಳಬೇಡಿ ಅಂತ ಹೇಳುತ್ತಿದ್ದೀರಿ. ನಾನು ಹೆಚ್ಚಿಗೆ ಸಮಯವನ್ನು ತೆಗೆದುಕೊಳ್ಳುವುದಿಲ್ಲ. ನಮ್ಮ ಬಂಗಾರಪೇಟೆ ತಾಲ್ಲೂಕಿನಲ್ಲಿ ಸುಮಾರು ರಸ್ತೆಗಳು ಹಾಳಾಗಿವೆ. ಒಂದು ರಾಮಕುಪ್ಪಂ ಆರ್‌ಆರ್ ರೋಡ್ ಅಂತ ಹೇಳುತ್ತೇವೆ. ಕೆ.ಜಿ.ಎಫ್ ಯಿಂದ ಆರ್.ಆರ್. ರೋಡ್ ಇದೆ. ಒಂದು ಕುಪ್ಪಂನಿಂದ ಕೆ.ಜಿ.ಎಫ್ ರೋಡ್ ಇದೆ. ಇನ್ನೊಂದು ಕರಮ್ಮನಹಳ್ಳಿಯಿಂದ ಬೂದಿಕೋಟೆ, ಕೃಷ್ಣಗಿರಿ ರೋಡ್ ಇದೆ, ಇನ್ನೊಂದು ವಿ.ಕೋಟ್ ಯಿಂದ ಆಂಧ್ರ ಪ್ರದೇಶದಿಂದ ಕೋಲಾರಕ್ಕೆ ಬರತಕ್ಕಂಥ ರಸ್ತೆ ಇವೆ. ಈ ಅನೇಕ ರಸ್ತೆಗಳು ಹಾಳಾಗಿವೆ. ಟಿಪ್ಪುಸುಲ್ತಾನ್ ನನ್ನ ಕ್ಷೇತ್ರದಲ್ಲಿ ಹುಟ್ಟಿದನು ಎಂದು ಹೇಳುತ್ತಾರೆ. ಬೂದಿಕೋಟೆ ಟಿಪ್ಪು ಸುಲ್ತಾನ್ ಹುಟ್ಟಿರತಕ್ಕಂಥ ಸ್ಥಳವಾಗಿದೆ. ಅದು ರಾಷ್ಟ್ರದ ಒಂದು ದೊಡ್ಡ ಸಂಕೇತವಾಗಿದೆ. ಆ ರಸ್ತೆಯ ರಿಪೇರಿಯು ಕೂಡ ಆಗಿಲ್ಲ. ಏಕೆಂದರೆ ಈ ಕಡೆ ಕೃಷ್ಣಗಿರಿ ಇದೆ, ಈ ಕಡೆ ವಿ.ಕೋಟೆ ರೋಡ್ ಇದೆ, ಈ ರೋಡಿನ ಕೆಲಸಗಳು ಯಾವುದೂ ಆಗಿಲ್ಲ. ಜೊತೆಗೆ ನಮ್ಮದು ರಾಮಕುಪ್ಪಂ ಮತ್ತು ಕನಮ್ಮನಹಳ್ಳಿ, ಬೂದಿಕೋಟೆ ರೋಡ್ ಅಂತ ಇದೆ. ಇದು 1963ನೇ ಇಸವಿಯಲ್ಲಿಯೇ ಲೋಕೋಪಯೋಗಿ ಇಲಾಖೆಗೆ ಸೇರಿದೆ.1963 ರಿಂದ 1993ರವರೆಗೂ ಲೋಕೋಪಯೋಗಿ ಇಲಾಖೆಯಿಂದ ಒಂದು ರೂಪಾಯಿ ಕೆಲಸವನ್ನೂ ಮಾಡಿಲ್ಲ. ನಾನೂ ಪ್ರಶ್ನೆಯನ್ನು ಕೇಳಿದ್ದೆ, ಬರೀ 7.5 ಲಕ್ಷ ರೂಪಾಯಿ ಮಾಡಿದ್ದೇವೆ, ಬಾರ್ಡರ್ ಏರಿಯಾ ಡೆವಲಪ್‌ಮೆಂಟ್ ಕೆಲಸ ಮಾಡಿದ್ದೇವೆ ಎನ್ನತಕ್ಕಂಥ ಉತ್ತರವನ್ನು ಕೊಟ್ಟಿದ್ದಾರೆ. ಅದು ಲೋಕೋಪಯೋಗಿ ಇಲಾಖೆಗೆ ಸೇರಿ ಸುಮಾರು 30 ವರ್ಷವಾಗಿದೆ. ಇವತ್ತಿನವರೆಗೂ ಒಂದು ಕೆಲಸವನ್ನು ಮಾಡಿಲ್ಲ. ನಮ್ಮ ತಾಲ್ಲೂಕಿನಲ್ಲಿ ರಸ್ತೆಗಳು ಬಹಳ ಹಾಳಾಗಿಹೋಗಿದೆ. ಅದನ್ನು ವ್ಯವಸ್ಥೆಗೆ ತರಲಿಕ್ಕೆ ಪ್ರಯತ್ನ ಮಾಡಲಿ ಎಂದು ಆಶಿಸಿ, ನನಗೆ ಇಷ್ಟು ಮಾತನಾಡಲು ಅವಕಾಶಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ.ಎಂ. ಇದಿನಬ್ಬ (ಉಲ್ಲಾಳ):- ಮಾನ್ಯ ಅಧ್ಯಕ್ಷರೇ, ಲೋಕೋಪಯೋಗಿ ಮತ್ತು ವಿದ್ಯುತ್ ಮತ್ತು ಸಣ್ಣ ನೀರಾವರಿ ಬೇಡಿಕೆಗಳ ಬಗ್ಗೆ ನನ್ನ ಕೆಲವು ಅನಿಸಿಕೆಗಳನ್ನು ಹೇಳಲಿಕ್ಕೆ ಅಪೇಕ್ಷಿಪಡುತಿದ್ದೇನೆ. ಏಕೆಂದರೆ ಸಮಯ ವಿಶೇಷ ಇಲ್ಲದ್ದರಿಂದ ನಾನು ವಿವರವಾಗಿ ಯಾವುದನ್ನೂ

ಹೇಳಲಿಕ್ಕೆ ಹೋಗುವುದಿಲ್ಲ. ಬರೀ ನನ್ನ ಕ್ಷೇತ್ರಕ್ಕೆ, ನನ್ನ ತಾಲ್ಲೂಕಿಗೆ ಸಂಬಂಧಪಟ್ಟ ಹಾಗೆ ಒಂದೆರಡು ವಿಷಯಗಳನ್ನು ಮಾತ್ರ ಬೇರೆ ಯಾವುದೇ ಸಂದರ್ಭ ಸಿಕ್ಕದೆ ಇರುವುದರಿಂದ ಈ ಸಂದರ್ಭದಲ್ಲಿ ಅದನ್ನು ಹೇಳಬೇಕೆಂದು ನನಗೆ ಅಪೇಕ್ಷೆ ಇದೆ. ಮುಖ್ಯವಾಗಿ ವಿದ್ಯುತ್ ವಿಚಾರದಲ್ಲಿ ಹೇಳುವುದಾದರೆ ನಮ್ಮ ಉಲ್ಲಾಳ ಮತ್ತು ಮಂಗಳೂರು ತಾಲ್ಲೂಕಿನಲ್ಲಿ ಬಹು ತೊಂದರೆಯಾಗಿದೆ. ಲೋ ವೋಲ್ಟೇಜ್ ಅಂತ ಹೇಳಿ ಮಿಣಿಮಿಣಿ ದೀಪ ಉರಿದ ಹಾಗೆ ಕೂಡ ವಿದ್ಯುತ್ ಉರಿಯುವುದಿಲ್ಲ. ಶಾಲೆಗೆ ಹೋಗುವ ಮಕ್ಕಳಿಗೆ ಓದಲಿಕ್ಕೆ ಸಾಧ್ಯವಿಲ್ಲ, ಏನಾದರೂ ಪತ್ರ ಬಂದರೆ ಅದನ್ನು ಓದಲಿಕ್ಕೆ ಸಾಧ್ಯವಿಲ್ಲ, ಏನಾದರೂ ಒಡವೆ ವಸ್ತುಗಳನ್ನು ನೋಡಲಿಕ್ಕೆ ಸಾಧ್ಯವಿಲ್ಲದ ರೀತಿಯಲ್ಲಿ ಯಾವ ರೀತಿಯಲ್ಲಿ ಮಿಣಿಮಿಣಿ ದೀಪದ ಬೆಳಕು ಉಂಟು ಅದೇ ರೀತಿಯಲ್ಲಿ ಕಾಣುತ್ತಾ ಉಂಟು. ಜನಗಳೆಲ್ಲಾ ಬಂದು ನಮ್ಮ ಹತ್ತಿರ ಆಗಾಗ ಬೇರೆ ಬೇರೆ ರೀತಿಯಲ್ಲಿ ಬೇಸರ ಪಡುವಾಗ ನಮಗೆ ತುಂಬ ದುಃಖವಾಗುತ್ತದೆ. ಆದ್ದರಿಂದ ನಾನು ಮಂತ್ರಿಗಳ ಹತ್ತಿರ ಅಧ್ಯಕ್ಷರ ಮೂಲಕ ಕೇಳಿಕೊಳ್ಳುವುದೇನೆಂದರೆ ಲೋ ವೋಲ್ಟೇಜ್ ಅನ್ನು ತಪ್ಪಿಸಿ ಆದಷ್ಟು ಈ ವಿದ್ಯುತ್ ಬೆಳಕು ಸರಿಯಾಗಿ ಕಾಣುವ ಹಾಗೆ, ಸರಿಯಾಗಿ ಬರುವ ಹಾಗೆ ನಮ್ಮ ಮಂಗಳೂರು ತಾಲ್ಲೂಕಿಗೆ ಅದೇ ರೀತಿಯಲ್ಲಿ ಉಲ್ಲಾಳ ಕ್ಷೇತ್ರಕ್ಕೆ ಸಹಾಯ ಮಾಡಬೇಕು. ಇದಕ್ಕೆ ಒಂದು ತೊಂದರೆ ಏನಾಗಿದೆ ಅಂದರೆ ಕೊಣಜೆಯಲ್ಲಿ ವಿಶ್ವವಿದ್ಯಾನಿಲಯ ಸ್ಥಾಪನೆಯಾಗಿದೆ. ಮಂಗಳಗಂಗೋತ್ರಿ ಸ್ಥಾಪನೆಯಾದ ಮೇಲೆ ಹೆಚ್ಚು ಜನರ ದೊಡ್ಡ ದೊಡ್ಡ ಮನುಷ್ಯರ ಕಾರುಗಳು ಬಸ್ಸುಗಳು ಹೋಗತಕ್ಕಂಥ ವ್ಯವಸ್ಥೆ ಅದು ಬಹಳ ದೊಡ್ಡ ಕೇಂದ್ರವಾಗಿದೆ. ಇವತ್ತು ಅಲ್ಲಿ ಒಂದು ಸಬ್‌ಸ್ಟೇಷನ್ ಮಾಡಿದ್ದಾರೆ. ಆ ಸಬ್‌ಸ್ಟೇಷನ್ ಸಂಪೂರ್ಣವಾಗಲಿಲ್ಲ ಅಂತ ಹೇಳುತ್ತಿದ್ದಾರೆ. ಅದಕ್ಕೆ ಜನರನ್ನು ಹಾಕಲಿಲ್ಲ. ಈಗ ಏನಾಗಿದೆ ಅಂದರೆ 8 ಕಿ.ಮೀ ದೂರದ ತೊಕ್ಕೊಟ್ಟಿನ ಕೆ.ಇ.ಬಿಯ ಆಫೀಸಿನಿಂದ ರಾತ್ರಿ ಏನಾದರೂ ದೀಪ ಹೋದರೆ ಅದನ್ನು ಸರಿಮಾಡುವಂತಹ ವ್ಯವಸ್ಥೆ ಇಲ್ಲದೆ ಬೆಳಗಿನವರೆಗೂ ಕತ್ತಲಾಗಿರುತ್ತದೆ. ಇಡೀ ಊರೇ ಕತ್ತಲಾಗಿರುತ್ತದೆ. ಅದಕ್ಕೆ ಅವರನ್ನು ಕೇಳಿದರೆ ಅವರು ನಮ್ಮ ಹತ್ತಿರ ಅದು ಇಲ್ಲ, ಇದು ಇಲ್ಲ ಅಂತ ಹೇಳುತ್ತಾರೆ. ಕೆಲವು ಶ್ರೀಮಂತರು ವಾಹನವನ್ನು ಕೊಟ್ಟು ರಾತ್ರಿ ಕರೆದುಕೊಂಡು ಹೋಗಿ ಮಾಡಿಸಿದ್ದು ಉಂಟು. ಈಗ ಒಂದು ಜೀಪನ್ನು ಕೊಟ್ಟಿದ್ದಾರೆಂದು ಹೇಳುತ್ತಾರೆ. ಆದ್ದರಿಂದ ನಾನು ಬಹಳ ಮುಖ್ಯವಾಗಿ ಮಂತ್ರಿಗಳ ಹತ್ತಿರ ನಾನು ನಿವೇದನೆ ಮಾಡಿಕೊಳ್ಳುವುದೇನೆಂದರೆ ಕೊಣಜೆಯ ಸಬ್‌ಸ್ಟೇಷನ್ನಿಗೆ ಒಬ್ಬ ಸಿಬ್ಬಂದಿಯನ್ನು ನೀವು ನೇಮಕ ಮಾಡಿಕೊಟ್ಟರೆ ಇಡೀ ಮಂಗಳೂರು ತಾಲ್ಲೂಕಿನ ಇಡೀ ಉಲ್ಲಾಳ ಕ್ಷೇತ್ರದ ಎಲ್ಲಾ ವಿದ್ಯುತ್ತಿನ ಸಮಸ್ಯೆ ನಿವಾರಣೆಯಾಗುತ್ತದೆ. ಇದನ್ನು ನಾವು ಎರಡು ವರ್ಷಗಳಿಂದ ಕೇಳುತ್ತಾ ಬಂದಿದ್ದೇವೆ. ಎರಡು ವರ್ಷಗಳಿಂದಲೂ ಅವರು ನಮಗೆ ಕೊಡಲಿಲ್ಲ. ಅಲ್ಲದೆ ಒಂದು ಟ್ರಾನ್ಸ್‌ಫಾರ್ಮರ್ ಅಲ್ಲಿ ಹಾಕಬೇಕೆಂದು ಹೇಳಿದ್ದಾರೆ. ಅದನ್ನು ಕೂಡ ಹಾಕುವಂತಹ ವ್ಯವಸ್ಥೆಯನ್ನು ಮಾಡಿದರೆ ನಮ್ಮ ಈ ಬಹಳ ದೊಡ್ಡ ವಿದ್ಯುತ್ತಿನ ತೊಂದರೆಯು ಹೋಗಲಿಕ್ಕೆ ಸಾಧ್ಯವಾಗುತ್ತದೆ. ಈಗ ಬಹಳ ಮುಖ್ಯವಾಗಿ 500 ಮೀಟರ್ ಇಲ್ಲ ಅಂತ ಹೇಳುತ್ತಿದ್ದಾರೆ. ಆದ್ದರಿಂದ ನಾನು ಅಧ್ಯಕ್ಷರ ಮುಖಾಂತರ ಮಂತ್ರಿಗಳನ್ನು ಕೇಳಿಕೊಳ್ಳುವುದೇನೆಂದರೆ, ಈ ಮೀಟರ್‌ಗಳನ್ನು ಕೂಡ ಕೊಡಿಸುವಂತೆ ವ್ಯವಸ್ಥೆ ಮಾಡಬೇಕು. ಕಾಲಕಾಲಕ್ಕೆ ಸೂಪರಿಂಡೆಂಟಿಂಗ್ ಇಂಜಿನಿಯರ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಪ್ರತಿಯೊಂದು ವಿಷಯವನ್ನು ತನಿಖೆ ಮಾಡುತ್ತಿರಬೇಕು. ಕಂಬ ಕೇಳಿದರೆ ತಂತಿ ಇಲ್ಲ ಅನ್ನುತ್ತಾರೆ. ತಂತಿ ಕೇಳಿದರೆ ಕಂಬ ಇಲ್ಲ ಅನ್ನುತ್ತಾರೆ. ನನಗೆ ಹಳೆಯ ಕಥೆ ನೆನಪು ಆಗುತ್ತದೆ.

> "ಬಾಳು ಕೊಟ್ಟು ಗಡಿಗೆ ತನ್ನ ತೈಯಿ ತಕ್ಕ ತೈ
> ಗಡಿಗೆ ಕೊಟ್ಟು ಬಾಳು ತಂದೆ ತೈಯಿ ತಕ್ಕ ತೈ
> ತೈಯಿ ತಕ್ಕತೈ ತೈಯಿತಕ್ಕ ತೈಯಿ ಅಂತ"

ಕಂಬ ಇದ್ದರೆ ತಂತಿ ಇಲ್ಲ, ತಂತಿ ಇದ್ದರೆ ಕಂಬ ಇಲ್ಲ, ಕಂಬ ತಂತಿ ಎರಡು ಇದ್ದರೆ ಮಾಡುವವನು

ಇಲ್ಲ, ಅಂತ ಹೇಳುವಂತಹ ರೀತಿ ಅಲ್ಲಿ ನಡೆಯುತ್ತಿದೆ. ಇದು ಎಲ್ಲಾ ಅಧಿಕಾರಿಗಳ ತೊಂದರೆ. ಒಬ್ಬ ಅಧಿಕಾರಿಗೂ ಮತ್ತೊಬ್ಬ ಅಧಿಕಾರಿಗೂ ಆಗುವುದಿಲ್ಲ. ಮತ್ತೊಬ್ಬ ಅಧಿಕಾರಿ ಅವನಿಗೆ ಸರಿಯಾಗಿಲ್ಲ. ಆದ್ದರಿಂದ ಇವತ್ತು ಆ ಒಂದು ಇಲಾಖೆಯಲ್ಲಿ ಅಲ್ಲ, ಎಲ್ಲಾ ಇಲಾಖೆಯಲ್ಲಿ ನಮ್ಮ ಸರ್ಕಾರ ಮಾಡತಕ್ಕಂಥ ಕೆಲಸ ಅತ್ಯಂತ ಹತ್ತಿರವಾದುದು. ಅದು ತಲೆಗೆ ಹಾಕಿದ್ದು ಕಾಲಿಗೆ ಬರಬೇಕಲ್ಲಾ, ಈ ಅಧಿಕಾರಿಗಳ ಹತ್ತಿರ ಬಂದು ಕಡೆಗೆ ಬರುವಾಗ ಸರಿಯಾಗಿ ಬರುವುದಿಲ್ಲ. ಅದನ್ನು ಸರಿಯಾಗಿ ಅವರು ಮಾಡುವುದಿಲ್ಲ. ಒಳ್ಳೆಯ ಶಾಸನವನ್ನು ನಮ್ಮ ಸರ್ಕಾರ ಕೊಡುತ್ತದೆ. ಆದರೆ ಅಧಿಕಾರಿಗಳು ಮಾಡುವುದಿಲ್ಲ. ಅಧಿಕಾರಿಗಳಿಗೆ ಎಲ್ಲಿ ಸಿಗುತ್ತದೆ ? ಬೀಸುವ ವಿಧವೆಗೆ ಮಿಕ್ಕದ್ದು ಲಾಭ ಅಂತ ಗಾದೆಯುಂಟು. ಅವಳಿಗೆ ಏನೂ ಇಲ್ಲ, ಬೀಸುವ ವಿಧವೆಗೆ ಕಡೆಯುವರೆಗೂ ರಾಗಿಯು ಹಿಟ್ಟೇ ಸಿಗುವುದಿಲ್ಲ. ಅದೇ ರೀತಿಯಲ್ಲಿ ಈ ಕೆಲಸ ಅಲ್ಲದೆ ಬೇರೆ ಕೆಲಸ ನಡೆಯುತ್ತಿಲ್ಲ. ಆದ್ದರಿಂದ ಸೂಪರಿಂಟೆಂಡೆಂಟಿಂಗ್ ಇಂಜಿನಿಯರ್, ಎಕ್ಸಿಕ್ಯೂಟಿವ್ ಇಂಜಿನಿಯರ್ ಕಾಲಕಾಲಕ್ಕೆ ತನಿಖೆ ಮಾಡುವಂತಹ ವ್ಯವಸ್ಥೆ ವಿದ್ಯುತ್ ಇಲಾಖೆಯಲ್ಲಿ ಮಾಡಬೇಕು. ಮೀಟರ್‌ಗಳನ್ನು ಕೊಡಿಸಬೇಕು. ಅಲ್ಲಿ ಸಬ್‌ಸ್ಟೇಷನ್‌ಗೆ ಒಬ್ಬರು ಸಿಬ್ಬಂದಿಯನ್ನು ನೇಮಿಸಿದರೆ ನಮ್ಮ ದೊಡ್ಡ ಸಮಸ್ಯೆ ಹೋಗುತ್ತದೆ.

ಇನ್ನು ನನಗೆ ಬಹಳ ಮುಖ್ಯವಾದುದು ಸಣ್ಣ ನೀರಾವರಿ. ಇದರ ಬಗ್ಗೆ ಒಂದೆರಡು ಮಾತನ್ನು ಹೇಳುತ್ತೇನೆ. ನಾವು ಕರಾವಳಿಯಲ್ಲಿ ಇರತಕ್ಕಂಥ ಜನ. ಕರಾವಳಿಯ ಪ್ರದೇಶ ನಮಗೆ ಇಲ್ಲ. ಈಗ ಏನಾಗಿದೆ ಅಂದರೆ ಪ್ರಕೃತಿ ವಿಕೋಪದಿಂದ ಸಮುದ್ರ ಒಳಗೆ ಬರುತ್ತಾ ಇರುವುದು ಉಂಟು. ಎರಡು ಫರ್ಲಾಂಗ್ ದೂರ ಇರುವಂತಹ ಸಮುದ್ರ ಹತ್ತಿರ ಬಂದು ಉಳ್ಳಾಳದ ಶೇಕಡ 15–20 ಭಾಗ ಮುಳುಗಿಹೋಗಿದೆ. ಅನೇಕ ಮನೆಗಳು, ಅನೇಕ ಶೆಡ್ಡುಗಳು, ಅನೇಕ ಕಾರ್ಖಾನೆಗಳು, ಎಲ್ಲಾ ಹಾನಿಯಾಗಿ ನಾಶವಾಗಿದೆ.

ಇವತ್ತು ಅದಕ್ಕೆ ತಡೆಗೋಡೆ ಮಾಡಬೇಕೆಂದು ನಿಶ್ಚಯ ಮಾಡಿ, ಅಲ್ಲಿಗೆ ಅನೇಕ ಜನ ಮಂತ್ರಿಗಳನ್ನು ಕರೆದುಕೊಂಡು ಹೋಗಿದ್ದೇವೆ. ಅನೇಕ ಜನ ಇಂಜಿನಿಯರ್‌ಗಳನ್ನು ಮತ್ತು ಕಾರ್ಯದರ್ಶಿಗಳನ್ನು ಕರೆದುಕೊಂಡು ಹೋಗಿದ್ದೇವೆ. 7–8ಸಲ ಕರೆದುಕೊಂಡು ಹೋಗಿ ತೋರಿಸಿದ್ದೇವೆ. ಆಗ ಹಿಂದಿನ ಸಣ್ಣ ನೀರಾವರಿ ಮಂತ್ರಿಗಳಾದ ಶ್ರೀ ಮಲ್ಲಿಕಾರ್ಜುನ ಪ್ರಸನ್ನರವರು ಅಲ್ಲಿಗೆ ಬಂದಿದ್ದರು. ಸಮುದ್ರದ ಭೋರ್ಗರೆಯುವ ಅಲೆಗಳ ಶಬ್ದವನ್ನು ಕೇಳಿ ನಾನು ಇಲ್ಲಿ ಹತ್ತು ನಿಮಿಷ ವಾಸ ಮಾಡುವುದಕ್ಕೆ ಆಗುವುದಿಲ್ಲ, ಇಲ್ಲಿ ಜನರು ಹೇಗೆ ಈ ಮೊರೆತದಲ್ಲಿ ಇದ್ದಾರೆ ಎಂದು ಅವರ ಬಾಯಲ್ಲೇ ಹೇಳಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಸಮುದ್ರದ ಕೊರೆತಕ್ಕೆ ತಡೆಗೋಡೆ ಮಾಡಬೇಕೆಂದು ಹೇಳಿದ್ದಾರೆ. ಎರಡು ಸಾವಿರ ಮೀಟರ್ ಏನಿದೆ. ಅದರಲ್ಲಿ ಆಗಿರುವಂತಹ ಮೋಸ ನಮ್ಮ ಮಂತ್ರಿಗಳಿಗೆ ಅಧ್ಯಕ್ಷರ ಮುಖಾಂತರ ಹೇಳುತ್ತಿದ್ದೇನೆ. ಇದರಲ್ಲಿ ಬಹಳ ಮೋಸವಾಗಿದೆ. ಮೊನ್ನೆ ತಾವು ಒಂದು ಪ್ರಶ್ನೆಗೆ ಉತ್ತರ ಕೊಟ್ಟಿದ್ದೀರಿ. 450 ಮೀಟರ್ ಆಗಿದೆ. 450 ಮೀಟರ್ ಅರ್ಧದಲ್ಲಿದೆ, 800 ಮೀಟರ್ ತೊಡಗಿದೆ, ಎಂದು ಆದರೆ ಇದು ಸರಿಯಲ್ಲ, ಇದರಲ್ಲಿ 450 ಮೀಟರ್ ಆಗಿದ್ದು ನಿಜ, ಅದೂ ಸಹ ಸರಿಯಾದ ರೀತಿಯಲ್ಲಿ ಆಗಲಿಲ್ಲ. ಸುಮಾರು ಎರಡು ಅಡಿ ಅಗೆದು ಬರಿ ಹಾಕಿ, ಅದರಲ್ಲಿ ಇಂತಿಷ್ಟು ತೂಕದ ಕಲ್ಲು, ಇಂತಿಷ್ಟು ಎತ್ತರದ ಕಲ್ಲುಗಳನ್ನು ಹಾಕಿದರೆ ಮಾತ್ರ ಉಳಿಯುತ್ತದೆ. ಆದರೆ ಇದು ಏನಾಗಿದೆ ಎಂದರೆ ಕಲ್ಲುಗಳನ್ನು ತರುತ್ತಾರೆ ರಾಶಿ ಹಾಕುತ್ತಾರೆ. ಸಮುದ್ರ ಕೊರೆತ ಬರುತ್ತದೆ. ಆ ಕಲ್ಲುಗಳನ್ನು ತೆಗೆದುಕೊಂಡು ಹೋಗುತ್ತದೆ. ಪುನಃ ಕಲ್ಲುಗಳನ್ನು ತರುತ್ತಾರೆ ರಾಶಿ ಹಾಕುತ್ತಾರೆ. ಸಮುದ್ರಕ್ಕೆ ಹಾಕಿದ ಕಲ್ಲುಗಳು ಗುಡ್ಡದತ್ತ ಮಣ್ಣು ಎಂದು ಹೇಳುವ ಹಾಗೆ ಈ ರೀತಿಯಾಗಿ ಗುತ್ತಿಗೆದಾರರಿಗೆ ದುಡ್ಡು ಆಗುತ್ತದೆ. ಸರಿಯಾದ ರೀತಿಯಲ್ಲಿ ಅಲ್ಲಿ ತಡೆಗೋಡೆಯಾಗಲಿಲ್ಲ. ಸಣ ಹಿತ್ತಲಿನಲ್ಲಿ ಅದ ರೂಪದಲ್ಲಿ ತಡೆಗೋಡೆಯಾಗಲಿಲ್ಲ. ನನ್ನ ಮನೆಯಿಂದ ಒಂದು ಫರ್ಲಾಂಗ್ ದೂರದಲ್ಲಿರುವಂಥಾದ್ದು ಅದನ್ನು ನಾನು ದಿನಾ ನೋಡುತ್ತಿದ್ದೇನೆ. ನನ್ನ ಮನೆಗೆ 200–300 ಜನರು

ಪ್ರತಿದಿನ ಬಂದು ಬಹಳ ದೊಡ್ಡ ತೊಂದರೆ ಕೊಡುತ್ತಿದ್ದಾರೆ. ಬೇಸರ ಮಾಡುತ್ತಿದ್ದಾರೆ. ಇಷ್ಟೆಲ್ಲಾ ಮಾಡಿ, ಇಷ್ಟೆಲ್ಲಾ ಕಾರ್ಯದರ್ಶಿಗಳು ಬಂದು ಇಷ್ಟೆಲ್ಲಾ ಇಂಜಿನಿಯರ್‌ಗಳು ಬಂದು, ಮಂತ್ರಿಗಳು ಬಂದು ಇಷ್ಟೆಲ್ಲಾ ನೋಡಿ, ಇಷ್ಟೆಲ್ಲಾ ಮಾಡಿ, ಈ ರೀತಿಯಾಗಿದೆ. ಆದುದರಿಂದ ಮಂತ್ರಿಗಳಿಗೆ ನಾನು ಹೇಳುವಂಥಾದ್ದು ಏನೆಂದರೆ ಇದಕ್ಕೆ ಇಂತಿಷ್ಟೇ ತೂಕದ ಕಲ್ಲು, ಇಂತಿಷ್ಟೇ ಎತ್ತರದ ಕಲ್ಲು, ಮತ್ತು ಅದಕ್ಕೆ ಸರಿಯಾಗಿ ಬಲೆಯನ್ನು ಹಾಕಿ ಕಟ್ಟಬೇಕು ಎಂದು ಹೇಳುವಂತಹ ನಿಬಂಧನೆಯಾಗಬೇಕು. 450 ಮೀಟರ್‌ಗೆ ಒಬ್ಬ ದೊಡ್ಡ ಗುತ್ತಿಗೆದಾರನಿಗೆ ರಿಸರ್ವ್ ಮಾಡಿದ್ದಾರೆ. ಸಣ್ಣ ಸಣ್ಣ ಗುತ್ತಿಗೆದಾರರು ಹೇಳುತ್ತಾರೆ ನಾವು ಬೇಗನೆ ಮಾಡಿಕೊಡುತ್ತೇವೆ ಎಂದು, ಆದರೆ ಅದು ಕೊಡುವುದಿಲ್ಲ ಮತ್ತು ಅಧಿಕಾರಿಗಳು ಬಹಳ ನಿಧಾನಗತಿಯಿಂದ ಅಲ್ಲಿ ಕೆಲಸ ಮಾಡುತ್ತಿದ್ದಾರೆ. ನಾನು ಖಂಡಿತವಾಗಿ ಹೇಳಬೇಕಾಗುತ್ತದೆ. ಏಕೆಂದರೆ ಮಳೆಗಾಲದಲ್ಲಿ ಮಳೆ ಬಂದು ಇಡೀ ಉಳ್ಳಾಲದ ಅರ್ಧ ಭಾಗ ಮುಳುಗಿಹೋಗುತ್ತದೆ. ಆದುದರಿಂದ ಮಂತ್ರಿಗಳು ಚೌಧರಿಯವರು ಬಂದಿದ್ದಾರೆ, ಬಹಳ ಉತ್ಸಾಹದಲ್ಲಿದ್ದಾರೆ, ಈ ಅಧಿವೇಶನ ಮುಗಿದ ಮೇಲೆ, ಅಲ್ಲಿಗೆ ಬರುತ್ತೇನೆ ಎಂದು ಹೇಳಿದ್ದಾರೆ. ಬಹಳ ಸಂತೋಷ. ತಾವು ಬಂದು ನೋಡಿದರೆ ನಾವು ಪ್ರಾಣ ಸಂಕಟದಲ್ಲಿರುವಂತಹ ಪರಿಸ್ಥಿತಿ ಗೊತ್ತಾಗುತ್ತದೆ. ಮೊನ್ನೆ ಒಂದು ಕೋಟಿ ಮೂವತ್ತು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ ಎಂದು ಹೇಳಿದ್ದಾರೆ. ಈಗ ಖರ್ಚಾಗಿರುವುದು ಐವತ್ತು ಲಕ್ಷ ರೂಪಾಯಿಗಳು ಕೂಡ ಖರ್ಚು ಆಗಿರಲಿಕ್ಕಿಲ್ಲ. ಎಲ್ಲಾ ಸಮುದ್ರವೇ ತಿಂದಿದೆ. ಕಲ್ಲುಗಳನ್ನು ಸಮುದ್ರವೇ ಹೊತ್ತುಕೊಂಡು ಹೋಗಿದೆ. ಆದುದರಿಂದ ಈ ಬಗ್ಗೆ ಬಹಳವಾಗಿ ಜಾಗ್ರತೆಯಾಗಿರಬೇಕು. ಅಲ್ಲಿನ ಇಂಜಿನಿಯರ್‌ಗಳಿಗೆ ಅಸಿಸ್ಟೆಂಟ್ ಇಂಜಿನಿಯರ್‌ಗೆ ಸರಿಯಾದಂತಹ ಹೇಳಿಕೆ ಇಲ್ಲದಿದ್ದರೆ ಯಾವ ಕೆಲಸವೂ ಅಗುವುದಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಪಿ.ಡಬ್ಲ್ಯೂ.ಡಿ. ಮಂತ್ರಿಗಳಿಗೆ ನಾನು ಹೆಚ್ಚು ಹೇಳಬೇಕಾದ್ದಿಲ್ಲ. ಅವರು ಬಹಳ ಬುದ್ದಿವಂತರು, ಅನುಭವಿಗಳು, ಆಗಿದ್ದಾರೆ. ಪ್ರತಿ ಕ್ಷೇತ್ರಕ್ಕೂ 40 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಹಿಂದಿನ ಮಂತ್ರಿಗಳು ಹೇಳಿಬಿಟ್ಟಿದ್ದಾರೆ. ಅದು ಪತ್ರಿಕೆಗಳಲ್ಲೂ ಬಂದಿದೆ. ಇದು ನನ್ನ ಕುತ್ತಿಗೆಗೆ ಬಂದಿದೆ, ಜನರು ಕೇಳುತ್ತಾರೆ ನಿಮ್ಮ ಹತ್ತಿರ 40 ಲಕ್ಷ ರೂಪಾಯಿಗಳು ಇದೆಯಲ್ಲಾ ಮಾಡಿಸಿ ಎಂದು ಕೇಳುತ್ತಿದ್ದಾರೆ. ಅದು ಬಂದಿಲ್ಲ, ಬರಬೇಕು ಎಂದು ಹೇಳುತ್ತಿದ್ದೇನೆ. ಆದ್ದರಿಂದ ನಮ್ಮ ಕ್ಷೇತ್ರವನ್ನು ನಿಮ್ಮ ಕೈಯಲ್ಲಿ ಕೊಟ್ಟಿದ್ದೇನೆ. ಆದ್ಯತೆಯ ಮೇಲೆ ಮಾಡಿಸುತ್ತೇನೆ ಎಂದು ನೀವು ಹೇಳಿದ್ದೀರಿ. ನಮಗೆ ಅದಷ್ಟು ಹಣವನ್ನು ಬಿಡುಗಡೆ ಮಾಡಬೇಕು. ಇನ್ನು ನಮ್ಮ ರಸ್ತೆಗಳ ವಿಚಾರವನ್ನು ಹೇಳಬೇಕಾದ್ದಿಲ್ಲ. ಹೊಂಡಗಳು, ಅದರ ಅವಸ್ಥೆ, ಅದರ ಕಷ್ಟ ಹೇಳತೀರದು. ಜಿಲ್ಲಾ ಪರಿಷತ್ತಿನ ಕೈಯಲ್ಲಿ ಇರುವಂತಹ ರಸ್ತೆಗಳು ಯಾವ ರೀತಿ ಉಂಟು ಎಂದು ಹೇಳುವುದಕ್ಕೆ ಸಾಧ್ಯವೇ ಇಲ್ಲ. ಜಿಲ್ಲಾಪರಿಷತ್ತಿಗೆ ಕೊಟ್ಟಿರುವ ಹಣವನ್ನು ರಸ್ತೆಗಳ ಕೆಲಸಕ್ಕೆ ಉಪಯೋಗ ಮಾಡಲೇ ಇಲ್ಲ, ಅವರು ಬೇರೆ ಬೇರೆ ರೂಪಕ್ಕೆ ತಿರುಗಿಸಿ ಖರ್ಚು ಮಾಡಿದ್ದಾರೆ. ರಸ್ತೆಗಳಿಗೆ ಹಾಕಿಲ್ಲ, ಹಾಕಿದ್ದರೆ ರಸ್ತೆಗಳು ಈ ರೂಪಕ್ಕೆ ಬರುತ್ತಿರಲಿಲ್ಲ. ಆದುದರಿಂದ ಲೋಕೋಪಯೋಗಿ ಇಲಾಖೆಗೆ ಬಹಳ ಕಷ್ಟ ಒದಗಿದೆ ನಿಜ. ಶ್ರೀ ಕೆ.ಹೆಚ್. ರಂಗನಾಥ್‌ರವರು ಅನುಭವಿ ಮಂತ್ರಿಗಳು ಖಂಡಿತವಾಗಿ ಈ ಒಂದು ಸಮಸ್ಯೆಯನ್ನು ಬಿಡಿಸಿ ನಮ್ಮನ್ನು ಪಾರು ಮಾಡುತ್ತಾರೆ ಎಂದು ನಾನು ನಂಬಿದ್ದೇನೆ. ಉಪ್ಪಿನಂಗಡಿಯ ನೇತ್ರಾವತಿಯ ಅಡಿಯ ಭಾಗ ಬಿರುಕುಬಿಟ್ಟಿದೆ. ಇದರ ಬಗ್ಗೆ ಅನೇಕ ಪತ್ರಿಕೆಗಳಲ್ಲಿ ಬಂದಿದೆ. ತಾವು ಅದನ್ನು ನೋಡಬೇಕು ಮತ್ತು ಅದಕ್ಕೆ ಸರಿಯಾದಂಥ ವ್ಯವಸ್ಥೆ ಮಾಡಬೇಕು. ಪಾಣೆಮಂಗಳೂರು ಸೇತುವೆ. ಅದು ಇವತ್ತೊ ನಾಳೆಯೊ ಬಿದ್ದು ಹೋಗಬಹುದು ಎಂದು ಹೇಳುತ್ತಿದ್ದೇನೆ. ಆದುದರಿಂದ ಅಲ್ಲಿಗೂ ಒಂದು ಬದಲಿ ವ್ಯವಸ್ಥೆಯಾಗಬೇಕು. ಅದನ್ನು ಕೂಡ ತಾವು ನೋಡಿ ಜನರಿಗೆ ಬರತಕ್ಕಂಥ ಆಪತ್ತನ್ನು ತಪ್ಪಿಸಬೇಕು. ಮಾನ್ಯ ಸಣ್ಣ ನೀರಾವರಿ ಮಂತ್ರಿಗಳೇ, ಅಲ್ಲಿನ ಕಷ್ಟವನ್ನು ಹೇಳಿ ಮುಗಿಸುವಂಥದ್ದು ಅಲ್ಲ, ಪದ್ಯದಲ್ಲಿ ಹೇಳುವುದಾದರೆ.

ದಿನ ದಿನವೂ ಹೆಚ್ಚಾಗುತ್ತಿದೆ ಕಡಲಿನ ಕೊರತ
ಅನುದಿನವೂ ಅಲೆಗಳ ರುದ್ರ ತಾಂಡವ ಹೊಡೆತ
ಉಳ್ಳಾಲದ ಕರಾವಳಿ ಹೋಗುತ್ತಿದೆ ಕರಗುತ
ಕರಾವಳಿ ನಿವಾಸಿಗಳ ಮನದಲ್ಲಿ ದಿನವೂ ಮೊರೆತ

ಇದಕ್ಕಾಗಿ ತಡೆಗೋಡೆ ಕಾರ್ಯದಲಿ ಬಂತು
ಇದರಲ್ಲಿ ಆರಂಭವಾಯ್ತು ಅಧಿಕಾರಿಗಳ ಮಸಲತ್ತು
ಗುತ್ತಿಗೆದಾರರ ಸ್ವೇಚ್ಛೆಯ ಕಸರತ್ತು
ಇದರಿಂದ ಕರಾವಳಿ ಜನರಿಗೆ ಭಾರೀ ವಿಪತ್ತು

ತುರ್ತಾಗಿ ತಡೆಗೋಡೆ ನಿರ್ಮಿಸಿರಿ
ನಿಧಾನಗತಿಯನ್ನು ನಿಲ್ಲಿಸಿರಿ
ಗಟ್ಟಿಮುಟ್ಟಿನ ತಡೆಗೋಡೆ ಸ್ಥಾಪಿಸಿರಿ

ಇದು ಬೇಡಿಕೆ ಸಣ್ಣ ನೀರಾವರಿ
ಇದರ ಈಗಿನ ಸಚಿವರು ಮಾನ್ಯ ಚೌಧುರಿ
ತಡೆಗೋಡೆ ಶೀಘ್ರ ನಿರ್ಮಿಸಿರಿ ಭರಾಭರಿ
ನೀಗಿಸಿ ಉಳ್ಳಾಲದ ಜನರ ತರಾತುರಿ....

ಎಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಐ.ಎಂ. ಶೇರಶ್ಯಾಳ್ (ಅಥಣಿ):– ಮಾನ್ಯ ಸಭಾಧ್ಯಕ್ಷರೇ, ವೇಳೆ ಇಲ್ಲದ ಕಾರಣ ನನ್ನ ಕ್ಷೇತ್ರಕ್ಕೆ ಸಂಬಂಧಿಸಿದ ಒಂದೆರಡು ಸಂಗತಿಗಳನ್ನು ಸರ್ಕಾರದ ಗಮನಕ್ಕೆ ತರಲು ಪ್ರಯತ್ನಮಾಡುತ್ತಿದ್ದೇನೆ. ಅಥಣಿ ಮತಕ್ಷೇತ್ರ ಇದು ಮಹಾರಾಷ್ಟ್ರದ ಗಡಿಗೆ ಹೊಂದಿದಂತಹ ಪ್ರದೇಶ. ಇದು ಯಾವಾಗಲೂ ಬರಗಾಲಕ್ಕೆ ತುತ್ತಾದಂತಹ ಪ್ರದೇಶ. ಹಾಗೂ ಇದು ರಾಜಧಾನಿಯಿಂದ 7–8 ನೂರು ಕಿಲೋ ಮೀಟರ್ ದೂರ ಇರುವುದರಿಂದ ಇದು ಬಹಳಷ್ಟು ಜನ ಮಂತ್ರಿಗಳಾಗಲಿ, ಅಧಿಕಾರಿಗಳಾಗಲಿ ನೋಡಿರದಂತಹ ಪ್ರದೇಶ. ಅಲ್ಲಿ ನೀರಾವರಿಯ ಸೌಕರ್ಯಗಳು ಇರುವುದಿಲ್ಲ. ಆದುದರಿಂದ ಎರಡು ಯೋಜನೆಗಳನ್ನು ನಮ್ಮ ಬೃಹತ್ ನೀರಾವರಿ ಮಂತ್ರಿಗಳ ಗಮನಕ್ಕೆ ತರಲು ಪ್ರಯತ್ನಿಸುತ್ತಿದ್ದೇನೆ. ನಮ್ಮ ಗಡಿಗೆ ಹೊಂದಿದಂತೆ ಮಹಾರಾಷ್ಟ್ರ ಸರ್ಕಾರದವರ ಹತ್ತಿರ ಮಾತನಾಡಿ ನಮಗೂ ಒಂದು ಕಾಲುವೆಯನ್ನು ಮಹಾರಾಷ್ಟ್ರದವರ ಕೃಷ್ಣಾ ನದಿಗೆ ತಾಕಾರಿ ಎಂಬಲ್ಲಿ ತಾಕಾರಿ ಯೋಜನೆಯನ್ನು ಕೈಗೆತ್ತಿಕೊಂಡಿದ್ದಾರೆ. ಆ ತಾಕಾರಿ ಯೋಜನೆಯಿಂದ ಮಹಾರಾಷ್ಟ್ರದವರು 2–3 ತಾಲ್ಲೂಕುಗಳಿಗೆ ನೀರಾವರಿ ಯೋಜನೆಗಳನ್ನು (ಮೀರಜ್, ತಾಸಗಾವ್, ಸಾಂಗ್ಲಿ) ಮಾಡಿಕೊಂಡಿದ್ದಾರೆ. ಅದು ನಮ್ಮ ಗಡಿಗೆ ಹೊಂದಿರುವುದರಿಂದ ನಮ್ಮ ಸರ್ಕಾರದವರು ಮಹಾರಾಷ್ಟ್ರ ಸರ್ಕಾರದವರ ಹತ್ತಿರ ಮಾತನಾಡಿ ನಮಗೂ ಒಂದು ಕಾಲುವೆಯನ್ನು ಮಹಾರಾಷ್ಟ್ರದವರ ಸರ್ಕಾರದಿಂದ ಪಡೆದುಕೊಂಡಿದ್ದಾದರೆ ನಮ್ಮ ಅಥಣಿ ತಾಲ್ಲೂಕಿನ ಸುಮಾರು 20 ಗ್ರಾಮಗಳಿಗೆ 50 ಸಾವಿರ ಹೆಕ್ಟೇರ್‌ನಷ್ಟು ನೀರಾವರಿಯಾಗುತ್ತದೆ. ಅದಕ್ಕೆ ಈ ದಿಸೆಯಲ್ಲಿ 1989ರಲ್ಲಿ ನಾನು ಆರಿಸಿ [illegible]ದನಂತರ ಈ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಆದರೆ ಈ ಸರ್ಕಾರದವರು ಕಾಳಜಿ [illegible]ತು ಮಹಾರಾಷ್ಟ್ರ ಸರ್ಕಾರದವರ ಹತ್ತಿರ ಪತ್ರವ್ಯವಹಾರ ಮಾಡಿ, ಈ ತಾಕಾರಿ ಯೋ[illegible] ಅಥಣಿ ತಾಲ್ಲೂಕಿನ ಗಡಿಗೆ ಹೊಂದಿದಂತೆ ತಯಾರಾಗುತ್ತದೆ, ಅದರಲ್ಲಿ ಒಂದ[illegible] ತೆಗೆದುಕೊಟ್ಟರೆ, ಆ ಅಥಣಿಯ ತಾಲ್ಲೂಕಿನ ಜನ ಏನು ಬರಗಾಲ ಬವಣೆಯಿಂದ [illegible] ಅವರ ಹಾರೈಕೆ, ಆಶೀರ್ವಾದವನ್ನು ತಾವು ಪಡೆದುಕೊಳ್ಳಬೇಕು ಎಂದು ನಾನು [illegible]

ಬೇಡಿಕೊಳ್ಳುತ್ತೇನೆ. ಈ ದಿಸೆಯಲ್ಲಿ ಅನೇಕ ಪತ್ರಗಳನ್ನು ನಾನು ಎಲ್ಲಾ ನೀರಾವರಿ ಮಂತ್ರಿಗಳಿಗೆ ಮತ್ತು ಮಾನ್ಯ ಮುಖ್ಯಮಂತ್ರಿಗಳಿಗೂ ಬರೆದದ್ದು ಆಯಿತು. ಆದರೆ ಮಹಾರಾಷ್ಟ್ರ ಸರ್ಕಾರದಿಂದ ಕೂಡ ಏನೂ ಪ್ರಯೋಜನವಾಗಿಲ್ಲ. ಆದುದರಿಂದ ದಯಮಾಡಿ ಆ ಯೋಜನೆಯ ಬಗ್ಗೆ ಮಹಾರಾಷ್ಟ್ರದ ಮುಖ್ಯಮಂತ್ರಿಗಳ ಸಂಗಡ ಮಾತನಾಡಿ ಆ ಅಥಣಿ ಭಾಗಕ್ಕೆ ತಾಕಾರಿ ಯೋಜನೆಯ ಸದುಪಯೋಗವನ್ನು ಮಾಡಿಕೊಡಬೇಕು ಎಂದು ನಾನು ಮತ್ತೊಮ್ಮೆ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ಅದರಂತೆ ನಮ್ಮ ಅಥಣಿ ತಾಲ್ಲೂಕಿಗೆ ಉಪಯೋಗ ಬರುವಂತಹ ಮತ್ತೊಂದು ಯೋಜನೆ ಎಂದರೆ ಹಿಪ್ಪರಿಗೆ ಯೋಜನೆ.

(ಮಾನ್ಯ ಬಿ.ಎಂ. ಇದಿನಬ್ಬನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಈ ಹಿಪ್ಪರಿಗಿ ಯೋಜನೆ 1970ನೇ ಇಸವಿಯಲ್ಲಿ ಪ್ರಾರಂಭವಾಗಿ, ಸುಮಾರು ಇದು 30 ವರ್ಷಗಳಾಯಿತು. ಇದರ ಮೊದಲಿನ ಎಸ್ಟಿಮೇಟ್ ವೆಚ್ಚ ಎಂದರೆ 21 ಕೋಟಿ ರೂಪಾಯಿಗಳು. ಆದರೆ ಈ ಯೋಜನೆಯ ವೆಚ್ಚ ಸುಮಾರು 300 ಕೋಟಿ ರೂಪಾಯಿಗಳಾಗಿವೆ. ಅದಕ್ಕೆ ನಮ್ಮ ಸರ್ಕಾರದವರು ಪಗಾರದ ಸಲುವಾಗಿ 40-50 ಲಕ್ಷ ಬಿಡುಗಡೆ ಮಾಡುತ್ತಾರೆ. ಆದರೆ ಪಗಾರ ಆಗುತ್ತದೆ, ಕೆಲಸ ಕಾರ್ಯಗಳು ಏನೂ ಪ್ರಗತಿಯಾಗಿಲ್ಲ. ಹೋದವರ್ಷ ಇದಕ್ಕೆ 2-3 ಕೋಟಿ ರೂಪಾಯಿ ಕೊಟ್ಟಿದ್ದರು. ಆದರೆ ಚೀಫ್ ಇಂಜಿನಿಯರ್ ಮತ್ತು ಎಕ್ಸಿಕ್ಯೂಟಿವ್ ಇಂಜಿನಿಯರ್ ಸಹಕಾರ ಇಲ್ಲದ ಕಾರಣ ಈ ಕೆಲಸ ಏನೂ ಪ್ರಗತಿಯಾಗಿಲ್ಲ. 3 ಕೋಟಿ ರೂಪಾಯಿ ಕೊಟ್ಟಿದ್ದರಲ್ಲಿ ಈಗ ಸುಮಾರು 1 ಕೋಟಿ ರೂಪಾಯಿ ಖರ್ಚು ಮಾಡಿದೆ, 2 ಕೋಟಿ ರೂಪಾಯಿ ಖರ್ಚಾಗಿಲ್ಲ. ಆದರೆ ನಮ್ಮ ಯೋಜನೆಗಳಿಗೆ ಕೊಟ್ಟು ಬಿಡುವುದು. ಈ ರೀತಿಯೆಲ್ಲಾ ನಡೆಯುತ್ತಿದೆ. ಅದಕ್ಕೆ ಮಾನ್ಯ ಬೃಹತ್ ನೀರಾವರಿ ಮಂತ್ರಿಗಳಲ್ಲಿ ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುವುದೇನೆಂದರೆ ತಾವೇ ಪರ್ಸನಲ್ಲಾಗಿ ಇದರ ಬಗ್ಗೆ ಲಕ್ಷ್ಯ ವಹಿಸಿ, ಆ ಕೆಲಸಕಾರ್ಯಗಳು ಏನು ಸ್ಥಗಿತವಾಗಿವೆ ಮತ್ತು 2 ಕೋಟಿ ರೂಪಾಯಿಗಳು ಏಕೆ ಖರ್ಚುಮಾಡಿಲ್ಲ ಅದನ್ನು ಖುದ್ದಾಗಿ ಪರಿಶೀಲನೆ ನಡೆಸಿ, ಆ ಯೋಜನೆಯು ತೀವ್ರಗತಿಯಿಂದ ಪೂರ್ಣಗೊಳ್ಳುವ ಸಲುವಾಗಿ ಸಹಕಾರ ಮಾಡಬೇಕು ಎಂದು ನನ್ನ ವಿನಂತಿ ಇದೆ.

3.50 ಪಿಎಂ

ಮತ್ತೊಂದು ಈ ನೀರಾವರಿ ಹಿಪ್ಪರಗಿ ಯೋಜನೆಯಿಂದ ನೀರಾವರಿಗೆ ಅಷ್ಟೇ ಅಲ್ಲ, ಕುಡಿಯುವ ನೀರಿನ ಸಲುವಾಗಿಯೂ ನಮ್ಮ ಸರ್ಕಾರದವರು ಪ್ರತಿವರ್ಷವೂ ಸುಮಾರು ಒಂದು ಕೋಟಿ ರೂಪಾಯಿ ಮಹಾರಾಷ್ಟ್ರ ಸರ್ಕಾರಕ್ಕೆ ಕುಡಿಯುವ ನೀರಿನ ಸಲುವಾಗಿ ಕೊಯಿನಾದಿಂದ ನೀರನ್ನು ಬಿಡಿಸಿಕೊಳ್ಳುವ ಸಲುವಾಗಿ ಕೊಡಬೇಕಾಗಿರುತ್ತದೆ. ಒಂದು ಕೋಟಿ ರೂಪಾಯಿ ಅದನ್ನು ಆ ಯೋಜನೆಗೆ ಹಾಕಿದರೆ ನಮ್ಮ ಯೋಜನೆ ತಯಾರಾಗುತ್ತದೆ. ಸ್ವಲ್ಪವೇ ನೀರು ನಿಂತರೆ ಕುಡಿಯುವ ನೀರು ಆಗುತ್ತದೆ ಮತ್ತು ರೈತರಿಗೆ ನೀರಾವರಿಗೂ ಸದುಪಯೋಗ ಕೂಡ ಆಗುತ್ತದೆ. ಅದಕ್ಕೆ ಕಳಕಳಿಯಿಂದ ನಾನು ವಿನಂತಿ ಮಾಡಿಕೊಳ್ಳುವುದು ಎಂದರೆ ಯೋಜನೆಯ ಬಗ್ಗೆ ನೋಡಬೇಕು. ಮತ್ತೆ ಈ ವರ್ಷ ಸರ್ಕಾರದವರು ಆ ಯೋಜನೆಗೆ ಐದು ಕೊಟ್ಟಿದ್ದಾರೋ ಅಥವಾ ಇಪ್ಪತ್ತೈದು ಕೊಟ್ಟಿದ್ದಾರೋ ನನಗೆ ಗೊತ್ತಾಗಲಿಲ್ಲ. ಒಂದು ಪುಸ್ತಕದಲ್ಲಿ 5 ಕೋಟಿ ಎಂದು ಬರೆದಿದ್ದಾರೆ. ಮತ್ತೊಂದರಲ್ಲಿ 25 ಕೋಟಿ ಎಂದು ಬರೆದಿದ್ದಾರೆ. ಅದು ಐದೋ ಅಥವಾ ಇಪ್ಪತ್ತೈದೋ ಅದಕ್ಕೆ ಸರಿಯಾಗಿ ಗೊತ್ತಾಗಲಿಲ್ಲ. ರಿಪ್ಲೈ ಮಾಡುವಾಗ ಅದನ್ನು ಕ್ಲಾರಿಫೈ ಮಾಡಬೇಕೆಂದು ಬೃಹತ್ ನೀರಾವರಿ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಅದಕ್ಕೆ ನಾನು ಮತ್ತೊಮ್ಮೆ ಕಳಕಳಿಯಿಂದ ಹೇಳುವುದು ಎಂದರೆ ಎರಡು ಯೋಜನೆ ತಾಕಾರಿ ಯೋಜನೆ ಮತ್ತು ಹಿಪ್ಪರಗಿ ಯೋಜನೆಯನ್ನು ತೀವ್ರ ಗತಿಯಲ್ಲಿ

ತೆಗೆದುಕೊಳ್ಳಬೇಕು. ನಾವು ಮಹಾರಾಷ್ಟ್ರ ಬಾರ್ಡರ್‌ನಲ್ಲಿದ್ದೇವೆ. ಏನಾಗಿದೆ ಎಂದರೆ ಮಹಾರಾಷ್ಟ್ರ, ಬಾರ್ಡ್‌ನವರು ಅಚ್ಚುಕಟ್ಟು ಎಲ್ಲಾ ಸುಧಾರಣೆ ಮಾಡಿಕೊಂಡಿದ್ದಾರೆ. ನೀರಾವರಿ ಯೋಜನೆಗಳನ್ನು ಅವರು ಮಾಡಿಕೊಟ್ಟಿದ್ದಾರೆ. ಅಲ್ಲಿಯ ರೈತರು ಸುಖದಿಂದ ಇದ್ದಾರೆ. ನಮ್ಮ ಕರ್ನಾಟಕದಲ್ಲಿರುವಂಥ ಜನರು ಏತಕ್ಕೆ ಏನು ಪಾಪ ಮಾಡಿ ಇಲ್ಲಿ ಉಳಿದಿದ್ದೇವೆ, ಮಹಾರಾಷ್ಟ್ರಕ್ಕೆ ಹೋಗಿದ್ದರೆ ಚಲೋ ಆಗುತ್ತಿತ್ತು ಎನ್ನುವ ಪರಿಸ್ಥಿತಿ ಅವರಿಗೆ ಬಂದಿದೆ. ಗಡಿಪ್ರದೇಶದಲ್ಲಿರುವುದರಿಂದ ಆ ಭಾವನೆ, ಪರಿಸ್ಥಿತಿಯೇ ಜನರಲ್ಲಿ ಬರಬಾರದು. ಅದರ ಸಲುವಾಗಿ ತಾವು ಸೀರಿಯಸ್ ಆಗಿ ಕ್ರಮ ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತೆ ನಮ್ಮ ಚಿಕ್ಕ ನೀರಾವರಿ ಮಂತ್ರಿಗಳಿಗೆ ಹೇಳುವುದು ಎಂದರೆ ಅಲ್ಲಿ ನೀರಾವರಿಯ ಸೌಕರ್ಯ ಯಾವುದೂ ಇಲ್ಲ. ಅಲ್ಲಿ ಒಂದು ಅಗರಾಯಿ ಎಂದು ಹೇಳಿ ಒಂದು ನದಿ ಇದೆ. ಆ ನದಿಗೆ ಕೆಲವೊಂದು ಬ್ರಿಡ್ಜ್ ಇದೆ. ಅದಕ್ಕೆ ಪ್ಲಾಂಕ್ ಹಾಕಿಕೊಡಿ ಮತ್ತು ಬ್ಯಾರೇಜ್ ಕಮ್ ಭಾಂಡಾರ ಮಾಡಿಕೊಡಿ ಎಂದು ಎರಡು ಮೂರು ವರ್ಷದಿಂದಲೂ ಕೇಳುತ್ತಿದ್ದೇನೆ.

ಇದರ ಬಗ್ಗೆ ಸರ್ಕಾರಕ್ಕೆ ಬರೆಯುತ್ತಿದ್ದೇವೆ. ನಾವು ಐದಾರು ಯೋಜನೆ ಬಗ್ಗೆ ಕೊಟ್ಟರೂ ಒಂದು ಯೋಜನೆಯನ್ನೂ ಈ ಬಜೆಟ್‌ನಲ್ಲಿ ಸೇರಿಸಿಲ್ಲ. ಅದಕ್ಕೆ ಚೌಧ್ರಿ ಸಾಹೇಬರ್‌ರಿಗೆ ನಾನು ಬಹಳ ಸಾರಿ ವಿನಂತಿ ಮಾಡಿಕೊಂಡಿದ್ದೇನೆ. ನಾಲ್ಕೈದು ಯೋಜನೆಯನ್ನು ಆ ಎಡವನ ಹಳ್ಳಕ್ಕೆ ಬರುವಂಥ ಒಂದೆರಡು ಯೋಜನೆಯನ್ನಾದರೂ ಮಾಡಿ ಕೊಟ್ಟರೆ ರೈತರಿಗೆ ಸ್ವಲ್ಪ ಉಪಯೋಗವಾಗುತ್ತದೆ, ದಯಮಾಡಿ ಈಗಂತೂ ಸೇರಿಸಿಲ್ಲ. ಅದಕ್ಕೆ ಮುಖ್ಯಮಂತ್ರಿಗಳು ಹೇಳಿದ್ದಾರೆ. ನಾಳೆ ಅಪ್ರೋಪ್ರಿಯೇಷನ್‌ನಲ್ಲಿ ಇನ್ನೊಂದು ಸ್ವಲ್ಪ ರೊಕ್ಕ ಕೊಡುತ್ತೇನೆ ಮತ್ತು ಅದರಲ್ಲಿ ಸೇರಿಸೋಣ ಎಂದು ಹೇಳಿದ್ದಾರೆ. ನಮ್ಮ ನಾಲ್ಕೈದು ಯೋಜನೆ ಏನು ಇದೆ. ಅದರಲ್ಲಿ ಒಂದೆರಡು ಯೋಜನೆಯನ್ನು ನಮ್ಮ ಈ ವರ್ಷದ ಬಜೆಟ್‌ನಲ್ಲಿ ಬರುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಮಾನ್ಯ ಚೌಧರಿಯವರಲ್ಲಿ ಕೇಳಿಕೊಳ್ಳುತ್ತೇನೆ. ಮತ್ತೊಂದು ಎಂದರೆ ಈ ನೀರಾವರಿ ಚೀಫ್ ಇಂಜಿನಿಯರ್ ಆಫೀಸನ್ನು ಬಿಜಾಪುರಕ್ಕೆ ಮಾಡುವುದರಿಂದ ಭಾರಿ ಅನಾನುಕೂಲವಾಗಿದೆ. ಅದಕ್ಕಾಗಿ ನಾವು ಬೆಂಗಳೂರಿನಲ್ಲಿ ಬಂದು ಇರುತ್ತೇವೆ. ಇಲ್ಲಿ ಚೀಫ್ ಇಂಜಿನಿಯರನ್ನ ಕಾಣಬೇಕು ಎಂದು ಓಡಾಡಿದೆವು ಇಲ್ಲಿ ಬಂದು ವಿನಂತಿ ಮಾಡಿಕೊಂಡು ಕೆಲಸವಾದರೂ ಮಾಡಿಸಿಕೊಳ್ಳುವುದಕ್ಕಾಗುತ್ತದೆ. ಚೀಫ್ ಇಂಜಿನಿಯರ್ ಆಫೀಸ್ ಬಿಜಾಪುರದಲ್ಲಿದೆ, ಅದನ್ನು ಬೆಂಗಳೂರಿನಲ್ಲಿ ಎಲ್ಲಿತ್ತೋ ಅಲ್ಲಿ ತಂದಿಡಬೇಕು ಎಂದು ಹೇಳುತ್ತೇನೆ. ಬಿಜಾಪುರದಲ್ಲಿದ್ದರೆ ನಮ್ಮ ಕೆಲಸ ಸರಿಯಾಗಿ ಆಗುವುದಿಲ್ಲ. ಅಲ್ಲಿಗೆ ಹೋಗುವುದು ಬರುವುದು ಎಂದು ಹೇಳಿದರೆ ಸರಿಯಾಗುವುದಿಲ್ಲ. ಬೆಂಗಳೂರಿನಲ್ಲಿ ಬಂದು ಕೆಲಸ ಮಾಡಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಚೀಫ್ ಇಂಜಿನಿಯರ್ ಆಫೀಸನ್ನು ಬೆಂಗಳೂರಿಗೆ ತರಬೇಕು. ಇನ್ನೊಂದು ನನ್ನ ವಿನಂತಿ ಎಂದರೆ ಈಗ ನಮ್ಮ ನೀರಾವರಿ ಕರ ನಮ್ಮ ತಾಲ್ಲೂಕಿನಲ್ಲಿ ಕೃಷ್ಣ ನದಿಯಲ್ಲಿ ಏನೋ ಸ್ವಲ್ಪ ನೀರಿದ್ದರೆ ಅದನ್ನು ಮಾಡಿಕೊಳ್ಳುತ್ತಾರೆ. ಅದಕ್ಕೆ ಸರ್ಕಾರದವರು ಒಂದು ಎಕರೆಗೆ 700 ರೂಪಾಯಿ ಛಾರ್ಜ್ ಮಾಡಿದ್ದಾರೆ. ಆದರೆ ಘಟಪ್ರಭಾ ನೀರನ್ನು ಕೊಡುತ್ತಾರೆ. ಅವರಿಗೆ 40 ರೂಪಾಯಿ ಛಾರ್ಜ್ ಮಾಡಿದ್ದಾರೆ. ಆದರೆ ನಮಗೆ ಕೃಷ್ಣ ನದಿಯಿಂದ ನಮ್ಮ ಪಂಪ್, ನಮ್ಮ ಖರ್ಚು ಹಾಕಿದ್ದಕ್ಕೆ ಎಕರೆಗೆ ಏಳು ನೂರು ರೂಪಾಯಿ ಛಾರ್ಜ್ ಮಾಡಿ ಹಾಕಿದ್ದಾರೆ. ಹೊಲ, ಮನೆ, ಜಪ್ತಿ ಮಾಡಿ ವಸೂಲು ಮಾಡುವುದಕ್ಕೆ ಪ್ರಾರಂಭಿಸಿದ್ದಾರೆ. ದಯಮಾಡಿ ಅದನ್ನು ಸ್ಕ್ರಾಪ್ ಮಾಡಿ ಘಟಪ್ರಭಾದವರಿಗೆ ಏನು 40 ರೂಪಾಯಿ ಒಂದು ಎಕರೆಗೆ ವಸೂಲು ಮಾಡುತ್ತೀರಿ, ಅದೇ ಧಾರಣೆಯಲ್ಲಿ ನಮಗೂ ವಸೂಲು ಮಾಡಬೇಕು ಎಂದು ನನ್ನ ವಿನಂತಿ ಇದೆ. ಆಮೇಲೆ ಪಿಡಬ್ಲೂಡಿ. ಸಲುವಾಗಿ ಹೇಳುವುದಾದರೆ....

ಛೇರ್ಮನ್:- ನಿಮಗೆ ಕೊಟ್ಟಿರುವುದು.

ಶ್ರೀ ಐ.ಎಂ ಶೇಷಶ್ಯಾಲೆ:- ಈ ಪಿಡಬ್ಲ್ಯೂಡಿ ಸಲುವಾಗಿ, ರಸ್ತೆ ಸಲುವಾಗಿ ಏನು ಆಗಿದೆ ಎಂದರೆ ಮಹಾರಾಷ್ಟ್ರ ಬಾರ್ಡರ್‌ದವರೆಲ್ಲಾ ನಮ್ಮ ಬಾರ್ಡರ್‌ತನಕ ಕೆಲವು ಟಾರ್‌ರೋಡ್ ಮಾಡಿದ್ದಾರೆ. ಆಮೇಲೆ ನಮ್ಮ ಬಾರ್ಡರ್‌ನಲ್ಲಿ ಬಂದರು ಎಂದರೆ ಮನುಷ್ಯರು ಗಾಡಿ ಹತ್ತುವುದು ಜರೂರು ಇಲ್ಲ, ಮನುಷ್ಯ ನಡೆಯುವುದು ಬಹಳ ಕಠಿಣ ಆಗಿದೆ. ದೊಡ್ಡ ದೊಡ್ಡ ತಗ್ಗು ಬಿದ್ದಿದ್ದಾವೆ. ಮನುಷ್ಯರು ಬರುವುದು ಸಹ ಬಹಳ ಕಠಿಣ ಆಗಿದೆ. ಮಹಾರಾಷ್ಟ್ರದವರು ನಮ್ಮ ಬಾರ್ಡರ್ ತನಕ ಟಾರ್ ರೋಡ್ ತಂದಿದ್ದಾರೆ. ಆದರೆ ನಮ್ಮ ಬಾರ್ಡರ್‌ಗೆ ಬಂದ ಕೂಡಲೇ ರೋಡ್‌ಗಳು ನಡು ನಡುವೆ ತಗ್ಗು ಇದ್ದಾವೆ. ಅಲ್ಲಿ ಬಸ್ ಹೋಗುವ ಹಾಗೆ ಇಲ್ಲ, ಮನುಷ್ಯ ನಡೆಯುವುದು ಬಹಳ ಕಠಿಣ ಆಗಿದೆ. ಅದಕ್ಕೆ ದಯಮಾಡಿ ರಸ್ತೆ ದುರಸ್ತಿ ಸಲುವಾಗಿ ಹೆಚ್ಚು ಗ್ರಾಂಟನ್ನು ಬಾರ್ಡರ್‌ಗೆ ಕೊಟ್ಟು ರಸ್ತೆ ದುರಸ್ತಿ ಮಾಡಬೇಕೆಂದು ನನ್ನ ವಿನಂತಿ ಇದೆ. ಆಮೇಲೆ ನಮ್ಮ ಅಥಣಿ ಬಹಳ ಹಿಂದುಳಿದ ಪ್ರದೇಶವೆಂದು ಮೊದಲೇ ಹೇಳಿದ್ದೇನೆ. ಅಥಣಿಯೊಳಗೆ ನಮ್ಮ ಗವರ್ನಮೆಂಟ್ ಸ್ವಂತ ಬಿಲ್ಡಿಂಗ್ ಆಫೀಸ್ ಬಹಳ ಕಡಿಮೆ ಇದ್ದಾವೆ. ಅದಕ್ಕೆ ಅವು ಎಲ್ಲೆಲ್ಲಿ ಇವೆ, ಆ ಆಫೀಸಿಗೆ ಹೋಗುವ ದಾರಿ ಸಹ ಸರಿಯಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಆಫೀಸ್‌ಗಳು ಇವೆ. ಇಂತಹ ಪರಿಸ್ಥಿತಿಯಲ್ಲಿ ದಯಮಾಡಿ ಒಂದು ಮಿನಿ ವಿಧಾನಸೌಧ ಕಟ್ಟುವ ಸಲುವಾಗಿ ಸರ್ಕಾರದವರು ಅದನ್ನು ಯೋಜನೆ ಮಾಡಬೇಕೆಂದು ನಾನು ಪಿಡಬ್ಲ್ಯೂಡಿ ಮಿನಿಸ್ಟರ್‌ರವರಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಈಗ ನೀರಾವರಿ ಆಫೀಸ್ ಗೋಕಾಕ್‌ನಲ್ಲಿ ಇದೆ. ಗೊಕಾಕ್‌ನಲ್ಲಿರುವುದರಿಂದ ನಮ್ಮಲ್ಲಿ ಕೆರೆಗಳು ಏನು ಇದ್ದಾವೆ, ಕೆಲಸ ಕಾರ್ಯಗಳು ಸರಿಯಾಗಿ ಆಗುವುದಿಲ್ಲ. ಅದಕ್ಕೆ ಮೊದಲು ಅಥಣಿಯಲ್ಲಿ ನೀರಾವರಿ ಸಬ್ ಡಿವಿಜನ್ ಇತ್ತು. ಆ ಸಬ್ ಡಿವಿಜನ್ ಅನ್ನು ಅಥಣಿಗೆ ಕೊಡಬೇಕೆಂದು ನನ್ನ ವಿನಂತಿ ಇದೆ. ಅದಕ್ಕೆ ನಾನು ಇನ್ನೊಮ್ಮೆ ಸರ್ಕಾರದಲ್ಲಿ ವಿನಂತಿ ಎಂದರೆ ನಾನು ಹೇಳಿದ ಕೆಲವೊಂದು ವಿನಂತಿಯನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ತಮ್ಮ ಉತ್ತರದಲ್ಲಿ ಹೇಳಿ ನಮ್ಮ ಕೆಲಸಕಾರ್ಯಗಳನ್ನು ಕೈಗೂಡಿಸಿಕೊಟ್ಟು ಜನರ ಆಶೀರ್ವಾದವನ್ನು ನಮ್ಮ ಮಂತ್ರಿಗಳು ಪಡೆದುಕೊಳ್ಳುತ್ತಾರೆ ಎಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವೀರೇಂದ್ರ ಪಾಟೀಲ್ (ಚಿಂಚೋಳಿ):- ಮಾನ್ಯ ಅಧ್ಯಕ್ಷರೆ, ತಮ್ಮ ಮತ್ತು ಸದನದ ಅನುಮತಿ ಕೋರಿ ನಾನು ಕುಳಿತಲ್ಲೇ ಮಾತನಾಡುತ್ತೇನೆ. ಒಂದೆರಡು ವಿಚಾರ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಬಯಸುತ್ತೇನೆ. ಹೇಳಬೇಕಾದ್ದು ಅವಶ್ಯಕ ಎಂದು ನಾನು ತಿಳಿದುಕೊಂಡಿದ್ದೇನೆ. ಮುಖ್ಯಮಂತ್ರಿಗಳು ಒಬ್ಬ ವ್ಯಕ್ತಿ ಅಲ್ಲ. ಇಡೀ ರಾಜ್ಯವನ್ನೇ ಅವರು ಮುಖ್ಯಮಂತ್ರಿಯಾಗಿ ಅವರು ಪ್ರತಿನಿಧಿಸುತ್ತಿದ್ದಾರೆ. ಇಂತಹ ಪ್ರಸಂಗದಲ್ಲಿ ಅವರು ಸಭೆ ಮತ್ತು ಸಮಾರಂಭಗಳಿಗೆ ಎಷ್ಟು ಕಡಿಮೆ ಹೋಗುತ್ತಾರೋ ಅಷ್ಟು ಉತ್ತಮ ಎಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ ನಾನೂ ಮುಖ್ಯಮಂತ್ರಿಯಾಗಿದ್ದೆ. ಸಭೆಗೆ ಮತ್ತು ಸಮಾರಂಭಕ್ಕೆ ಕರೆಯುವಂತಹವರು ವ್ಯಕ್ತಿಯ ಮಹತ್ವ ನೋಡಿ ಕರೆಯುವುದಿಲ್ಲ. ಆ ವ್ಯಕ್ತಿ ಯಾವ ಸ್ಥಾನದಲ್ಲಿದ್ದಾನೆ ಅದರ ಮಹತ್ವ ನೋಡಿ ಕರೆಯುತ್ತಾರೆ ಮತ್ತು ಸಭೆ ಸಮಾರಂಭಗಳಿಗೆ ಹೋದಾಗ ಮುಖ್ಯಮಂತ್ರಿಗಳು ಅವರು ಕೇಳಿದ್ದೆಲ್ಲಾ ಮಾಡುತ್ತೇವೆಂದು ಹೇಳುವುದು ನನಗಂತೂ ಸರಿ ಎನಿಸುವುದಿಲ್ಲ. ಆದರೆ ಅವರು ಕರೆಯುವ ಉದ್ದೇಶ ಅದೇ. ನಮ್ಮ ಸಮಾರಂಭಕ್ಕೆ ಮುಖ್ಯಮಂತ್ರಿಗಳು ಬರುತ್ತಾರೆ. ಅವರ ಮುಂದೆ ಬೇಡಿಕೆಯನ್ನು ಇಡೋಣ ಮತ್ತು ಕೆಲವು ಆದರೂ ಮನ್ನಣೆ ಮಾಡುತ್ತಾರೆಂಬ ಆಸೆಯಿಂದ ಅವರು ಕರೆಯುತ್ತಾರೆ.

ಅದಕ್ಕಾಗಿ ಮುಖ್ಯಮಂತ್ರಿಗಳು ಸಭೆ-ಸಮಾರಂಭಗಳಿಗೆ ಎಷ್ಟು ಕಡಿಮೆ ಹೋಗುತ್ತಾರೋ ಅಷ್ಟೂ ಉತ್ತಮವೆಂದು ನಾನು ತಿಳಿದುಕೊಂಡಿದ್ದೇನೆ. ಇನ್ನೊಂದು ವಿಚಾರವನ್ನು ಈ ಸಂದರ್ಭದಲ್ಲಿ

ಹೇಳಬೇಕೆಂದರೆ ಸದನದ ಹೊರಗಡೆ ಮತ್ತು ಒಳಗಡೆ, ಅದರಲ್ಲೂ ವಿರೋಧ ಪಕ್ಷದ ಸದಸ್ಯರಲ್ಲಿ ಒಂದು ರೀತಿಯ ಇಂಪ್ರೆಷನ್ ಇದೆ. ಅದೇನೆಂದರೆ, ಈ ಸರ್ಕಾರದ ಹತ್ತಿರ ದುಡ್ಡು ಇಲ್ಲ, ಸರ್ಕಾರದ ಖಜಾನೆ ಖಾಲಿಯಾಗಿದೆ, ಆದರೂ ಎಲ್ಲಾ ಮಾಡುತ್ತೇವೆಂದು ಹೇಳುತ್ತಿದ್ದಾರೆ, ಮಾಡುವ ಶಕ್ತಿ ಇಲ್ಲ ಎಂದು ಸದಸ್ಯರು ಹೇಳಿದ್ದಾರೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಕೆಲವು ಅಂಕಿ--ಸಂಖ್ಯೆಗಳನ್ನು ಸಹ ಕೊಟ್ಟಿದ್ದಾರೆ. ಆ ಅಂಕಿ–ಸಂಖ್ಯೆಗಳು ಅವರು ಅಧಿಕಾರಕ್ಕೆ ಬಂದಾಗ ರಾಜ್ಯದ ಹಣಕಾಸಿನ ಪರಿಸ್ಥಿತಿ ಏನಿತ್ತು. ಈಗಿನ ಪರಿಸ್ಥಿತಿ ಏನಿದೆ ಎನ್ನುವಂಥದ್ದನ್ನು ಅವರು ತಿಳಿದುಕೊಂಡು ಅದರಲ್ಲಿ ಏನಾದರೂ ಮಾರ್ಪಾಟು ಆಗಬೇಕಿದ್ದರೆ ಸದನವನ್ನು ಮತ್ತು ರಾಜ್ಯದ ಜನತೆಯನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೇಳುವುದು ತಪ್ಪಲ್ಲವೆಂದು ನನಗನ್ನಿಸುತ್ತದೆ. ಏಕೆಂದರೆ, ಶ್ರೀ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಗಳಾಗಿ ಕೇವಲ ಮೂರು ತಿಂಗಳುಗಳಾದುವು. ಒಂದು ಕಡೆ ರಾಜ್ಯದ ಹಣಕಾಸಿನ ಪರಿಸ್ಥಿತಿ ಕೆಟ್ಟಿದ್ದರೆ ಅದಕ್ಕೆ ಈ ಮುಖ್ಯಮಂತ್ರಿಗಳೇ ಜವಾಬ್ದಾರರೆಂದು ನಾನು ಹೇಳುವುದಕ್ಕೆ ತಯಾರಿಲ್ಲ. ಯಾರೇ ಜವಾಬ್ದಾರರಾಗಿರಲಿ, ಇವೊತ್ತು ಜನರು ಕೇಳುವಂಥದ್ದು ಏನೆಂದರೆ, 'ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹಣಕಾಸಿನ ಪರಿಸ್ಥಿತಿ ಎಲ್ಲೆಲ್ಲಿ ಹೇಗಿದೆ ಎಂಬುದನ್ನು ತಿಳಿಸಬೇಕು' ಎನ್ನುವಂಥದ್ದು. ಏಕೆಂದರೆ, ಇವೊತ್ತು ಜನಸಾಮಾನ್ಯರು ಏನು ವಿಚಾರ ಮಾಡುತ್ತಿದ್ದಾರೆಂದರೆ 'ನಮ್ಮ ತಾಲ್ಲೂಕು–ಹಳ್ಳಿಗಳಿಗೆ ಇಂತಿಂಥ ಅಭಿವೃದ್ಧಿ ಕೆಲಸ–ಕಾರ್ಯಗಳು ಆಗಬೇಕು' ಎಂದು ಅವರು ಅಪೇಕ್ಷೆ ಪಡುವಂಥಾದ್ದು ತಪ್ಪು ಎಂದು ನನಗನ್ನಿಸುವುದಿಲ್ಲ. ಆದರೆ, ಅಭಿವೃದ್ಧಿ ಕೆಲಸ–ಕಾರ್ಯಗಳನ್ನು ಕೈಗೆತ್ತಿಕೊಳ್ಳಲು ಸಾಕಷ್ಟು ದುಡ್ಡು ಸರ್ಕಾರದಲ್ಲಿ ಇದೆಯೋ, ಇಲ್ಲವೋ ಎನ್ನುವಂಥಾದ್ದರ ಬಗ್ಗೆ ಸ್ಪಷ್ಟವಾಗಿ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೇಳಬೇಕಾದ್ದು ಮುಖ್ಯಮಂತ್ರಿಗಳ ಜವಾಬ್ದಾರಿ ಎಂದು ನಾನು ತಿಳಿದುಕೊಂಡಿದ್ದೇನೆ. ಅದಕ್ಕೋಸ್ಕರ, ಈ ವಿಚಾರವನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಮತ್ತೊಂದು ವಿಚಾರ ನಾನು ಹೇಳಬೇಕೆಂದರೆ, ನಾನು ಮುಖ್ಯಮಂತ್ರಿಯಾಗಿದ್ದಾಗ ರೆವಿನ್ಯೂ ಈಲ್ಡಿಂಗ್ ಡಿಪಾರ್ಟ್‌ಮೆಂಟ್ಸ್ ರಿವ್ಯೂ ಮಾಡುವುದಕ್ಕೆ ಅಲ್ಲಿನ ಡಿಪಾರ್ಟ್‌ಮೆಂಟಿನ ಹೆಡ್ಸ್, ಹಿರಿಯ ಅಧಿಕಾರಿಗಳು, ಆ ಇಲಾಖೆಯ ಕಾರ್ಯದರ್ಶಿಗಳು, ಮಂತ್ರಿಗಳು ನಾವುಗಳೆಲ್ಲರೂ ಕುಳಿತು ರಿವ್ಯೂ ಮಾಡುತ್ತಿದ್ದೆವು, ಏಕೆಂದರೆ, ನಿಮ್ಮಲ್ಲಿ ಅನೇಕರಿಗೆ ಗೊತ್ತಿರಬಹುದು. ನಾನು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಾಗ ಸರ್ಕಾರಿ ನೌಕರರಿಗೆ ಸಂಬಳ ಕೊಡುವುದಕ್ಕೆ ದುಡ್ಡಿರಲಿಲ್ಲ, ಅಂತಹ ಪರಿಸ್ಥಿತಿ ಬಂದಿತ್ತು. ತಿಂಗಳ ಒಂದನೇ ತಾರೀಖು ಬಂದರೆ ಸಂಬಳಕ್ಕೆ ಏನು ಮಾಡಬೇಕೆನ್ನುವಂಥ ಪರಿಸ್ಥಿತಿ ಇತ್ತು. ಅದರ ಸಲುವಾಗಿ ರೆವಿನ್ಯೂ ಈಲ್ಡಿಂಗ್ ಡಿಪಾರ್ಟ್‌ಮೆಂಟಿನ ರಿವ್ಯೂ ಮಾಡಿ, ನೌಕರರಿಗೆ ಸಂಬಳ ಕೊಡುವುದಕ್ಕೆ ಖಜಾನೆಗೆ ಹೆಚ್ಚು ದುಡ್ಡು ಬರುವಂತೆ ಮಾಡಬೇಕೆನ್ನುವಂಥ ವಿಚಾರ ನನ್ನದಾಗಿತ್ತು. ಅದೇ ಪ್ರಕಾರ ಒಂದು ಸಭೆ ನಡೆಸಿ ಅಲ್ಲಿಗೆ ರೆವಿನ್ಯೂ ಈಲ್ಡಿಂಗ್ ಡಿಪಾರ್ಟ್‌ಮೆಂಟಿನ ಅಧಿಕಾರಿಗಳನ್ನು ಕರೆಯಿಸಿದೆ. ಅವರಿಗೆ ನಾನು ಸ್ಪಷ್ಟವಾಗಿ ಹೇಳಿದೆ. ಏನೆಂದರೆ, 'ಇವೊತ್ತು ಸರ್ಕಾರದ ಹತ್ತಿರ ಸಾಕಷ್ಟು ದುಡ್ಡು ಇಲ್ಲದೆ, ಕಷ್ಟದಲ್ಲಿದೆ, ಆದುದರಿಂದ, ಸರ್ಕಾರದ ಖಜಾನೆಗೆ ಹೆಚ್ಚು ದುಡ್ಡು ಬರುವ ದಿಸೆಯಲ್ಲಿ ಪ್ರಯತ್ನ ಮಾಡಬೇಕು' ಎಂದು ಹೇಳಿದಾಗ, ಅವರು ಒಂದೇ ಮಾತನ್ನು ಹೇಳಿದರು. ಏನೆಂದರೆ, 'Sir, it requires political will.' ಎಂದು ಹೇಳಿದ ಮೇಲೆ ನನಗೆ ಸಿಟ್ಟು ಬಂತು. ನಾನು, 'What do you mean by the political will?' ಎಂದು ಕೇಳಿದೆ. ಅವರು ಆಗ 'ಸಾರ್, ನಾವು ಅನೇಕ ವರ್ಷಗಳಿಂದ ಇದೇ ಇಲಾಖೆಯಲ್ಲಿದ್ದೇವೆ, ಆದರೆ, ಅಧಿಕಾರಿಗಳಿಗೆ ಮಂತ್ರಿಗಳು ಹಾಗೂ ಮುಖ್ಯಮಂತ್ರಿಗಳು ಹೇಳುವುದು ಒಂದು, ಮಾಡುವುದು ಇನ್ನೊಂದು. ಈ ಪರಿಸ್ಥಿತಿ ಇರುವಾಗ ಇವೊತ್ತು ಸ್ಪಷ್ಟವಾಗಿ ನಿಮ್ಮ ಮುಂದೆ ಹೇಳುತ್ತಿದ್ದೇವೆ. ನಿಮಗೆ ಪೊಲಿಟಿಕಲ್ ವಿಲ್ ಇದ್ದರೆ ಹೇಳಿ ನಾವು ಹಣವನ್ನು ಹೆಚ್ಚು ಮಾಡಿ ತೋರಿಸುವುದಕ್ಕೆ ತಯಾರಿದ್ದೇವೆ' ಎನ್ನುವಂಥ ಮಾತನ್ನು ಹೇಳಿದರು. ನಾನು ಇವೊತ್ತು ಹೇಳುತ್ತಿಲ್ಲ, ಈ ಹಿಂದೆ

ಮುಖ್ಯಮಂತ್ರಿಯಾಗಿದ್ದಾಗಲೂ ಈ ವಿಚಾರವನ್ನು ಸ್ಪಷ್ಟವಾಗಿ ಹೇಳಿದ್ದೇನೆ. 'ನೀವು ಸೆಕ್ರೆಟರಿ ಕೊಠಡಿಗೆ ಹೋಗಿ ನಿಮಗೆ ಏನೇನು ಬೇಕೋ ಅದನ್ನೆಲ್ಲಾ ಬರೆದುಕೊಂಡು ಬನ್ನಿ, ನಾನು ಆ ಸಮಯದಲ್ಲಿ ಸಹಿ ಮಾಡಿಕೊಡುತ್ತೇನೆ, ಇನ್ನು ಮೂರು ತಿಂಗಳು ಮಾತನಾಡಿಸುವಂತಿಲ್ಲ, ಮೂರು ತಿಂಗಳಾದ ನಂತರ ನಿಮ್ಮ ಇಂಪ್ರೂವ್‌ಮೆಂಟ್ ಕೇಳುತ್ತೇನೆ' ಎಂದು ಆಗ ಸ್ಪಷ್ಟವಾಗಿ ಹೇಳಿದೆ.

ಅದೇ ರೀತಿಯಿಂದ ಅವರು ಹೋಗಿ ಬರೆದುಕೊಂಡು ಬಂದರು. ನಾನು ಸಹಿ ಮಾಡಿ ಅವರ ಕೈಯಲ್ಲಿ ಕೊಟ್ಟೆ. ಮತ್ತೆ ಮೂರು ತಿಂಗಳತನಕ ಮಾತನಾಡಲು ಹೋಗಲಿಲ್ಲ. ನಾನು ಏಕೆ ಈ ವಿಚಾರವನ್ನು ಹೇಳುತ್ತಿದ್ದೇನೆಂದರೆ ಕೇವಲ ಒಂದು ಇಲಾಖೆಯಲ್ಲಿ ಪ್ರಾಮಾಣಿಕವಾದ ಅಧಿಕಾರಿಗಳನ್ನು ಹಾಕುವುದರಿಂದ ಪ್ರಯೋಜನವಿಲ್ಲ. ನಾವು ಹಿಂದು ಮುಂದು ನೋಡುವುದಿಲ್ಲ. ಪ್ರತಿಯೊಂದು ಬಾಬಿನ ಹಣವು ಖಜಾನೆಗೆ ಬರಬೇಕು, ಆ ರೀತಿಯಲ್ಲಿ ಕೆಲಸವನ್ನು ತಾವು ಮಾಡಬೇಕು, ಇಲ್ಲದಿದ್ದರೆ ನೀವು ಆ ಇಲಾಖೆಯಲ್ಲಿ ಹೆಚ್ಚು ದಿನ ಇರುವಂತಿಲ್ಲವೆಂದು ಸ್ಪಷ್ಟವಾಗಿ ಅಧಿಕಾರಿಗಳಿಗೆ ಹೇಳಬೇಕು ಎಂದು ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಇನ್ನು ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್, ನಾನು ಸುಮಾರು 10 ವರ್ಷಗಳ ಕಾಲ ಅದರಲ್ಲಿ 7 ವರ್ಷಗಳ ಕಾಲ ಲೋಕೋಪಯೋಗಿ ಇಲಾಖೆಯ ಮಂತ್ರಿಯಾಗಿ ಮೂರು ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಈ ಕರ್ನಾಟಕ ಕನ್‌ಸ್ಟ್ರಕ್ಷನ್ ಪ್ರಾರಂಭ ಮಾಡಿದವನು ನಾನೇ, ಬಹುಶಃ 1963- ಇಲ್ಲವೆ 1964ರಲ್ಲಿ ಇದು ಪ್ರಾರಂಭವಾಗಿರಬಹುದು. ಮಾನ್ಯ ರಂಗನಾಥ್‌ರವರು ಫೈಲ್‌ನ್ನು ತೆಗೆದು ನೋಡಿದರೆ ಅದು ಗೊತ್ತಾಗುತ್ತದೆಂದು ನನಗನ್ನಿಸುತ್ತದೆ. ಒಂದೇ ಒಂದು ಸಲ ಇವರು ಗುತ್ತಿಗೆಯನ್ನು ಮಾಡಿಕೊಂಡು ಒಬ್ಬರ ಮೇಲೆ ಒಬ್ಬರು ಅವಲಂಬಿಸುವಂತೆ ಮಾಡಬಾರದು, ಮತ್ತು ನಾವು ಈ ಕೆಲಸ ಮಾಡುತ್ತೇವೆ ನೀವು ಈ ಕೆಲಸ ತೆಗೆದುಕೊಳ್ಳಿ ಎನ್ನತಕ್ಕ ಉದಾಹರಣೆಗಳು ನನ್ನ ಗಮನಕ್ಕೆ ಬಂದಾಗ, ನಾನು ಇಲ್ಲ, ಇಲ್ಲ ಆ ರೀತಿ ಮಾಡಬಾರದು ಇದು ಯೋಗ್ಯವಾದುದಲ್ಲ ಸರ್ಕಾರಕ್ಕೆ ಮತ್ತು ಜನತೆಗೆ ಇದು ಸರಿಯಾಗುವುದಿಲ್ಲ. ಅದಕ್ಕಾಗಿ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಮಾಡಬೇಕೆಂದು ಅದನ್ನು ಮಾಡಿದೆ. ಆದರೆ ಪರಿಸ್ಥಿತಿ ಏನಾಗಿದೆ ಎಂದರೆ ಈ ಕಾರ್ಪೊರೇಷನ್ ಹೆಸರಿಗೆ ಮಾತ್ರ ಇದೆ, ಇದರಲ್ಲಿ ಏನೂ ಕೆಲಸ ಆಗುತ್ತಿಲ್ಲ. ನಿಮಗೆ ಹೇಳಬೇಕೆಂದರೆ ಅಲ್ಲಿ ಎಷ್ಟು ಕೆಲಸ ಮಾಡುತ್ತಿದ್ದಾರೆ ಎಂಬುದು ನನಗೆ ಗೊತ್ತಿದೆ. ಅವರು ಒಂದು ರೀತಿಯಲ್ಲಿ ಕಮೀಷನ್ ಏಜೆಂಟ್‌ನಂತಾಗಿ, ಸರ್ಕಾರದಿಂದ ಕೆಲಸವನ್ನು ತೆಗೆದುಕೊಂಡು ನಂತರ ಅದನ್ನು ಸಬ್‌ಲೆಟ್ ಮಾಡಿ ಎರಡನೇ ಗುತ್ತಿಗೆದಾರರಿಗೆ ಕೊಡುತ್ತಾರೆ, ಇದು ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ನ ಲಕ್ಷಣವಲ್ಲವೆಂದು ನನಗೆ ಅನಿಸುತ್ತಿದೆ. ಸಬ್‌ಲೆಟ್ ಮಾಡಿ ಕಮಿಷನ್ ಹೊಡೆಯಬೇಕಾದರೆ ಈ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ನ ಅವಶ್ಯಕತೆ ಇಲ್ಲವೆಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಅದೇ ರೀತಿಯಿಂದ ಲ್ಯಾಂಡ್ ಆರ್ಮಿ: ಅದೂ ಕೂಡ ನಮ್ಮ ಕಾಲದಲ್ಲೇ ಪ್ರಾರಂಭವಾದುದು. ಇದನ್ನು ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಜೊತೆ ಒಂದುಗೂಡಿಸಬೇಕು ಎನ್ನತಕ್ಕ ವಿಚಾರ ನನ್ನ ಗಮನಕ್ಕೆ ಬಂದಿದೆ. ನನಗನ್ನಿಸುತ್ತದೆ. ಇವೆರಡನ್ನೂ ಮರ್ಜ್ ಮಾಡಬಾರದು. ಅವುಗಳು ಇದ್ದಂತೆ ಇರಬೇಕು. ಅವರ ಕೈ ತುಂಬಾ ಕೆಲಸ ಕೊಡಬೇಕು ಮತ್ತು ಅಲ್ಲಿಗೆ ಒಳ್ಳೊಳ್ಳೆಯ ಅಧಿಕಾರಿಗಳನ್ನು ಹಾಕಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಏಕೆಂದರೆ ಯಾವ ಸಂಸ್ಥೆಯಲ್ಲಿ ಕೆಟ್ಟವರು ಇರುವಂತಲ್ಲ, ಆ ಸಂಸ್ಥೆಯಲ್ಲಿ ಒಳ್ಳೆಯವರು ಇದ್ದರೆ ಒಳ್ಳೆಯ ಕೆಲಸವಾಗುತ್ತದೆ. ಅಲ್ಲಿಗೆ ಬಹಳಷ್ಟು ನಿಷ್ಠಾವಂತ, ಪ್ರಾಮಾಣಿಕರಾದಂಥ ಅಧಿಕಾರಿಗಳನ್ನು ನೋಡಿ ಹಾಕಬೇಕು; ಹಾಗಾದರೆ ಮಾತ್ರ ಲ್ಯಾಂಡ್ ಆರ್ಮಿಯೂ ಉಳಿಯುತ್ತದೆ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಸಹ ಉಳಿಯುತ್ತದೆ ಮತ್ತು ಒಳ್ಳೆಯ ರೀತಿಯಲ್ಲಿ ಆ ಸಂಸ್ಥೆಗಳು ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂದು ನನಗನ್ನಿಸುತ್ತದೆ. ಇದೇ ರೀತಿಯಲ್ಲಿ ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್. ಇದು ನಮ್ಮ ಕಾಲದಲ್ಲಿ ಆದುದ್ದಲ್ಲ.

ಈ ಕಾರ್ಪೊರೇಷನ್ ಅಸ್ತಿತ್ವಕ್ಕೆ ಬಂದದ್ದು ಬಹುಶಃ 1985 ಇರಬಹುದು. ಆದರೆ ಈ ಕಾರ್ಪೊರೇಷನ್‌ನ್ನು ಮಾಡುವುದಕ್ಕಿಂತ ಮುಂಚಿತವಾಗಿ ಇದರಿಂದ ಹೆಚ್ಚಿನ ಕೆಲಸಕಾರ್ಯಗಳನ್ನು ಮಾಡಿಸಿಕೊಳ್ಳಬೇಕೆಂಬ ಉದ್ದೇಶಕ್ಕಿಂತ ಮುಖ್ಯವಾಗಿ ಈ ಕಾರ್ಪೊರೇಷನ್‌ನ್ನು ಮಾಡಿದರೆ ಒಬ್ಬ ಚೀಫ್ ಇಂಜಿನಿಯರ್, ಒಬ್ಬ ಸೂಪರಿಂಟೆಂಡೆಂಟ್ ಇಂಜಿನಿಯರ್, ಅನೇಕ ಜನ ಎಕ್ಸಿಕ್ಯುಟಿವ್ ಇಂಜಿನಿಯರ್‌ಗಳು ಆಗುತ್ತಾರೆಂಬ ವಿಚಾರವನ್ನು ಇಟ್ಟುಕೊಂಡು ಮಾಡಿದಂತೆ ಕಾಣಿಸುತ್ತದೆ. ನಾನು ಮುಖ್ಯಮಂತ್ರಿಯಾಗಿದ್ದ ಸಮಯದಲ್ಲಿ ಮಾನ್ಯ ರಾಜಶೇಖರಮೂರ್ತಿಯವರು ಅರ್ಥ ಮಂತ್ರಿಗಳಾಗಿದ್ದರು. ಆಗ ಸಾಕಷ್ಟು ಹಣ ನಮ್ಮ ಸರ್ಕಾರದ ಬೊಕ್ಕಸಕ್ಕೆ ಬರುತ್ತಿತ್ತು. ಆಗ ನಾನು ಅವರಿಗೆ ಹೇಳಿದೆ, ಈ ಹಣವನ್ನು ನಾವು ಇಟ್ಟುಕೊಳ್ಳುವುದು ಬೇಡ. ಯಾರು ಕುಡಿಯುವ ನೀರಿನ ವ್ಯವಸ್ಥೆಗೆ ಅಥವಾ ಬೇರೆ ಸೌಲಭ್ಯಗಳನ್ನು ಕಲ್ಪಿಸಲು ಹಣವನ್ನು ಕೇಳುತ್ತಾರೆ ಅವರಿಗೆ ಎಷ್ಟುಬೇಕೋ ಅಷ್ಟು ಹಣವನ್ನು ಕೊಡಿ ಎಂದು ಹೇಳಿದೆ. ಕೃಷ್ಣಾ ಬೇಸಿನ್ ಇರಲಿ, ಕಾವೇರಿ ಬೇಸಿನ್ ಇರಲಿ ನಮ್ಮ ಪಾಲಿನ ನೀರನ್ನು ನಾವು ಉಪಯೋಗ ಮಾಡಿಕೊಳ್ಳಬೇಕಾಗಿದೆ ಎಂದು ನಾನು ಹೇಳಿದೆ. ಲಿಫ್ಟ್ ಇರಿಗೇಷನ್ ಸ್ಕೀಂಗಳನ್ನು ಚೆನ್ನಾಗಿ ಮಾಡಬೇಕು. ಹಿಂದಿನವರು ಯಾರೂ ಮಾಡಿರುವಂತೆ ಆ ಕಾರ್ಪೊರೇಷನ್‌ನಲ್ಲಿ ಚೀಫ್ ಇಂಜಿನಿಯರೇ ಇರಬೇಕೆಂದೇನೂ ಇಲ್ಲ. ನದಿಯ ನೀರು ಜಮೀನಿಗೆ ಹೋಗಬೇಕು. ಇದು ಒಂದು ಸಣ್ಣ ಕೆಲಸ. ಇದಕ್ಕೆ ಒಬ್ಬ ಚೀಫ್ ಇಂಜಿನಿಯರ್ ಏನೂ ಬೇಕಾಗಿಲ್ಲ. ಆದ್ದರಿಂದ ಇರಿಗೇಷನ್ ಮತ್ತು ಲಿಫ್ಟ್ ಇರಿಗೇಷನ್ ಎರಡನ್ನು ಈ ಕಾರ್ಪೊರೇಷನ್‌ಗೆ ಕೊಟ್ಟರೆ ಇದರಿಂದ ಹೆಚ್ಚಿನ ಕೆಲಸಕಾರ್ಯಗಳನ್ನು ಮಾಡಿಸಿಕೊಳ್ಳಬಹುದೆಂದು ಅವರು ಹೇಳಿದರು. ನಾನಾದರೂ ಸರ್ಕಾರದ ಮಂತ್ರಿಗಳಿಗೆ ಮತ್ತು ಅಧಿಕಾರಿಗಳಿಗೆ ಹೇಳುತ್ತೇನೆ, ಈಗ ಈ ಕಾರ್ಪೊರೇಷನ್‌ನನ್ನು ವೈಂಡಪ್ ಮಾಡಬಾರದೆಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನಮಗೆ ಸಾಕಷ್ಟು ಹಣ ಬಂದಾಗ ಬ್ಯಾಂಕ್‌ನವರಿಗೆ ಹೇಳಿದ್ದೇನೆ ನಾವು 20 ಪರ್ಸೆಂಟ್ ಕೊಡುತ್ತೇವೆ ನೀವು 5 ಪರ್ಸೆಂಟ್ ಕೊಡಿ, ಉಳಿದ 25 ಪರ್ಸೆಂಟ್‌ನ್ನು ಫಲಾನುಭವಿಗಳಿಂದ ವಸೂಲ್ಮಾಡಿಕೊಳ್ಳುತ್ತೇವೆ ಎಂದು ಹೇಳಿದೆವು. ಈಗ ನಾವು ಈ ಕಾರ್ಪೊರೇಷನ್‌ನ್ನು ಅಬಾಲಿಷ್ ಮಾಡದೆ ಮುಂದುವರಿಸಿಕೊಂಡು ಹೋಗಬೇಕಾಗಿದೆ. ಈ ಕಾರ್ಪೊರೇಷನ್‌ನಲ್ಲಿ ಯಾರಾದರೂ ಚೀಫ್ ಇಂಜನಿಯರ್ ಇದ್ದರೆ ಅವರನ್ನು ತೆಗೆದುಹಾಕಬಹುದು. ನಾರ್ತ್‌ಇರಿಗೇಷನ್‌ನ್ನು ಸೌತ್‌ಗೆ ಕೊಟ್ಟರೆ ಈ ಕಾರ್ಪೊರೇಷನ್ ಇನ್ನೂ ಚೆನ್ನಾಗಿ ಕೆಲಸಮಾಡಬಹುದು. ಈ ಕಾರ್ಪೊರೇಷನ್ ಮುಖಾಂತರ ಕೃಷ್ಣಾ ಮತ್ತು ಕಾವೇರಿ ನೀರಿನ ಉಪಯೋಗವನ್ನು ನಾವು ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ನಾನು ಮೊನ್ನೆ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ನೋಡಿದೆ. ಮಂದರಕೇರಿ ಇರಿಗೇಷನ್ ರಿನೋವೇಷನ್ ಮಾಡಬೇಕೆಂದು ಯೋಜನೆ ಮಾಡುತ್ತಿದ್ದೇವೆಂದು ಹೇಳಿದರು. ಅವರು ಅದನ್ನು ಎಲ್ಲಿಗೆ ಕಳುಹಿಸುತ್ತಾರೋ ಗೊತ್ತಿಲ್ಲ. ಅದನ್ನು ವಿಶ್ವ ಬ್ಯಾಂಕ್‌ಗೆ ಕಳುಹಿಸುತ್ತಾರೋ, ಕೇಂದ್ರ ಸರ್ಕಾರಕ್ಕೆ ಕಳುಹಿಸುತ್ತಾರೋ ಗೊತ್ತಿಲ್ಲ. ನಾನು ಹಿಂದೆ ಲೋಕೋಪಯೋಗಿ ಇಲಾಖೆಯ ಮಂತ್ರಿಯಾಗಿದ್ದಾಗ ಮೈನರ್ ಇರಿಗೇಷನ್ ಟ್ಯಾಕ್ಸ್ ಮಾಡಿದ್ದೇವೆ. ಇಂಥ ಪರಿಸ್ಥಿತಿ ಇದ್ದಾಗ ನಾವು ರಿನೋವೇಟ್ ಮಾಡುತ್ತೇವೆ, 1000 ಕೋಟಿ ಖರ್ಚು ಮಾಡುತ್ತೇವೆಂದು ಹೇಳುವುದರಲ್ಲಿ ಅರ್ಥವಿಲ್ಲ. ಕೃಷ್ಣಾ ವಾಟರ್ ತಕರಾರು ಬಗ್ಗೆ ಹೇಳುವುದಾದರೆ ಬಚಾವತ್ ಅವಾರ್ಡ್‌ನವರು ಕೃಷ್ಣ ನೀರಿನ ಹಂಚಿಕೆ ಮಾಡಿಲ್ಲ. ಅವರು ಏನು ಮಾಡಿದರು ಎಂದರೆ they permitted Andhra–Pradesh Government –

ನೀವು 2000 ಇಸವಿಯೊಳಗೆ ಇಷ್ಟು ನೀರನ್ನು ಉಪಯೋಗ ಮಾಡಿಕೊಳ್ಳಿ, ಕರ್ನಾಟಕದವರು ಇಷ್ಟು ನೀರು ಉಪಯೋಗ ಮಾಡಿಕೊಳ್ಳಲಿ, ಮಹಾರಾಷ್ಟ್ರದವರು ಇಷ್ಟು ನೀರು ಉಪಯೋಗ ಮಾಡಿಕೊಳ್ಳಲಿ, ಕೃಷ್ಣಾದಲ್ಲಿ ಇನ್ನೂ ಹೆಚ್ಚಿನ ನೀರು ಇದೆ ಎಂದು ಅವರಿಗೆ ಗೊತ್ತಿತ್ತೋ, ಏನೋ. ಆದುದರಿಂದಲೇ ಬಚಾವತ್ ಅವಾರ್ಡ್‌ನವರು ನೀರಿನ ಷೇರನ್ನು ಮಾಡಿರುವುದನ್ನು ನಾವು ಸರಿ

ಎಂದು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದರು. ಆಂಧ್ರದವರಿಗೆ 900 ಟಿ.ಎಂ.ಸಿ. ಎಂದು ಹೇಳಿ ನಮಗೂ 700 ಟಿ.ಎಂ.ಸಿ. ಕೊಟ್ಟರು. ಮಹಾರಾಷ್ಟ್ರದವರಿಗೆ 550 ಟಿ.ಎಂ.ಸಿ. ಕೊಟ್ಟರು.

ನೀವು ಇಷ್ಟು ನೀರು, ಉಪಯೋಗ ಮಾಡಿ ಅಲ್ಲಿಂದ 2000ದವರೆಗೆ ನೀವು ಮತ್ತೆ ಕುಳಿತು ನೀರು ಎಷ್ಟಿರುತ್ತದೆ, ಯಾವ ರೀತಿಯಿಂದ ಹಂಚಿಕೊಳ್ಳಬೇಕೆಂದು ವಿಚಾರಮಾಡಿ ಎಂದು ಅವರು ನಮಗೆ ಹೇಳಿದ್ದಾರೆ. ಆವಾಗ ಅವಾರ್ಡ್ ಆ ರೀತಿ ಇದೆ ಎಂದು ನಾನು ತಿಳಿದುಕೊಂಡಿದ್ದೆ. ಅದಕ್ಕೆ ನಾನು ಹೇಳಿದೆ 2000 ಇಸವಿವರೆಗೆ ಏತಕ್ಕೆ ಕಾಯಬೇಕು ಎಂದು. ಆಂಧ್ರದವರಿಗೆ ತಮ್ಮ ಯೋಜನೆಗಳಿಗೆ ಇಲ್ಲಿಂದ ಯಾವುದೇ ನೀರು ಸಿಗಲಿ, ನಮ್ಮ ಯೋಜನೆಗಳಿಗೆ ನಮಗೆ ನೀರು ಸಿಗಲಿ, ಅದೇ ರೀತಿಯಿಂದ ಮಹಾರಾಷ್ಟ್ರದವರಿಗೆ ಯೋಜನೆಗಳಿಗೆ ನೀರು ಸಿಗಲಿ ಎಂದು ನಾನು ಮೊನ್ನೆದಿವಸ ಮುಖ್ಯಮಂತ್ರಿ ಆದಮೇಲೆ, ಹೈದರಾಬಾದ್‌ಗೆ ಹೋಗಿದ್ದೆ. ಏತಕ್ಕೆಂದರೆ ನಮ್ಮ ಮೂರು ಸರ್ಕಾರಗಳು, ನಮ್ಮ ಸರ್ಕಾರ ಆಂಧ್ರ ಸರ್ಕಾರ, ಮಹಾರಾಷ್ಟ್ರ ಸರ್ಕಾರ ಮೂರು ಕಾಂಗ್ರೆಸ್ ಸರ್ಕಾರ ಇದ್ದಾಗ ನಾವು ನಾವು ಜಗಳವಾಡುವುದು ಬೇಡ. 2000 ಇಸವಿಯ ತನಕ ಏತಕ್ಕೆ ಕೂಡಬೇಕು ? ಅದಕ್ಕೆ ಎಷ್ಟು ನೀರಿದೆ ಅದನ್ನು ನೀವೂ ಹಂಚಿಕೊಳ್ಳಿ, ನಮಗೂ ಹಂಚುವುದಕ್ಕೆ ಅವಕಾಶಮಾಡಿಕೊಡಿ ಎಂದು ನಾನು ಸ್ಪಷ್ಟವಾಗಿ ಡಾ।। ಚೆನ್ನಾರೆಡ್ಡಿಯವರು ಮುಖ್ಯಮಂತ್ರಿಯಾಗಿದ್ದಾಗ ಹೇಳಿದೆ. ನಾನು ಹೈದರಾಬಾದ್‌ಗೆ ಹೋಗಿ 2 ಸಾವಿರ ಎ.ಡಿ. ತನಕ ನಾವು ಕಾಯಬೇಕಾಗಿಲ್ಲ. ನಾವು ಮೂರು ಜನ ಕುಳಿತು, ನೀರನ್ನು ಹಂಚಿಕೊಳ್ಳಬಹುದೆಂದು ಅವರು ಹೇಳಿದರು. ಹೌದು ನೀವು ಹೇಳುವಂಥ ವಿಚಾರ ಒಳ್ಳೆಯದು, ನೀವು ಮಹಾರಾಷ್ಟ್ರ ಮುಖ್ಯಮಂತ್ರಿಗಳನ್ನು ಕೇಳಿರಿ ಎಂದರು. ನಾನು ಮಹಾರಾಷ್ಟ್ರದ ಮುಖ್ಯಮಂತ್ರಿಗಳಿಗೂ ಕೇಳಿದೆ, ಅವರೂ ಒಪ್ಪಿಕೊಂಡರು. ಇಲ್ಲ ನಾವು 2 ಸಾವಿರ ಎ.ಡಿ. ತನಕ ನಾವು ಏತಕ್ಕೆ ಕಾಯ ಬೇಕು. ಹೀಗೆ ನೀರನ್ನು ಹಂಚಿಕೊಂಡುಬಿಡೋಣವೆಂದರು. ನಮ್ಮ ನಮಗೆ ಎಷ್ಟು ನೀರು ಇದೆ ಎಂದರೆ 2 ಸಾವಿರ ಎ.ಡಿ. ತನಕ ಉಪಯೋಗ ಮಾಡಬಹುದು, ಯಾವಾಗ ಬೇಕಾದರೂ ಉಪಯೋಗ ಮಾಡತಕ್ಕಂಥ ಪೂರ್ತಿ ಅಧಿಕಾರ ನಮಗೆ ಸಿಕ್ಕುತ್ತದೆ. 2 ಸಾವಿರ ಎ.ಡಿ.ತನಕ ನಾವು ಕಾಯ ಬೇಕಾಗಿಲ್ಲವೆನ್ನತಕ್ಕಂಥ ಒಂದು ವಿಚಾರ ಎಲ್ಲಾ ಮುಖ್ಯಮಂತ್ರಿಗಳ ಮೊದಲನೆ ಮೀಟಿಂಗ್‌ನಲ್ಲಿ ಆಯಿತು. ಅದು ತಿರುಪತಿಯಲ್ಲಿ. ಎರಡನೆಯ ಮೀಟಿಂಗ್ ಆಯಿತು. ಮೈಸೂರಿನಲ್ಲಿ ಮತ್ತೊಂದು ಮೀಟಿಂಗ್ ಯಾವಾಗ ಆಯಿತು ಎಂದರೆ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳಾದ ಶ್ರೀಮಾನ್ ಪುಟ್ಟಸ್ವಾಮಿಗೌಡರು ನನ್ನ ಜೊತೆಗೆ ಬಂದಿದ್ದರು. ಆವಾಗ ನನ್ನ ಮಂತ್ರಿಮಂಡಲದಲ್ಲಿ ಮಾನ್ಯ ಮೊಯಿಲಿಯವರು ಲಾ ಮಿನಿಸ್ಟರು ಆಗಿದ್ದರು.

ಅವರೂ ನನ್ನ ಜೊತೆಯಲ್ಲಿ ಬಂದಿದ್ದರು. ಅವರಿಗೆ ಗೊತ್ತು, ಫೈಲ್ ನೋಡಿದರೆ ಗೊತ್ತಾಗುತ್ತದೆ, ನಾವು ಇದರ ಬಗ್ಗೆ ಮೈಸೂರಿನಲ್ಲಿ ಮೀಟಿಂಗ್‌ನಲ್ಲಿ ನಾನೇ ಇಷ್ಯೂ ಮೇಲೆ ಸ್ಪೀಚ್ ಮಾಡಿದೆ. ಈ ಇಷ್ಯೂಸ್‌ನಲ್ಲಿ ಪ್ರತಿಯೊಂದು ರಾಜ್ಯದವರು ಸ್ಟೇಟ್‌ನವರು ತಮ್ಮ ತಮ್ಮ ನಿಲುವೆಯನ್ನು ಹೇಳಬೇಕು. ಮುಂದಿನ ಮೀಟಿಂಗ್ ಮಹಾಬಲೇಶ್ವರದಲ್ಲಿ ಮಾಡಬೇಕೆಂದು ಆ ಮೀಟಿಂಗ್‌ನಲ್ಲಿ ನಿರ್ಣಯವಾಯಿತು. ಇವತ್ತಿನವರೆಗೂ ಆ ಮೂರನೆ ಮೀಟಿಂಗ್ ಆಗಲಿಲ್ಲ. ಎರಡನೇ ಮೀಟಿಂಗ್‌ನಲ್ಲಿ ಏನು ನಿರ್ಣಯ ತೆಗೆದುಕೊಂಡಿರುತ್ತಾರೆ ಆ ಇಷ್ಯೂ ಮೇಲೆ ಮೊದಲನೆಯ ಮೀಟಿಂಗ್ ಆದಮೇಲೆ ಈ ಮೀಟಿಂಗ್‌ನ ಅವಶ್ಯಕತೆ ಇದೆಯೋ ಇಲ್ಲವೂ ಎನ್ನುವ ಒಂದು ನಿರ್ಣಯಕ್ಕೆ ಬರಬೇಕಾಗುತ್ತದೆಂದು ಹೇಳುತ್ತೇನೆ. ಅದಕ್ಕಾಗಿ ನಾನು ಈ ಸಂದರ್ಭದಲ್ಲಿ ನಮ್ಮ ಮುಖ್ಯಮಂತ್ರಿಗಳನ್ನು ಮತ್ತು ಉಪಮುಖ್ಯಮಂತ್ರಿಗಳಾದ ಮಾನ್ಯ ಕೃಷ್ಣಾರವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಅವರು ಮೊದಲೆಲ್ಲಾ ಹೇಳುತ್ತಿದ್ದರು. ಪ್ರತಿಯೊಂದು ಹನಿ ನೀರನ್ನೂ ಉಪಯೋಗ ಮಾಡಿಕೊಳ್ಳುತ್ತೇವೆಂದು.

4.20 ಪಿಎಂ

ಆದರೆ ನಾವು ಅಥವಾ ಆಂಧ್ರದವರು ನೀರನ್ನು ಉಪಯೋಗ ಮಾಡುವುದಕ್ಕೆ ಹೋದರೆ ಆ ನೀರು ನಮ್ಮ ಹೆಸರಿನಲ್ಲಿ ಹಾಗೆಯೇ ಉಳಿಯುತ್ತದೆ. ಈ ಬಗ್ಗೆ ಸಾಕಷ್ಟು ವಿಚಾರ ಮಾಡಿ ತಮ್ಮ ಅಭಿಪ್ರಾಯವನ್ನು ಹೇಳಬೇಕು ಮತ್ತು ಸದನದ ವಿರೋಧಪಕ್ಷದ ಮತ್ತು ಈ ಪಕ್ಷದ ಮುಖಂಡರನ್ನು ಕರೆಯಿಸಿ ಈ ರೀತಿ ವಿಚಾರ ಬಂದಿದೆ ಎಂದು ಅವರು ಹೇಳಬಹುದು. ಆ ರೀತಿ ಹೇಳುವುದು ಸೂಕ್ತವೆಂದು ನನಗನ್ನಿಸುತ್ತದೆ. ಅಲ್ಲಿಂದ ಈಗ ಏನಾಗಿದೆ ಎಂದರೆ ಪ್ರತಿಯೊಬ್ಬರೂ ಮುಖ್ಯಮಂತ್ರಿಗಳು ಬಂದವರೆಲ್ಲಾ ಕೃಷ್ಣದಲ್ಲಿ ಒಂದು ತೊಟ್ಟು ನೀರನ್ನೂ ಆಂಧ್ರದವರಿಗೆ ಬಿಡುವ ಹಾಗೆ ಇಲ್ಲ, ಎಲ್ಲವನ್ನೂ ಉಪಯೋಗ ಮಾಡುತ್ತೇವೆಂದು ಹೇಳುತ್ತಾರೆ. ಈಗ ಉದಾಹರಣೆಗೆ ನಿಮಗೆ ಹೇಳಬೇಕಾದರೆ ನವೆಂಬರ್ 1994 ರವರಗೆ ಈ ಹೌಸ್ ಇರುತ್ತದೆ. ನವೆಂಬರ್ 1994ರ ನಂತರ ಚುನಾವಣೆ ಆದಮೇಲೆ ಮುಖ್ಯಮಂತ್ರಿ ಯಾರಿರುತ್ತಾರೆ, ನೀರಾವರಿ ಮಂತ್ರಿ ಯಾರಿರುತ್ತಾರೆ, ಯಾವ ಪಕ್ಷ ಅಧಿಕಾರಕ್ಕೆ ಬರುತ್ತದೋ ಎಂದು ಹೇಳುವುದಕ್ಕೆ ಕಷ್ಟ ಇದೆ. ಇಂಥ ಪರಿಸ್ಥಿತಿ ಇರುವಾಗ ನಾವು ನೀರನ್ನು ಉಪಯೋಗ ಮಾಡುತ್ತೇವೆಂದರೆ ಅದು ವಿಶ್ವಾಸಕ್ಕೆ ಹೋಗುವ ಹಾಗೆ ಇಲ್ಲವೆಂದು ಈ ಸಂದರ್ಭದಲ್ಲಿ ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಒಂದು ವೇಳೆ ನಿಮ್ಮನ್ನು ಯಾರಾದರೂ ಬಂದು ಕೇಳಿದರೆ ನಾವು ಏನು ಮಾಡುವುದು, ನಾವು ಅಧಿಕಾರದಲ್ಲಿ ಮುಂದುವರಿದಿದ್ದರೆ ನೀರನ್ನು ಉಪಯೋಗ ಮಾಡುತ್ತಿದ್ದೆವು, ನಾವು ಅಧಿಕಾರದಲ್ಲಿ ಮುಂದುವರಿಯಲಿಲ್ಲ ಎಂದು ಹೇಳಬೇಕಾಗುತ್ತದೆ. ಆದ್ದರಿಂದ ಜನರಿಗೆ ಇದು ಆಗುತ್ತದೆ, ಇದು ಆಗುವುದಿಲ್ಲ; ಇದು ಸಾಧ್ಯ, ಇದು ಅಸಾಧ್ಯ ಎಂಬ ವಿಚಾರವನ್ನು ಸ್ಪಷ್ಟವಾಗಿ ಹೇಳಬೇಕಾದುದು ಮುಖ್ಯ. ಇವತ್ತು ನೀರನ್ನು ಉಪಯೋಗ ಮಾಡುತ್ತೇವೆಂದು ಹೇಳುತ್ತಿದ್ದೀರಿ. ಆದರೆ, ಜನ ಹೇಳುತ್ತಿದ್ದಾರೆ. ಈ ಸರ್ಕಾರ ನೀರನ್ನು ಉಪಯೋಗ ಮಾಡುವ ಹಾಗೆ ಇಲ್ಲ ಎಂದು. ಸರ್ಕಾರ ಅಂದರೆ ಈ ರಾಜ್ಯ ಸರ್ಕಾರ. ತಾವು ಅಧಿಕಾರಕ್ಕೆ ಬಂದು ಕೇವಲ 3 ತಿಂಗಳಾಗಿದೆ. ಒಂದು ವೇಳೆ ಕೃಷ್ಣ ನದಿಯದ್ದಾದರೆ ಅದಕ್ಕೆ ಇವರು ಜವಾಬ್ದಾರರೇ ? 1964ಕ್ಕೆ ಶ್ರೀ ಲಾಲ್‌ಬಹದ್ದೂರ್‌ಶಾಸ್ತ್ರಿಯವರು ಫೌಂಡೇಷನ್ ಸ್ಟೋನ್ ಹಾಕಿದರು. ನಾನು ಆಗ ಲೋಕೋಪಯೋಗಿ ಮಂತ್ರಿಯಾಗಿದ್ದೆ. ಅವರನ್ನು ಕರೆದುಕೊಂಡು ಬಂದು ಫೌಂಡೇಷನ್ ಸ್ಟೋನ್ ಹಾಕಿಸಿದೆ. ಆ ಸಂದರ್ಭದಲ್ಲಿ ಶ್ರೀ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದರು. ಅವರೂ ಕೂಡ ಸಮಾರಂಭಕ್ಕೆ ಬಂದಿದ್ದರು. ನಾನು, ನಿಜಲಿಂಗಪ್ಪನವರು ಮತ್ತು ಲಾಲ್‌ಬಹದ್ದೂರ್ ಶಾಸ್ತ್ರಿಯವರು ಆಲಮಟ್ಟಿ ಮತ್ತು ನಾರಾಯಣಪುರ ಎರಡೂ ಕಡೆ ಹೋಗಿ ಫೌಂಡೇಷನ್ ಸ್ಟೋನ್ ಹಾಕಿದೆವು. ಇವತ್ತಿಗೆ 30 ವರ್ಷಗಳಾಯಿತು. ನಾನು ಕೇಳತಕ್ಕದ್ದು 30 ವರ್ಷಗಳಲ್ಲಿ ಇನ್ನೂ ಮೂರನೇ ಒಂದು ಭಾಗ ಕೆಲಸ ಆಗಿಲ್ಲ. ಅಂದಮೇಲೆ ನಾವು ನೀರನ್ನು ಉಪಯೋಗ ಮಾಡುತ್ತೇವೆಂದರೆ ಅಲ್ಲಿರುವಂಥ ಜನ ಯಾವ ರೀತಿಯಿಂದ ನಮ್ಮ ಮಾತಿನ ಮೇಲೆ ವಿಶ್ವಾಸ ಮಾಡುತ್ತಾರೆಂದು ತಾವು ವಿಚಾರ ಮಾಡಬೇಕೆಂದು ಈ ಸಂರ್ಭದಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ನೀರನ್ನು ನಾವು ಉಪಯೋಗ ಮಾಡುವ ಹಾಗೆ ಇಲ್ಲವೆಂದರೆ ನಾವು ಎಲ್ಲಾ ಕಷ್ಟದಲ್ಲಿ ಸಿಕ್ಕಬೇಕಾಗುತ್ತದೆ. ಸರ್ಕಾರ ನಡೆಯುತ್ತಿದೆ. ಇಲ್ಲವೆಂದು ಹೇಳುವ ಹಾಗೆ ಇಲ್ಲ. ಆದರೆ ನಿಮ್ಮ ಪೊಳ್ಳು ಘೋಷಣೆ ಜನರಿಗೆ ಗೊತ್ತಾಗುತ್ತದೆ 1993 ರಲ್ಲಿ 2000 ಎ.ಡಿ ಒಳಗೆ ನೀರು ಉಪಯೋಗ ಮಾಡುತ್ತೇವೆಂದು ಹಿಂದಿನ ಮುಖ್ಯಮಂತ್ರಿಗಳು, ನೀರಾವರಿ ಮಂತ್ರಿಗಳು ಘೋಷಣೆ ಮಾಡಿ ಹೋದರು. ಆದರೆ ಏನೂ ಕೆಲಸ ಮಾಡಿಲ್ಲವೆಂದು ಹೇಳುತ್ತಾರೆ. ಅದರ ಬದಲಾಗಿ ನೀರನ್ನು ಉಪಯೋಗ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಬಹುದೇ ಹೊರತು ನೀರಿನ ಉಪಯೋಗವನ್ನು ಪೂರ್ತಿಯಾಗಿ ಮಾಡುತ್ತೇವೆಂದು. ಬೆನ್ನುತಟ್ಟಿ ಹೇಳುವ ಪರಿಸ್ಥಿತಿಯಲ್ಲಿ ಯಾರೂ ಇಲ್ಲವೆಂದು ಅನ್ನಿಸುತ್ತದೆ. ಯಾರಾದರೂ ಹೇಳಿದರೆ ಜನ ನಿಮ್ಮ ಹೇಳಿಕೆ ಮೇಲೆ ವಿಶ್ವಾಸ ಮಾಡುವ ಹಾಗೆ ಇಲ್ಲವೆಂದು ಹೇಳಬೇಕಾಗುತ್ತದೆ. ಏಕೆಂದರೆ ನವೆಂಬರ್ 1994ರಲ್ಲಿ ಯಾವ ಪಕ್ಷ ಅಧಿಕಾರಕ್ಕೆ ಬರುತ್ತದೆ. ಯಾವ ಪಕ್ಷ ವಿರೋಧ ಪಕ್ಷವಾಗಿ ಕೂಡುತ್ತದೆ. ಯಾರು ಮುಖ್ಯ

ಮಂತ್ರಿಯಾಗುತ್ತಾರೆ, ಯಾರು ನೀರಾವರಿ ಮಂತ್ರಿಯಾಗುತ್ತಾರೆಂದು ಇವತ್ತು ಹೇಳುವುದು ಕಷ್ಟವಾಗುತ್ತದೆ.

ಅದರ ಸಲುವಾಗಿ ಅವರು ಬಂದಾಗ ಹೇಳಬಹುದು. ನಾನು ಮುಖ್ಯಮಂತ್ರಿಯಾಗಿ ಕಂಟಿನ್ಯೂ ಆಗಿದ್ದರೆ ನಾನು ನೀರು ಉಪಯೋಗ ಮಾಡಿಕೊಳ್ಳುತ್ತಿದ್ದೆ ಎಂದು. ಆ ರೀತಿ ಹೇಳುವುದು ಕುಂಟು ನೆವ ಆಗುತ್ತದೆಂದು ಈ ಸಂದರ್ಭದಲ್ಲಿ ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಸರ್ಕಾರದಿಂದ ಒಂದು ವಿಚಾರ ಪ್ರಯತ್ನ ಮಾಡುತ್ತಿದ್ದಾರೆ ಅದೇನೆಂದರೆ what do you mean by commitment of water, what do you mean by utilisation of water....

ಏಕೆಂದರೆ ನಾನು ಎಷ್ಟೇ ಪ್ರಯತ್ನ ಮಾಡಿದರೂ ಅದರ ಬಗ್ಗೆ ತಿಳಿದುಕೊಳ್ಳಲಿಕ್ಕೆ ಸಾಧ್ಯವಾಗಲಿಲ್ಲ. ಅದರ ಸಲುವಾಗಿ ಅವರು ಹೇಳಲಿ ಕಮಿಟ್‌ಮೆಂಟ್ ಅಂದರೇನು ? ಯುಟಿಲೈಸೇಷನ್ ಅಂದರೇನು ? ಡ್ಯಾಮ್ ಕಟ್ಟಿದರೆ ಯುಟಿಲೈಸೇಷನ್ ಆಯಿತೇ ಅಥವಾ ಡ್ಯಾಮ್ ಕಟ್ಟಿ ಕೆನಾಲ್ ಮತ್ತು ಡಿಸ್ಟ್ರಿಬ್ಯುಟರೀಸ್ ಮತ್ತು ಸಬ್ ಚನಾಲ್ ಪೂರ್ತಿಮಾಡಿ ಪ್ರತಿಯೊಂದು ಹೊಲಕ್ಕೆ ನೀರು ಬಿಟ್ಟಾಗ ಯುಟಿಲೈಸೇಷನ್ ಆಗುತ್ತದೆಯೇ ಅದನ್ನು ಸ್ಪಷ್ಟವಾಗಿ ಹೇಳಬೇಕೆಂದು ನಾನು ಈ ಸಂದರ್ಭದಲ್ಲಿ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಾನು ನೋಡುತ್ತಿದ್ದೇನೆ, ನಾನು ಹೊರಗಡೆಯಿಂದ ಬರುವ ದಿನಪತ್ರಿಕೆಗಳನ್ನು ಓದುತ್ತಾ ಇದ್ದೇನೆ. ಅನೇಕ ಯೋಜನೆಗಳಿಗೆ ಎಸ್ಟಿಮೇಟ್ ಇಲ್ಲ. ಅವುಗಳಿಗೆ ಪ್ಲಾನ್ ಮತ್ತು ಎಸ್ಟಿಮೇಟ್ ಇಲ್ಲ. ಅವು ಎಂಟನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇಲ್ಲ. ಅವುಗಳಿಗೆ ದುಡ್ಡಿಲ್ಲ. ಅಂತಹವುಗಳಿಗೆ ಫೌಂಡೇಷನ್ ಹಾಕಿದ್ದಾರೆ, ಹೇಗೆ ಮಾಡುತ್ತಾರೆಂದರೆ ಆ ಯೋಜನೆ ಬಂದರೆ ಬರಲಿ ಬರದಿದ್ದರೆ ಹೋಗಲಿ ಫೌಂಡೇಷನ್ ಹಾಕುವುದರಿಂದ ಒಂದು ಕಲ್ಲು ಮಾತ್ರ ಹೋಗುತ್ತದೆಂದು ತಿಳಿದುಕೊಂಡು ಜನರಿಗೆ ನಾವು ಮೋಸ ಮಾಡಬಾರದು. ಇದು ಆಗುತ್ತದೆ, ಇದು ಆಗುವುದಿಲ್ಲ ವೆಂದು ಸ್ಪಷ್ಟವಾಗಿ ಜನರಿಗೆ ಹೇಳಬೇಕು. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಅನೇಕ ಕಡೆಗಳಲ್ಲಿ ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳು ಹೋದಲ್ಲಿ ಕಲ್ಲು ಹಾಕಿದ್ದಾರೆ. ಕಲ್ಲು ಹಾಕಿದವರಿಗೆ ಗೊತ್ತಿದೆ ಕಲ್ಲು ಹಾಕಿದ್ದೇವೆಂದು. ಆ ಯೋಜನೆಗಳಿಗೆ ಪ್ಲಾನ್ ಇಲ್ಲ, ಎಸ್ಟಿಮೇಟ್ ಇಲ್ಲ. ಪ್ಲಾನ್‌ನಲ್ಲಿ ಇದು ಇಟ್ಟಿಲ್ಲ. ಇದಕ್ಕೆ ಕೇಂದ್ರ ಸರ್ಕಾರದವರು ಒಪ್ಪಿಗೆ ಕೊಟ್ಟಿಲ್ಲ. ಅವರು ಯಾವ ರೀತಿಯಿಂದ ಇದಕ್ಕೆ ಫೌಂಡೇಷನ್ ಸ್ಟೋನ್ ಹಾಕಬೇಕೆನ್ನುವ ವಿಚಾರ ಮಾಡಲಾರದೆ ಫೌಂಡೇಷನ್ ಅಂದರೆ ಕಲ್ಲು ತರುವುದು ಫೌಂಡೇಷನ್ ಹಾಕುವುದು. ಈ ರೀತಿ ಹಾಕುವುದು ಸರಿ ಅನಿಸುವುದಿಲ್ಲ. ಆ ರೀತಿ ಫೌಂಡೇಶನ್ ಹಾಕಿದರೆ ಜನರಿಗೆ ಮೋಸ ಮಾಡಿದಂತಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಈಗ ಅನೇಕ ಯೋಜನೆಗಳು ಅರ್ಧಂಬರ್ಧ ಆಗಿವೆ. ನಿಮಗೆ ಉದಾಹರಣೆಗೆ ಹೇಳಬೇಕಾದರೆ ನನ್ನ ಹತ್ತಿರ ಸಾಕಷ್ಟು ಮಾಹಿತಿಗಳು ಇವೆ. ನಾನು ಹೆಚ್ಚಿಗೆ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಏಕೆಂದರೆ ಸಮಯ ಸಾಕಷ್ಟು ಇಲ್ಲ. ನಾನು ಅನೇಕ ವಿಚಾರಗಳ ಬಗ್ಗೆ ಮಾತನಾಡುವವನು ಇದ್ದೆ. ನಾನು ಹೇಳುವುದೇನೆಂದರೆ ಈ ಯೋಜನೆಗಳನ್ನು ತಿರುಪತಿಯಲ್ಲಿ ಚೌರ ಮಾಡಿದಂತೆ ಮಾಡಬೇಡಿ. ದಯಮಾಡಿ. ನಾನು ಈಗಿನ ಸರ್ಕಾರ ಎಂದು ಹೇಳುತ್ತಿಲ್ಲ. 200–300 ಕೋಟಿ ರೂಪಾಯಿಗೆ ಯೋಜನೆ ಹೇಗೆ ಹಣ ಖರ್ಚು ಮಾಡುತ್ತಾ ಇದ್ದೀರಿ ? 1 ಕೋಟಿ 2 ಕೋಟಿ ಇಡುವುದು ಈ ರೀತಿ ಮಾಡುವುದು ಸರಿಯಲ್ಲ. ಅನೇಕ ಯೋಜನೆಗಳನ್ನು ಇದರಲ್ಲಿ ಕೊಟ್ಟಿದ್ದಾರೆ. ನಮ್ಮ ಜಿಲ್ಲೆಯ ಯೋಜನೆಗಳನ್ನು ನಾನು ಹೇಳಬೇಕಾದರೆ ನನ್ನ ಮತದಾರ ಕ್ಷೇತ್ರದಲ್ಲಿ ಒಂದು ಲೋಯರ್ ಮಲ್ಲಾಮುರಿ, ಬೆಣ್ಣೆತೊರೆ, ಅಮಾತ್ಯ ಈ ಮೂರು ಯೋಜನೆಗಳು ನಮ್ಮ ಜಿಲ್ಲೆಯಲ್ಲಿವೆ. ಅವುಗಳಿಗೆ 1974ರಲ್ಲಿ ಫೌಂಡೇಷನ್ ಹಾಕಲಾಗಿದೆ. ಅವತ್ತಿನಿಂದ ಇವತ್ತಿನವರೆಗೆ ಒನ್‌ಥರ್ಡ್ ವರ್ಕ್ ಕೂಡ ಆಗಿಲ್ಲ. ಈಗಾಗಲೇ ಪ್ರಾರಂಭ ಮಾಡಿದ ಕೆಲಸ ಕಾರ್ಯಗಳು ಅದರ ಮೇಲೆ ನೀವು ಲೆಕ್ಕಹಾಕಿ. ಅವುಗಳಿಗೆ ನಿಮ್ಮ ಹತ್ತಿರ ದುಡ್ಡಿಲ್ಲವೆಂದರೆ ಹೊಸ ಕೆಲಸ ಕಾರ್ಯಗಳಿಗೆ ನಿಮ್ಮ ಹತ್ತಿರ ದುಡ್ಡು ಎಲ್ಲಿಂದ

ಬರುತ್ತದೆ ? ತಾವು ಇದನ್ನು ವಿಚಾರ ಮಾಡಬೇಕು. ನಾವು ಮಾಡುತ್ತೇವೆ, ನಾವು ನೀರು ನಿಲ್ಲಿಸುತ್ತೇವೆ, ನಿಮ್ಮ ಭೂಮಿ ನೀರಾವರಿಯಾಗಲು ಅವಕಾಶ ಮಾಡಿಕೊಡುತ್ತೇವೆಂದು ಹೇಳುವುದು ಸರಿಯಲ್ಲ. ನಾನು ಮೂರು ಯೋಜನೆಗಳನ್ನು ಹೇಳಿದ್ದೇನೆ. ಅನೇಕ ಯೋಜನೆಗಳನ್ನು ಈ ಒಂದು ಬುಕ್‌ನಲ್ಲಿ ಪ್ರಿಂಟ್ ಮಾಡಿದ್ದಾರೆ. ಅದು ಓದಿದರೆ ನಿಮಗೆ ಗೊತ್ತಾಗುತ್ತದೆ. ಅನೇಕ ಕಡೆ 70–80 ಕೋಟಿ ರೂಪಾಯಿ ಖರ್ಚಾಗುವ ಕಡೆ 20ವರ್ಷಗಳಾದರೂ ಒನ್‌ಥರ್ಡ್ ಹಣ ಅಲ್ಲಿ ಖರ್ಚಾಗಿಲ್ಲ. ಕೆಲಸಗಳು ಹಾಗೆಯೇ ಬಿದ್ದಿವೆ. ಈಗ ನಾವು ಪೂರ್ತಿ ನೀರು ಉಪಯೋಗ ಮಾಡುತ್ತೇವೆ ಎನ್ನುವ ನಿಮ್ಮ ಭಾಷಣದ ಮೇಲೆ ಯಾವ ರೀತಿಯ ವಿಶ್ವಾಸ ಇಡಬೇಕು ? ನಿಮ್ಮ ಭಾಷಣದ ಮೇಲೆ ಯಾವರೀತಿಯಲ್ಲಿ ವಿಶ್ವಾಸ ಇಡಬೇಕೆಂದು ತಾವು ಹೇಳಬೇಕು. ಆದಕ್ಕಾಗಿ ನಾನು ಈ ಸಂದರ್ಭದಲ್ಲಿ ಅರಿಕೆ ಮಾಡಿಕೊಳ್ಳುವುದು ಇಷ್ಟೆ, ಅದು ಮಾಡುತ್ತೇವೆ. ಇದು ಮಾಡುತ್ತೇವೆಂದು ಹೇಳಿದರೂ ನೀವು ಮಾಡುವ ಪ್ರಯತ್ನ ಮಾಡಿದರೂ ಕೂಡ ಇವತ್ತು ಮಾಡುವುದಕ್ಕಾಗುವುದಿಲ್ಲ ಎನ್ನುವ ಮಾತನ್ನು ಸ್ಪಷ್ಟವಾಗಿ ಹೇಳಬೇಕಾಗಿತ್ತು. ಅದು ಬಹಳ ಅವಶ್ಯಕವೆಂದು ನನಗನಿಸುತ್ತದೆ.

ಇನ್ನು ಅಪ್ಪರ್‌ಕೃಷ್ಣ ಬಗ್ಗೆ ಬರುತ್ತೇನೆ. ಅಪ್ಪರ್‌ಕೃಷ್ಣಕ್ಕೆ 1964ರಲ್ಲಿ ಫೌಂಡೇಷನ್ ಹಾಕಲಾಯಿತು. ನಾನು ಲೋಕೋಪಯೋಗಿ ಸಚಿವನಾಗಿದ್ದಾಗ. ಇವತ್ತು 30 ವರ್ಷಗಳಾದರೂ ಕೂಡ ಅದು ಆಗಿಲ್ಲ. ಉಪಮುಖ್ಯಮಂತ್ರಿಗಳು ಹೇಳಲಿ 30 ವರ್ಷಗಳಲ್ಲಿ ಆದಂತಹ ಪ್ರಗತಿ ಏನೆಂದು ? ಇಷ್ಟು ಎಕರೆಗೆ ನೀರು ಕೊಟ್ಟಿದ್ದೇವೆ, ಇಷ್ಟು ಎಕರೆಗೆ ನೀರು ಕೊಡಬೇಕಾಗಿದೆ, ಅದು ಹೇಳಲಿ, ಆಲಮಟ್ಟಿಗೆ ಕ್ರಸ್ಟ್‌ಗೇಟ್ ಹಾಕಿಲ್ಲ ಇದನ್ನು ತಾವು ವಿಚಾರ ಮಾಡಬೇಕು. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಅನೇಕರಿಗೆ ಗೊತ್ತಿಲ್ಲ ಅಪ್ಪರ್‌ಕೃಷ್ಣದಲ್ಲಿ ಬರುವ ಆಲಮಟ್ಟಿ ಮತ್ತು ನಾರಾಯಣಪುರ ಎರಡೂ ಒಂದೇ ಎಂದು ತಿಳಿದುಕೊಂಡಿದ್ದಾರೆ. ಆಲಮಟ್ಟಿಯಲ್ಲಿ ನಾನು ಹಿಂದಕ್ಕೆ ಲೋಕೋಪಯೋಗಿ ಮಿನಿಸ್ಟರ್ ಇದ್ದಾಗ ಒಂದು ಕ್ರಸ್ಟ್‌ಗೇಟ್ ಹಾಕಬೇಕೆಂದು ಇಂಜಿನಿಯರ್ ನನ್ನ ಹತ್ತಿರ ಬಂದು ಹೇಳಿದರು. ನಾನೂ ಹೇಳಿದೆ ಎಷ್ಟು ದುಡ್ಡು ಖರ್ಚಾಗುತ್ತದೆಂದು, ಅವರು ಏನೋ ಒಂದು ಹೇಳಿದರು. ಆಗ ನಾರಾಯಣಪುರ ಡ್ಯಾಮ್‌ಗೆ ಕ್ರಸ್ಟ್‌ಗೇಟ್ ಹಾಕಿ, ಈಗ ಅದು ಕಂಪ್ಲೀಟ್ ಆಗಿದೆ. ಇನ್ನು ಕೆನಾಲ್ ಮತ್ತು ಡಿಸ್ಟ್ರಿಬ್ಯುಟರೀಸ್ ಮತ್ತು ಫೀಲ್ಡ್ ಚೆನಾಲ್‌ಗಳು ಆಗಿಲ್ಲ. ಅಪ್ಪರ್‌ಕೃಷ್ಣದಲ್ಲಿ ನನಗನಿಸುತ್ತದೆ 20 ಲಕ್ಷ ಎಕರೆ ನೀರಾವರಿಯಾಗಬೇಕು. ಈಗ ಬಹುಶಃ ಎರಡೂವರೆ ಮೂರು ಲಕ್ಷ ಎಕರೆ ಮಾತ್ರ ನೀರಾವರಿಯಾಗಿದೆ. ಇಂತಹ ಪರಿಸ್ಥಿತಿ ಇದ್ದಾಗ ಜನರಿಗೆ ಯಾವರೀತಿಯಿಂದ ನೀರನ್ನು ಪೂರ್ತಿಯಾಗಿ ಉಪಯೋಗ ಮಾಡುತ್ತೇವೆಂದು ಹೇಳುವುದಕ್ಕೆ ಸಾಧ್ಯವಿದೆ ಅದನ್ನು ಸರ್ಕಾರ ವಿಚಾರ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಸರ್ಕಾರದಲ್ಲಿ ಅಪೀಲ್ ಮಾಡಿಕೊಳ್ಳುತ್ತಿದ್ದೇನೆ. ಆಲಮಟ್ಟಿ ಡ್ಯಾಮ್‌ಗೆ ಕ್ರಸ್ಟ್‌ಗೇಟ್ ಹಾಕಬೇಕು. ಕ್ರಸ್ಟ್‌ಗೇಟ್ ಹಾಕಿದರೆ ಬಾಗಲಕೋಟೆ ಮುಳುಗಡೆಯಾಗುತ್ತದೆ. ಕ್ರಸ್ಟ್‌ಗೇಟ್ ಹಾಕಿದಾಗ ಬಾಗಲಕೋಟೆ ಶೇಕಡ 50ರಷ್ಟು ಮುಳುಗಡೆಯಾಗುತ್ತದೆ. ಅಲ್ಲಿನ ಜನರನ್ನು ಬೇರೆ ಕಡೆ ಸಾಗಿಸಬೇಕಾಗುತ್ತದೆ. ನಾನು ಈ ಹಿಂದೆ ಮುಖ್ಯಮಂತ್ರಿಯಾಗಿದ್ದಾಗ ಬಾಗಲಕೋಟೆಗೆ ಹೋಗಿದ್ದೆ. ನಾನು ಪರಾಮರ್ಶೆ ಮಾಡಿದ್ದೇನೆ. ಆಫೀಸರ್ಸ್ ಜೊತೆ ನಾನು ಪೂರ್ತಿ ಡಿಸ್‌ಕಷನ್ ಮಾಡಿದ್ದೇನೆ. ಆಫೀಸರ್ ಹೇಳಿದರು ನಮಗೆ ಇಷ್ಟು ದುಡ್ಡು ಕೊಡಿರಿ ನಾವು ಬಾಗಲಕೋಟೆಯನ್ನು ಬೇರೆ ಕಡೆ ಶಿಫ್ಟ್ ಮಾಡುತ್ತೇವೆಂದು. ಶ್ರೀಮಾನ್ ಕೃಷ್ಣಾರವರು ಫೈಲ್ ನೋಡಿದರೆ ಗೊತ್ತಾಗುತ್ತದೆ. ಇದುವರೆಗೆ ತಾವೇನು ಮಾಡಿದ್ದೀರಿ. ಏನು ಡಿಸೀಷನ್ ತೆಗೆದುಕೊಂಡಿದ್ದೀರಿ ಅದನ್ನು ತಮ್ಮ ಉತ್ತರದಲ್ಲಿ ಹೇಳಬೇಕಂದ್ರೆ ಈ ಸಂದರ್ಭದಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ಬಾಗಲಕೋಟೆ ಶೇಕಡ 50ರಷ್ಟು ಮುಳುಗಡೆಯಾದರೆ ಸುಮಾರು ಅದಕ್ಕೆ 380 ಕೋಟಿ ರೂಪಾಯಿ ಬೇಕಾಗುತ್ತದೆ. ಅಷ್ಟು ದುಡ್ಡು ನಮ್ಮ ಹತ್ತಿರವಿಲ್ಲ. ನನಗನಿಸುತ್ತದೆ. ವರ್ಲ್ಡ್‌ಬ್ಯಾಂಕಿನವರು ಸ್ವಲ್ಪ ಸಹಾಯ ಮಾಡಬಹುದು. ಎರಡನೆಯ ಸಲ ಸಹಾಯ ಮಾಡುತ್ತಿದ್ದಾರೆ ಈಗ ಸರ್ಕಾರ ಮನಸ್ಸು ಮಾಡಬೇಕು.

ಈಗ ನಾನು ಕೇಳಿಕೊಳ್ಳುವುದು ಇಷ್ಟೆ. ವರ್ಲ್ಡ್‌ಬ್ಯಾಂಕ್‌ನಿಂದ ದುಡ್ಡು ಕೊಡುತ್ತಾರೆ, ಬಾಗಲಕೋಟೆಯಲ್ಲಿ ಮುಳುಗಡೆಯಾದಂಥ, ಪ್ರದೇಶದ ಜನರಿಗೆ ಯಾವಾಗ ಕಾಂಪನ್‌ಸೇಷನ್‌ಅನ್ನು ಕೊಡುತ್ತೀರಿ ಎನ್ನುವ ವಿಚಾರವನ್ನು ಸ್ಪಷ್ಟವಾಗಿ ನಮಗೆ ತಿಳಿಸಬೇಕೆಂದು ನಾನು ಶ್ರೀಮಾನ್ ಕೃಷ್ಣ ಅವರಲ್ಲಿ ನಮ್ರತೆಯಿಂದ ವಿನಂತಿಮಾಡಿಕೊಳ್ಳುತ್ತಿದ್ದೇನೆ. ಅಲ್ಲಿಂದ ಕೃಷ್ಣಾ ಬಗ್ಗೆ ನಾನು ಹೆಚ್ಚು ಮಾತನಾಡುವ ಹಾಗಿಲ್ಲ. ಕಾವೇರಿ ಬಗ್ಗೆ ನನ್ನ ವಿಚಾರಗಳನ್ನು ಹೇಳುತ್ತಾ ಇದ್ದೇನೆ. ನಾನು 1968ರಲ್ಲಿ ಮುಖ್ಯಮಂತ್ರಿಯಾಗಿದ್ದಾಗ, ಕಾವೇರಿಯ ಎಲ್ಲಾ ಯೋಜನೆಗಳನ್ನು ನಾವು ಸ್ಟಾರ್ಟ್ ಮಾಡಿದ್ದೆವು. ಸುವರ್ಣವಾಗಲಿ, ಕಬಿನಿಯಾಗಲಿ, ಹಾರಂಗಿಯಾಗಲೀ, ಹೇಮಾವತಿಯಾಗಲೀ ಇವೆಲ್ಲವೂ ಶ್ರೀಮಾನ್ ನಿಜಲಿಂಗಪ್ಪನವರು, ನಾನು ಮುಖ್ಯಮಂತ್ರಿಯಾಗಿದ್ದಾಗ ಪ್ರಾರಂಭ ಮಾಡಿದ್ದೆವು. ಆದರೆ ಇವತ್ತಿನವರೆಗೆ ಅವಕ್ಕೆ ಸೆಂಟ್ರಲ್ ವಾಟರ್ ಬೋರ್ಡ್‌ನಿಂದ ಕ್ಲಿಯರೆನ್ಸ್ ಇಲ್ಲ. ಕ್ಲಿಯರೆನ್ಸ್ ಇಲ್ಲ ಅಂದಮೇಲೆ ಇವತ್ತಿನವರೆಗೆ ಆ ಯೋಜನೆಗಳಿಗೆ ಪ್ಲಾನಿಂಗ್ ಕಮೀಷನ್‌ನಿಂದ ದುಡ್ಡೂ ಇಲ್ಲ. ಆವಾಗ ಕೇಂದ್ರದಲ್ಲಿ ಸಂಬಂಧಪಟ್ಟ ಮಂತ್ರಿಗಳು ಡಾ।। ಕೆ.ಎಲ್. ರಾವ್ ಇದ್ದರು. ಕೊನೆಯ ಮೀಟಿಂಗ್‌ಗೆ ನಾನು ಹೋಗಿದ್ದೆ. ಆಗ ಕರುಣಾನಿಧಿಯವರು ಮುಖ್ಯಮಂತ್ರಿಯಾಗಿ ಇದ್ದರು. ಅವರು ಹೇಳುತ್ತಿದ್ದರು ಏನೆಂದರೆ, ವೀರೇಂದ್ರಪಾಟೀಲರು "I will abide by the 1924 agreement" ಎಂದು ಒಂದು ಕಾಗದದಲ್ಲಿ ಬರೆದುಕೊಡಲಿ. ಬರೆದುಕೊಟ್ಟು ಎಷ್ಟುಬೇಕಾದರೂ ಮಾಡಲಿ, ನಾವು ಅಡ್ಡಬರುವುದಿಲ್ಲ ಎಂದು ಹೇಳಿದರು. ಆವಾಗ ನನಗೆ ಬಹಳ ಸಿಟ್ಟು ಬಂದು ನಾನು ಹೇಳಿದೆ – It is like putting my signature on a paper ಎಂದು. ಕರ್ನಾಟಕದ ಜನತೆಗೆ ಮೋಸ ಮಾಡುವುದಕ್ಕೆ ನಾನು ತಯಾರಿಲ್ಲ ಕಾವೇರಿ ಬೇಸಿನ್ ಜನರಿಗೆ ಮೋಸ ಮಾಡುವುದಕ್ಕೆ ನಾನು ತಯಾರಿಲ್ಲಾ ಎಂದು ಹೇಳಿ I will go ahead without clearance, ಅಂತ ಹೇಳಿ ಬಂದಿದ್ದೆ. ಈಗ ನಾನು ಹೇಳುವಂಥಾದ್ದು ಟ್ರಿಬ್ಯುನಲ್ ಮಾಡಿ ಇಂಟರಿಮ್ ವರದಿ ಬಂದು ಒಂದು ವರ್ಷವಾಗಿದೆ. ಆದರೆ 1968–69ರಿಂದ ಇಲ್ಲಿಯವರೆಗೆ ಸರ್ಕಾರಗಳು ಏನೂ ಮಾಡಲಿಲ್ಲ. ಇದು ದೊಡ್ಡ ಪ್ರಾಜೆಕ್ಟ್ ಅಲ್ಲ. ಕಬಿನಿಯಾಗಲೀ, ಹೇಮಾವತಿಯಾಗಲೀ, ಹಾರಂಗಿ, ಸುವರ್ಣವಾಗಲಿ, ಒಂದು ಮಾಡಬೇಕು ಎಂದು ಮನಸ್ಸಿದ್ದರೆ ಎರಡು – ಮೂರು ವರ್ಷಗಳಲ್ಲಿ ಮಾಡಿ ಮುಗಿಸಬೇಕಾಗಿತ್ತು. ಆದರೆ ಇಪ್ಪತ್ತು ವರ್ಷಗಳಾದರೂ ಇವರ ಕೈಯಲ್ಲಿ ಮಾಡಲಾಗದೇ ಇದ್ದುದ್ದಕ್ಕೆ ಕಾರಣರು ಯಾರು ಎಂದು ತಾವು ವಿಚಾರ ಮಾಡಬೇಕಾಗುತ್ತದೆ.

ನಮ್ಮದು ತಪ್ಪು ಇದ್ದರೆ ಹೌದಪ್ಪ, ನಮ್ಮ ತಪ್ಪು ಎಂದು ಒಪ್ಪಿಕೊಂಡು ಹೇಳಬೇಕಾಗುತ್ತದೆ. ಅದರಲ್ಲಿ ದೊಡ್ಡಸ್ತಿಕೆ ಏನಿಲ್ಲ. ಇಲ್ಲಿ ನಾವು ತಪ್ಪು ಮಾಡಿಲ್ಲ, ಎರಡನೆಯವರು ತಪ್ಪು ಮಾಡಿದ್ದಾರೆ ಎಂದು ಹೇಳಿದರೆ ಅದರಲ್ಲಿ ಅರ್ಥ ಇಲ್ಲವೆಂದು ನನಗನ್ನಿಸುತ್ತದೆ. ಅದಕ್ಕಾಗಿ ನಾನು ಈ ಸಂದರ್ಭದಲ್ಲಿ ಅವರಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೆ, ಈ ಯೋಜನೆಗಳನ್ನು ಆದಷ್ಟು ಬೇಗ ಕಾರ್ಯಗತ ಮಾಡಬೇಕು. ನಿಮಗೆ ಹೇಳಬೇಕಾದರೆ ಕಾವೇರಿ ಬೇಸಿನ್‌ನಲ್ಲಿ ನಮ್ಮ ದುರ್ದೈವವೋ, ಕಾವೇರಿ ಬೇಸಿನ್ ಜನರ ದುರ್ದೈವವೋ ಎಂದು ನನಗನ್ನಿಸುತ್ತದೆ. ಅಲ್ಲಿ ರಿಸರ್ವಾಯರ್ಸ್ ತಯಾರಾಗಿವೆ. ಆದರೆ ಕೆನಲ್‌ಗಳು ಇಲ್ಲ. ಡಿಸ್ಟ್ರಿಬ್ಯೂಟರೀಸ್ ಇಟ್ಟಿಲ್ಲ. ಇದಕ್ಕಾಗಿ ನೀರನ್ನು ಸಾಕಷ್ಟು ಪ್ರಮಾಣದಲ್ಲಿ ಉಪಯೋಗ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ ಎನ್ನುವುದನ್ನು ಬಹುಶಃ ಅವರು ತಮ್ಮ ಅಡ್ಮಿನಿಸ್ಟ್ರೇಟಿವ್ ರಿಪೋರ್ಟ್ ಏನು ಕೊಟ್ಟಿದ್ದಾರೆ ಅದರಲ್ಲಿ ಅದು ಸ್ಪಷ್ಟವಾಗಿ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ.

ಈ ಇಂಟ್ರೀಮ್ ರಿಪೋರ್ಟ್ ಬಂದ ಮೇಲೆ ಇಲ್ಲಿ ಸ್ವಲ್ಪ ಗಲಾಟೆಯಾಯಿತು. ಅದರಲ್ಲಿಯೂ ಕೂಡ ಬೆಂಗಳೂರಿನಲ್ಲಿ ಗಲಾಟೆಯಾಯಿತು. ಸ್ವಲ್ಪ ಜನ ಸತ್ತುಹೋದರು. ಪ್ರಧಾನ ಮಂತ್ರಿಗಳು ಒಂದು ಸಭೆ ಕರೆದರು. ಆ ಸಭೆಯಲ್ಲಿ ನಮ್ಮ ಮುಖ್ಯಮಂತ್ರಿಗಳೂ ಇದ್ದರು, ತಮಿಳುನಾಡು ಮುಖ್ಯಮಂತ್ರಿಗಳೂ ಇದ್ದರು ಮತ್ತು ಎಲ್ಲಾ ಮುಖ್ಯಮಂತ್ರಿಗಳೂ ಇದ್ದರು. ಪಾಂಡಿಚೆರಿ ಮುಖ್ಯಮಂತ್ರಿಗಳೂ ಇದ್ದರು. ಇದಾದಮೇಲೆ, ಮತ್ತೆ ಅವರು ಸಭೆ ಕರೆಯಲೇ ಇಲ್ಲ. ಅವರು ಏನೂ

ಹೇಳುತ್ತಲೂ ಇಲ್ಲ. The meeting has not been convened. ಅದೂ ಹೇಳುತ್ತಾ ಇಲ್ಲ, ಇದೂ ಹೇಳುತ್ತಾ ಇಲ್ಲ. ನಾನು, ನಮ್ಮ ಸರ್ಕಾರಕ್ಕೆ ಕೇಳುವಂಥದ್ದು, ಹೋದವರ್ಷವೂ ನಾನು ಹೇಳಿದೆ. ಇನ್ನೂ ಮೂರು ವರ್ಷದ ಕೆಲಸ ಇದೆ. ಒಂದು ವರ್ಷಕ್ಕೆ ಮುಗಿಯುವುದಿಲ್ಲ. ಅದಕ್ಕಾಗಿ, ಪ್ರಧಾನ ಮಂತ್ರಿಗಳು ಏನೊಂದು ಸಭೆ ಕರೆದಿದ್ದರು, ಇಂತಹ ಹಲವಾರು ಸಭೆಗಳು ಆಗಬೇಕಾಗುತ್ತದೆ. ಈ ರೀತಿ ಹಲವಾರು ಸಭೆಗಳಾದರೆ, ನಮಗೆ ಒಂದು ಆಸೆ ಸಿಗಬಹುದು ಎಂದು ಹೇಳಿದೆ. ಇವತ್ತು ನಾನು ಹೇಳುವಂಥದ್ದೇನೆಂದರೆ, ಪ್ರಧಾನ ಮಂತ್ರಿಗಳು ಮತ್ತೆ ಸಭೆ ಕರೆದಿಲ್ಲ. ಆದರೆ, ಪ್ರಧಾನ ಮಂತ್ರಿಗಳಿಗೆ ಮತ್ತೆ ಇನ್ನೊಂದು ಸಭೆ ಕರೆಯಿರಿ ಎಂದು ಹೇಳಬಹುದಿತ್ತು. ನಮ್ಮ ಸರಕಾರದವರು ಏಕೆ ಹೇಳಲಿಲ್ಲ ಎಂದು ಈ ಸಂದರ್ಭದಲ್ಲಿ ಕೇಳುತ್ತೇನೆ. ನಮ್ಮ ಸರ್ಕಾರ ಹೇಳಬಹುದಿತ್ತು. ಇನ್ನೊಂದು ಸಭೆ ಕರೆಯಿರಿ ಎಂದು ಪ್ರಧಾನ ಮಂತ್ರಿಗಳಿಗೆ ತಿಳಿಸಬಹುದಿತ್ತು. 2–3–4–5 ಸಭೆ ಕರೆದು ಸ್ಪಷ್ಟವಾದ, ಕೊನೆಯ ನಿರ್ಧಾರ ಏನು ಎಂಬುದನ್ನು ಹೇಳಬಹುದಿತ್ತು. ಅಥವಾ ಅವರು ಸಭೆ ಕರೆಯಬೇಕೇ ಬೇಡವೇ ಎಂದು ಏನಾದರೂ ಹೇಳಬಹುದಿತ್ತು. ನಾನು ಹುಬ್ಬಳ್ಳಿಯಲ್ಲಿದ್ದಾಗ ಯಾರೋ ಪ್ರಶ್ನೆ ಕೇಳಿದರು. ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಇದರಲ್ಲಿ ಒಂದು ಧಾಟಿ ಏನೆಂದರೆ, ನಮ್ಮ ಸರ್ಕಾರ ಪ್ರಧಾನ ಮಂತ್ರಿಗಳಿಗೆ ಸಭೆ ಕರೆಯಿರಿ ಎಂದು ಇನ್ನೊಮ್ಮೆ ಹೇಳಬೇಕು. ಅಲ್ಲಿ ನನಗೆ ಕ್ಲಾರಿಫಿಕೇಷನ್ ಕೇಳಿದಾಗ ನಾನು ಸ್ಪಷ್ಟವಾಗಿ ಹೇಳಿದೆ. ಆದರೆ, ಇವರೆಡನ್ನೂ ಮಾಡಲಿಲ್ಲ. ಏಕೆ ಮಾಡಲಿಲ್ಲವೋ ನನಗೆ ಗೊತ್ತಿಲ್ಲ. ಇದಕ್ಕೆ ಸಂಬಂಧಪಟ್ಟ ನೀರಾವರಿ ಉಪಮುಖ್ಯಮಂತ್ರಿಗಳಾದರೂ ಹೇಳಲಿ ಅಥವಾ ಮುಖ್ಯಮಂತ್ರಿಗಳಾದರೂ ಹೇಳಲಿ. ಇದನ್ನು ಏಕೆ ಮಾಡಲಿಲ್ಲ ಮತ್ತು ಪ್ರಧಾನ ಮಂತ್ರಿಯವರಿಗೆ ಸಭೆ ಕರೆಯಿರಿ ಎಂದು ಏಕೆ ಹೇಳಲಿಲ್ಲ ಎಂಬುದನ್ನು ತಿಳಿಸಬೇಕೆಂದು ಈ ಸಂದರ್ಭದಲ್ಲಿ ಅವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಇವತ್ತು ಟ್ರಿಬ್ಯುನಲ್‌ನವರು ಹೇಳುತ್ತಾರೆ:– The Government of Karnataka should release so much of water into Mettur Reservoir. ನಾವು ಏನಾದರೂ ಭರವಸೆ ಕೊಡಬೇಕಾದರೆ, ನಮ್ಮ ಬಾರ್ಡರ್ ತನಕ ಭರವಸೆ ಕೊಡಬಹುದೇ ಹೊರತು, ನಮ್ಮ ಬಾರ್ಡರ್ ನಂತರ, ಅವರ ಬಾರ್ಡರಿನಲ್ಲಿ ಏನಾಗುತ್ತದೆಂದು ನಮಗೆ ಗೊತ್ತಾಗುವುದಿಲ್ಲ. ಅದಕ್ಕಾಗಿ ನಿಮ್ಮ ಬಾರ್ಡರಿನವರೆಗೆ ಎಷ್ಟು ನೀರು ಬಿಟ್ಟರು, ಮತ್ತು ಉಳಿದ ಜವಾಬ್ದಾರಿ ಏನು ಎನ್ನುವುದನ್ನು ವಿಚಾರ ಮಾಡಬಹುದು. ಕರ್ನಾಟಕ ಸರ್ಕಾರದವರು ಕ್ಲಾರಿಫಿಕೇಷನ್ ಕೇಳಿ ಎಂದು ಹೇಳಿದೆ, ಆದರೆ, ಅವರು ಕ್ಲಾರಿಫಿಕೇಷನ್ ಕೇಳಲೇ ಇಲ್ಲ. ಅಲ್ಲಿಂದ ಹೋದವರ್ಷ ವಿರೋಧಪಕ್ಷದ ಕೆಲವು ನಾಯಕರು ನನ್ನ ಹತ್ತಿರ ಬಂದಿದ್ದರು. ಬಂದಾಗ ಅವರು ಹೇಳಿದರು, ನೀವು ಕಾವೇರಿ ಬಗ್ಗೆ ಸ್ವಲ್ಪ ಲೀಡರ್‌ಷಿಪ್ ತೆಗೆದುಕೊಳ್ಳಬೇಕು. ಕಾವೇರಿ ಸಮಸ್ಯೆ ನೆನೆಗುದಿಗೆ ಬಿದ್ದಿದೆ ಎನ್ನುವ ವಿಚಾರವನ್ನು ಹೇಳಿದರು, ಅವರಿಗೆ ಒಂದು ಮಾತು ಹೇಳಿದೆ. ನಾನು ಇವತ್ತು ಮಾಜಿ ಮುಖ್ಯಮಂತ್ರಿಯಾಗಿ ನಿಮ್ಮ ಮುಂದೆ ಹೇಳುತ್ತಾ ಇಲ್ಲ, ಒಬ್ಬ ನಾಗರೀಕನಾಗಿ ಹೇಳುತ್ತಿದ್ದೇನೆ. ಇಲ್ಲಿಯವರೆಗು ನಾನು ಸರ್ಕಾರದಲ್ಲಿದ್ದೆ. ಆದರೆ, ಈಗ ಅವರು ಕೂಡು ಎಂದರೆ ಕೂಡುತ್ತೇನೆ, ಏಳು ಎಂದರೆ ಏಳುತ್ತೇನೆ. ಕೈ ಎತ್ತು ಎಂದರೆ, ಎತ್ತುತ್ತೇನೆ, ಕೈ ಇಳಿಸಿ ಎಂದರೆ ಕೈ ಇಳಿಸುತ್ತೇನೆ. ಸರ್ಕಾರ ಹೇಳಿದ್ದನ್ನೆಲ್ಲಾ ಕೇಳಿದೆವು ಇನ್ನು ಮುಂದೆ ಸರ್ಕಾರ ಹೇಳಿದ್ದನ್ನು ಕೇಳುವ ಹಾಗಿಲ್ಲ. ಆದರೆ, ಕಾವೇರಿಯಲ್ಲಿ ನಮಗೆ ನ್ಯಾಯ ದೊರಕಿಸಿಕೊಡಲೇಕು. ನಾವು ನಿಮ್ಮ ಹಿಂದೆ ಬರುವುದಕ್ಕೆ ತಯಾರಿದ್ದೇವೆ ಎಂದು ಹೇಳಿದರು. ಆದರೆ, ಅವರು ಇನ್ನೊಮ್ಮೆ ಬರುತ್ತೇವೆಂದು ಹೋದವರು, ಮತ್ತೊಮ್ಮೆ ನಮ್ಮ ಹತ್ತಿರ ಬರಲೇ ಇಲ್ಲ. ಅವರು ಇನ್ನೊಮ್ಮೆ ಬಂದಿದ್ದರೆ, ನಾನು ಸ್ಪಷ್ಟವಾಗಿ ಹೇಳುತ್ತಿದ್ದೆ.

ನಮಗೆ ಬೇಕಾಗಿದ್ದು ನ್ಯಾಯ. ನಮಗೆ ಬೇಕಾಗಿರುವುದು ಜಸ್ಟೀಸ್. ಕಾವೇರಿಯಲ್ಲಿ ನಮಗೆ ನ್ಯಾಯ ಸಿಗಬೇಕು. ಕಾವೇರಿಯ ಬಗ್ಗೆ ನ್ಯಾಯ ದೊರಕಿಸಿ ಕೊಡುವಂತಹ ಯಾವ ಪಾರ್ಟಿಯವರು ಬಂದರೂ ಸಹ ಕೈ ಎತ್ತು ಅಂದರೆ ಕೈ ಎತ್ತುತ್ತೇವೆ, ಕೈ ಇಳಿಸಿ ಅಂದರೆ ಕೈ ಇಳಿಸುತ್ತೇವೆ, ಆದರೆ ನಮಗೆ ಗ್ಯಾರೆಂಟಿ

ಕೊಡಬೇಕೆಂದು ನಾನು ಹೇಳಿದೆ. ಮತ್ತೆ ಅವರು ಯಾರೂ ಬರಲಿಲ್ಲ. ನಾನು ಈ ಸಂದರ್ಭದಲ್ಲಿ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದು ಇಷ್ಟೇ. ಕೆಲವು ಜನ ಪಾರ್ಲಿಮೆಂಟ್ ಮೆಂಬರ್ಸ್ ಕೆಲವು ಜನ ಅಸೆಂಬ್ಲಿ ಸದಸ್ಯರು ಕೆಲವು ಜನ ಕೌನ್ಸಿಲ್ ಮೆಂಬರ್ಸ್ ಮಂಡ್ಯದಲ್ಲಿ ಮತ್ತು ಮೈಸೂರಿನಲ್ಲಿ ಸಭೆ ಮಾಡಿದರು. ಇವತ್ತು ಅದೆಲ್ಲಾ ಮರೆತು ಹೋಗಿದ್ದಾರೆ. ಅವರನ್ನು ಕೇಳಬೇಕು. ಅವರು ಮರೆತು ಹೋಗಿದ್ದಾರೆ. ಅವರು ಕಾವೇರಿಯನ್ನು ಮರೆತು ಹೋಗಿದ್ದಾರೆ. ಎಲ್ಲಾ ಮರೆತು ಹೋಗಿದ್ದಾರೆ. ಅವರಿಗೆ ಒಂದೇ ಸಮನೆ ಬೇಕಾಗಿದ್ದು ಅವರು ಮಂತ್ರಿಗಳಾಗಬೇಕಾಗಿತ್ತು ಮಂತ್ರಿ ಆದರೋ ಏನೋ ಗೊತ್ತಿಲ್ಲ. ಇವತ್ತು ನಿಮಗೆ ನಾನು ಹೇಳಬೇಕಾದರೆ ಕಾವೇರಿ ಇದು ಪಾರ್ಟಿ ಇಷ್ಯೂ ಅಲ್ಲ. ಇದು ಸ್ಟೇಟ್ ಇಷ್ಯೂ. ಇದರಲ್ಲಿ ಯಾವ ತರಹ ಪಾರ್ಟಿ ಪೊಲಿಟಿಕ್ಸ್ ತರಬಾರದು ಎಂದು ಈ ಸಂದರ್ಭದಲ್ಲಿ ನಾನು ಅರಿಕೆ ಮಾಡಿಕೊಳ್ಳುತ್ತೇನೆ. ನಾನು ಕೇಳತಕ್ಕಂಥದ್ದು ಮಂಡ್ಯದಲ್ಲಿ ಮೈಸೂರಿನಲ್ಲಿ ಒಂದು ರೆಸಲ್ಯೂಷನ್ ಮಾಡಿದರು. ರೆಜಲ್ಯೂಷನ್ ಮಾಡಿ ಏನೂ ಹೇಳಿದರು. ಎಲ್ಲಾ ಎಂ.ಎಲ್.ಎ ಗಳು ರಾಜೀನಾಮೆ ಕೊಡಬೇಕು ಎಲ್ಲಾ ಎಂ.ಪಿ. ಗಳು ರಾಜೀನಾಮೆ ಕೊಡಬೇಕು. ಅವರೆಲ್ಲಾ ಇವತ್ತು ಯಾವ ಕಡೆ ಹೋಗಿದ್ದಾರೆ ಎನ್ನುವುದನ್ನು ಹುಡುಕಬೇಕು. ರೆಸಲ್ಯೂಷನ್ ಮಾಡಿಸಿಕೊಂಡು ಹೋದವರು ಎಲ್ಲಿ ಹೋದರೋ ನನಗೆ ಗೊತ್ತಿಲ್ಲ. ನಾನು ಹೇಳುವಂಥಾದ್ದು ಏನೆಂದರೆ ರಾಜಿನಾಮೆ ಕೊಟ್ಟರೆ ಅದರಿಂದ ಏನೂ ಉಪಯೋಗ ಆಗುವುದಿಲ್ಲ. ಟ್ರಿಬ್ಯೂನಲ್ ಬೈಕಾಟ್ ಮಾಡಿದರೆ ಅದರಿಂದ ಏನೂ ಉಪಯೋಗ ಆಗುವುದಿಲ್ಲ. ಟ್ರಿಬ್ಯೂನಲ್ ತೀರ್ಮಾನವನ್ನು ನಾವು ಒಪ್ಪುವಂತೆ ಇಲ್ಲ ಎಂದು ಹೇಳಿದರೂ ಕೂಡ ಏನೂ ಉಪಯೋಗ ಆಗುವುದಿಲ್ಲ. ಏಕೆಂದರೆ ನಾನು ಈ ಮಾತು ಮೊದಲೇ ಹೇಳಿದ್ದೇನೆ. ಇವತ್ತು ಎಂ.ಎಲ್.ಎ. ಗಳು ಬೈ ಕಾಟ್ ಮಾಡಬಾರದು. ಎಂ.ಎಲ್.ಸಿಗಳು ಬೈಕಾಟ್ ಮಾಡಬಾರದು ಎಂ.ಪಿ.ಗಳು ಬೈಕಾಟ್ ಮಾಡಬಾರದು ಅಂತ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಅಲ್ಲಿಂದ ಕೃಷ್ಣಾ ಆಯಿತು ಕಾವೇರಿ ಆಯಿತು ಮತ್ತೆ ಇನ್ನು ಕೆಲವು ವಿಚಾರಗಳನ್ನು ಹೇಳುತ್ತೇನೆ. ಕೊನೆಗೆ ವಿದ್ಯುಚ್ಛಕ್ತಿ ಬಗ್ಗೆ ಕೆಲವು ವಿಚಾರಗಳನ್ನು ಹೇಳಬೇಕೆಂದು ಬಂದಿದ್ದೇನೆ. ಜನತೆಗೆ ನಮ್ಮ ರಾಜ್ಯದ ಪರಿಸ್ಥಿತಿ ಗೊತ್ತಿದೆ. ಸಾಕಷ್ಟು ವಿದ್ಯುತ್ ನಮ್ಮಲ್ಲಿ ಇಲ್ಲ. ಏಕೆಂದರೆ ಒಂದು ಕಾಲದಲ್ಲಿ ವಿದ್ಯುತ್‌ನಲ್ಲಿ ಇಡೀ ದೇಶದಲ್ಲಿ ನಾವು ಮುಂದಾಳುಗಳಾಗಿದ್ದೆವು. ಆದರೆ ಇವತ್ತು ಪರಿಸ್ಥಿತಿ ಏನಾಗಿದೆ ನಮ್ಮಲ್ಲಿ ಸಾಕಷ್ಟು ವಿದ್ಯುತ್ ಇಲ್ಲ. ನಾವು ಎರಡನೆಯ ರಾಜ್ಯದಿಂದ ವಿದ್ಯುತ್ ಪಡೆಯಬೇಕಾಗಿದೆ. ಮತ್ತು ಲೋಡ್ ಷೆಡ್ಡಿಂಗ್ ಇದರ ಬಗ್ಗೆ ನಾನು ಏನನ್ನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ನಾನು ಒಬ್ಬ ಕನ್‌ಷೂಮರ್ ಕೇಳತಕ್ಕಂಥಾದ್ದು ಇದೆ, ನಾನು ಎಲೆಕ್ಟ್ರಿಸಿಟಿ ಛೇರ್ಮನ್‌ರಿಗೆ ಒಂದು ಪತ್ರ ಬರೆದೆ. ಯಾವಾಗ ಲೋಡ್ ಷೆಡ್ಡಿಂಗ್ ಮಾಡುತ್ತೀರಿ ಇಂತಹ ಕಾರಣಗಳಿಂದ ಲೋಡ್‌ಷೆಡ್ಡಿಂಗ್ ಆಗುತ್ತದೆ ಎಂದು ಪತ್ರಿಕೆಗಳಲ್ಲಿ ಹಾಕಿ ಎಂದು. ಇದರ ಬಗ್ಗೆ ಒಂದು ವ್ಯವಸ್ಥೆ ಮಾಡಬೇಕಾಗುತ್ತದೆ. ನಾನು ಈ ಮಾತನ್ನು ಒಬ್ಬ ಕನ್‌ಷೂಮರ್ ಆಗಿ ತಿಳಿಸಬೇಕಾಗುತ್ತದೆ. ನಾನು ಏನು ಪತ್ರ ಬರೆದಿದ್ದೇನೆ ಅದಕ್ಕೆ ಇನ್ನೂ ಅವರಿಂದ ಉತ್ತರ ಬಂದಿಲ್ಲ. ಬಹುಶಃ ಬರಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ಅಲ್ಲಿಂದ ಟ್ರಾನ್ಸ್‌ಮಿಷನ್ ಲಾಸ್; ಬಹುಶಃ ಟ್ರಾನ್ಸ್‌ಮಿಷನ್ ಲಾಸಸ್ ನಮ್ಮ ರಾಜ್ಯದಲ್ಲಿ ಹೆಚ್ಚು ಇದೆ ಎಂದು ನನಗನಿಸುತ್ತದೆ. ಟ್ರಾನ್ಸ್‌ಮಿಷನ್ ಲಾಸಸ್‌ನಲ್ಲಿ ಥೆಫ್ಟ್ ಸೇರಿದೆಯೋ ಏನೋ ನನಗೆ ಗೊತ್ತಿಲ್ಲ. ಸಂಬಂಧಪಟ್ಟ ಮಂತ್ರಿಗಳು ಈ ವಿಚಾರ ಹೇಳಬೇಕು. ಈ ಸಂದರ್ಭದಲ್ಲಿ ನಾನು ಅವರಿಗೆ ಅರಿಕೆ ಮಾಡಿಕೊಳ್ಳುತ್ತೇನೆ. ತಮ್ಮ ಎಲೆಕ್ಟ್ರಿಸಿಟಿ ಬೋರ್ಡ್‌ನಲ್ಲಿ ಕೆಳಗಿನ ಜನರು ಯಾರಿದ್ದಾರೆ ಅವರಿಗೆ ರೊಕ್ಕ ಕೊಡದೆ ಮನೆಗೆ ಬರುವುದಿಲ್ಲ ಬಹುಶಃ ಇದು ಎಲ್ಲರಿಗೂ ಗೊತ್ತಿರಬಹುದು. ಬಾರಪ್ಪ, ನಿನಗೆ ರೊಕ್ಕ ಕೊಡುತ್ತೇನೆ ಅಂದರೆ ಹೊರಗಡೆ ಬರುತ್ತಾನೆ ಇಲ್ಲದಿದ್ದರೆ ಇಲ್ಲ. ಏಕೆಂದರೆ ಎಲೆಕ್ಟ್ರಿಸಿಟಿ ಬೋರ್ಡ್‌ನಲ್ಲಿ ಭ್ರಷ್ಟಾಚಾರ ಎಲ್ಲಿಂದ ಇದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

4.50 ಪಿಎಂ

ಇದನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಲು ಹೇಳಬಹುದೆಂದು ನನಗನ್ನಿಸುತ್ತದೆ. ಸಂಬಂಧಪಟ್ಟ ಅಧಿಕಾರಿಗಳು, ಮಂತ್ರಿಗಳು ಮತ್ತು ಮುಖ್ಯಮಂತ್ರಿಯವರು ಇದರ ಬಗ್ಗೆ ವಿಚಾರ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನೊಂದು ಮುಖ್ಯ ವಿಚಾರ ಅಂದರೆ ಹೈಡಲ್ ಪ್ರಾಜೆಕ್ಟ್. ನಾನು 8 ತಿಂಗಳು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ನನಗೆ ಗೊತ್ತಿರುವ ಹಾಗೆ ನಮ್ಮ ರಾಜ್ಯದಲ್ಲಿರುವ ಹೈಡಲ್ ಪ್ರಾಜೆಕ್ಟ್‌ಗಳನ್ನು ಖಾಸಗೀಯವರಿಗೆ ಕೊಡುವ ಅವಶ್ಯಕತೆ ಇಲ್ಲ ಎಂದು ನನಗನ್ನಿಸುತ್ತದೆ. ಅದೇ ರೀತಿಯಲ್ಲಿ ಇನ್ನೂ ಕೆಲವು ಪ್ರದೇಶಗಳಲ್ಲಿ ಇಂಥ ಪ್ರಾಜೆಕ್ಟ್‌ಗಳನ್ನು ಮಾಡುವುದಕ್ಕೆ ಕೂಡ ಸಾಧ್ಯತೆ ಇದೆ. ಖಾಸಗಿಯವರಿಗೆ ಬೇಕಾದರೆ ಥರ್ಮಲ್ ಪ್ರಾಜೆಕ್ಟ್‌ಗಳನ್ನು ಕೊಡಲಿ. ಹೊಸಪೇಟೆ, ರಾಯಚೂರುಗಳಲ್ಲಿ ಥರ್ಮಲ್ ಪ್ರಾಜೆಕ್ಟ್ ಇದೆ, ಅದೇ ರೀತಿಯಲ್ಲಿ ಮಂಗಳೂರಿನಲ್ಲಿ ಕೂಡ ಒಂದು ಥರ್ಮಲ್ ಪ್ರಾಜೆಕ್ಟನ್ನು ಹಾಕಬೇಕೆಂದು ವಿಚಾರ ಮಾಡುತ್ತಾ ಇದ್ದಾರೆ. ಹಾಗೆಯೇ ಮೈಸೂರಿನಲ್ಲಿಯೂ ಕೂಡ ಒಂದು ಥರ್ಮಲ್ ಪ್ರಾಜೆಕ್ಟನ್ನು ಹಾಕಬೇಕೆಂದು ಸರಕಾರದವರು ವಿಚಾರ ಮಾಡುತ್ತಾ ಇದ್ದಾರೆ. ಇಂಥ ಪ್ರಾಜೆಕ್ಟ್‌ಗಳನ್ನು ಖಾಸಗಿಯವರಿಗೆ ಕೊಟ್ಟರೆ ನಮಗೆ ಏನೂ ಅಡ್ಡಿ ಇಲ್ಲ. ಆದರೆ ಹೈಡಲ್ ಪ್ರಾಜೆಕ್ಟ್‌ಗಳನ್ನು ಮಾತ್ರ ಖಾಸಗಿಯವರಿಗೆ ಕೊಡಬಾರದು ಎಂದು ಈ ಸಂದರ್ಭದಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನೊಂದು ಮುಖ್ಯವಾದ ವಿಚಾರ ಅಂದರೆ ಶಿವನಸಮುದ್ರ ಹೈಡಲ್ ಪ್ರಾಜೆಕ್ಟ, ಇದು ಬಹಳ ಚೀಪ್ ಪ್ರಾಜೆಕ್ಟ್ ಆಗಿರುತ್ತದೆ. ನಾನು ಈ ವಿಚಾರದಲ್ಲಿ ಕರುಣಾನಿಧಿಯವರ ಜೊತೆಯಲ್ಲಿ ಮಾತನಾಡಿ, ನಿಮ್ಮ ನದಿಗಳಲ್ಲಿ ನೀವು ಯಾವ ಪ್ರಾಜೆಕ್ಟ್‌ನ್ನು ಬೇಕಾದರೂ ಮಾಡಿಕೊಳ್ಳಿ, ನಮ್ಮ ಅಡ್ಡಿ ಇಲ್ಲ. ಆದರೆ ನಮ್ಮ ಶಿವನಸಮುದ್ರ ಪ್ರಾಜೆಕ್ಟ್‌ಗೆ ನೀವು ಯಾವುದೆ ಅಡ್ಡಿಯನ್ನು ತರಬಾರದು ಎಂದು ಹೇಳಿದ್ದೆ. ಅವರು ಟ್ರಿಬ್ಯೂನಲ್‌ನ ವಿಚಾರವನ್ನು ಮುಂದಿಟ್ಟರು. ನಾನು ಈ ಸಂದರ್ಭದಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ, ಮಾನ್ಯ ಗವರ್ನರ್‌ರವರಿಗೆ ಹೇಳಿ ಕೇಂದ್ರ ಸರ್ಕಾರಕ್ಕೆ ಒಂದು ಡೈರೆಕ್ಷನ್ ಇಷ್ಯೂ ಮಾಡಲು ಕೇಳಿಕೊಳ್ಳಬೇಕು. ಏಕೆಂದರೆ ಈ ಪ್ರಾಜೆಕ್ಟ್‌ನಲ್ಲಿ ನೀರು ವೇಸ್ಟ್ ಆಗುವುದಿಲ್ಲ. ಆದ್ದರಿಂದ ಶಿವನಸಮುದ್ರ ಪ್ರಾಜೆಕ್ಟ್‌ನ್ನು ಆದಷ್ಟು ಬೇಗ ಪ್ಲಾನ್ ಮಾಡಲು ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅತಿ ಕಡಿಮೆ ವೆಚ್ಚದಲ್ಲಿ ಮಾಡಬಹುದಾದ ಈ ಪ್ರಾಜೆಕ್ಟ್‌ನ್ನು ಆದಷ್ಟು ತೀವ್ರವಾಗಿ ತೆಗೆದುಕೊಳ್ಳುವುದಕ್ಕೆ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳ ಬೇಕೆಂಬುದನ್ನು ಸರಕಾರದವರು ಕೂಡಲೇ ಆ ಬಗ್ಗೆ ಕಾರ್ಯಪ್ರವೃತ್ತರಾಗಬೇಕೆಂದು ಕೇಳಿಕೊಳ್ಳುತ್ತೇನೆ.

ಇಷ್ಟನ್ನು ಹೇಳಿ ಇಷ್ಟು ಸಮಯಾವಕಾಶವನ್ನು ಕೊಟ್ಟ ತಮಗೂ, ಸದನಕ್ಕೂ, ನನ್ನ ಆತ್ಮೀಯರೆಲ್ಲರಿಗೂ ನನ್ನ ಅಭಿನಂದನಗಳನ್ನು ಸಲ್ಲಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು):- ಸನ್ಮಾನ್ಯ ಅಧ್ಯಕ್ಷರೇ, ನೀರಾವರಿ, ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಇಲಾಖೆಗಳ ಮೇಲಿನ ಬೇಡಿಕೆಗಳನ್ನು ಸ್ವಾಗತ ಮಾಡುತ್ತಾ, ಈಗಾಗಲೇ ಕೃಷ್ಣಾ, ಕಾವೇರಿ ಬಗ್ಗೆ ಮಾನ್ಯ ಹಿರಿಯ ಸದಸ್ಯರುಗಳು ಚೆನ್ನಾಗಿ ಸದನಕ್ಕೆ ವಿವರಣೆ ಮಾಡಿದ್ದಾರೆ. ಕೃಷ್ಣ ಬಗ್ಗೆ ಒಂದೆರಡು ಮಾತುಗಳನ್ನು ಹೇಳ ಬಯಸುತ್ತೇನೆ. ಇವೊತ್ತು ನಮ್ಮ ಭಾಗದ ಜನರು ಕೃಷ್ಣಾ ಯೋಜನೆಯ ಬಗ್ಗೆ ಬಹಳಷ್ಟು ನಿರೀಕ್ಷೆಯನ್ನು ಮಾಡುತ್ತಿದ್ದಾರೆ. ಇದೇ ರೀತಿಯಲ್ಲಿ ನಾವು ಸುಳ್ಳು ಹೇಳುತ್ತಾ ಹೋದರೆ ಆ ಭಾಗದಲ್ಲಿ ಜನಕ್ರಾಂತಿ ಮಾಡುವ ಒಂದು ಸೂಚನೆ ಕೂಡ ಬರಬಹುದು ಎಂದು ಹೇಳಬಯಸುತ್ತೇನೆ. ನನ್ನ ಕ್ಷೇತ್ರದಲ್ಲಿ ಬಹಳಷ್ಟು ಕೆನಾಲ್‌ಗಳ ಮೂಲಕ ನೀರು ವೇಸ್ಟ್ ಆಗುತ್ತಾ ಇದೆ. ಇಲ್ಲಿ ಬಹಳಷ್ಟು ಲಿಫ್ಟ್ ಇರಿಗೇಷನ್ ಮಾಡುವ ಅವಕಾಶವೂ ಇದೆ, ಕಳೆದ ಮೂರು ವರ್ಷಗಳಿಂದ ಸರಕಾರಕ್ಕೆ ನಾವು ಎಸ್ಟಿಮೇಟ್ ಇತ್ಯಾದಿಗಳನ್ನು ಕೊಟ್ಟು ಒಂದು ಲಿಫ್ಟ್

ಇರಿಗೇಷನ್ ಸ್ಕೀಮ್ ಎಂದು ಮಾಡಿದ್ದೇವೆ. ಅದರಿಂದ ಸುಮಾರು 20–25 ಹಳ್ಳಿಗಳಿಗೆ ನೀರಾವರಿಯಾಗುತ್ತದೆ. ಇದೆ. ಅದರ ಮೂಲಕ 6–7 ಸಾವಿರ ಎಕರೆ ಪ್ರದೇಶಗಳಿಗೆ ನೀರಾವರಿಯಾಗುತ್ತದೆ. ಈ ಗಡಿ ಭಾಗದಲ್ಲಿ ಬರತಕ್ಕಂಥ ಗ್ರಾಮೀಣ ಪ್ರದೇಶಗಳು ಏನಿವೆ, ಅಲ್ಲಿ ಕಳೆದ ಮೂರು ವರ್ಷಗಳಿಂದ ಮಳೆ ಬೀಳುತ್ತಾ ಇಲ್ಲ, ಇದೊಂದು ಅಭಾವಪೀಡಿತ ಪ್ರದೇಶವಾಗಿದೆ ಆದ್ದರಿಂದ ಸರಕಾರದವರು ಇದನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಈಗಾಗಲೇ ಮುಖ್ಯಮಂತ್ರಿಯವರಿಗೆ, ಉಪಮುಖ್ಯಮಂತ್ರಿಯವರಿಗೆ ಎಸ್ಟಿಮೇಟ್ ಇತ್ಯಾದಿಗಳನ್ನು ಕೊಟ್ಟಿದ್ದೇನೆ. ತಾವುಗಳು ದಯವಿಟ್ಟು 1993–94ರ ಬಜೆಟ್‌ನಲ್ಲಿ ಇದನ್ನು ಸೇರಿಸುತ್ತೀರಿ ಎಂದು ನಂಬಿದ್ದೇನೆ. ಈಗಾಗಲೇ ತುಂಗಾಭದ್ರಾ ಜಲಾಶಯದಿಂದ ಕೆಲವು ಹಳ್ಳಿಗಳು ನೀರಾವರಿಗೆ ಒಳಪಟ್ಟಿವೆ. ಇಲ್ಲಿ ಏನು ತೊಂದರೆಯಾಗಿದೆ ಅಂದರೆ ನಮ್ಮ ಈ ಜಲಾಶಯದಲ್ಲಿ ಸಿಲ್ಟ್ ಅಡಗಿದೆ. ಇದನ್ನು ತೆಗೆಸುವುದಕ್ಕೆ, ನಮ್ಮ ಸರಕಾರ, ಕೇಂದ್ರ ಸರಕಾರ ಮತ್ತು ಆಂಧ್ರಪ್ರದೇಶ ಸರಕಾರದವರು ವಿಶ್ವಬ್ಯಾಂಕ್ ನೆರವನ್ನು ತೆಗೆದುಕೊಂಡು ಯಾವುದಾದರೂ ಒಂದು ಯೋಜನೆಯಡಿಯಲ್ಲಿ ಈ ಸಿಲ್ಟ್ ತೆಗೆಯುವ ಕೆಲಸವನ್ನು ಮಾಡಿದರೆ, ಸುಮಾರು 20–30 ಟಿಎಂಸಿಎಫ್.ಟಿ. ನೀರು ವೇಸ್ಟ್ ಆಗಿ ಹೋಗುವುದನ್ನು ತಡೆಗಟ್ಟಿ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳುತ್ತೇನೆ. ಹಾಗೆಯೇ ಜಲಾಶಯ ಪ್ರಾರಂಭವಾದಾಗಿನಿಂದ ಇವೊತ್ತಿನವರೆಗೆ ರಸ್ತೆಗಳು ಏನಿವೆ ಅವುಗಳನ್ನು ಹೊಸದಾಗಿ ಮಾಡಿಲ್ಲ.

ಇವುಗಳನ್ನು ಪ್ರಾರಂಭ ಮಾಡಿದಾಗ ಹೆಚ್ಚು ಹಣವನ್ನು ಒದಗಿಸಿಲ್ಲ. ಕಳೆದ ಎರಡು ಮೂರು ವರ್ಷಗಳಲ್ಲಿ ಕಾಡಾದವರು ಮಾಡಿಸಿರತಕ್ಕಂಥ ರೋಡ್‌ಗಳಿಗೆ ಕೂಡ ಯಾವ ರೀತಿಯ ಹಣವನ್ನೂ ಒದಗಿಸಿಲ್ಲ, ಕಳೆದ 10–15 ವರ್ಷಗಳಿಂದ ಹೆಕ್ಟೇರ್‌ಗೆ 100 ರೂಪಾಯಿ ಎಂದು ಇಟ್ಟಿದ್ದೀರಿ. ಅದನ್ನು ಕನಿಷ್ಟ ಪಕ್ಷ 300 ರೂಪಾಯಿಗಳಿಗೆ ಏರಿಸಬೇಕೆಂದು ಮಾನ್ಯ ಉಪಮುಖ್ಯಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ. ಕಳೆದ 8–10 ವರ್ಷಗಳಿಂದ ಲಿಫ್ಟ್ ಇರಿಗೇಷನ್ ಕಾರ್ಪೋರೇಷನ್ ಎಂದು ಮಾಡಿದ್ದಾರೆ. ಆದರೆ ನಮ್ಮ ಕ್ಷೇತ್ರ ಅಥವಾ ನಮ್ಮ ಪಕ್ಕದ ಕ್ಷೇತ್ರದಲ್ಲಿ ಯಾವುದೇ ಒಂದು ಯೋಜನೆಯು ಕೂಡ ಕಾರ್ಯರೂಪಕ್ಕೆ ಬಂದಿಲ್ಲ. ಇದನ್ನು ಹೇಗಾದರೂ ಮಾಡಿ, ನಬಾರ್ಡ್ ಹಾಕಿರುವಂಥ ಕಂಡಿಷನ್ಸ್‌ಗಳಿಗೆ ಹೊಂದುತ್ತವೋ ಇಲ್ಲವೋ ಗೊತ್ತಿಲ್ಲ,

ಬ್ಯಾಂಕ್‌ಗಳಿಗೆ ಸರಿಯಾಗಿ ಬರುತ್ತವೋ ಇಲ್ಲವೋ ಗೊತ್ತಿಲ್ಲ, ಅಥವಾ ನಮ್ಮ ಇಂಜಿನೀಯರ್‌ಗಳು ಸರಿಯಾಗಿ ಅಂಕಿಅಂಶಗಳನ್ನು ಕೊಡುತ್ತಾ ಇದ್ದಾರೋ ಇಲ್ಲವೋ ಗೊತ್ತಿಲ್ಲ. ಇದನ್ನು ಡಿಪಾರ್ಟ್‌ಮೆಂಟಿಗೆ ಸೇರಿಸಿ. ಅಲ್ಲಿ ಎಂ.ಡಿ.ಯಾಗಿ ಬರತಕ್ಕಂಥವರು ಕೂಡ 6–8 ತಿಂಗಳುಗಳ ಕಾಲ ಮಾತ್ರ ಇದ್ದು ಹೋಗುತ್ತಾರೆ. ಅಂಥವರು ಅಲ್ಲಿ ಯಾವ ತರಹದ ಕೆಲಸವನ್ನೂ ಕೂಡ ಮಾಡುತ್ತಿಲ್ಲ. ಆದಕಾರಣ ಇದನ್ನು ಇರಿಗೇಷನ್ ಡಿಪಾರ್ಟಮೆಂಟ್‌ಗೆ ಸೇರಿಸಿಬಿಡಿ ಅಥವಾ ಅದನ್ನು ಖಾಸಗಿಯವರಿಗೆ ಕೊಟ್ಟು ಅನುದಾನವನ್ನು ಕೊಡುವ ಕೆಲಸವನ್ನಾದರೂ ಮಾಡಬೇಕು. ಟೇಲ್ ಎಂಡರ್ಸ್‌ಗೆ ಸರಿಯಾಗಿ ನೀರು ಸಿಗುತ್ತಾ ಇಲ್ಲ. ಅದನ್ನು ಸ್ಟೆಬಿಲೈಸ್ ಮಾಡುವುದಕ್ಕೋಸ್ಕರವಾಗಿ ನಮ್ಮ ಕ್ಷೇತ್ರದಲ್ಲಿ ನ್ಯಾಷನಲ್ ವಾಟರ್ ಮ್ಯಾನೇಜ್‌ಮೆಂಟ್ ಪ್ರಾಜೆಕ್ಟ್‌ನಿಂದ, ವರ್ಲ್ಡ್‌ಬ್ಯಾಂಕ್‌ನಿಂದ ಹಣವನ್ನು ಪಡೆದಿದ್ದಾರೆ. ಒಂದು ಸಣ್ಣ ರಾಜ್ಯವಾದ ಹರಿಯಾಣ ಕೂಡ ಇಂಥ ಪ್ರಾಜೆಕ್ಟ್‌ಗಾಗಿ 60–70 ಕೋಟಿ ರೂಪಾಯಿಗಳನ್ನು ಪಡೆದಿದೆ. ಆದರೆ ನಾವುಗಳು ಸುಮಾರು 3–4 ಕೋಟಿ ರೂಪಾಯಿಗಳನ್ನು ಕೂಡ ನಮ್ಮ ಈ ಪ್ರಾಜೆಕ್ಟ್‌ಗೆ ಖರ್ಚು ಮಾಡುತ್ತಿಲ್ಲ. ಆದ್ದರಿಂದ ದಯಮಾಡಿ ಮುಂಗಡಪತ್ರದಲ್ಲಿ ಹೆಚ್ಚಿನ ಒಂದು ಹಣವನ್ನು ಅಲೋಕೇಟ್ ಮಾಡಬೇಕು. ನನಗೆ ತಿಳಿದಿರುವ ಹಾಗೆ ಈ ಬಾರಿ 8 ಕೋಟಿಗಳನ್ನು ಇಟ್ಟಿದ್ದೀರಿ. ನಮಗೆ ಸರಕಾರದವರು ಏನೂ ಕೊಡುವುದು ಬೇಕಾಗಿಲ್ಲ. ಸರಕಾರದವರು ಕೊಟ್ಟಮೇಲೆ ಅದರ ರೀ–ಇಂಬರ್ಸ್‌ಮೆಂಟ್ ವರ್ಲ್ಡ್‌ಬ್ಯಾಂಕ್‌ನಿಂದ ಆಗುತ್ತದೆ. ಆದ್ದರಿಂದ ಇದಕ್ಕೆ ಹೆಚ್ಚಿನ ಗಮನ ಕೊಟ್ಟು ಹೆಚ್ಚಿನ ಹಣವನ್ನು ಇಡಬೇಕೆಂದು ಕೇಳಿಕೊಳ್ಳುತ್ತೇನೆ. ನನಗೆ ಬಂದಿರುವ ಪ್ರಕಾರ ಒಂದೆರಡು

ವರ್ಷಗಳಲ್ಲಿ ಈ ಪ್ರಾಜೆಕ್ಟ್ ಮುಗಿದು ಹೋಗಬಹುದು ಎಂದು ಇದೆ. ಇದಕ್ಕೆ ಸರಕಾರದವರು ಸೂಕ್ತ ಗಮನವನ್ನು ಕೊಟ್ಟು ಇನ್ನೂ 7–8 ವರ್ಷಗಳು ಈ ಸ್ಕೀಮ್ ಇದ್ದರೆ ಇದರಿಂದ ನಮ್ಮ ನೀರಾವರಿ ಕುಂದುಕೊರತೆಗಳಿಗೆ ಅನುಕೂಲವಾಗುತ್ತದೆ ಎಂದು ಹೇಳಬಯಸುತ್ತೇನೆ. ಲಿಫ್ಟ್ ಇರಿಗೇಷನ್‌ನ್ನು ನೀರಾವರಿಯೊಳಗೆ ವಿಲೀನ ಮಾಡಬೇಕೆಂದು ಇದ್ದೀರಿ. ಅದಕ್ಕೆ ಟೆಕ್ನಿಕಲ್ ಪ್ರಾಬ್ಲಮ್ಸ್ ಇದ್ದ ಹಾಗೆ ಕಾಣುತ್ತದೆ. ಪಿಡಬ್ಲ್ಯೂಡಿ ಇಂಜನೀಯರ್ಸ್‌ಗೂ ಇರಿಗೇಷನ್ ಇಂಜಿನೀಯರ್ಸ್‌ಗೂ ಸೀನಿಯಾರಿಟಿ ಬಗ್ಗೆ ಟೆಕ್ನಿಕಲ್ ಪ್ರಾಬ್ಲಂಸ್ ಇದೆ ಎಂದು ಕಾಣುತ್ತದೆ. ಇಲ್ಲಿಗೆ ಇಂಜಿನೀಯರ್ಸ್‌ಗಳನ್ನು ನೇಮಕ ಮಾಡುವಾಗ ಅವರು ಸೀನಿಯಾರಿಟಿ ಮತ್ತಿತರ ವಿಚಾರಗಳನ್ನು ಗಮನ ಕೊಡುತ್ತಾ ಇಲ್ಲ ಎಂದು ಕಾಣುತ್ತದೆ. ಆದ್ದರಿಂದ ಇಲ್ಲಿಯೂ ಕೂಡ ಆ ಬಗ್ಗೆ ಒಂದು ಡಿಸಿಷನ್ ತೆಗೆದುಕೊಂಡು ಸರಿಪಡಿಸಿಕೊಂಡು ನಮಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮಲ್ಲಿ 8–10 ಸ್ಕೀಮ್‌ಗಳು ಆಗದೇ ಹಾಗೆಯೇ ಉಳಿದುಕೊಂಡಿವೆ, ಮಾನ್ಯ ಸಣ್ಣ ನೀರಾವರಿ ಮಂತ್ರಿಗಳು ಇದನ್ನು ಗಮನದಲ್ಲಿಟ್ಟುಕೊಂಡು ಇದಕ್ಕೊಂದು ಪರಿಹಾರವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಇನ್ನು ಆರ್ಬಿಟ್ರೇಷನ್ ಬಗ್ಗೆ ಬಹಳಷ್ಟು ಜನರು ಹೇಳಿದ್ದಾರೆ. ಈ ಆರ್ಬಿಟ್ರೇಷನ್ ವರ್ಡ್ ತೆಗೆದರೆ ಮಾತ್ರ ನಮ್ಮ ದೊಡ್ಡ ದೊಡ್ಡ ಯೋಜನೆಗಳು ಕಾರ್ಯರೂಪಕ್ಕೆ ಬರುತ್ತವೆ, ಆದ್ದರಿಂದ ಇರಿಗೇಷನ್ ಡಿಪಾರ್ಟ್‌ಮೆಂಟ್ ಡಿಕ್ಷನರಿಯಿಂದ ಆರ್ಬಿಟ್ರೇಷನ್ ಎಂಬ ಶಬ್ದವನ್ನು ತೆಗೆದು ಹಾಕಿದರೆ ಮಾತ್ರ ಅನುಕೂಲವಾಗುತ್ತದೆ ಎಂದು ಹೇಳಬಯಸುತ್ತೇನೆ. ನನ್ನ ಕ್ಷೇತ್ರ it is like an Island covered by Andhara–Pradesh borders. ಉತ್ತರ, ದಕ್ಷಿಣ, ಪೂರ್ವ ಪಶ್ಚಿಮಕ್ಕೆ ಬಂದರೂ ಆಂಧ್ರಪ್ರದೇಶದಿಂದ ಬರಬೇಕಾಗುತ್ತದೆ. ನನ್ನ ಕ್ಷೇತ್ರಕ್ಕೆ 3–4 ಆಂಧ್ರದ ಜಿಲ್ಲೆಗಳು ಬರುತ್ತಿವೆ. ಆಂಧ್ರದಲ್ಲಿರತಕ್ಕಂಥ ರೋಡ್‌ಗಳು ಬಹಳ ಚೆನ್ನಾಗಿದೆ. ನಮ್ಮ ಕ್ಷೇತ್ರದಲ್ಲಿ ಬಹಳ ರೋಡ್‌ಗಳು ಕಡಿಮೆ ಇವೆ. ಇಲ್ಲಿ ಬಹಳಷ್ಟು ಪುಣ್ಯ ಕ್ಷೇತ್ರಗಳಿವೆ. ಶ್ರೀ ರಾಘವೇಂದ್ರ ಸ್ವಾಮಿ ಮಠಕ್ಕೆ ಶ್ರೀಶೈಲಕ್ಕೆ ಉತ್ತರ ಕರ್ನಾಟಕದ ಜನರೆಲ್ಲ ಬರುತ್ತಿದ್ದಾರೆ. ಆದಕಾರಣ ಪುಣ್ಯ ಕ್ಷೇತ್ರಗಳಿಗೆ ಹೋಗುವುದಕ್ಕೆ ರೋಡ್‌ಗಳು ಸರಿಯಾಗಿ ಇಲ್ಲ. ಇವುಗಳನ್ನು ಸರಿಮಾಡಬೇಕು. ಬೀದರ್ ಬೆಂಗಳೂರು ಹೈವೇ ಮಾಡಬೇಕು. ಆಮೇಲೆ ಸೆಂಟ್ರಲ್ ಗೌರ್ನಮೆಂಟ್‌ನಿಂದ ಬರತಕ್ಕಂಥ ಸಿ.ಆರ್.ಎಫ್.ನಿಂದ ಅಮೌಂಟ್ ಅನ್ನು ತಂದು ನಮ್ಮ ರೋಡುಗಳನ್ನು ಚೆನ್ನಾಗಿ ಮಾಡಬೇಕೆಂದು ಹೇಳುತ್ತೇನೆ. ನನಗೆ ಇಷ್ಟು ಮಾತನಾಡಲು ಅವಕಾಶವನ್ನು ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಮಂಜುನಾಥ್ ಸಿ. ಕುನ್ನೂರ್ (ಶಿಗ್ಗಾವಿ):– ಮಾನ್ಯ ಅಧ್ಯಕ್ಷರೇ, ಇಂದು ಭಾರಿ ನೀರಾವರಿ ಸಚಿವರು ಮತ್ತು ವಿದ್ಯುಚ್ಛಕ್ತಿ ಸಚಿವರು, ಮತ್ತು ಲೋಕೋಪಯೋಗಿ ಸಚಿವರು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ನಾನು ಅನುಮೋದಿಸುತ್ತಾ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಭಾರತವು ಕೃಷಿ ಪ್ರಧಾನವಾದಂತಹ ದೇಶವಾಗಿದೆ. ರೈತನು ಈ ದೇಶದ ಬೆನ್ನೆಲುಬು ಎಂದು ಪದೇಪದೇ ಹೇಳುತ್ತೇವೆ. ಅಂತಹ ಸಂದರ್ಭದಲ್ಲಿ ನೀರಾವರಿ ಇಲಾಖೆಗೆ ನಾವು ಎಷ್ಟೊಂದು ಹಣವನ್ನು ಒದಗಿಸಿದರೂ ಕೂಡ ಕಡಿಮೆ ಎನ್ನತಕ್ಕ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ತಾವು ಕೇವಲ 5 ನಿಮಿಷ ಹೇಳುತ್ತಿದ್ದೀರಿ. ಕನಿಷ್ಟ 15 ನಿಮಿಷವಾದರೂ ಮಾತನಾಡಲು ಅವಕಾಶವನ್ನ ಕೊಡಬೇಕು. ಏಕೆಂದರೆ 5–6 ಇಲಾಖೆಗಳು ಇವೆ.

ಛೇರ್ಮನ್:– ಇವತ್ತು ಸಚಿವರು ಉತ್ತರ ಕೊಡಬೇಕಾಗಿದೆ.

ಶ್ರೀ ಮಂಜುನಾಥ್ ಸಿ. ಕುನ್ನೂರ್:– ಇವತ್ತು ಭಾರಿ ಮತ್ತು ನೀರಾವರಿ ಇಲಾಖೆಗೆ ನಾನು ನನ್ನ ಮತಕ್ಷೇತ್ರಕ್ಕೆ ಸಂಬಂಧಿಸಿದಂತೆ ತುಂಗಾ ಮೇಲ್ದಂಡೆ ಯೋಜನೆಯನ್ನು ಶಿವಮೊಗ್ಗ ವಲಯದಲ್ಲಿ ಸ್ಥಾಪನೆ ಮಾಡಿದ್ದಾರೆ. ಆ ಯೋಜನೆಯನ್ನು ಜಾರಿಗೊಳಿಸುವಾಗ ಮಾಲತಿ ಜಲಾನಯನಪ್ರದೇಶ ಬಳಗೊಂಡು ಆ ತುಂಗಾ ಮೇಲ್ದಂಡೆ ಯೋಜನೆಯನ್ನು ತಂದಿದ್ದೇ ಆದರೆ ಧಾರವಾಡ ದಕ್ಷಿಣ ಲೋಕಸಭೆಯ

ಮತಕ್ಷೇತ್ರದ ಶಿಗ್ಗಾವಿ, ಸವಣೂರು, ಮತ್ತು ಹಾವೇರಿ ಬ್ಯಾಡಗಿ, ಕೊಪ್ಪಳ, ಕುಂದರಗಿಯವರೆಗೆ ಆಗತಕ್ಕಂಥ ನೀರಾವರಿ ಯೋಜನೆ ಇರುವುದರಿಂದ ಇವತ್ತು ಗಾಜನೂರಿನ ಅಣೆಕಟ್ಟನ್ನು ಮಾತ್ರ ಕಟ್ಟಿ, ಈ ತುಂಗಾ ಮೇಲ್ದಂಡೆ ಯೋಜನೆಯನ್ನು ಜಾರಿಗೆ ತರುವುದರಿಂದ ಈ ಭಾಗದ ಜನರಿಗೆ ಬಹಳ ತೊಂದರೆಯಾಗುತ್ತದೆ. ಮಾನ್ಯ ಉಪಮುಖ್ಯಮಂತ್ರಿಗಳು ಈ ಬಗ್ಗೆ ಶಿವಮೊಗ್ಗ ಜಿಲ್ಲೆಯಲ್ಲಿ ವಿಶೇಷವಾಗಿ ಅಲ್ಲಿ ರಾಜಕೀಯ ಪ್ರಭಾವ ಇರುವುದರಿಂದ ಇದುವರೆಗೂ ಈ ತುಂಗಾ ಮೇಲ್ದಂಡೆ ಯೋಜನೆ ಜಾರಿಗೆ ಬಂದಿರುವುದಿಲ್ಲ ಎನ್ನತಕ್ಕಂಥ ವಾಡಿಕೆ ನಮ್ಮ ಭಾಗದಲ್ಲಿ ಇರುವುದರಿಂದ ತಾವು ಈ ಬಗ್ಗೆ ಹೆಚ್ಚು ಆಸಕ್ತಿಯನ್ನು ವಹಿಸಿ ತಜ್ಞರೊಂದಿಗೆ ಚರ್ಚೆಮಾಡಿ ಈ ಯೋಜನೆಯನ್ನು ರೂಪಿಸಿ, ಮಾಲತಿ ಜಲಾನಯನ ಒಳಗೊಂಡು ಈ ಯೋಜನೆಯನ್ನು ಜಾರಿಗೆ ತರಬೇಕು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ರಾಷ್ಟ್ರೀಯ ಜಲನೀತಿಯನ್ನು ಕೂಡ ನಾವು ರೂಪಿಸತಕ್ಕಂಥದ್ದು ಬಹಳ ಮಹತ್ವವಾಗಿದೆ. ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ನಾನು ಇಚ್ಛೆಪಡುತ್ತೇನೆ. ಇಂಟರ್ ಸ್ಟೇಟ್ಸ್ ವಾಟರ್ ಡಿಸ್‌ಪ್ಯೂಟ್ ಆಕ್ಟ್ ಅನ್ನು ಕೂಡ ನಾವು ನೋಡಿದ್ದೇವೆ. ಕಾವೇರಿ ಅಂತಹ ದೊಡ್ಡ ಸಮಸ್ಯೆಗಳನ್ನು ನಾವು ಎದುರಿಸಬೇಕಾದಾಗ ಈ ಜಲನೀತಿ ಇಲ್ಲದೇ ಇರುವುದರಿಂದ ತೊಂದರೆಯಾಗಿದೆ. ಇದರ ಬಗ್ಗೆ ಕೇಂದ್ರಸರ್ಕಾರಕ್ಕೆ ಶಿಫಾರಸ್ಸು ಮಾಡಿ, ಒಂದು ನ್ಯಾಷನಲ್ ವಾಟರ್ ಪಾಲಿಸಿಯನ್ನು ಮಾಡತಕ್ಕದ್ದು ಮಹತ್ವವಿದೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಇನ್ನು ಚಿಕ್ಕ ನೀರಾವರಿ ಇಲಾಖೆಯ ಬಗ್ಗೆ ನನ್ನ ಮತಕ್ಷೇತ್ರದಲ್ಲಿ ಕಳಸೂರು ಬ್ಯಾರೆಜ್ ಮತ್ತು ಕುನಿಮೆಲ್ಲಿಹಳ್ಳಿ ಲಿಫ್ಟ್ ಇರಿಗೇಷನ್ ಅನ್ನು ಕಳೆದ ವರ್ಷ ಬಜೆಟ್‌ನಲ್ಲಿ ತೆಗೆದುಕೊಂಡಿದ್ದರು. ಮಂತ್ರಿಗಳೂ ಸಹ ಇವುಗಳ ಕೆಲಸವನ್ನು ನಾವು ಕೈಗೆತ್ತಿಕೊಂಡಿದ್ದೇವೆ. ಎನ್ನತಕ್ಕದ್ದನ್ನು ನನಗೆ ತಿಳಿಸಿದ್ದರು. ಮುಂದೆ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಯಾವ ಕಾರಣಕ್ಕೋಸ್ಕರ, ಈ ಕೆಲಸಗಳನ್ನು ಕೈಬಿಟ್ಟರು ಅನ್ನುವುದನ್ನು ಮಾನ್ಯ ಸಚಿವರು ಸಂಬಂಧಿಸಿದ ಅಧಿಕಾರಿಗಳಿಂದ ಮಾಹಿತಿಯನ್ನು ಪಡೆದು ತಮ್ಮ ಉತ್ತರದ ಕಾಲಕ್ಕೆ ಹೇಳಬೇಕು ಅನ್ನತಕ್ಕಂಥ ಮಾತನ್ನು ಕೂಡ ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇನ್ನು ಮೈನರ್ ಇರಿಗೇಷನ್ ಇಲಾಖೆಯಲ್ಲಿ 3–4 ತಾಲ್ಲೂಕುಗಳನ್ನು ಒಳಗೊಂಡು ಸಬ್‌ಡಿವಿಜನ್‌ಗಳನ್ನಾಗಿ ಮಾಡಿದ್ದಾರೆ. ಇದರಿಂದ ನಮ್ಮ ತಾಲ್ಲೂಕಿನಲ್ಲಿ ಅಭಿವೃದ್ಧಿ ಕೆಲಸ ಆಗಲಿಕ್ಕೆ ಬಹಳ ತೊಂದರೆಯಾಗುತ್ತಿದೆ. ಆ ಕಾರಣದಿಂದ ಮೈನರ್ ಇರಿಗೇಷನ್ ಇಲಾಖೆಯಲ್ಲಿ ಸಬ್‌ಡಿವಿಜನ್‌ಗಳನ್ನು ಅವರು 2–2 ತಾಲ್ಲೂಕ್‌ಗಳಲ್ಲಿ ಒಂದರಂತೆಯಾದರೂ ಕನಿಷ್ಠ ಅವರು ಮಾಡುವುದು ಬಹಳ ಸೂಕ್ತವಾದುದು ಎನ್ನತಕ್ಕಂಥ ಮಾತನ್ನು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇನ್ನು ಏತನೀರಾವರಿಯ ಬಗ್ಗೆ, ಈಗಾಗಲೇ ಈ ನಿಗಮವನ್ನು ರದ್ದುಪಡಿಸಬೇಕು ಅನ್ನತಕ್ಕಂಥ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯದಲ್ಲಿ ಹೇಳಿದ್ದಾರೆ. ಹಿರಿಯ ಸದಸ್ಯರಾದಂತಹ ಮಾನ್ಯ ವೀರೇಂದ್ರಪಾಟೀಲರು ಇದನ್ನು ರದ್ದುಪಡಿಸುವುದು ಸೂಕ್ತ ಅಲ್ಲ ಎನ್ನತಕ್ಕದ್ದನ್ನು ಹೇಳಿದ್ದಾರೆ. ಈ ಬಗ್ಗೆ 1986 ರಿಂದ ಇದುವರೆಗೂ ಒಂದೂ ಕೆಲಸವೂ ಆಗದೇ ಇರುವುದರಿಂದ ಈ ನಿಗಮವನ್ನು ರದ್ದುಪಡಿಸುವುದು ಒಳ್ಳೆಯದು ಎನ್ನತಕ್ಕ ನನ್ನ ವೈಯಕ್ತಿಕ ಅಭಿಪ್ರಾಯ ಇದೆ ಅನ್ನುವುದನ್ನು ನಾನು ಹೇಳಬಯಸುತ್ತಿದ್ದೇನೆ. ಇನ್ನು ಕೆರೆ ಕಲ್ಯಾಣದ ಬಗ್ಗೆ ಹೇಳುವುದಾದರೆ, ಇವತ್ತು ನಮ್ಮ ಭಾಗದಲ್ಲಿ ಹತ್ತಿಮತ್ತೂರು ಮತ್ತು ಮೋತಿ ತೂಬು ಎನ್ನತಕ್ಕಂಥ ಕೆರೆಗಳು ಸುಮಾರು 400 ಎಕರೆ ಡೇಡ್ ಏರಿಯಾ ಇದ್ದು ಅವುಗಳ ಹೂಳನ್ನು ತೆಗೆಯತಕ್ಕಂಥ ಕೆಲಸವನ್ನು ಮಾಡಬೇಕಾಗಿದೆ. ಅಲ್ಲಿ ಜಾಲಿ ಗಿಡಗಳು ಬೆಳೆದು ಹಾಳಾಗಿದೆ. ಇವತ್ತು ಆ ಕೆರೆಗಳನ್ನು ಹೊಸದಾಗಿ ಮಾಡಲಿಕ್ಕೆ ಆಗಲಿಕ್ಕೆ ಸಾಧ್ಯವೇ ಇಲ್ಲ. ಇದ್ದಂತಹ ಕೆರೆಗಳನ್ನಾದರೂ ಉಳಿಸಿಕೊಂಡು ಹೋಗತಕ್ಕಂಥ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಅನ್ನತಕ್ಕ ಮಾತನ್ನು ನಾನು ಹೇಳುತ್ತಿದ್ದೇನೆ.

ಇನ್ನು ಕೆ.ಇ.ಬಿ. ವಿಚಾರದಲ್ಲಿ ಹೇಳುವುದಾದರೆ, ನನ್ನ ಕ್ಷೇತ್ರದಲ್ಲಿ ಕೇವಲ 33 ಕೆ.ವಿ. ಸ್ಟೇಷನ್ ಅಲ್ಲಿ 110 ಕೆ.ವಿ ಸ್ಟೇಷನ್ ಕೂಡಲೆ ಮಾಡಬೇಕು. ಮತ್ತು ಎಕ್ಸಿಕ್ಯುಟಿವ್ ಇಂಜಿನಿಯರ್ ಆಫೀಸ್ ಕೆ.ಇ.ಬಿ.ದು ಇದು ಹುಬ್ಬಳ್ಳಿಯಲ್ಲಿ ಡಿವಿಜನ್ ನಂ:1, 2 ಅಂತ ಇಡೀ ಧಾರವಾಡದ ಜಿಲ್ಲೆ 18 ಮತ ಕ್ಷೇತ್ರಗಳನ್ನು ಹೊಂದಿದಂತದ್ದು, ಎರಡು ಆಫೀಸ್ ಹುಬ್ಬಳ್ಳಿಯಲ್ಲಿ ಕೇಂದ್ರಿಕೃತವಾಗಿದೆ. ಇವತ್ತು ಅಲ್ಲಿ ಮೆಟರಿಯಲ್ಸ್ ಅನ್ನು ತರಲಿಕ್ಕೆ ಬಹಳ ತೊಂದರೆಯಾಗಿದ್ದು, ನಮ್ಮ ಶಿಗ್ಗಾವ್ ಅಥವಾ ಸವಣೂರು ಮಧ್ಯಕೇಂದ್ರದಲ್ಲಿ ಒಂದು ಎಕ್ಸಿಕ್ಯೂಟಿವ್ ಇಂಜಿನಿಯರ್ ಸಬ್‌ಡಿವಿಜನ್ ರೂರಲ್‌ಗೆ ಸಂಬಂಧವಿದ್ದು ಪಟ್ಟಣದಲ್ಲಿದೆ. ಅದನ್ನು ಕೂಡಲೇ ಶಿಗ್ಗಾವಿಗೆ ವರ್ಗಾಯಿಸಿ ಕೊಡಬೇಕು ಅನ್ನತಕ್ಕ ಮಾತನ್ನು ನಾನು ಹೇಳಬಯಸುತ್ತೇನೆ.

(ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇನ್ನು ಪಿ.ಡಬ್ಲ್ಯೂ.ಡಿ ಇಲಾಖೆಯ ಬಗ್ಗೆ ಹೇಳುವುದಾದರೆ, ಈ ಇಲಾಖೆ ಬಹಳ ಮಹತ್ವವಾದಂತಹ ಇಲಾಖೆಯಾಗಿದೆ. ನಮ್ಮ ಹುಬ್ಬಳ್ಳಿಯಲ್ಲಿ ಇರತಕ್ಕಂಥ ಏರ್‌ಪೋರ್ಟ್ ಅನ್ನು ಕೂಡಲೇ ಮುಗಿಸಿಕೊಡಬೇಕು. ನ್ಯಾಷನಲ್ ಹೈವೇ ಬೈಪಾಸ್ ಹುಬ್ಬಳ್ಳಿ ಧಾರವಾಡ ಕೇವಲ 20 ಕಿ.ಮೀ ದೂರವಿರುವುದರಿಂದ, ಅನೇಕ ವರ್ಷಗಳಿಂದ ಈ ಕೆಲಸ ನೆನಗುದಿಗೆ ಬಿದ್ದಿದೆ. ಅದನ್ನು ಕೂಡಲೇ ತಾವು ಮುಗಿಸಿಕೊಡಬೇಕು. ನಮ್ಮ ರಾಷ್ಟ್ರೀಯ ಹೆದ್ದಾರಿ ಶಿಗ್ಗಾವ್ ತಾಲ್ಲೂಕಿನಲ್ಲಿ ಪಾಡಂಬಿ ಕ್ರಾಸ್‌ನಲ್ಲಿ ಅನೇಕ ಆಕ್ಸಿಡೆಂಟ್‌ಗಳು ಆಗುತ್ತಿದೆ. ಅದನ್ನು ಕೂಡ ದುರಸ್ತಿ ಮಾಡಬೇಕಾಗಿದೆ. ಈ ಬಗ್ಗೆ ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರು ಆ ರಸ್ತೆಯನ್ನು ಸರಿಪಡಿಸಬೇಕು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಸವಣೂರು ಸರೆವಾಡು ರಸ್ತೆ ಇದರ ಬಗ್ಗೆ ಅನೇಕ ಜನರು ಬಹಳ ದಿನಗಳಿಂದ ಪ್ರತಿಭಟನೆಯನ್ನು ಮಾಡುತ್ತಿದ್ದಾರೆ. ಈ ರಸ್ತೆಯನ್ನು ಕೂಡಲೇ ಕೈಗೆತ್ತಿಕೊಂಡು ಈ ವರ್ಷ ಕೆಲಸವನ್ನು ಪ್ರಾರಂಭಮಾಡಬೇಕು. ಈ ರಸ್ತೆ ಅತಿ ಮಹತ್ವವಾಗಿದೆ. ಇದನ್ನು ಮೇಲ್ದರ್ಜೆಗೇರಿಸುವಾಗ ನಮ್ಮ ಮತಕ್ಷೇತ್ರದಲ್ಲಿ 50 ಕಿಮೀ ಮಾಡಬೇಕಾಗಿದೆ. ಇಡೀ ಧಾರವಾಡ ಜಿಲ್ಲೆಯಲ್ಲಿ ಎರಡು ತಾಲ್ಲೂಕ್‌ಗಳನ್ನು ಒಳಗೊಂಡಂತಹ ಕ್ಷೇತ್ರ ಅಂದರೆ ಶಿಗ್ಗಾವ್ ಮತ್ತು ಸವಣೂರು. ಈ ಸವಣೂರು ರಸ್ತೆಯನ್ನು ನನ್ನ ಮತಕ್ಷೇತ್ರದಲ್ಲಿ 50 ಕಿ.ಮೀ ಮೇಲ್ದರ್ಜೆಗೆ ಏರಿಲ್ಲ. ಸವಣೂರಿನಲ್ಲಿ ಕೇವಲ 12 ಕಿ.ಮೀ ಮೇಲ್ದರ್ಜೆಗೇರಿಸಲಾಗಿದೆ. ಇನ್ನು 28 ಕಿ.ಮೀ ಅನ್ನು ಬೇರೆ ತಾಲ್ಲೂಕ್‌ಗಳಿಗೆ ಅನುಕೂಲವಾದಂತೆ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಸಬ್‌ಡಿವಿಜನ್‌ನ ವಿಷಯದಲ್ಲಿಯೂ ಕೂಡ ಶಿಗ್ಗಾವ್ ಮತ್ತು ಸವಣೂರು ಈ ಎರಡು ತಾಲ್ಲೂಕ್‌ಗಳನ್ನು ಒಂದು ಹಾವೇರಿಗೆ ಮತ್ತೊಂದನ್ನು ಹಾನಗಲ್‌ಗೆ ಈ ರೀತಿಯಾಗಿ ಇವುಗಳನ್ನು ಅಲ್ಲಿನ ಸಬ್‌ಡಿವಿಜನ್‌ಗೆ ಜಾಯಿಂಟ್ ಮಾಡುವುದರಿಂದ ಇಲ್ಲಿ ಕೆಲಸ ಮಾಡುವುದಕ್ಕೆ ತೊಂದರೆಯಾಗಿದೆ. ಕಾರಣ ಶಿಗ್ಗಾವ್ ಮತ್ತು ಸವಣೂರು ಎರಡು ತಾಲ್ಲೂಕ್‌ಗಳನ್ನು ಕೂಡಿಸಿ ಹಾನಗಲ್ ಮತ್ತು ಹಾವೇರಿಯಿಂದ ಬೇರ್ಪಡಿಸಿ ಒಂದು ಸಬ್‌ಡಿವಿಜನ್ ಅನ್ನು ಮಾಡಿಕೊಡಬೇಕೆನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇವತ್ತು ವಿದ್ಯುತ್ತಿನ ಟ್ರ್ಯಾನ್ಸ್‌ಫಾರ್ಮರ್ಸ್‌ಗಳು ನಮ್ಮ ಶಿಗ್ಗಾವಿಯಲ್ಲಿ ವೋಲ್ಟೇಜ್ ಕಡಿಮೆ ಇರುವುದರಿಂದ ಬಹಳ ತೊಂದರೆಯಾಗಿದೆ. ಅವುಗಳೆಲ್ಲವನ್ನು ಸರಿಪಡಿಸಬೇಕೆಂದು ಹೇಳಿ, ನನಗೆ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡಿ.

ಶ್ರೀ ಎಂ. ಮಹಾದೇವ್:- ಮಾನ್ಯ ಅಧ್ಯಕ್ಷರೇ, ಕಬಿನಿಯ ಬಗ್ಗೆ ನಾವು ಮಾತನಾಡಬೇಕಾಗಿತ್ತು. ಕಾವೇರಿ ಡಿಸ್‌ಪ್ಯೂಟ್ ಇರುವುದು ಬಹಳ ಮುಖ್ಯವಾಗಿ ಇರುವುದು. ನಮಗೆ ಮಾತನಾಡಲು ಅವಕಾಶ ಕೊಡಲಿಲ್ಲ ಅಂದರೆ ಇನ್ನು ಯಾರಿಗೆ ಕೊಡುತ್ತೀರಿ? ಕಾವೇರಿಯ ಬೇಸಿನ್‌ಗೆ

ಸಂಬಂಧಪಟ್ಟಂಥವರು ನಾವು. ನಾವು ಕಬಿನಿಯ ಬಗ್ಗೆ ಮಾತನಾಡಬೇಕು. ನಮಗೆ ಎರಡು ನಿಮಿಷ ಮಾತನಾಡಲು ಅವಕಾಶ ಕೊಡಲಿಲ್ಲ ಅಂದರೆ, ಇನ್ನು ನೀವು ಯಾರಿಗೆ ಮಾತನಾಡಲು ಅವಕಾಶವನ್ನು ಕೊಡುತ್ತೀರಿ ? ಇದು ಬಹಳ ಮುಖ್ಯವಾದುದು. ನಾವು ಕಬಿನಿಯ ಬಗ್ಗೆ ಮಾತನಾಡಬೇಕಾದ್ದು ಇದೆ. ಎರಡು ನಿಮಿಷ ತಾವು ಮಾತನಾಡುವುದಕ್ಕೆ ಅವಕಾಶ ಕೊಡಲಿಲ್ಲ ಅಂದರೆ ಹೇಗೆ ?

ಶ್ರೀ ಎಂ.ವೈ. ಮೇಟಿ:- ಬಿಜಾಪುರ ಜಿಲ್ಲೆಯಲ್ಲಿರುವವರು ಒಬ್ಬರೂ ಮಾತನಾಡಿಲ್ಲ. ನಾನೊಬ್ಬ ಮಾತನಾಡುತ್ತೇನೆ.

ಅಧ್ಯಕ್ಷರು:- ನಾನು ತಮ್ಮ ಕಡೆಯಿಂದ ಬಂದಂತಹ ಹೆಸರುಗಳನ್ನು ಓದಿದ್ದೇನೆ. ಅದರಲ್ಲಿ ತಮ್ಮ ಹೆಸರು ಇಲ್ಲ. ನಾನು ಸಾಕಷ್ಟು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೇನೆ.

ಶ್ರೀ ಎಂ.ವೈ.ಮೇಟಿ:- ಬಿಜಾಪುರ ಜಿಲ್ಲೆಯಿಂದ ಒಬ್ಬರು ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ.

ಅಧ್ಯಕ್ಷರು:– ತಾವು ಹೆಸರನ್ನು ಕೊಡಬೇಕು.

ಶ್ರೀ ಎಂ.ವೈ ಮೇಟಿ:– ಆಲಮಟ್ಟಿ ಡ್ಯಾಂ. (ಗೊಂದಲ)

ಅಧ್ಯಕ್ಷರು:– ನಾನು ತಮ್ಮ ಕಳಕಳಿಯನ್ನು ಅರ್ಥಮಾಡಿಕೊಂಡು 5–5 ನಿಮಿಷ ಅವಕಾಶವನ್ನು ಕೊಡುವುದಕ್ಕೆ ಹೋದರೆ ನೀವು 20--20 ನಿಮಿಷ ಭಾಷಣ ಮಾಡಿದರೆ ಆಗುವುದಿಲ್ಲ. ಏಕೆಂದರೆ ನಾವು ಟೈಂ ಲಿಮಿಟ್ ಅನ್ನು ಹಾಕದೆ ಇದ್ದರೆ ಡಿಮ್ಯಾಂಡ್ ಅನ್ನು ಮುಗಿಸುವುದಕ್ಕಾಗುವುದಿಲ್ಲ. ಇವತ್ತು ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡಲೇ ಬೇಕು.

† ಶ್ರೀ ಶಿವಶಂಕರಪ್ಪ ಶಿರವಾಳ್ (ಷಹಾಪುರ):– ಸನ್ಮಾನ್ಯ ಸಭಾಧ್ಯಕ್ಷರೇ, ಈ ದಿನ ನೀರಾವರಿ, ಕಾಮಗಾರಿ, ಸಣ್ಣ ನೀರಾವರಿ, ಇಂಧನ ಇಲಾಖೆ ಬೇಡಿಕೆಗಳ ಮೇಲೆ ಮಾತನಾಡಲು ನಮಗೆ ಕೇವಲ 5 ನಿಮಿಷ ಕೊಟ್ಟ ಕಾರಣ ನನ್ನ ಮತಕ್ಷೇತ್ರಕ್ಕೆ ಸಂಬಂಧಪಟ್ಟ ಕೃಷ್ಣ ಮೇಲ್ದಂಡೆ ಯೋಜನೆ ಬಗ್ಗೆ ಕೆಲವು ವಿಚಾರಗಳನ್ನು ನಾನು ಹೇಳಬಯಸುತ್ತೇನೆ. ಮುಖ್ಯವಾಗಿ 1964ರಲ್ಲಿ ಶಂಕುಸ್ಥಾಪನೆಯಾಗಿ ಸುಮಾರು 58 ಲಕ್ಷಗಳೊಳಗೆ ಆಗಬೇಕಾದ್ದು ಸುಮಾರು 30 ವರ್ಷಗಳ ಕಾಲದಲ್ಲಿ ಸರ್ಕಾರ 815 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಇವತ್ತು ಸುಮಾರು ಮೂರುವರೆ ಲಕ್ಷ ಹೆಕ್ಟೇರ್‌ಗೆ ನೀರನ್ನು ಪಡೆದಿದ್ದೇವೆ. ಇನ್ನುಳಿದಿರತಕ್ಕ ಕೆಲಸಕ್ಕೆ ವಿಶ್ವ ಬ್ಯಾಂಕ್ ನೆರವಿನಿಂದ ನಮ್ಮ ಕೆಲಸಕಾರ್ಯಗಳು ನಡೆಯುತ್ತಿವೆ. ಆದರೆ ಒಂದು ಕಡೆ ಹಣ ಇಲ್ಲವೆಂದು ಹೇಳುತ್ತಿದ್ದೇವೆ. ಇನ್ನೊಂದು ಕಡೆ ಹಣ ಬಿಡುಗಡೆ ಮಾಡದೆ ಇರುವುದನ್ನು ನಾನು ಮಂತ್ರಿಗಳಿಗೆ ಹೇಳಬಯಸುತ್ತೇನೆ. ಮುಖ್ಯವಾಗಿ ಅಲ್ಲಿನ ಮುಖ್ಯ ಇಂಜಿನಿಯರ್ ಹೋದ ವರ್ಷ ಮಳೆಗಾಲದಲ್ಲಿ ಗೋದಾಮುಗಳಲ್ಲಿ ಸಿಮೆಂಟ್ ಇಡಲಿಕ್ಕೆ ಉಪಯೋಗಿಸತಕ್ಕ ಕಾರ್‌ಪೆಟ್‌ನ್ನು 80 ಲಕ್ಷ ರೂಪಾಯಿಗೆ ಖರೀದಿ ಮಾಡಿದ್ದಾರೆ. ನಾವು ಒಂದು ಕಡೆ ದುಡ್ಡು ಇಲ್ಲವೆಂದು ಹೇಳುತ್ತಿದ್ದೇವೆ. ಮತ್ತೊಂದು ಕಡೆ 80 ಲಕ್ಷ ರೂಪಾಯಿ ಖರ್ಚು ಮಾಡಿದರೆ ಇದಕ್ಕೆ ಯಾರು ಹೊಣೆಗಾರರು. ಇದರ ಬಗ್ಗೆ ನಾನು ಕೊಶ್ಚನ್ ಕೂಡ ಕೇಳಿದ್ದೇನೆ. ಪತ್ರ ಕೊಟ್ಟಿದ್ದೇನೆ. ಆದರೆ ಸರ್ಕಾರದಿಂದ ಯಾವ ಉತ್ತರವೂ ಬಂದಿಲ್ಲ. ಅದಲ್ಲದೆ ಮೂವತ್ತು ಲಕ್ಷ ರೂಪಾಯಿ ಕೊಟ್ಟು ರೇಖಾ ಸಿಮೆಂಟ್ ಖರೀದಿ ಮಾಡಿದ್ದಾರೆ. ಅದಕ್ಕೆ ಸರ್ಕಾರದ ಅನುಮತಿ ಇಲ್ಲ. ಇದರಿಂದ ಒಳ್ಳೆಯ ಕೆಲಸಗಳಾಗುತ್ತಿಲ್ಲ ಎಂಬ ಭಾವನೆ ಸರ್ಕಾರದಲ್ಲಿ ಇದ್ದಾಗ ಕೂಡ ಮುಖ್ಯ ಇಂಜಿನಿಯರ್ ರೇಖಾ ಸಿಮೆಂಟ್ ಖರೀದಿ ಮಾಡಿರುವುದರಿಂದ ಕೆಲಸ ಕಳಪೆಯಾಗುತ್ತಿದೆ ಮತ್ತು ಕೇವಲ ಪ್ರಿಂಟಿಂಗ್‌ಗೆ ಸುಮಾರು 15–20 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆದರ ಬಗ್ಗೆ ಕೊಶ್ಚನ್ ಕೊಡ ಕೇಳಿದ್ದೆ. ಅದಕ್ಕೂ ಉತ್ತರ ಬಂದಿಲ್ಲ ಮತ್ತು ಪತ್ರವನ್ನು ಬರೆದಿದ್ದೇನೆ. ಅದನ್ನು ತಮಗೆ

ಕಳುಹಿಸಿಕೊಡುತ್ತೇನೆ. ಎರಡನೆಯದಾಗಿ ಸುಮಾರು 4Ë5 ಕೋಟಿ ರೂಪಾಯಿ ಖರ್ಚು ಮಾಡಿ ಮುಡಿವಾಳ ಬ್ರಾಂಚ್ ಮತ್ತು ಶಹಪುರ್ ಬ್ರಾಂಚ್ ಕೆನಾಲ್ ಕೆಲಸಕ್ಕಾಗಿ ಪೈಪ್‌ಲೈನ್ ಮುಖಾಂತರ ಕಾಮಗಾರಿಗಳಿಗೆ ನೀರು ಒದಗಿಸಿದ್ದಾರೆ. ಕೊಚ್ಚಿನ್ ಹತ್ತಿರ ಕೆಲಸ ಮುಗಿಯುತ್ತಾ ಬಂದಿದೆ. ಕೆಂಭಾವಿ, ಮತ್ತು ಹೊಸಕೆರೆ ತಾಂಡ ಹತ್ತಿರ ಇರುವ ದೊಡ್ಡ ದೊಡ್ಡ ಎರಡು ಟ್ಯಾಂಕ್‌ಗಳು ವೇಸ್ಟ್ ಆಗುತ್ತದೆ. ಆ ಭಾಗದ ಕೆಳಗಿರುವ ಹಳ್ಳಿಗಳಿಗೆ ನೀರಾವರಿ ಕಲ್ಪಿಸುವುದಕ್ಕೆ ಆಗುವುದಿಲ್ಲ ಮತ್ತು ಆ ಟ್ಯಾಂಕ್‌ಗಳಿಂದ ಯಾವ ಹಳ್ಳಿಗೆ ನೀರು ಸಾಕಾಗುತ್ತದೆ. ಈ ವರ್ಷದ ಬಜೆಟ್‌ನಲ್ಲಾದರೂ ಒದಗಿಸಿಕೊಡಬೇಕೆಂದು ತಮ್ಮ ಮೂಲಕ ಹೇಳಬಯಸುತ್ತೇನೆ ಮತ್ತು ಕೆಂಭಾವಿಯಲ್ಲಿ ಕೃಷ್ಣಾ ಲಿಫ್ಟ್ ಪ್ರದೇಶದಲ್ಲಿ 100 ಕೆವಿ ಲೈನ್ ಸಬ್ ಸ್ಟೇಷನ್ ಮಾಡಬೇಕಾಗಿದೆ. ಏಕೆಂದರೆ 93–94ರ ಬಜೆಟ್‌ನಲ್ಲಿ ಇದು ಇಲ್ಲ ಎನ್ನುವುದನ್ನು ನಾನು ಕೇಳಿದ್ದೇನೆ. ಅಲ್ಲಿ ಸಬ್ ಸ್ಟೇಷನ್ ತೆಗೆಯದೇ ಹೋದರೆ ಆ ಪ್ರದೇಶದಲ್ಲಿ ಬರತಕ್ಕಂಥ ಯೋಜನೆಗಳಿಗೆ ಅನುಕೂಲವಾಗುವುದಿಲ್ಲ. ಆದುದರಿಂದ 93–94ರಲ್ಲಿ 100ಕೆವಿ ಲೈನ್ ಸಬ್ ಸ್ಟೇಷನ್ ಕೆಂಭಾವಿಯಲ್ಲಿ ಈಗಾಗಲೇ ಜಾಗವನ್ನೂ ಒದಗಿಸಿರುವುದರಿಂದ ಪ್ರಾರಂಭ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ನಲ್ಲಿ ಜೂನಿಯರ್ ಇಂಜಿನಿಯರ್ ಮತ್ತು ಅಸಿಸ್ಟೆಂಟ್ ಇಂಜಿನಿಯರ್ ಹುದ್ದೆಗಳು ಖಾಲಿ ಬಿದ್ದಿದೆ. ಸರ್ಕಾರಕ್ಕೆ ಗೊತ್ತಿದೆ ಅವರನ್ನು ಭರ್ತಿ ಮಾಡಬೇಕೆಂದು. ಹಿಂದಿನ ಸರ್ಕಾರ 75 ಪರ್‌ಸೆಂಟ್ ಆ ಭಾಗದ ಜನರಿಗೆ 25 ಪರ್‌ಸೆಂಟ್ ಹೊರಗಿನವರಿಗೆ ಕೊಡಬೇಕೆಂದು ಮಾಡಿದ್ದರು. ಆದಷ್ಟು ತೀವ್ರವಾಗಿ ಆ ಹುದ್ದೆಗಳನ್ನು ಭರ್ತಿ ಮಾಡುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಹಾರಂಗಿ ಮತ್ತು ಇತರ ಪ್ರಾಜೆಕ್ಟ್‌ಗಳಲ್ಲಿ ಪೀಸ್ ವರ್ಕ್‌ನಲ್ಲಿ ಕೆಲಸ ಹೆಚ್ಚು ಮಾಡುತ್ತಿದ್ದಾರೆ. ನಮ್ಮ ಜೇವರ್ಗಿನಲ್ಲೂ ಇದನ್ನು ಮಾಡುತ್ತಿದ್ದಾರೆ. ಉಪಮುಖ್ಯಮಂತ್ರಿಗಳು ಫೆಬ್ರವರಿ 9–10ರಂದು ಅದನ್ನು ನೋಡಿದ್ದಾರೆ. ಯಾವ ರೀತಿ ಪೀಸ್ ವರ್ಕ್ ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ಅವರು ನೋಡಿದ್ದಾರೆ. ಬಹಳಷ್ಟು ಜನ ಅಲ್ಲಿ ಕೆಲಸಗಳನ್ನು ಮಾಡುತ್ತಿದ್ದಾರೆ. ಈ ರೀತಿ ಪೀಸ್ ವರ್ಕ್ ಕೊಡುವುದನ್ನು ಮುಂದುವರೆಸುವುದಾಗಿ ಅವರು ಉತ್ತರದಲ್ಲಿ ಹೇಳಬೇಕು.

ಇವೊತ್ತು ನಮ್ಮ ಓ ಅಂಡ್ ಎಮ್ ಡಿವಿಜನ್‌ನಲ್ಲಿ ಇರತಕ್ಕ ಅವ್ಯವಹಾರಗಳ ಬಗ್ಗೆ ಹಿಂದಿಯಲ್ಲಿ ಮಂತ್ರಿಗಳಿಗೆ ಪತ್ರ ಬರೆದಿದ್ದೆ. ಲೋಕಾಯುಕ್ತಕ್ಕೆ ರೆಫರ್ ಮಾಡಿದ್ದಾರೆ. ಆದರೂ ಕೂಡ ಅಲ್ಲಿ ಅವ್ಯವಹಾರಗಳು ನಡೆಯುತ್ತಾ ಇವೆ. ಇದರ ಬಗ್ಗೆ ಸಮಗ್ರ ತನಿಖೆ ಆಗಬೇಕು. ಇದಕ್ಕೆ ಕಡಿವಾಣ ಹಾಕದೇ ಹೋದರೆ ಯಾವ ಸರ್ಕಾರ ಬಂದರೂ ಪೇಮೆಂಟ್ ಮಾಡಲು ಆಗುವುದಿಲ್ಲ. ಉಪಮುಖ್ಯಮಂತ್ರಿಗಳು ಇದಕ್ಕೆ ಕಡಿವಾಣ ಹಾಕುತ್ತಾರೆ ಎಂದು ನಂಬಿದ್ದೇನೆ. ಇದರ ಬಗ್ಗೆ ನನ್ನ ಹತ್ತಿರ ಇರುವ ಪೇಪರ್‌ಗಳನ್ನು ಅವರಿಗೆ ಕಳುಹಿಸಿಕೊಡುತ್ತೇನೆ.

ಇನ್ನು ಮುಖ್ಯವಾಗಿ ಕೆಂಭಾವಿಯಿಂದ ಸುರಪೂರ ರಸ್ತೆ ಇತ್ತೀಚಿಗೆ ನೀರಾವರಿ ಆದ ನಂತರ ಬಹಳ ಹದಗೆಟ್ಟಿದೆ. ಕಾಮಗಾರಿ ಇಲಾಖೆಯಿಂದ ಇದು ನೀರಾವರಿ ಇಲಾಖೆಗೆ ವರ್ಗವಾಗಿದೆ. 94–95ರಲ್ಲಿ ಈ ಕೆಲಸ ತೆಗೆದುಕೊಳ್ಳತ್ತೇವೆಂದು, ಉತ್ತರದಲ್ಲಿ ಹೇಳಿದ್ದಾರೆ. ಮೋಟಾರ್ ಓಡಾಡಲೂ ಆಗದೇ ಇರತಕ್ಕಂಥ ಪರಿಸ್ಥಿತಿ ಅಲ್ಲಿ ಇದೆ. ಆದ್ದರಿಂದ 93–94ರಲ್ಲಿ ಈ ರಸ್ತೆಯನ್ನು ತೆಗೆದುಕೊಂಡು ಇದನ್ನು ಕಾಮಗಾರಿಯಲ್ಲಿ ಸೇರಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನು ಹಿಂದುಳಿದ ಪ್ರದೇಶವಾದ ದೇವದುರ್ಗ, ಲಿಂಗಸುಗೂರ್‌ಗೆ, ರಾಯಚೂರಗಳಿಗೆ ಈ ರೈಟ್ ಬ್ಯಾಂಕಿನ್ ಕೆನಾಲಿನ ನೀರನ್ನು ಯು.ಕೆ.ಪಿ.ನಿಂದ ಉಪಯೋಗಿಸಿಕೊಳ್ಳಬೇಕು. ಮತ್ತು ಉಪಮುಖ್ಯಮಂತ್ರಿಗಳು ಇದನ್ನು ಸರ್ವೆ ಮಾಡಿಸಿ ಮುಂದಿನ ಕ್ರಮ ಕೈಗೊಳ್ಳಬೇಕು. ಈಗ ರೈತರು ಬಹಳ ಜಾಗೃತರಾಗಿದ್ದಾರೆ. ಸ್ವಲ್ಪ ದಿವಸದಲ್ಲಿ ಅವರು ಧರಣಿ ಮಾಡತಕ್ಕ ವ್ಯವಸ್ಥೆ ಅವರು

ಮಾಡುತ್ತಿದ್ದಾರೆ. ಈ ಒಂದು ಕೆಲಸವನ್ನು ಸಹ 93-94ರಲ್ಲಿ ಸೇರಿಸಿ ನಮ್ಮ ರಾಜ್ಯದ ಯೋಜನೆಯಲ್ಲಿ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಈ ದಿನ 5 ನಿಮಿಷ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಶಂಕರ್ ರೆಡ್ಡಿ (ಸಿರಗುಪ್ಪ):- ಸನ್ಮಾನ್ಯ ಅಧ್ಯಕ್ಷರೇ, ಭಾರಿ ನೀರಾವರಿ, ವಿದ್ಯುಚ್ಛಕ್ತಿ ಮತ್ತು ಸಣ್ಣ ನೀರಾವರಿ ಖಾತೆಗಳ ಅನುದಾನಕ್ಕೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತಾ ಕೆಲವು ವಿಷಯಗಳನ್ನು ಹೇಳಲು ಇಷ್ಟಪಡುತ್ತೇನೆ. ತಾವು ಮಂಡ್ಯ ಜಿಲ್ಲೆಯವರು ತಮಗೆ ನೀರಿನ ಕೊನೆಯ ಭಾಗದಲ್ಲಿ ಇರತಕ್ಕ ರೈತರ ಕಷ್ಟ ಗೊತ್ತಿದೆ. ಕಾಲುವೆಯ ಕೊನೆಯ ಹಂತದಲ್ಲಿ ಇರತಕ್ಕ ರೈತರಿಗೆ ನೀರು ಮುಟ್ಟುವುದಿಲ್ಲ. ಅಲ್ಲಿಯ ಜನರು ಬಹಳ ಕಷ್ಟಕ್ಕೀಡಾಗಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ನ್ಯಾಷನಲ್ ವಾಟರ್ ಮ್ಯಾನೇಜಮೆಂಟ್ ಪ್ರೋಗ್ರಾಮದಲ್ಲಿ ಕಡೆಯ ಹಂತದಲ್ಲಿ ಇರತಕ್ಕ ರೈತರಿಗೆ ವಾಟರ್ ಸ್ಟೋರ್ ಮಾಡಿ ಅವರಿಗೆ ಕೊಡತಕ್ಕ ನೀರನ್ನು ಸರಿಯಾಗಿ ಒದಗಿಸಲು ಅನುಕೂಲವಾಗುವ ರೀತಿಯಲ್ಲಿ ಕ್ರಮ ಕೈಗೊಳ್ಳಬೇಕು. ಮೊನ್ನೆ ತಾನೇ ನನ್ನ ಕ್ಷೇತ್ರದಲ್ಲಿ ಒಂದು ಕಾಲುವೆಯನ್ನು ರಿಪೇರಿ ಮಾಡಿದ್ದಾರೆ. ಅದರಿಂದ ಕಡೆಯ ಭಾಗದ ರೈತರಿಗೆ ಬಹಳ ಅನುಕೂಲವಾಗಿದೆ. ಅವರಿಗೆ ನೀರು ಚೆನ್ನಾಗಿ ಸಿಗುತ್ತದೆ. ನಮ್ಮ ಸರ್ಕಾರದವರು ವರ್ಲ್ಡ್ ಬ್ಯಾಂಕ್ಸ್ ಫಂಡ್ಸ್ ಅನ್ನು ಹೆಚ್ಚು ಉಪಯೋಗಿಸುತ್ತಿಲ್ಲ. ಬೇರೆ ಸಣ್ಣ ಸಣ್ಣ ರಾಜ್ಯಗಳಾದ ಹರಿಯಾಣಾ ಹಾಗೂ ತಮಿಳುನಾಡು ಸರ್ಕಾರಗಳು ಸುಮಾರು ಒಂದು ಕೋಟಿ ರೂಪಾಯಿಗಿಂತ ಹೆಚ್ಚು ಹಣವನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಆದರೆ ನಮ್ಮ ಸರ್ಕಾರದವರು ಕೇವಲ 2Ë3 ಕೋಟಿ ರೂ.ಗಳನ್ನೂ ಸಹ ಉಪಯೋಗಿಸಿಕೊಂಡಿಲ್ಲ, ಇದು ಬಹಳ ದುರದೃಷ್ಟಕರ ಸಂಗತಿ. ಈಗಾಗಲೇ ನಾನು ನನ್ನ ಕ್ಷೇತ್ರದಲ್ಲಿ ತುಂಗಭದ್ರಾ ಆಯಕಟ್ಟಿನಿಂದ ಎಸ್.ಡಬ್ಲ್ಯೂ. ಎಂ.ಪಿ.ಗೆ ಸೇರಿಸಬೇಕು. ಎಂದು ಕೇಳಿಕೊಳ್ಳುತ್ತೇನೆ. ಅನೇಕ ಸ್ಕೀಮ್‌ಗಳನ್ನು ಕಳುಹಿಸಿದ್ದಾರೆ. ಈಗಿನ ಸರ್ಕಾರದವರು ಅದನ್ನು ಮಂಜೂರು ಮಾಡಬೇಕು. ಆಯಕಟ್ಟು ರೋಡಿನ ಬಗ್ಗೆ ಅವರು ಹೆಚ್ಚಿನ ಗಮನಹರಿಸಬೇಕು. ನಮ್ಮಲ್ಲಿ ನೀರಾವರಿ ಹೆಚ್ಚು ಇರುವುದರಿಂದ ಈ ಆಯಕಟ್ಟು ರೋಡ್‌ಗಳು ಬಹಳ ಬೇಗ ಹಾಳಾಗಿ ಹೋಗುತ್ತವೆ. ಆದ್ದರಿಂದ ಈ ರೋಡ್‌ಗಳ ಬಗ್ಗೆ ತಾವು ಹೆಚ್ಚಿನ ಆಸಕ್ತಿವಹಿಸಿಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮಲ್ಲಿ ಅನ್ ಅಥೋರೈಸ್ಡ್ ಇರಿಗೇಷನ್ ಬಹಳ ಜಾಸ್ತಿ ಇದೆ. ಅನ್‌ಅಥೋರೈಸ್ಡ್ ಇರಿಗೇಷನನ್ನು ಕರ್ಬ್ ಮಾಡಬೇಕಾದರೆ ಯಾವ ರೀತಿ ನಮ್ಮ ಫಾರೆಸ್ಟ್ ಡಿಪಾರ್ಟಮೆಂಟ್‌ನವರಿಗೆ ಪೋಲೀಸ್ ಫೋರ್ಸ್ ಕೊಡುತ್ತಾರೆ ಅದೇ ರೀತಿ ಇಂಜನಿಯರಿಂಗ್ ಡಿಪಾರ್ಟ್‌ಮೆಂಟ್ ಕೂಡ ಒಂದು ಪೋಲಿಸ್ ಫೋರ್ಸನ್ನು ಕೊಟ್ಟು ಅದನ್ನು ತಡೆಗಟ್ಟಲು ಸರ್ಕಾರ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

5.20 ಪಿಎಂ

ಇದಲ್ಲದೆ ನಮಲ್ಲಿ ವಿಜಯನಗರ ಅಣೆಕಟ್ಟುಗಳು ಇವೆ. ಇದು ಸುಮಾರು 800 ವರ್ಷಗಳ ಕೆಳಗೆ ಕಟ್ಟಿರತಕ್ಕಂಥ ಅಣೆಕಟ್ಟುಗಳು. ಮೊನ್ನೆ ಬಂದಂಥ ಪ್ರವಾಹದಿಂದಾಗಿ ಬಹಳಷ್ಟು ಅಣೆಕಟ್ಟುಗಳಿಗೆ ಹಾನಿಯಾಗಿದೆ. ಈ ವರ್ಷ ನನಗೆ ತಿಳಿದುಬಂದ ಪ್ರಕಾರ ಸುಮಾರು ಆರು ಕೋಟಿ ರೂಪಾಯಿ ಹಳೆ ಅಣೆಕಟ್ಟುಗಳಿಗಾಗಿ ನಿಗದಿ ಮಾಡಿದ್ದಾರೆ ಎಂದು ತಿಳಿದುಬಂದಿದೆ. ಹೆಚ್ಚಿಗೆ ನಮ್ಮ ಸಿರುಗುಪ್ಪ ಮತ್ತು ದೇಶನೂರ್ ಅಣೆಕಟ್ಟುಗಳು ಎರಡು ವಿಜಯನಗರ ಅಣೆಕಟ್ಟುಗಳು ನನ್ನ ಕ್ಷೇತ್ರದಲ್ಲಿವೆ. ಅದಕ್ಕೆ ಹೆಚ್ಚಿನ ಹಣವನ್ನು ಮಂಜೂರು ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಇನ್ನು ವಿದ್ಯುಚ್ಛಕ್ತಿ ಬಗ್ಗೆ ಹೋದ ಸಲವೇ ಇದರ ಬಗ್ಗೆ ಬಹಳಷ್ಟು ಗಲಾಟೆಯಾಯಿತು. ಜನರು ಧರಣಿ ಮಾಡಿದರು. ಈಗತಾನೆ ಮಾನ್ಯ ಉಪಮುಖ್ಯಮಂತ್ರಿಗಳು ನಮ್ಮೆಲ್ಲರ ಶಾಸಕರನ್ನು ಕರೆದು ಈಗಾಗಲೇ ಒಂದು ತಿಂಗಳಲ್ಲಿ ನಿಮ್ಮ ಕೆಲಸ ಮಾಡುವುದಕ್ಕೆ ಸಾಧ್ಯ ಇದೆ ಮಾಡಿಸುತ್ತೇನೆ ಎಂದು ಹೇಳಿದರು. ಆದರೆ ಇನ್ನು ಕೆಲಸ ಶುರುವಾಗಿಲ್ಲ. ದಯಮಾಡಿ ತೆಕ್ಕಲಕೋಟೆಯಲ್ಲಿ ಮತ್ತು ಸಿರಗುಪ್ಪದಲ್ಲಿ 100 ಕೆ.ವಿ.

ತೆಕ್ಕಲಕೋಟೆಯಲ್ಲಿ, 33 ಕೆ.ವಿ.ಎ. ಸ್ಟೇಷನ್ ಮಾಡುವುದಕ್ಕೆ ತಾವು ಪ್ರಯತ್ನಪಡಬೇಕು ಎಂದು ಹೇಳುತ್ತೇನೆ. ಇನ್ನು ಪಿ.ಡಬ್ಲ್ಯೂ.ಡಿ. ಬಗ್ಗೆ ಹೇಳಬೇಕೆಂದರೆ ನಮ್ಮದು ಆಂಧ್ರ ಪ್ರದೇಶದಿಂದ ಸುತ್ತುವರಿದಂಥ ಪ್ರದೇಶ. ಜನರು ಈಗಾಗಲೇ ಮಾನ್ಯ ಪಿಡಬ್ಲ್ಯೂಡಿ ಮಿನಿಸ್ಟರ್‌ಗೆ ಮತ್ತು ಮಾನ್ಯ ಮುಖ್ಯಮಂತ್ರಿಗಳಿಗು ಸಹಾ ಅಲ್ಲಿನ ಶಾಸಕರೇ ಕಾಗದ ಬರೆದಿದ್ದಾರೆ. ನಿಮ್ಮ ಕರ್ನಾಟಕದಲ್ಲಿ ರೋಡು ಏತಕ್ಕೆ ಈ ರೀತಿ ಇದೆ ? ನಾವು ಏಕೆಂದರೆ ನಮಗೆ ಬಹಳ ಸಂಪರ್ಕ ಇದೆ. ಬಳ್ಳಾರಿಗೆ ಬರತಕ್ಕಂಥವರು ಅಥವಾ ಸಿರಗುಪ್ಪಿಗೆ ಬರತಕ್ಕಂಥವರು ಜನರು ಆಂಧ್ರಪ್ರದೇಶದಿಂದ ಬಹಳಷ್ಟು ನಮಗೆ ಸಂಬಂಧ ಜಾಸ್ತಿ ಇದೆ. ಅಲ್ಲಿಂದ ಜನರು ಬರುತ್ತಾರೆ. ಅಲ್ಲಿನ ಶಾಸಕರೇ ಮೂರು–ನಾಲ್ಕು ಪತ್ರವನ್ನು ಬರೆದಿದ್ದಾರೆ. ನಮಗೆ ಒಂದು ಕಾಪಿಯನ್ನು ಕೂಡ ಹಾಕಿದ್ದಾರೆ. ಆದಕಾರಣ ಅಲ್ಲಿ ಬಾರ್ಡರ್‌ನಲ್ಲಿರತಕ್ಕಂಥ ರೋಡುಗಳನ್ನು ದುರಸ್ತಿ ಮಾಡಬೇಕು. ಬಾರ್ಡರ್ ಫಂಡ್ಸ್ ಕೊಟ್ಟಾಗ ಕೂಡ ಒಂದೇ ರೀತಿ ರೋಡಿಗೇ ನಾವು ಕೊಡುತ್ತೇವೆ ಎಂದು ಹೇಳಿದರೆ ಇಲ್ಲಿಂದ ಒಂದು ಗೈಡ್‌ಲೈನ್ಸ್ ಕಳುಹಿಸುತ್ತಾರೆ ಬೇರೆ ಬೇರೆಯದಕ್ಕೆ ಕೊಡಬೇಕು ಎಂದು ಹೇಳುತ್ತಾರೆ. ರೋಡುಗಳು ಎಲ್ಲರಿಗೂ ಕಾಣಿಸತಕ್ಕಂಥದ್ದು. ಬೇರೆ ಪ್ರಾಂತ್ಯದಿಂದ ಬರತಕ್ಕಂಥವರಿಗೆ ನಮ್ಮ ರೋಡುಗಳು ಇಷ್ಟು ಹಾಳಾಗಿದ್ದಾವೆ. ಅದನ್ನು ಸರಿ ಮಾಡಬೇಕು ಎಂದು ಹೇಳಿ ಈ ಸಂದರ್ಭದಲ್ಲಿ ಅಧ್ಯಕ್ಷರು ಸಮಯ ಇಲ್ಲ ಎಂದು ಹೇಳಿದ್ದೀರಿ. ಆದಕಾರಣ ತಮ್ಮ ಸಮಯದ ಅಂಚಿನೊಳಗೆ ಎರಡು ಮಾತುಗಳನ್ನು ಆಡಿ ತಾವು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು):– ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಮಂಡಿಸಿರತಕ್ಕಂಥ ಲೋಕೋಪಯೋಗಿ, ನೀರಾವರಿ ಮತ್ತು ವಿದ್ಯುಚ್ಛಕ್ತಿ ಇಲಾಖೆಯ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ ಮತ್ತು ಜೊತೆಗೆ ಆ ಇಲಾಖೆಗಳ ಕಾರ್ಯವೈಖರಿ ಮತ್ತೆ ಸರ್ಕಾರ ಏನು ಹಣ ಒದಗಿಸಿದೆ, ಆ ಹಣದ ಸದುಪಯೋಗ ಮತ್ತು ಸಾರ್ಥಕತೆ ಸರಿಯಾಗಿ ಆಗುತ್ತಿದೆಯೇ ಎಂದರೆ ನಾನೇ ನನ್ನ ಆತ್ಮದ್ರೋಹವನ್ನು ಮಾಡಿಕೊಂಡಂತೆ ಆಗುತ್ತದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಒತ್ತಿಹೇಳುವುದಕ್ಕೆ ಇಚ್ಛಿಸುತ್ತೇನೆ. ಇವತ್ತು ನೀರಾವರಿ ಇಲಾಖೆಗೆ ಸುಮಾರು 900 ಕೋಟಿ ರೂಪಾಯಿಗಳನ್ನು ಸರ್ಕಾರ ಒದಗಿಸಿರತಕ್ಕಂಥದ್ದು ನಿಜಕ್ಕೂ ಕೂಡ ಆ ಇಲಾಖೆಯ ಉಪಮುಖ್ಯಮಂತ್ರಿಗಳಿಗೆ ಮತ್ತು ಸರ್ಕಾರಕ್ಕೆ ಅಭಿನಂದನೆಯನ್ನು ಹೇಳಲೇಬೇಕು. ಏಕೆಂದರೆ ಒಂದು ಸಂದರ್ಭದಲ್ಲಿ ಸುಮಾರು ಐದಾರು ವರ್ಷದ ಹಿಂದೆ ನೀರಾವರಿ ಇಲಾಖೆಗೆ 300 ಕೋಟಿ ರೂಪಾಯಿಗಳನ್ನು ಕೊಡಬೇಕು ಎಂದು ಹೇಳಿ ಒಂದು ರಾಜಕೀಯ ಕಂಪನವೇ ಈ ರಾಜ್ಯದಲ್ಲಿ ಆಯಿತು. ಆದರೆ ಈ ಇಲಾಖೆಗೆ ಒದಗಿಸಿರತಕ್ಕಂಥದ್ದು ನಿಜಕ್ಕೂ ಕೂಡ ಈ ಸರ್ಕಾರಕ್ಕೆ ಮತ್ತು ಮಂತ್ರಿಗಳಿಗೆ ಅಭಿನಂದನೆಯನ್ನು ಹೇಳಬೇಕಾಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಆದರೆ ಕೊಟ್ಟಿರತಕ್ಕಂಥ ಹಣವನ್ನು ಸರಿಯಾದ ವೇಳೆಯಲ್ಲಿ ಸರಿಯಾಗಿ ಕೆಲಸವನ್ನು ಮಾಡುವುದರಲ್ಲಿ ಉಪಯೋಗ ಮಾಡಿಕೊಳ್ಳಬೇಕು. ಏಕೆಂದರೆ ಗಡಿಗೆಯಲ್ಲಿ ಎಣ್ಣೆ ಇಟ್ಟು ಅಯ್ಯೋ ಎಂದರೆ ನೆತ್ತಿ ತಣ್ಣಗಾಗುವುದಿಲ್ಲ. ಕೊಟ್ಟಂಥ ಹಣವನ್ನು ಸರಿಯಾಗಿ ಉಪಯೋಗ ಮಾಡಿಕೊಳ್ಳದಿದ್ದರೆ ಸಾರ್ಥಕವಾಗುವುದಿಲ್ಲ. ಕೃಷ್ಣ ಮೇಲ್ದಂಡೆ ಯೋಜನೆಗೆ 1992–93ನೇ ಸಾಲಿನಲ್ಲಿ 155 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದರೆ ಜನವರಿಯವರೆಗೆ ಈ ವರ್ಷ, ಅಲ್ಲಿ ಖರ್ಚು ಮಾಡಿರತಕ್ಕಂಥದ್ದು ಕೇವಲ 52 ಕೋಟಿ. ಇನ್ನೇನು ಹೆಚ್ಚಿಗೆ ಎಂದರೆ 22–23 ಕೋಟಿ ರೂಪಾಯಿ ಎರಡು ತಿಂಗಳಿಗೆ ಖರ್ಚು ಮಾಡಬಹುದು. ಒಟ್ಟು 75 ಕೋಟಿ ರೂಪಾಯಿ ಖರ್ಚು ಮಾಡುವುದಕ್ಕೆ ನಿಮಗೆ ಆಗುವುದು. ಅಂದರೆ ಇಟ್ಟಂಥ 155 ಕೋಟಿ ರೂಪಾಯಿಯಲ್ಲಿ ನೀವು 75 ಕೋಟಿ ರೂಪಾಯಿಯನ್ನು ಖರ್ಚು ಮಾಡುವುದಕ್ಕೆ ಈ ಇಲಾಖೆಗೆ ಸಾಧ್ಯವಿದೆಯೇ ಎನ್ನತಕ್ಕಂಥದ್ದನ್ನು ತಾವೆಲ್ಲರೂ ಕೂಡ ಆಲೋಚನೆ ಮಾಡಬೇಕು. ನಾನು ಹಿಂದೆ ಮಾತನಾಡುವಾಗ ಕಳೆದವರ್ಷ ಒಂದು ಮಾತನ್ನು ಹೇಳಿದ್ದೆ.

ಆ ಮಾತನ್ನು ಮತ್ತೊಮ್ಮೆ ನಾನು ಪುನರುಚ್ಚಾರ ಮಾಡುತ್ತಿದ್ದೇನೆ. ಒತ್ತಿ ಹೇಳುತ್ತಿದ್ದೇನೆ. ಈ ಇಲಾಖೆಗಳಿಗೆ ಗೆದ್ದಲು ಕಾಟ ಜಾಸ್ತಿ ಎಂದು ಹೇಳಿ. ಅಂದರೆ, ಎಲ್ಲಿ ಯಾವ ಇಲಾಖೆಯಲ್ಲಿ ಹಣದ ಒಂದು ಪ್ರಭಾವ ನಡೆಯುತ್ತದೆ, ಅಲ್ಲಿ ಸತ್ಯನ್ಯಾಯ ಧರ್ಮಗಳು ನಾಶವಾಗಿಯೇ ಆಗುತ್ತದೆ.

ಈ ಇಲಾಖೆಯಲ್ಲಿ ಹಣದ ಕೊಳ್ಳೆ ಹೊಡೆಯುತ್ತಿದ್ದಾರೆ ಎಂದರೆ ತಪ್ಪಾಗಲಿಕ್ಕಿಲ್ಲ. ಈಗ ಕಾವೇರಿ ಕೊಳ್ಳದಲ್ಲಿ ಇರಬಹುದು ಅಥವಾ ಕೃಷ್ಣ ಕೊಳ್ಳದಲ್ಲಿ ಇರಬಹುದು. ನಮ್ಮ ನೀರು ಏನು ಇದೆ, ಆ ನೀರನ್ನು ಉಪಯೋಗ ಮಾಡಿಕೊಳ್ಳದೇ ಅದು ಹರಿದು ಹೋಗುತ್ತಿದೆ. ಅದು ಪೋಲು ಆಗುತ್ತದೆ. ಅದೇ ರೀತಿಯಲ್ಲಿ ನಾವು ಏನು ನೀರಾವರಿ ಇಲಾಖೆಗೆ ಹಣವನ್ನು ಒದಗಿಸಿದ್ದೇವೆ ಅಥವಾ ಲೋಕೋಪಯೋಗಿ ಇಲಾಖೆಗೆ ಏನು ಹಣ ಒದಗಿಸಿದ್ದೇವೆ. ಆ ಹಣ ಬಹುತೇಕವಾಗಿ ಸೋರಿಕೆ ಆಗುತ್ತಿದೆ. ಪರ್ಸೆಂಟೇಜ್ ಮುಖಾಂತರ ಇವತ್ತು ಅಪವ್ಯಯ ಆಗುತ್ತಾ ಇರತಕ್ಕದ್ದು ನಿಜಕ್ಕೂ ಕೂಡ ನಮ್ಮ ಸರ್ಕಾರಕ್ಕೆ ಗೊತ್ತಿದೆ ಎನ್ನತಕ್ಕದ್ದು, ನನ್ನ ಭಾವನೆ ಆಗಿದೆ. ಇವತ್ತು ಏನು ಎರಡು ಜನ ಮಂತ್ರಿಗಳು ಇದ್ದಾರೆ. ನಮ್ಮ ರಾಜ್ಯದ ಮೊದಲನೆ ಪಂಕ್ತಿಯ ಮುಖಂಡರುಗಳು ಅವರು ಈ ಒಂದು ಇಲಾಖೆಯ ನೇತೃತ್ವವನ್ನು ವಹಿಸಿದ್ದಾರೆ. ಈ ಸೋರಿಕೆಯನ್ನು ತಡೆಗಟ್ಟಿ ಇವರು ಒಂದು ಒಳ್ಳೆಯ ಚರಿತ್ರೆಯನ್ನು ನಿರ್ಮಾಣ ಮಾಡುತ್ತಾರೆ ಎಂದು ಹೇಳಿ ನನ್ನ ಭಾವನೆ ಕೂಡ ಆಗಿದೆ. ಏಕೆಂದರೆ ವರ್ಗಾವರ್ಗಿ ಬಂತು. ಈಗಾಗಲೇ ಬಂದಿದೆ. ಬಂದು ಕೇಳುತ್ತಾರೆ. ಇಲ್ಲಿ ಕೆಲಸ ಇಲ್ಲ, ಕೆಲಸ ಇರುವ ಕಡೆಗೆ ವರ್ಗ ಮಾಡಿಸಿ ಕೊಡಿ ಎಂದು ಕೇಳುತ್ತಾರೆ. ಕೆಲಸ ಇರುವ ಕಡೆ ವರ್ಗ ಮಾಡಿಸಿಕೊಡಿ ಎಂದರೆ ನಾವು ಮಳೆಯಲ್ಲಿ ನೆನೆಯುತ್ತೇವೆ, ಬಿಸಿಲಿನಲ್ಲಿ ಒಣಗುತ್ತೇವೆ. ಚಳಿಯಲ್ಲಿ ನಡುಗುತ್ತೇವೆ ಎಂದಲ್ಲ. ಇಷ್ಟು ರೂಪಾಯಿ ಕೆಲಸ ಇದ್ದರೆ ನಮಗೆ ಇಷ್ಟು ರೂಪಾಯಿ ಬಂದು ಬಿಡುತ್ತದೆ ಎನ್ನತಕ್ಕ ಆಲೋಚನೆ ಅವರಿಗೆ ಬಂದು ಹೋಗಿ ಬಿಟ್ಟಿದೆ. ಇಷ್ಟು ಪರ್ಸೆಂಟೇಜ್ ಬರುತ್ತದೆ ಎನ್ನತಕ್ಕದ್ದು ಈ ವಿಚಾರ ಮಾನ್ಯ ಮಂತ್ರಿಗಳಿಗೆ ಗೊತ್ತಿಲ್ಲವೋ, ಸರ್ಕಾರಕ್ಕೆ ಗೊತ್ತಿಲ್ಲವೋ? ಗೊತ್ತಿದ್ದರೆ ಅದನ್ನು ತಡೆಗಟ್ಟುವಂತಹ ಒಂದು ಪೊಲಿಟಿಕಲ್ ವಿಲ್ ತಮಗೆ ಇದೆಯೇ ಎನ್ನತಕ್ಕದ್ದನ್ನು ಪ್ರಶ್ನೆ ಮಾಡಬೇಕಾಗುತ್ತದೆ. ಏಕೆಂದರೆ ನಾನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ನಾನು ಶಾಸಕನಾಗಿ ಆಯ್ಕೆಯಾಗಿ ಬಂದ ಮೇಲೆ ಮೊಟ್ಟಮೊದಲನೆಯದಾಗಿ ನಾನು ಮಾನ್ಯ ವೀರೇಂದ್ರ ಪಾಟೀಲರನ್ನು ಕೈಮುಗಿದು ಕೇಳಿದೆ. ಸ್ವಾಮಿ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಿದೆ. ಜನ ಆಶೀರ್ವಾದ ಮಾಡಿದ್ದಾರೆ. ಈ ಸರ್ಕಾರ ಬಂದಮೇಲೆ ಭ್ರಷ್ಟಾಚಾರ ಕಡಿಮೆ ಮಾಡಿ; ಅಷ್ಟೇ ಸಾಕು, ಸಮಾಧಾನ ತೃಪ್ತಿ ಎಂದು ಹೇಳಿದೆ. ಏಕೆಂದರೆ ಹಿಂದೆ ಇವರು ಭ್ರಷ್ಟಾಚಾರ ಜಾಸ್ತಿ ಮಾಡಿದರು. ರಾಜಕೀಯ ಹಸ್ತಕ್ಷೇಪ ಜಾಸ್ತಿ ಎಂದು ಹೇಳಿ ಜನ ಅವರನ್ನು ಅಧಿಕಾರದಿಂದ ಇಳಿಸಿ ನಮ್ಮನ್ನು ಅಧಿಕಾರಕ್ಕೆ ತಂದರು. ನನಗಂತೂ ಅನಿಸಿದೆ ಭ್ರಷ್ಟಾಚಾರ ಕೆಳಮಟ್ಟದಲ್ಲಿ ಇದೆ ಕಡಿಮೆ ಆಗಿಲ್ಲ. ಆ ದಿಕ್ಕಿನಲ್ಲಿ ನಾನು ಕೈಮುಗಿದು ಮತ್ತೊಮ್ಮೆ ಇವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ದಯಮಾಡಿ ಏನು ಸೋರಿಕೆ ಹಣ ಇದೆ, ಸುಮಾರು 30-40ರಷ್ಟು ಭಾಗ ಸೋರಿಕೆ ಹಣ ಹೋಗುವಂತಹದು ಅದನ್ನು ಕಡಿಮೆ ಮಾಡಿ. ಇವತ್ತು ಒಂದು ಕೆಲಸವನ್ನು ಎಂಟ್ರಸ್ಟ್ ಮಾಡಬೇಕು ಎಂದರೆ 15 ಪರ್ಸೆಂಟ್ ಕೊಡಬೇಕು ಎಂದು ಎಲ್ಲಾ ಕಂಟ್ರಾಕ್ಟರ್‌ಗಳು ಕೂಡ ಹೇಳುತ್ತಾರೆ. ಇನ್ನು ಬಿಲ್ ಮಾಡಿಸಿಕೊಳ್ಳಬೇಕಾದರೆ 15ರಿಂದ 20 ಪರ್ಸೆಂಟ್ ಕೊಡಬೇಕಾಗುತ್ತದೆ. ಹೀಗಾಗಿ ನೀವು ಏನು 900 ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಅಂದರೆ ಅಲ್ಲಿ 400 ಕೋಟಿ ರೂಪಾಯಿಗಳ ಕೆಲಸ ಕೂಡ ಖಂಡಿತ ಆಗಲಿಕ್ಕಿಲ್ಲ. ಪರ್ಸೆಂಟೇಜ್ ಹಾವಳಿ ಏನು ಇದೆ ಅಥವಾ ಮಾಮೂಲಿ ವಸೂಲಿ ಏನು ಇದೆ, ಅದನ್ನು ದಯಮಾಡಿ ತಡೆಗಟ್ಟಬೇಕು ಎಂದು ಈ ಸಂದರ್ಭದಲ್ಲಿ ಅತೀ ವಿನಯದಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಈಗ ಕ್ವಾಲಿಟಿ ಆಫ್ ವರ್ಕ್ಸ್ ಬಗ್ಗೆ ಅನೇಕರು ಈಗಾಗಲೇ ಮಾತನಾಡಿದ್ದಾರೆ. ನೀವು ಎಷ್ಟೇ ಕೆಲಸ ಮಾಡಿಸಿಕೊಂಡು ಹೋದರೂ ಕೂಡ ಈ ವರ್ಷ ಮಾಡಿದ್ದು ಮುಂದಿನ ವರ್ಷ ಮಾಡಿಸಲೇ

ಬೇಕಾಗುತ್ತದೆ. ಲೈನಿಂಗ್ ವರ್ಕ್ಸ್ ಮಾಡಿಸುತ್ತಾರೆ. ಸೀಮೆಂಟ್ ಕೆಲಸ ಒಂದು ವರ್ಷಕ್ಕೆ ಸುಮಾರು 90 ಭಾಗಕ್ಕಿಂತ ಹೆಚ್ಚು ಕೆಲಸ ಈ ವರ್ಷ ಮಾಡಿದ್ದು ಮುಂದಿನ ವರ್ಷಕ್ಕೂ ಇಲ್ಲವೇ ಇಲ್ಲ. ನೂರು ಮೂಟೆ ಸಿಮೆಂಟ್ ಕೊಟ್ಟರೆ ಅವರು 20 ಮೂಟೆ ಹಾಕಿದರೆ ಹೆಚ್ಚು ಆಯಿತು. ಇನ್ನು 80 ಮೂಟೆ ದುರುಪಯೋಗ ಆಗುತ್ತದೆ. ಇಷ್ಟರಮಟ್ಟಿಗೆ ದುರುಪಯೋಗ ಆಗಿಕೊಂಡು ಹೋದರೆ ಹೇಗೆ ನಾವು ಗುಣಮಟ್ಟವನ್ನು ಕಾಪಾಡಲಿಕ್ಕೆ ಸಾಧ್ಯ ಆಗುತ್ತದೆ ? ಮತ್ತೆ ಕೆಲಸಗಳು ಮುಗಿಯುವುದಕ್ಕೆ ಹೇಗೆ ಸಾಧ್ಯ ಆಗುತ್ತದೆ ಎನ್ನತಕ್ಕ ಮಾತನ್ನು ಕೂಡ ತಮ್ಮ ಮೂಲಕ ನಾನು ಸರ್ಕಾರದ ಗಮನಕ್ಕೆ ತರಲು ಇಚ್ಛೆಪಡುತ್ತೇನೆ. ಹಾಗೆಯೇ ಯಾವುದೇ ಬಿಲ್ಡಿಂಗ್ ನೋಡಿ. ಒಂದು ಮಾತನ್ನು ನಾನು ತಮ್ಮ ಮುಖಾಂತರ ವಿಷಾದದಿಂದ ನಮ್ಮ ಅಧಿಕಾರ ವರ್ಗದಲ್ಲಿ ಹೇಳಬೇಕಾಗುತ್ತದೆ. ಹಿಂದೆ ಮನೆಗಳನ್ನು ನಮ್ಮ ಪೂರ್ವಿಕರು ಕಟ್ಟುತ್ತಿದ್ದರು. ಮಣ್ಣಿನ ಮನೆಗಳನ್ನು ಕಟ್ಟುತ್ತಿದ್ದರು. ನಾಡ ಹೆಂಚು ಮತ್ತು ಗಳಗಳನ್ನು ಉಪಯೋಗ ಮಾಡುತ್ತಿದ್ದರು. ಈಗ 100 ವರ್ಷ ಆದರೂ ಸಹ ಒಂದು ಬಿರುಕನ್ನೂ ಸಹ ನಾವು ಕಾಣುವುದಿಲ್ಲ. ಇವತ್ತು ತಜ್ಞರು ಇದ್ದಾರೆ. ಸೀಮೆಂಟ್ ಉಪಯೋಗ ಮಾಡುತ್ತಾರೆ ಮತ್ತು ಸ್ಟೀಲ್ ಉಪಯೋಗ ಮಾಡುತ್ತಾರೆ. ಒಂದು ವರ್ಷಕ್ಕೆ ಎರಡು ವರ್ಷಕ್ಕೆ ಮನೆ ಬಿದ್ದು ಹೋಗುತ್ತದೆ. ಇಂತಹ ಇಲಾಖೆಗಳು ನಮಗೆ ಬೇಕೇ ಎನ್ನತಕ್ಕ ಮಾತನ್ನು ಕೂಡ ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಒತ್ತಾಯವಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಬೆಂಗಳೂರಿನಲ್ಲಿ ತಾವು ಅನೇಕ ಕಡೆ ಕೂಡ ನೋಡಿರಬಹುದು. ಇವತ್ತು ಎಲ್ಲೇ ನೋಡಿದರೂ ಕೂಡ ಇಂಜಿನಿಯರ್‌ಗಳು ಮನೆ ಮಾಡಿದ್ದಾರೆ; ಡಾಕ್ಟರ್‌ಗಳು ಮನೆ ಮಾಡಿದ್ದಾರೆ ಎಂದು ಹೇಳುತ್ತಾರೆ. ಇವತ್ತು ಮಾನ್ಯ ವಿರೋಧ ಪಕ್ಷದ ನಾಯಕರು, ವಿರೋಧ ಪಕ್ಷದವರು ನಾವು ಎಲ್ಲರೂ ಕೂಡ ಸ್ವಲ್ಪ ಆತ್ಮಾವಲೋಕನ ಮಾಡಿಕೊಳ್ಳಬೇಕು. ನಾವು ಎಲ್ಲರೂ ಇವತ್ತು ಪ್ರಾಮಾಣಿಕತೆಯ ಬಗ್ಗೆ ಬಹಳವಾಗಿ ಮಾತನಾಡುತ್ತೇವೆ. ಪ್ರಾಮಾಣಿಕತೆ ಎಂದರೆ ನಮ್ಮ ಬೆವರಿನ ಬೆಲೆಯಿಂದ ಬಂದಂತಹದನ್ನು ನಾವು ಊಟ ಮಾಡಬೇಕು. ನನಗೆ ಸಂಬಳ ಏನು ಬರುತ್ತದೆ ಅದರಲ್ಲಿ ಜೀವನ ಮಾಡಬೇಕು. ಹಾಗಿದ್ದರೆ ಮಾತ್ರ ಅದು ಪ್ರಾಮಾಣಿಕತೆ ನಮಗೆ. ಇವತ್ತು ಎಲ್ಲಾ ಇಂಜಿನಿಯರ್‌ಗಳನ್ನು ನೋಡಿ ,ಅಥವಾ ಡಾಕ್ಟರ್‌ಗಳನ್ನು ನೋಡಿ, ಬೆಂಗಳೂರಿನಲ್ಲಿ ಒಂದು ಮನೆ, ಮೈಸೂರಿನಲ್ಲಿ ಒಂದು ಮನೆ ಮತ್ತೊಂದು ಕಡೆ ಒಂದು ಮನೆ ಇದೆ. ಇಷ್ಟೆಲ್ಲಾ ಆಸ್ತಿ ಬರಬೇಕಾಗಿದ್ದರೆ ಹಣ ಎಲ್ಲಿಂದ ಬಂತು ? ಈಗ ಕ್ವಾಲಿಟಿ ಆಫ್ ವರ್ಕ್ಸ್ ಡಿಟೇರಿಯೊರೇಟ್ ಆಗುತ್ತಿದೆ. ಏಕೆಂದರೆ ನೀವು ಎಷ್ಟು ಜನರ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ ? ಕ್ವಾಲಿಟಿ ಚೆನ್ನಾಗಿ ಇಲ್ಲ, ಹಣ ದುರುಪಯೋಗ ಆಗಿದೆ, ಕಾಲಕ್ಕೆ ಸರಿಯಾಗಿ ಕೆಲಸ ಮಾಡಿಲ್ಲ ಎಂದು ಹೇಳಿ ಯಾರ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ ?ಹಣ ವಸೂಲಿ ಮಾಡಿದ್ದೀರಾ ? ಇಲ್ಲ ಸಸ್‌ಪೆನ್‌ಷನ್‌ನಲ್ಲಿ ಇಟ್ಟಿದ್ದೀರಾ ? ಏಕೆ ಇಟ್ಟಿಲ್ಲ. ಇದರ ಬಗ್ಗೆ ಸರ್ಕಾರ ಬಹಳ ಆಳವಾಗಿ ಚಿಂತನೆ ಮಾಡಬೇಕು ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಕೆಪಿಸಿ ಮತ್ತು ಲ್ಯಾಂಡ್ ಆರ್ಮಿ ಬಗ್ಗೆ ಮಾನ್ಯ ವೀರೇಂದ್ರ ಪಾಟೀಲರು ಹೇಳಿದರು. ಕೆಪಿಸಿ ಬಗ್ಗೆ ಆಗಲಿ ಲ್ಯಾಂಡ್ ಆರ್ಮಿ ಬಗ್ಗೆ ಆಗಲಿ ಟೆಂಡರ್ ಕರೆದಾಗ ಕಂಟ್ರಾಕ್ಟ್‌ದಾರರ ಜೊತೆಯಲ್ಲಿ, ಇವರೂ ಕೂಡ ಟೆಂಡರ್‌ಗೆ ಪಾರ್ಟಿಸಿಪೇಟ್ ಮಾಡಬೇಕು. ಅವರೂ ಭಾಗವಹಿಸಬೇಕು, ಕಾಂಪೀಟ್ ಮಾಡಿದಾಗ ಮಾತ್ರ ಕೆಲಸದ ಗುಣ ಮಟ್ಟ ಒಂದು ಸುಧಾರಣೆ ಮಾಡುವುದಕ್ಕೆ ಸಾಧ್ಯ ಆಗುತ್ತದೆ ಮತ್ತು ಟೆಂಡರ್‌ನಲ್ಲಿ ಕಾಂಪ್ರೊಮೈಸ್ ಮಾಡಿಕೊಂಡು ಹೆಚ್ಚು ಟೆಂಡರ್‌ಗೆ ಹಾಕುವುದು ಈ ಅವಕಾಶ ಕೂಡ ತಪ್ಪುತ್ತದೆ ಎನ್ನತಕ್ಕ ಮಾತನ್ನು ಕೂಡ ಈ ಸಂದರ್ಭದಲ್ಲಿ ಹೇಳುತ್ತೇನೆ. ಕೆಲವು ವಿಧಾನವನ್ನು ಸರಳೀಕರಣ ಮಾಡಬೇಕಾಗುತ್ತದೆ. ಇಲ್ಲದೇ ಇದ್ದರೆ ಈಗ ಡಿಪಾರ್ಟ್‌ಮೆಂಟ್‌ಲ್ ವರ್ಕ್ಸ್ ಎನ್.ಎಂ.ಆರ್. ಪೀಸ್ ವರ್ಕ್ಸ್ ಕೆಲಸ ಎಂದು ತೆಗೆದುಕೊಂಡು ಕೆಲಸದ ಗುಣ ಮಟ್ಟ ಕಡಿಮೆ ಆಗುವುದಕ್ಕೆ ಸಾಧ್ಯ ಆಗುತ್ತದೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಒತ್ತಿ ಹೇಳುತ್ತೇನೆ.

ಅಂದರೆ, ಕ್ವಾಲಿಟಿ ಆಫ್ ವರ್ಕ್ ಚೆನ್ನಾಗಿ ಆಗಿದೆಯೋ ಇಲ್ಲವೋ ಎಂಬುದನ್ನು

ನೋಡಿಕೊಳ್ಳುವುದಕ್ಕೆ ಕ್ವಾಲಿಟಿ ಕಂಟ್ರೋಲ್ ಡಿವಿಜನ್‌ಗಳೂ ಸಹ ಇರುವುದರಿಂದ ಅವು ಏನು ಕೆಲಸ ಮಾಡುತ್ತಿವೆ ಎನ್ನತಕ್ಕಂಥದ್ದನ್ನು ವಿಚಾರ ಮಾಡಬೇಕು. ಅವರಿಗೆ ಹೋಗಿ ಏನಾದರೂ ಪರ್ಸಂಟೇಜ್ ಕೊಟ್ಟು ಸರ್ಟಿಫಿಕೇಟನ್ನು ತೆಗೆದುಕೊಂಡು ಬರುವುದಕ್ಕೆ ಕ್ವಾಲಿಟಿ ಕಂಟ್ರೋಲ್ ಡಿವಿಜನ್ ಇದೆಯೇ ಹೊರತು ಮತ್ತಾವುದಕ್ಕೆ ಇದೆ? ಎಷ್ಟು ಕ್ವಾಲಿಟಿ ಕಂಟ್ರೋಲ್ ಡಿವಿಜನ್‌ನವರು ಎಷ್ಟು ಗುಣಮಟ್ಟವನ್ನು ಪರೀಕ್ಷಿಸಿ 'ಇದು ಸರಿಯಲ್ಲ' ಎಂದು ಹೇಳಿ ಸರ್ಕಾರಕ್ಕೆ ಬರೆದು ಸಂಬಂಧಪಟ್ಟವರ ಮೇಲೆ ಏನಾದರೂ ಕ್ರಮ ತೆಗೆದುಕೊಂಡಿರುವ ಉದಾಹರಣೆಗಳಿವೆಯೆ? ನಿದರ್ಶನಗಳೇನಾದರೂ ಇದೆಯೆ? ಇಂತಹ ಕ್ವಾಲಿಟಿ ಕಂಟ್ರೋಲ್ ಡಿವಿಜನ್‌ಗಳನ್ನು ಇಟ್ಟುಕೊಳ್ಳುವುದಕ್ಕಿಂಥ ತೆಗೆದುಹಾಕುವುದೇ ಮೇಲು. ಅಲ್ಲದೆ, ಸಂಚಾರಿ ತನಿಖಾ ದಳಗಳಿವೆ. ಅವರಿಗೆ ಏನಾದರೂ ಬರೆದರೆ, ಅವರು ಹೋಗುತ್ತಾರೆ ಅಡ್ಜಸ್ಟ್‌ಮೆಂಟ್ ಮಾಡಿಕೊಳ್ಳುತ್ತಾರೆ, ಕೆಲಸ ಸರಿಯಾಗಿ ಆಗದೇ ಇದ್ದರೂ ಸರಿಯಾಗಿ ಆಗಿದೆಯೆಂದು ಹೇಳುತ್ತಾರೆ. ಇಂತಹ ಸಂಚಾರಿ ತನಿಖಾ ದಳವನ್ನು ಮತ್ತು ಕ್ವಾಲಿಟಿ ಕಂಟ್ರೋಲ್ ಡಿವಿಜನ್‌ಗಳನ್ನು ಇಟ್ಟುಕೊಳ್ಳುವುದು ಸೂಕ್ತವಲ್ಲವೆನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇವೊತ್ತು ನೀರಾವರಿ ಇಲಾಖೆಗೆ 900 ಕೋಟಿ ರೂಪಾಯಿಗಳನ್ನು ವಿದ್ಯುಚ್ಛಕ್ತಿ ಇಲಾಖೆಗೆ 700 ಕೋಟಿ ರೂಪಾಯಿಗಳನ್ನು ಮತ್ತು ಒಂದೊಂದು ಕ್ಷೇತ್ರಕ್ಕೆ ಅವುಗಳ ಅಭಿವೃದ್ಧಿಗಾಗಿ ಲೋಕೋಪಯೋಗಿ ಇಲಾಖೆಗೆ ಒಂದು ವರ್ಷಕ್ಕೆ 20 ಲಕ್ಷ ರೂಪಾಯಿಗಳನ್ನು ಸರ್ಕಾರ ಕೊಡುತ್ತದೆಂದರೆ, ಕೊಡುವ ಹಣ ಸಾರ್ಥಕವಾಗಬೇಕಿದ್ದರೆ, ಸರಿಯಾದ ರೀತಿಯಲ್ಲಿ ಸದುಪಯೋಗಬೇಕಾದರೆ ಕೆಲಸದ ಗುಣಮಟ್ಟ ಸರಿಯಾಗಿ ಆಗುವಂತೆ ನೋಡಿಕೊಂಡಾಗ ಮಾತ್ರ ಹಣ ಒದಗಿಸಿದ್ದು ಸಾರ್ಥಕವಾಗುತ್ತದೆ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಾ, ಈಗ ನೀರಾವರಿಗೆ ಇಲಾಖೆಗೆ 900 ಕೋಟಿ ರೂಪಾಯಿಗಳನ್ನು ಸರ್ಕಾರ ಒದಗಿಸಿದೆಯೆಂದು ಉಬ್ಬಿ ಹೋಗಬಾರದು. ಸರ್ಕಾರ ಸಂಪೂರ್ಣ ಹಣವನ್ನು ಒದಗಿಸಬೇಕು. ಏಕೆಂದರೆ, ಕಳೆದ ವರ್ಷ 600 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಅಷ್ಟು ಹಣ ಕೊಟ್ಟಿಲ್ಲ. ಈಗ ನೋಡಿದರೆ ಕೃಷ್ಣಾ ಮೇಲ್ದಂಡೆ ಯೋಜನೆಗೆ 155 ಕೋಟಿ ರೂಪಾಯಿಗಳನ್ನು ಒದಗಿಸುತ್ತೇವೆಂದು ಜನವರಿ ಅಂತ್ಯದವರೆಗೆ ಖರ್ಚು ಮಾಡಿರುವಂಥ ಹಣ 52 ಕೋಟಿ ರೂಪಾಯಿಗಳು ಮಾತ್ರ. ಇನ್ನು ಉಳಿದ ಎರಡು ತಿಂಗಳಲ್ಲಿ ಸುಮಾರು 20–22 ಕೋಟಿ ರೂಪಾಯಿಗಳು ಖರ್ಚಾಗಬಹುದು. ಅಂದರೆ, ಒಟ್ಟು 75 ಕೋಟಿ ರೂಪಾಯಿಗಳು ಖರ್ಚಾಗುತ್ತದೆ. ಇದು ಬರೀ ಹೇಳಿಕೆಯಲ್ಲಿ ತೋರ್ಪಡಿಸಿ, ಹಣ ಒದಗಿಸತಕ್ಕಂಥ ಸಂದರ್ಭದಲ್ಲಿ ಕಡಿಮೆ ಹಣ ಒದಗಿಸಿದರೆ ನಾವು ಕರ್ನಾಟಕ ರಾಜ್ಯದ ಜನತೆಗೆ ಅನ್ಯಾಯ ಮಾಡಿದಂತಾಗುತ್ತದೆ. ಆದುದರಿಂದ, ಈಗ ಒದಗಿಸಲಾಗಿರುವ 900 ಕೋಟಿ ರೂಪಾಯಿಗಳಲ್ಲಿ ಪ್ರತಿ ತಿಂಗಳು ಎಷ್ಟೆಷ್ಟು ಹಣ ಕೊಡಬೇಕೋ, ಅಷ್ಟಷ್ಟು ಹಣ ಒದಗಿಸಿ ಕಾವೇರಿ ಮತ್ತು ಕೃಷ್ಣಾ ಯೋಜನೆಗಳನ್ನು ಕಾಲಮಿತಿಯೊಳಗೆ ಮುಗಿಸುವುದಕ್ಕೆ ಸರ್ಕಾರ ದೃಢ ನಿರ್ಧಾರ ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಿ ಹೇಳುತ್ತಾ, ಇವೊತ್ತಿನ ದಿವಸ ಇಷ್ಟು ಮಾತುಗಳನ್ನಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಯು.ಕೆ. ಶಾಮಣ್ಣ (ಶೃಂಗೇರಿ): ಮಾನ್ಯ ಅಧ್ಯಕ್ಷರೇ, ಇವೊತ್ತು ಲೋಕೋಪಯೋಗಿ ಇಲಾಖೆ, ವಿದ್ಯುಚ್ಛಕ್ತಿ ಇಲಾಖೆ ಹಾಗೂ ನೀರಾವರಿ ಇಲಾಖೆಗಳ ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ನಾನು ಸಂಪೂರ್ಣವಾಗಿ ಭಾಗವಹಿಸುತ್ತಾ ನನ್ನ ಕ್ಷೇತ್ರ ಶೃಂಗೇರಿಯಾಗಿದ್ದು ಬಹುಶಃ ಎಲ್ಲರಿಗೂ ಶೃಂಗೇರಿ ಕ್ಷೇತ್ರವೆಂದರೆ, 'ಈತ ಪುಣ್ಯಕ್ಷೇತ್ರದಿಂದ ಬಂದಿದ್ದಾನೆ' ಎಂದು ಎಲ್ಲ ಸದಸ್ಯರೂ ಹೇಳುವಂಥಾದ್ದು ಇದ್ದರೆ, ನನ್ನ ಭಾಗಕ್ಕೆ ನಾನು ಏನೋ ಪಾಪ ಮಾಡಿದ್ದೇನೆಂದು ನನ್ನ ಮನಸ್ಸಿಗೆ ನೋವನ್ನು ತರುತ್ತಿದೆ. ಕಾರಣ, ಈ ಸಂದರ್ಭದಲ್ಲಿ ತಮ್ಮನ್ನು ಕಾಡಿ, ಬೇಡಿ ನಾನು ಐದು ನಿಮಿಷಗಳ ಕಾಲ ಮಾತನಾಡಬೇಕೆಂದು ತಮ್ಮಲ್ಲಿ ಯಾಚಿಸಿಕೊಂಡನಂತರ ತಾವು ನನಗೆ ಮಾತನಾಡುವುದಕ್ಕೆ ಅವಕಾಶ

ಕಲ್ಪಿಸಿಕೊಟ್ಟಿದ್ದೀರಿ. ನಿಜವಾಗಿಯೂ ಕಾರಣವಿಷ್ಟೆ: ಹಿರಿಯ ಸಚಿವರಾಗಿರತಕ್ಕಂಥ ಸನ್ಮಾನ್ಯ ರಂಗನಾಥ್‌ರವರು ಹಾಗೂ ಕೃಷ್ಣಾರವರು ಮತ್ತು ಡಾ: ಚೌಧುರಿಯವರ ಇಲಾಖೆಗಳಿಗೆ ಸಂಬಂಧಪಟ್ಟಿರತಕ್ಕ ವಿಷಯಗಳನ್ನು ನಾನು ಪ್ರಸ್ತಾಪ ಮಾಡಿ, ಹಾಗೆಯೇ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಿರತಕ್ಕಂಥ ವಿಷಯಗಳನ್ನು ಪ್ರಸ್ತಾಪಿಸುವುದು ನನ್ನ ಕರ್ತವ್ಯವೆಂದು ಈ ಸಂದರ್ಭದಲ್ಲಿ ಹೇಳುತ್ತಾ, ನನ್ನ ಕ್ಷೇತ್ರವಾದ ಶೃಂಗೇರಿ ಮೂರು ತಾಲ್ಲೂಕುಗಳನ್ನೊಳಗೊಂಡಂಥ ಕ್ಷೇತ್ರವಾಗಿದ್ದು, ಲೋಕೋಪಯೋಗಿ ಇಲಾಖೆಗೆ ಒಳಪಟ್ಟಿರತಕ್ಕಂಥ ಸುಮಾರು 482 ಕಿಲೋಮೀಟರ್‌ಗಳ ವ್ಯಾಪ್ತಿಯೊಳಗೆ ಬರುತ್ತದೆ. ಬಹುಶಃ ಲೋಕೋಪಯೋಗಿ ಇಲಾಖೆಯ ರಸ್ತೆ ಎಂದರೆ ಜಿಲ್ಲಾ ಕೇಂದ್ರದಿಂದ ಚಿಕ್ಕಮಗಳೂರಿನಿಂದ ಶೃಂಗೇರಿಗೆ ಹೋಗಬೇಕಾದರೆ 60 ಮೈಲಿ ವಿಸ್ತೀರ್ಣವಿದೆ, ಕಾರಿನಲ್ಲಿ ಮೂರು ಗಂಟೆಗಳ ಕಾಲ ಪ್ರಯಾಣವಾಗುತ್ತದೆ. ಅದರಲ್ಲೂ ಶಾಸಕನಾದ ನಾನು ನನ್ನ ಸ್ವಂತ ಕಾರಿನಲ್ಲಿ ಡ್ರೈವ್ ಮಾಡಿಕೊಂಡು ಹೋದರಂತೂ ಎದುರುಗಡೆ ರಸ್ತೆಯಲ್ಲಿ ಬರುವವರು ನನಗೆ ದಾರಿ ಬಿಡುವುದಿಲ್ಲ. ಏಕೆಂದರೆ, ಈಗಾಗಲೇ ಅಲ್ಲಿನ ರಸ್ತೆ ಏಳು ಅಡಿಗೆ ಬಂದಿದೆ. ರಸ್ತೆಗೆ ಎರಡು ಕಡೆ ಹಾಕಲಾಗಿದ್ದ ಒಂದೂವರೆ ಅಡಿ ಟಾರು ಎಲ್ಲಾ ಬಿದ್ದುಹೋಗಿದೆ. ಇಂತಹ ದುಸ್ಥಿತಿಯಲ್ಲಿರುವಂಥ ರಸ್ತೆಗಳಲ್ಲಿ ಶಾಸಕರ ಕಾರು ಏನಾದರೂ ಬಂತೆಂದರೆ ಅವರು ಮಧ್ಯ ರಸ್ತೆಯಲ್ಲಿ ನಿಲ್ಲಿಸುತ್ತಾರೆ. ಶಾಸಕರು ಹೋಗಬೇಕಾದರೆ ರಸ್ತೆ ಪಕ್ಕದಲ್ಲಿ ಹೋಗಬೇಕೇ ಹೊರತು, ರಸ್ತೆ ಮೇಲೆ ಹೋಗದಿರುವಂಥ ವಾತಾವರಣ ಸೃಷ್ಟಿಯಾಗಿದೆ. ನನ್ನ ಕ್ಷೇತ್ರದಲ್ಲಿರುವ 482 ಕಿಲೋಮೀಟರ್‌ಗಳ ರಸ್ತೆ ಏನಿದೆ, ಶಾಸಕರ ಕ್ಷೇತ್ರಗಳ ಅಭಿವೃದ್ಧಿಗಾಗಿ ಕೊಡುವಂಥ 20 ಲಕ್ಷ ರೂಪಾಯಿಗಳಾಗಲಿ, 40 ಲಕ್ಷ ರೂಪಾಯಿಗಳಾಗಲಿ ಪರಿಗಣನೆಗೆ ತೆಗೆದುಕೊಳ್ಳದೆ, ವಿಸ್ತೀರ್ಣದ ಮೇಲೆ ಹಣ ಕೊಡಬೇಕು ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಮಾನ್ಯ ರಂಗನಾಥ್‌ರವರ ಗಮನಕ್ಕೆ ತಂದು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಬಹುಶಃ ಇವೊತ್ತು ಈ ಟಾರ್ ಹಾಕುವಂಥ ವ್ಯವಸ್ಥೆಯ ಗುಣಮಟ್ಟವನ್ನು ಸುಧಾರಿಸಬೇಕೆಂಬ ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತಿದ್ದೇನೆ. ಒಂದು ಕಿಲೋಮೀಟರ್‌ಗೆ ಸುಮಾರು 84 ಬ್ಯಾರೆಲ್ ಟಾರ್ ಬೇಕೆಂದು ಹೇಳುವಂಥದ್ದು ಸರ್ಕಾರದ ಕಟ್ಟಳೆಯಲ್ಲಿದೆ. ಕಂಟ್ರಾಕ್ಟರುಗಳು ಎಷ್ಟು ಟಾರುಗಳನ್ನು ಹಾಕುತ್ತಾರೆಂದು ನೋಡುವವರೇ ಇಲ್ಲ, ಅಲ್ಲಿ ಗ್ಯಾಂಗ್‌ಮನ್‌ಗಳಿಲ್ಲ, ಅವರ ಮನಸ್ಸಿಗೆ ಬಂದಷ್ಟು ಟಾರನ್ನು ಹಾಕುವಂಥ ವ್ಯವಸ್ಥೆಯಾಗಿದೆ. ಉಳಿದ ಟಾರನ್ನು ಜಿಲ್ಲಾ ಪರಿಷತ್ತುಗಳ ರಸ್ತೆಗಳಿಗೆ ಹಾಕುವಂತೆ ವ್ಯವಸ್ಥೆಯಾಗಿದೆ. ಲೋಕೋಪಯೋಗಿ ಇಲಾಖೆಯವರು ಕೊಡುವಂಥ ಟಾರನ್ನು ಜಿಲ್ಲಾ ಪರಿಷತ್ತಿನ ರಸ್ತೆಗಳಿಗೆ ತಂದು ಹಾಕಿ ಬಿಲ್ ಹಾಕುವಂಥ ವ್ಯವಸ್ಥೆ ಇದೆ. ಇದಕ್ಕೊಂದು ಉದಾಹರಣೆ ಹೇಳುತ್ತೇನೆ: ನನ್ನ ಜಿಲ್ಲೆಯ ವ್ಯಾಪ್ತಿಯೊಳಗಿರುವ ತರೀಕೆರೆಯ ಬೈಪಾಸ್ ರಸ್ತೆಯಲ್ಲಿ ಇವೊತ್ತು ಟಾರಿನ ಅವಶೇಷವೂ ಇಲ್ಲದಿರುವಂಥ ಪರಿಸ್ಥಿತಿ ನನ್ನ ಜಿಲ್ಲೆಯಲ್ಲಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತಂದು ಏತಕ್ಕೋಸ್ಕರ ಹೀಗಾಯಿತು ಹಾಗೂ ಯಾರಿಂದ ಆಯಿತು ಎಂಬುದನ್ನು ಕಂಡುಹಿಡಿದು ಸಂಬಂಧಪಟ್ಟವರ ಮೇಲೆ ಕ್ರಮ ಕೈಗೊಳ್ಳಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ.

ಬಹುಶಃ ಹೆಚ್ಚು ಕಾಲ ಇಲ್ಲದೇ ಇರುವುದರಿಂದ ನನ್ನ ಕ್ಷೇತ್ರದ ಕೆಲವೇ ರಸ್ತೆಗಳ ಬಗ್ಗೆ ಈ ಸಂದರ್ಭದಲ್ಲಿ ಹೇಳುತ್ತೇನೆ, ಅದನ್ನು ಹೇಳದಿದ್ದರೆ ತಪ್ಪಾಗುತ್ತದೆ. ಮಂಗಳೂರಿನಿಂದ ಕೆರೆಕಟ್ಟೆ ಮಾರ್ಗವಾಗಿ ಶೃಂಗೇರಿಗೆ ಬರತಕ್ಕ ಒಂದು ರಸ್ತೆ ಇದೆ. ಇದು 29 ಕಿಮಿ ರಸ್ತೆ. ಅದನ್ನು ಸ್ಟೇಟ್ ಹೈವೇಯನ್ನಾಗಿ ಮಾಡಿ ಅದರ ಮೂಲಕ ಇದನ್ನು ಅಭಿವೃದ್ಧಿಪಡಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಏಕೆಂದರೆ ಅದು ಹೊಸದಾಗಿ ಮಾಡಿರತಕ್ಕ ರಸ್ತೆ. ಅದು ಮಳೆಗಾಲದಲ್ಲಿ ಕೆಳಗಡೆ ಕುಸಿದು ಹೋಗಿ ಕಂಪ ಆಗಿದೆ. ನಮ್ಮ ಕಡೆ ಅದಕ್ಕೆ ಕಂಪ ಎಂದು ಕರೆಯುತ್ತೇವೆ. ಗದ್ದೆಯಲ್ಲಿ ಹೋದರೆ ಹೇಗಾಗುತ್ತದೆ ಆ ರೀತಿಯಲ್ಲಿ ಆಗಿದೆ. ಅದಕ್ಕೆ ಟಾರೇ ಹಾಕಿರಲಿ, ಏನೇ ಹಾಕಿರಲಿ ಅದಕ್ಕೆ ನೀವು

ಹೆಚ್ಚಿನ ಹಣವನ್ನು ಕೊಡದಿದ್ದರೆ ಪ್ರಯೋಜನವಾಗುವುದಿಲ್ಲ, ನೀವು ಕೊಡತಕ್ಕ 20 ಲಕ್ಷ ಮಾತ್ರವಲ್ಲ 40 ಲಕ್ಷವನ್ನು ಕೊಟ್ಟರೂ ಸಹ ಅದನ್ನು ಸರಿಪಡಿಸಲು ಖಂಡಿತವಾಗಿ ಆಗುವುದಿಲ್ಲ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಶೃಂಗೇರಿಯಲ್ಲಿ ಕಟ್ಟಡದ ಕೊರತೆ ಇದೆ. ಯಾತ್ರಾರ್ಥಿಗಳು ಅಲ್ಲಿಗೆ ಬಂದರೆ ಅವರುಗಳು ಅಲ್ಲಿ ಉಳಿದುಕೊಳ್ಳಲು ಅವಕಾಶವಿಲ್ಲದಂತಾಗಿದೆ. ಒಂದು ಟಿ.ಬಿ. ಯಲ್ಲಿ ನಾಲ್ಕು ರೂಮ್‌ಗಳು ಮಾತ್ರ ಇದೆ. ಸರ್ಕ್ಯುಲೇಟ್ ಹೌಸ್‌ಗೆ ಸ್ವಲ್ಪ ಹಣವನ್ನು ಕೊಟ್ಟು ಅದನ್ನು ಕಟ್ಟಿಸತಕ್ಕ ವ್ಯವಸ್ಥೆ ಮಾಡಿದರೆ ಮಾತ್ರ ಬಹುಶಃ ನಮ್ಮ ರಾಜ್ಯದವರು ಮಾತ್ರವಲ್ಲ, ಹೊರರಾಜ್ಯದವರು ಅಲ್ಲಿಗೆ ಬಂದರೆ ಅಂಥ ಅತಿಥಿಗಳ ವಾಸಕ್ಕೆ ವ್ಯವಸ್ಥೆ ಮಾಡುವುದಕ್ಕಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಶೃಂಗೇರಿಯಲ್ಲಿ ಕೇಂದ್ರ ಸರ್ಕಾರದ ಮಂಜೂರಾತಿಯಿಂದ ಏನು ಮೊಟೆಲ್‌ನ್ನು ಕಟ್ಟತಕ್ಕ ವ್ಯವಸ್ಥೆ ಇದೆ ಅದನ್ನು ಆ ಗುತ್ತಿಗೆದಾರರು ಇದುವರೆಗೆ ಕಟ್ಟಿಲ್ಲ. ಟೆಂಡರ್ ಕೊಟ್ಟು 10 ವರ್ಷಗಳಾದರೂ, ಹಣವಿದ್ದರೂ ಕೂಡ ಅದನ್ನು ಕಟ್ಟಲು ಆಗುತ್ತಿಲ್ಲ. ಆ ವ್ಯವಸ್ಥೆಯನ್ನು ಸರಿಪಡಿಸಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಹಳೆಯ ಕಟ್ಟಡಗಳ ಬಗ್ಗೆ ಹೇಳುವುದಾದರೆ: ಮಲೆನಾಡಿನಲ್ಲಿ ತಮಗೆ ಗೊತ್ತಿರುವ ಹಾಗೆ ವರ್ಷಕ್ಕೆ 300 ಇಂಚ್ ಮಳೆಯಾಗುತ್ತದೆ. ನನ್ನ ಕ್ಷೇತ್ರದಲ್ಲಿ ಅಷ್ಟು ಮಳೆ ಬರುತ್ತದೆ. ಅಲ್ಲಿರತಕ್ಕ ಡಾಕ್ಟರ್ ಕ್ವಾಟ್ರರ್ಸ್ ಆಗಲಿ ನರ್ಸ್‌ಸ್ ಕ್ವಾಟ್ರರ್ಸ್ ಆಗಲಿ, ಹೌಸಿಂಗ್ ಬೋರ್ಡ್‌ನ ಕಟ್ಟಡಗಳನ್ನೂ ಸಹ ಪಿ.ಡಬ್ಲ್ಯೂ.ಡಿ ಗೆ ವಹಿಸಿದ್ದಾರೆ. ಆ ಕಟ್ಟಡಗಳೆಲ್ಲಾ ಸೋತು ಕೆಳಗೆ ಬೀಳತಕ್ಕ ಮಟ್ಟಕ್ಕೆ ಬಂದಿದೆ, ಅದನ್ನು ರಿಪೇರಿ ಮಾಡುವುದರ ಬಗ್ಗೆ ಕೇಳಿದರೆ ಪಿ.ಡಬ್ಲ್ಯೂ.ಡಿಯಲ್ಲಿ ಹಣವಿಲ್ಲ, ಜಿಲ್ಲಾಪರಿಷತ್‌ನವರು ಹಣವನ್ನು ಕೊಡುವುದಿಲ್ಲ ಎಂದು ಹೇಳುತ್ತಾರೆ. ದಯಮಾಡಿ ಈ ವ್ಯವಸ್ಥೆಯನ್ನು ಸರಿಪಡಿಸಬೇಕೆಂದು ಈ ಸಂದರ್ಭದಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ. ಇನ್ನು ಮೈನರ್ ಇರಿಗೇಷನ್ ಬಗ್ಗೆ ಹೇಳುವುದಾದರೆ, ಲಿಫ್ಟ್ ಇರಿಗೇಷನ್‌ನಲ್ಲಿ ನನ್ನ ಸ್ನೇಹಿತರಾದ ಡಾ: ಚೌಧರಿಯವರು ಮಂತ್ರಿಗಳಾಗಿದ್ದಾರೆ. ಇದರಲ್ಲಿ ನನ್ನ ಜಿಲ್ಲೆಯವರೂ ಸಹ ಮಂತ್ರಿಗಳಾಗಿದ್ದರು, ಏನೋ ಕಾರಣದಿಂದ ಅವರು ಆ ಕೆಲಸವನ್ನು ಮಾಡಿರಲಿಲ್ಲ. ನನ್ನ ಕ್ಷೇತ್ರದಲ್ಲಿ ಬಹುಶಃ 7 ಲಿಫ್ಟ್ ಇರಿಗೇಷನ್‌ಗೆ ಪ್ರಪೋಸಲ್ ಸರ್ಕಾರಕ್ಕೆ ಕೊಟ್ಟಿದೆ. ಆದರೆ ಇದರಲ್ಲಿ ಇದುವರೆಗೆ ಒಂದೂ ಸಹ ಆಗಿಲ್ಲ. ಇದರಲ್ಲಿ ನಾಲ್ಕು ಕೆಲಸಗಳನ್ನು ಅರ್ಧಂಬರ್ಧ ಮಾಡಿ ನಿಲ್ಲಿಸಿಬಿಟ್ಟಿದ್ದಾರೆ. ಇದರಲ್ಲಿ ಸೀಡ್ ಮನಿ ಮಾತ್ರ ಖರ್ಚಾಗಿದೆ. ಇನ್ನು ಮುಂದೆ ಖರ್ಚು ಮಾಡಲು ಹಣವಿಲ್ಲವೆಂದು ಈ ರೀತಿ ನಿಲ್ಲಿಸಿದ್ದಾರೆ. ನನ್ನ ಕ್ಷೇತ್ರದ ಹೊನ್ನೆಕೋಡಿಗೆ, ನೆಮ್ಮಾರ್, ಬಮ್ಮಲಾಪುರ, ಕಸುವನಮನೆ ಈ ನಾಲ್ಕು ಕಡೆಗಳಲ್ಲಿ ಲಿಫ್ಟ್ ಇರಿಗೇಷನ್‌ನ ಕೆಲಸವನ್ನು ಅರ್ಧಂಬರ್ಧ ಏನು ಮಾಡಿ ನಿಲ್ಲಿಸಿಬಿಟ್ಟಿದ್ದಾರೋ ಆ ಕೆಲಸಗಳನ್ನು ಪೂರ್ಣ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮಲ್ಲಿ ಒಂದು ಕಡೆ ಭದ್ರಾ ಜಲಾನಯನ ಪ್ರದೇಶ ಇನ್ನೊಂದು ಕಡೆ ತುಂಗಾ ಜಲಾನಯನ ಪ್ರದೇಶವಿದೆ, ಆದರೆ ಮಧ್ಯದಲ್ಲಿರತಕ್ಕ ಪ್ರದೇಶದಲ್ಲಿ ನೀರು ಇಲ್ಲದೆ ಇರುವುದರಿಂದ ಲಿಫ್ಟ್ ಇರಿಗೇಷನ್ ಮಾಡಿದರೆ ಎನ್‌ಆರ್ ಪುರ ತಾಲ್ಲೂಕಿಗೆ ಬಹಳ ಪ್ರಯೋಜನವಾಗುತ್ತದೆ, ಆ ಕೆಲಸವನ್ನು ಈ ಸಾಲಿನಲ್ಲಿಯೇ ಮಾಡಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ನನ್ನ ಕ್ಷೇತ್ರದಲ್ಲಿ ಎಲ್ಲಾ ಕೆರೆಗಳು ಮುಚ್ಚಿಹೋಗಿದೆ, ಮಾನ್ಯ ಕುನ್ನೂರ್‌ರವರು ಹೇಳಿದಂತೆ ಎಲ್ಲವುಗಳೂ ಸಹ ನೆಲಮಟ್ಟಕ್ಕೆ ಬಂದಿದೆ. ಆದ್ದರಿಂದ ಸಿಲ್ಟ್ ಅನ್ನು ತೆಗೆಯುವ ಒಂದು ಕಾರ್ಯವನ್ನು ಈ ಸಾರಿ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಕೊನೆಯದಾಗಿ ನಮ್ಮ ಮಲೆನಾಡಿನ ಭಾಗದಲ್ಲಿ ಬಹುಶಃ ಎಲ್ಲಾ ಮನೆಗಳಿಗೂ ವಿದ್ಯುತ್ ಇದೆ ಎಂದು ಹೇಳುವುದಕ್ಕಾಗುವುದಿಲ್ಲ. ಅಲ್ಲಿ 8–10 ದಿನಗಳ ಕಾಲ ವಿದ್ಯುತ್ ಇರುವುದಿಲ್ಲ, ಅಂಥ ಒಂದು ವ್ಯವಸ್ಥೆ ಇದೆ, ಇಷ್ಟಾದರೂ ಕೂಡ ಅದರ ಬಗ್ಗೆ ಚಿಂತೆ ಇಲ್ಲದಂತಾಗಿದೆ. ಇನ್ನೂ ಅನೇಕ ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುತ್ ಬಂದಿಲ್ಲ ಎನ್ನತಕ್ಕ ಕೂಗೂ ಸಹ ನಮ್ಮ ಕಡೆ ಇದೆ. ಇವತ್ತೂ ಅನೇಕ

ಹಳ್ಳಿಗಳಿಗೆ ವಿದ್ಯುತ್ ಲೈಟ್ ಹೋಗಿಲ್ಲ. ಅವರು ಕೊನೆಯಪಕ್ಷ ಎಲ್ಲಾರಿಗೂ ಲೈಟನ್ನು ಕೊಟ್ಟಂತೆ ನಮಗೂ ಕೊಡಿ ಎಂದು ಕೇಳುತ್ತಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ 5 ಕಂಬಗಳ ಮೇಲೆ ವಿದ್ಯುತ್‌ನ್ನು ಎಳೆಯುವಂತಿಲ್ಲವೆನ್ನತಕ್ಕ ಕಾನೂನು ಇದೆ, ಆ ಕಾಯಿದೆಯನ್ನು ಸಡಿಲಗೊಳಿಸುವುದರ ಮೂಲಕ ಅವರಿಗೂ ಸಹ ವಿದ್ಯುತ್‌ನ್ನು ಒದಗಿಸತಕ್ಕ ಕಾರ್ಯವನ್ನು ಮಾಡಿಕೊಡಬೇಕು ಎನ್ನತಕ್ಕ ಮಾತನ್ನು ಹೇಳುತ್ತೇನೆ. ಇನ್ನು ಗ್ರಾಮಾಂತರ ಪ್ರದೇಶದಲ್ಲಿ ಮರದ ಕಂಬಗಳನ್ನು ವಿದ್ಯುತ್ ಕಂಬಗಳನ್ನಾಗಿ ಹಾಕತಕ್ಕ ವ್ಯವಸ್ಥೆ ಇದೆ. ನಮ್ಮಲ್ಲಿ ತೋಟಗಳಲ್ಲಿ ಅಡಿಕೆಯನ್ನು ಬೆಳೆಯುತ್ತೇವೆ, ಆ ಅಡಿಕೆ ಕಂಬಗಳನ್ನು ತಂದು ವಿದ್ಯುತ್ ಕಂಬಗಳನ್ನಾಗಿ ನಾವು ಮಾರ್ಪಾಡನ್ನು ಮಾಡಿಕೊಂಡಿದ್ದೇವೆ. ಇದು ಕೇವಲ ತಾತ್ಕಾಲಿಕ ಏರ್ಪಾಡು. ಇದು ಬಹಳ ಅಪಾಯಕಾರಿ. ಏಕೆಂದರೆ ಮಳೆಗಾಲದಲ್ಲಿ ಕೆಳಗೆ ಮತ್ತು ಮೇಲುಭಾಗ ಎರಡು ಕಡೆ ನೀರು ಇರುತ್ತದೆ. ಇದರಿಂದ ಅರ್ತ್ ಆಗುವುದಕ್ಕೆ ಬಹಳಷ್ಟು ಅವಕಾಶವಿರುವುದರಿಂದ ಈ ತೊಂದರೆಯನ್ನು ಬಗೆಹರಿಸಿಕೊಡಬೇಕು, ಇನ್ನು ನಮ್ಮ ಕಡೆಯಲ್ಲಿ ಲೈನ್ ಬಹಳ ದೂರ ಹೋಗುವುದರಿಂದ ಗಾಳಿ ಬಂದಾಗ ಬಹಳಷ್ಟು ಕಡೆಗಳಲ್ಲಿ ಅಪಾಯವಿರುವುದರಿಂದ ಇದನ್ನು ಸರಿಪಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಮಲೆನಾಡಿನ ಗ್ರಾಮಾಂತರ ಪ್ರದೇಶದಲ್ಲಿ ನಾವು ವಿದ್ಯುಚ್ಛಕ್ತಿಯನ್ನು ಕೊಡಬೇಕಾದರೆ ಹಿಂದೆ ಇದ್ದಂಥ ಆರ್‌ಎಸಿ ಸ್ಕೀಂನ್ನು ಪುನಃ ತಾವು ನಮ್ಮ ಗ್ರಾಮಾಂತರ ಪ್ರದೇಶದ ಜನತೆಯ ಪ್ರಯೋಜನಕ್ಕಾಗಿ ಕೊಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಹಳ್ಳಿಗಳಲ್ಲಿ ಬಹಳ ದೂರದಲ್ಲಿ ಟ್ರ್ಯಾನ್ಸ್‌ಫಾರ್ಮರ್ಸ್ ಇರುವುದರಿಂದ ಕರೆಂಟ್‌ನಲ್ಲಿ ಜಂಪ್ ಹೋಯಿತು ಎಂಬ ಮಾತನ್ನು ಕೇಳುತ್ತಿರುತ್ತೇವೆ. ನಮ್ಮ ಮಲೆನಾಡು ಪ್ರದೇಶದಲ್ಲಿ ಹೈ ವೋಲ್ಟೇಜ್‌ನಿಂದಾಗಿ ಫ್ಯೂಸ್‌ಗಳು ನಿಲ್ಲುವುದಿಲ್ಲ. ಇದಕ್ಕೆ ತಕ್ಷಣ ವ್ಯವಸ್ಥೆ ಮಾಡಬೇಕಾದರೆ ಸೆಕ್ಷನ್ ಆಫೀಸ್‌ಗಳು ಹತ್ತಿರದಲ್ಲಿರಬೇಕಾಗುತ್ತದೆ. ಆದ್ದರಿಂದ ಹೋಬಳಿ ಕೇಂದ್ರವಾದ ಹರಿಹರಪುರಕ್ಕೆ ಒಂದು ಸೆಕ್ಷನ್ ಆಫೀಸನ್ನು ಮಂಜೂರು ಮಾಡಿಕೊಡಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಂಡು ಕಾಲಾವಕಾಶ ಇಲ್ಲದಿದ್ದರೂ ಮಲೆನಾಡಿನ ಗ್ರಾಮಾಂತರ ಪ್ರದೇಶದ ಶಾಸಕನಾದ ನನಗೆ ತಾವು ಅವಕಾಶ ಕೊಟ್ಟಿದ್ದಕ್ಕೆ ತಮ್ಮನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್.ವೈ. ಮೇಟಿ (ಗುಳೇದಗುಡ್ಡ):- ಮಾನ್ಯ ಅಧ್ಯಕ್ಷರೇ, ನೀರಾವರಿಯ ಬಗ್ಗೆ ಮಾತನಾಡುವಾಗ ಕೃಷ್ಣಾ ಮೇಲ್ದಂಡೆಯ ಆಲಮಟ್ಟಿ ಅಣೆಕಟ್ಟಿನ ಬಗ್ಗೆ ನಾನು ಮಾತನಾಡುತ್ತೇನೆ. ಈಗ ಎಲ್ಲಾ ಮಾನ್ಯ ಸದಸ್ಯ ಮಿತ್ರರೂ ಮಾತನಾಡುತ್ತಾ ನೀರಾವರಿ ಯೋಜನೆಗಾಗಿ ಸರ್ಕಾರ ಸಾಕಷ್ಟು ಹಣವನ್ನೊದಗಿಸಿದೆ ಎಂದು ಹೇಳಿರುತ್ತಾರೆ. ಸರ್ಕಾರ ಏನು ಹಣವನ್ನೊದಗಿಸಿದೆ ಅಷ್ಟು ಹಣವೂ ಸರಿಯಾಗಿ ಖರ್ಚಾಗಿದೆಯೋ, ಇಲ್ಲವೋ ಎಂಬುದನ್ನು ನೋಡತಕ್ಕದ್ದು ಸರ್ಕಾರದ ಕೆಲಸ ಏಕೆಂದರೆ ಸರ್ಕಾರ ಹಣವನ್ನೊದಗಿಸಿದರೂ ಅದು ಸರಿಯಾಗಿ ಖರ್ಚಾಗಿಲ್ಲ. ಅಂದಮೇಲೆ ಇದರಿಂದ ಏನು ಉಪಯೋಗ? ನಮ್ಮ ಆಲಮಟ್ಟಿ ಅಣೆಕಟ್ಟನ್ನು ಕಟ್ಟುವ ಸಲುವಾಗಿ ಕಳೆದ ವರ್ಷ ಗುತ್ತಿಗೆ ಕೊಟ್ಟು 60 ಕೋಟಿ. ರೂ.ಗಳನ್ನು ಖರ್ಚುಮಾಡಿ 5 ವರ್ಷದಲ್ಲಿ ಈ ಮೊದಲನೇ ಹಂತವನ್ನು ಮುಗಿಸಬೇಕೆಂದು ತಿಳಿಸಿದರು. ಅಂದರೆ ಪ್ರತಿವರ್ಷ 12 ಕೋಟಿ ರೂ. ಕೆಲಸ ಮಾಡಬೇಕು, ಅಂದರೆ ಪ್ರತಿ ತಿಂಗಳೂ 1 ಕೋಟಿ ರೂ. ಕೆಲಸಮಾಡಬೇಕೆಂದು ಗುತ್ತಿಗೆಯ ಕರಾರಿನಲ್ಲಿದೆ. ಈಗಾಗಲೇ 1 ವರ್ಷ ಮುಗಿದರೂ ಅಲ್ಲಿ ಆದಂಥ ಕೆಲಸ ಕೇವಲ 1.20 ಕೋಟಿ ರೂ.ನಷ್ಟು ಮಾತ್ರ. ಇದಕ್ಕೆ ಸಂಬಂಧಪಟ್ಟ ಒಂದು ಬಿಲ್ಲೂ ಕೂಡ ಆಗಿಲ್ಲ. ಹೀಗಾದರೆ ನಾವು ಈ ಅಣೆಕಟ್ಟನ್ನು ಮುಗಿಸುವುದಕ್ಕೆ ಸಾಧ್ಯವೇ? ಈ ಗುತ್ತಿಗೆದಾರರಿಗೆ ಅಡ್ವಾನ್ಸ್ ಕೊಟ್ಟಿದ್ದು 6 ಕೋಟಿ ರೂ. ಅದರ ಬಡ್ಡಿ 1.15 ಕೋಟಿ ರೂ.ಗಳನ್ನು ಅವರ ಬಿಲ್‌ನಲ್ಲಿ ಮುರಿದುಕೊಳ್ಳಬೇಕು. ಪ್ರತಿನಿತ್ಯ ಅವರು 25 ಸಾವಿರ ಪೆನಾಲ್ಟಿ ಕೊಡುತ್ತಾರೆ. ಈ ರೀತಿ ಲೆಕ್ಕ ಹಾಕಿದರೆ ಸುಮಾರು 50-60 ಲಕ್ಷ ರೂ.ಗಳನ್ನು ಅವರು ಕೊಡಬೇಕಾಗುತ್ತದೆ. ಆದರೆ

ಅವರು ಇದುವರೆಗೆ ಕೆಲಸ ಮಾಡಿರತಕ್ಕದ್ದು ಕೇವಲ 1.20 ಕೋಟಿ ರೂ. ಮಾತ್ರ. ಅವರು ಮಾಡಬೇಕಾಗಿದ್ದ ಕೆಲಸ 12.ಕೋಟಿ ರೂ.ಗಳದ್ದು. ಹೀಗಾದರೆ ಡ್ಯಾಂ ಮುಗಿಯುವುದಕ್ಕೆ ಸಾಧ್ಯವಿಲ್ಲ. ಹಿಂದೆ ಇದ್ದಂಥ ಷಾ ಕನ್‌ಸ್ಟ್ರಕ್ಷನ್ಸ್ ಎನ್ನುವವರು ಬಹಳ ಉತ್ತಮ ಕೆಲಸಮಾಡುತ್ತಿದ್ದರು. ಅವರ ಅಧಿಕಾರಿಗಳು ಬಹಳ ಚೆನ್ನಾಗಿ ಕೆಲಸಮಾಡುತ್ತಿದ್ದರು. ಯಾವುದೋ ಒಂದು ಕಾರಣಕ್ಕಾಗಿ ಅವರು ಕೋರ್ಟಿಗೆ ಹೋಗಿ ಆ ಕೆಲಸ ಸುಮಾರು 10 ವರ್ಷಕಾಲ ನಿಂತುಹೋಗಿತ್ತು. ನಂತರ ಪವರ್ ಕಾರ್ಪೊರೇಷನ್‌ನ ಕೆಲವು ಭಾಗ ಮತ್ತು ಪವರ್ ಕೆಲಸವನ್ನು 5 ಕೋಟಿ ರೂ.ಗೆ ಗುತ್ತಿಗೆಗೆ ತೆಗೆದುಕೊಂಡರು. ಅವರು ಕೆಲಸಮಾಡಿದ್ದು 40 ಪರ್ಸೆಂಟ್ ಅಂದರೆ 2 ಕೋಟಿರೂ. ಕೆಲಸ ಮಾಡಿದರು. 2 ಕೋಟಿ ರೂಪಾಯಿ ಬಿಲ್ಲನ್ನು ತೆಗೆದುಕೊಂಡರು. ಅನಂತರ ಅವರು ಆ ಕೆಲಸವನ್ನು ಬಂದ್ ಮಾಡಿ ಪರಿಹಾರ ಧನಕ್ಕಾಗಿ ಕೋರ್ಟಿಗೆ ಹೋದಾಗ ಅವರಿಗೆ 3 ಕೋಟಿರೂ. ಸಿಕ್ಕಿತು. 5 ಕೋಟಿ ರೂ.ನ ಗುತ್ತಿಗೆ ಪಡೆದು 2 ಕೋಟಿ ರೂ. ಕೆಲಸಮಾಡಿ, ಆ ಕೆಲಸವನ್ನು ಬಂದ್ ಮಾಡಿ 3 ಕೋಟಿ ರೂ. ಪರಿಹಾಧನವನ್ನು ತೆಗೆದುಕೊಂಡರು. ಇದಕ್ಕೆ ಯಾರು ಜವಾಬ್ದಾರರು ? ಕೆಲವು ನೌಕರರು ಗುತ್ತಿಗೆದಾರರಿಗೆ ಸಪೋರ್ಟ್ ಮಾಡಿ 5 ಕೋಟಿ ರೂ.ನಲ್ಲಿ ಮುಗಿಯುವಂಥ ಕೆಲಸಕ್ಕೆ 2 ಕೋಟಿ ರೂ. ಕೆಲಸ ಆದಮೇಲೆ 3 ಕೋಟಿರೂ. ಪರಿಹಾರಧನವನ್ನು ಕೊಡಿಸುವಂಥ ಕೆಲಸ ಮಾಡಿದ್ದಕ್ಕೆ ಯಾರು ಜವಾಬ್ದಾರರು ? ಇದರ ಬಗ್ಗೆ ಸರ್ಕಾರ ಯಾರ್ಯಾರ ಮೇಲೆ ಕ್ರಮ ತೆಗೆದುಕೊಳ್ಳುತ್ತಿದೆ ?

ಇನ್ನು ಗ್ಯಾಮನ್ ಇಂಡಿಯಾದವರು ಏನು ಕೆಲಸಮಾಡುವುದಕ್ಕೆ ಪ್ರಾರಂಭಮಾಡಿದ್ದಾರೆ. ಇವರಿಗೆ ವಿಶ್ವ ಬ್ಯಾಂಕ್ ನಿಯಮದ ಪ್ರಕಾರ ಇವರಿಗೆ ವಿದ್ಯುಚ್ಛಕ್ತಿಯನ್ನು ಕೊಡಬೇಕಾದುದು ನಮ್ಮ ಸರ್ಕಾರದ ಜವಾಬ್ದಾರಿಯಲ್ಲ. ಅವರು ತಮಗೆ ಬೇಕಾದ ವಿದ್ಯುಚ್ಛಕ್ತಿಯನ್ನು ತಾವೇ ತಯಾರು ಮಾಡಿಕೊಳ್ಳಬೇಕೆಂದಿದೆ. ಆದರೆ ಅವರು ವಿದ್ಯುಚ್ಛಕ್ತಿಯನ್ನು ತಯಾರಿಸಿಕೊಳ್ಳುವ ಬಗ್ಗೆ ಯಾವುದೇ ಯೋಜನೆಯನ್ನೂ ಅವರು ಮಾಡಿಕೊಂಡಿಲ್ಲ. ನಮ್ಮ ರಾಜ್ಯ ಸರ್ಕಾರದಿಂದ ವಿದ್ಯುಚ್ಛಕ್ತಿಯನ್ನು ತೆಗೆದುಕೊಳ್ಳಬೇಕಾದರೂ ಕೂಡ ಅವರು ಇನ್ನೂ ಕಂಭಗಳನ್ನು ಹಾಕಿಕೊಳ್ಳುವುದರಲ್ಲೇ ಇದ್ದಾರೆ. ಹೀಗಾದರೆ ಈ ಡ್ಯಾಂ ನಿಗದಿತ ವೇಳೆಯಲ್ಲಿ ಮುಗಿಯುವುದಿಲ್ಲ. ನನ್ನ ತಿಳುವಳಿಕೆಯ ಪ್ರಕಾರ ಗ್ಯಾಮನ್ ಇಂಡಿಯಾರವರ ಹಣಕಾಸಿನ ಪರಿಸ್ಥಿತಿ ಸರಿಯಾಗಿಲ್ಲ. ಇವತ್ತಿಗೂ ಅವರು ಲೇಬರ್ ಕಾಂಟ್ರ್ಯಾಕ್ಟ ಬಿಲ್ಲನ್ನು ಕೊಟ್ಟಿಲ್ಲ.

ಅವರು ಒಂದು ವರ್ಷ ಕೆಲಸ ಮಾಡಿದರು. ಕೇವಲ 1 ಕೋಟಿ 20 ಲಕ್ಷದ ಬಿಲ್ಲು ಇವತ್ತಿಗೂ ಆಗಿಲ್ಲ. ಲೇಬರ್ ಕಂಟ್ರಾಕ್ಟ್ ಬಿಲ್ ಕೊಟ್ಟಿಲ್ಲ. ಹೀಗಾಗಿ ಅವರ ಕಡೆಯಿಂದ ಡ್ಯಾಮ್ ಮುಗಿಸಲು ಬಹಳ ಕಷ್ಟವಾಗುತ್ತಿದೆ. ಅದರ ಸಲುವಾಗಿ ಈಗ ನಾನು ಹೇಳುವುದಿಷ್ಟೇ ಮಾನ್ಯ ಉಪ ಮುಖ್ಯಮಂತ್ರಿಗಳು ತಾವು ಹೆಚ್ಚಿನ ಜವಾಬ್ದಾರಿಯನ್ನು ತೆಗೆದುಕೊಂಡು ತಮ್ಮ ಕಚೇರಿಯನ್ನು ಇಲ್ಲಿಗೆ ತೆಗೆದುಕೊಂಡು ಬಂದರೂ ಬಹಳ ಸಂತೋಷವಾಗುತ್ತದೆ. ಜವಾಬ್ದಾರಿಯನ್ನು ತೆಗೆದುಕೊಳ್ಳದಿದ್ದರೆ ಆಗುವುದಿಲ್ಲ. ಹಿಂದೆ ಒಂದು ಗಾದೆಯನ್ನು ಹೇಳುತ್ತಿದ್ದರು. ನಾನು ಹೇಳುವುದರಲ್ಲಿ ತಪ್ಪೇನಾದರೂ ಆಗುವುದಿಲ್ಲವೆಂದು ಭಾವಿಸುತ್ತೇನೆ. ಹಿಂದೆ ಏನು ಹೇಳುತ್ತಿದ್ದರೆಂದರೆ ''ಆಳುಮಾಡುವುದು ಹಾಳು, ಮಗ ಮಾಡುವುದು ಮಾಧ್ಯಮ, ತಾನು ಮಾಡುವುದು ಉತ್ತಮವೆಂದು'' ಈಗ ನಮ್ಮ ಬಿಜಾಪುರದಲ್ಲಿ ಆ ಗಾದೆಯನ್ನು ಹೇಳುತ್ತಾರೆ. ಇದು ಬಹಳ ಮಂದಿಗೆ ಗೊತ್ತಿರಬಹುದು. ಆದ್ದರಿಂದ ತಾವು ಸ್ವತಃ ನಿಂತು ನಮ್ಮ ಜಿಲ್ಲೆಯ ಮಂತ್ರಿಗಳನ್ನು ಕರೆದುಕೊಂಡು ಬಂದು ನಿಂತು ಮಾಡಿದರೆ ಈ ಕೆಲಸ ಸಾಧ್ಯವಾಗುತ್ತದೆ. ಅದರ ಸಲುವಾಗಿ ತಾವು ಒಂದು ಉನ್ನತಮಟ್ಟದ ಅಧಿಕಾರಗಳ ಒಂದು ಸಭೆಯನ್ನು ಕರೆದು, ಜಿಲ್ಲೆಯ ಶಾಸಕರು ಅಧಿಕಾರಿಗಳು, ಮಂತ್ರಿಗಳನ್ನು ಎಲ್ಲರನ್ನೂ ಕರೆದು ಒಂದು ಉನ್ನತಮಟ್ಟದ ಸಭೆಯನ್ನು ಆಲಮಟ್ಟಿಯಲ್ಲೆ ಕರೆದು ತಾವು ಹೆಚ್ಚಿನ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು. ಈಗ ವರ್ಲ್ಡ್‌ಬ್ಯಾಂಕಿನಲ್ಲಿ ಈ ಪ್ರಕಾರ ದುಡ್ಡು ಅವರಿಗೆ ಕೊಡುವುದಿಲ್ಲ. ಒಂದು ವೇಳೆ ತಾವು

ಗುತ್ತಿಗೆದಾರರೊಡನೆ ನೆಗೋಸಿಯೇಷನ್ ಮಾಡಿ ನೀವು ದುಡ್ಡು ಕೊಟ್ಟರೂ ಸಹಿತ ಆ ದುಡ್ಡು ಬೇರೆ ಕಡೆ ಕೆಲಸಕ್ಕೆ ಹೋಗುವಂಥ ಪರಿಸ್ಥಿತಿ ಇದೆ. ಏತಕ್ಕೆಂದರೆ ಅಲ್ಲಿಯ ಪರಿಸ್ಥಿತಿ ಸರಿಯಿಲ್ಲ. ಆದಕಾರಣ ದುಡ್ಡು ಸಹಿತ ಹೆಚ್ಚಿಗೆ ಕೊಟ್ಟರೂ ಅದು ಇಲ್ಲಿಯೇ ಉಪಯೋಗವಾಗುವಂತೆ ತಾವು ನಿಂತು ಒಬ್ಬ ಉನ್ನತ ಅಧಿಕಾರಿಯನ್ನು ನೇಮಿಸಿ ಅದನ್ನು ಮಾಡಿದರೆ ಅದು 1985-86ಕ್ಕೆ ಮುಗಿಯ ಬೇಕಾಗಿದ್ದುದು ಈಗಲಾದರೂ ಮುಗಿಯಲು ಸಾಧ್ಯವಾಗುತ್ತದೆ. ಇನ್ನು ಎರಡನೆಯ ಹಂತ ತಮಗೆ ಗೊತ್ತಿರಬಹುದು. ಈ ಎರಡನೆಯ ಹಂತವೂ ಸಹ ಕೇಂದ್ರ ಸರ್ಕಾರದ ಅನುಮತಿಗೆ ಹೋಗಿದ್ದು ಅದಕ್ಕೆ ಇನ್ನೂ ಅನುಮತಿ ಸಿಕ್ಕಿಲ್ಲವೆಂದು ಕಾಣುತ್ತದೆ. ಅದೂ ಕೂಡ 1995-96ಕ್ಕೆ ಮುಗಿಯುವುದಕ್ಕೆ ಸಾಧ್ಯವಿಲ್ಲ. ಆ ಕಾರಣದಿಂದ ತಾವು ಎರಡನೆಯ ಹಂತವನ್ನು ಸಹಿತ ಕೇಂದ್ರ ಸರ್ಕಾರದ ಅನುಮತಿ ಪಡೆಯಲು ಕೂಡಲೇ ಪ್ರಯತ್ನ ಪಡಬೇಕು. ಈಗ ಆಂಧ್ರದವರು ಮಾಡಿದ ಹಾಗೆ ಬೇರೆ ಯಾವುದಾದರೂ ಖಾತೆಯಲ್ಲಿ ಸಾಕಷ್ಟು ದುಡ್ಡಿರುವ ಬೇರೆ ಬೇರೆ ಖಾತೆಗಳ ದುಡ್ಡನ್ನು ತೆಗೆದುಕೊಂಡು ಇದಕ್ಕೆ ತೊಡಗಿಸಬೇಕು. ತಮ್ಮ ಯೋಜನೆಗಳ ದುಡ್ಡು ಬರೀ ನೌಕರರ ಮೇಲೆ ಪಗಾರ ಮತ್ತು ಟಿ.ಎ.ಡಿ.ಎ ಗೆ 100ಕ್ಕೆ ನೂರುಭಾಗ ಖರ್ಚಾಗುತ್ತಿದೆ. ಆದರೆ ಯೋಜನೆಗೆ ದುಡ್ಡು ಮಾತ್ರ 40 ಪರ್ಸೆಂಟ್ ಖರ್ಚಾಗುತ್ತಿದೆ ಎಂದು ನನಗೆ ಕಾಣುತ್ತಿಲ್ಲ. ಆದ್ದರಿಂದ ಬೇರೆ ಕಡೆಯ ದುಡ್ಡನ್ನು ಇದಕ್ಕೆ ಹಾಕಿ ಎರಡನೆಯ ಹಂತವನ್ನು ಶುರು ಮಾಡಿದರೆ ಮಾತ್ರ ಎರಡನೆಯ ಹಂತವನ್ನು ಮುಗಿಸಲಿಕ್ಕೆ ಸಾಧ್ಯವಾಗುತ್ತದೆ. ಈ ನನ್ನ ಸಲಹೆಯನ್ನು ಮಾನ್ಯ ಉಪಮುಖ್ಯಮಂತ್ರಿಗಳು ಪರಿಶೀಲಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸಣ್ಣ ನೀರಾವರಿಯ ಬಗ್ಗೆ ಹೇಳುವುದಾದರೆ ಈ ಸಣ್ಣ ನೀರಾವರಿಯ ಮಂತ್ರಿಗಳು ನಮ್ಮ ಜಿಲ್ಲೆಯವರೇ ಆಗಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಸಹಿತ ಈ ಸಾಲಿಗೆ ಸಣ್ಣ ನೀರಾವರಿಗಾಗಿ ದುಡ್ಡುಕೊಟ್ಟದ್ದು 60ಲಕ್ಷ ರೂಪಾಯಿ. ಇದರಲ್ಲಿ ಖರ್ಚಾದುದು ಎಷ್ಟೆಂದರೆ 12ಲಕ್ಷ ರೂಪಾಯಿಗಳು ಮಾತ್ರ. ಹೀಗಾಗಿ ಯಾವುದೇ ನಮ್ಮ ಯೋಜನೆಗಳು ಪೂರ್ತಿಯಾಗಲಿಲ್ಲ. ಇದಕ್ಕೆ ದಯವಿಟ್ಟು ನಮ್ಮ ಜಿಲ್ಲೆಗೆ ಹೆಚ್ಚಿನ ಗಮನ ಕೊಡಬೇಕು. ಏತಕ್ಕೆಂದರೆ ನಮ್ಮ ಜಿಲ್ಲೆಯವರು ಹುಲ್ಲಿನ ಕಡ್ಡಿ ಇದ್ದಹಾಗೆ, ತನ್ನನ್ನು ತಾನು ಸುಟ್ಟುಕೊಂಡು ಜನರಿಗೆ ವಸತಿ ಕೊಡುವಂತೆ, ನಮ್ಮ ಜಿಲ್ಲೆಯಲ್ಲಿ ಭೂಮಿ ಮುಳುಗಡೆಯಾಗುತ್ತದೆ. ಇದರಿಂದಾಗಿ ನಮ್ಮ ಜಿಲ್ಲೆಯಲ್ಲಿ ಭೂಮಿ ಲುಕ್ಸಾನಾಗುತ್ತದೆ, ಆದರೂ ಸಹಿತ ಡ್ಯಾಮ್ ಮುಗಿಸಿ ಎಂದು ಹೇಳುತ್ತೇವೆ. ಅದಕ್ಕೆ ನಮ್ಮ ಜಿಲ್ಲೆಯಲ್ಲಿ ನದಿಗಳಿಗೆ ಪ್ರತಿ 5ಕಿಲೋಮೀಟರ್‌ಗೆ ಒಂದು ಬ್ಯಾರೇಜ್ ಕಟ್ಟಿದರೆ ಇದರಿಂದ ಬಹಳ ಅನುಕೂಲವಾಗುತ್ತದೆ. ಪ್ರತಿ 5 ಕಿಲೋಮೀಟರ್‌ಗೆ ಒಂದು ಬ್ಯಾರೇಜ್ ಆದರೆ ಸಾಕಷ್ಟು ಸಣ್ಣ ನೀರಾವರಿಗೆ ಅನುಕೂಲವಾಗುತ್ತದೆ. ಇದನ್ನು ಮಾಡುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ವಿದ್ಯುತ್ ಬಗ್ಗೆ ನಮ್ಮ ಮಾನ್ಯ ಮಿತ್ರರು ಸಾಕಷ್ಟು ಹೇಳಿದ್ದಾರೆ. ವಿದ್ಯುತ್ತಿನ ಬಗ್ಗೆ ನಾನು ಒಂದು ವಿಚಾರವನ್ನು ಹೇಳುತ್ತೇನೆ. ತಾವು ಉಪಮುಖ್ಯಮಂತ್ರಿಗಳು ಹಳ್ಳಿಗಳ ಕಡೆಹೋದಾಗ ಹಳ್ಳಿಗಳಲ್ಲಿರುವ ಪರಿಸ್ಥಿತಿಯನ್ನು ನೋಡಬೇಕು. ಇಲ್ಲಿ ಎಲ್ಲಾ ಶಾಸಕರು ತಮ್ಮ ತಮ್ಮ ಮತಕ್ಷೇತ್ರದ ಬಗ್ಗೆ ಹೇಳಿದ್ದಾರೆ. ನಮ್ಮದನ್ನೂ ಅಷ್ಟು ಮಾಡಿಕೊಡಿರಿ ಎಂದು ಹೇಳಿಕೊಂಡು ತಮಗೆ ಅಭಿನಂದಿಸಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಬೆಳಿಗ್ಗೆ ಹತ್ತು ಗಂಟೆಗೆ ಶುರುಮಾಡಿದ್ದೇವೆ, ಈಗ ಆರು ಗಂಟೆ ಆಯಿತು.

ಶ್ರೀ ಎಂ. ಮಹದೇವ್: ನಾನು ಮಧ್ಯಾಹ್ನವೇ ಹೊರಟು ಹೋಗುತ್ತಿದ್ದೆ. ಇಷ್ಟು ಹೊತ್ತು ಇದಕ್ಕೆ ಕಾಯ್ದುಕೊಂಡು ಕುಳಿತಿದ್ದೆ. ಹರಿಕಥೆ ದಾಸರ ಕಥೆ ಆದ ಹಾಗೆ ಆಗಿದೆ. ಪ್ರಮುಖಾನ ಹಾಸಿ

ಕುಳಿತುಕೊಂಡ ಮೇಲೆ ಎಲ್ಲಾ ಕಥೆ ಮುಗಿಯುವವರೆಗೆ ಹೋಗುವ ಹಾಗೆ ಇಲ್ಲ. ನನಗೂ ಚಾನ್ಸ್ ಸಿಗುತ್ತದೆಂದು ಕುಳಿತುಕೊಂಡೆ, ಇಲ್ಲದಿದ್ದರೆ ಮಧ್ಯಾಹ್ನವೇ ಹೋಗುತ್ತಿದ್ದೆ.

ಅಧ್ಯಕ್ಷರು:- ಈಗ ಲೋಕೋಪಯೋಗಿ ಮಂತ್ರಿಗಳು ಇವತ್ತು ಉತ್ತರ ಕೊಡಬೇಕು. ನಾವೆಲ್ಲರೂ ಕುಳಿತುಕೊಳ್ಳುತ್ತೇವೆಂದರೆ ನಾನು ಇನ್ನೂ ಅವಕಾಶ ಕೊಡುತ್ತೇನೆ.

† ಡಾ.ಮಲಕರೆಡ್ಡಿ ಲಕ್ಷ್ಮಣರೆಡ್ಡಿ (ಯಾದ್‌ಗಿರ್):- ಸನ್ಮಾನ್ಯ ಅಧ್ಯಕ್ಷರೇ, 1993-94ನೇ ಸಾಲಿನ ಈ ಬೇಡಿಕೆಗಳನ್ನು ಸಮರ್ಪಕವಾಗಿ ಸ್ವಾಗತಿಸುತ್ತಾ, ಅತ್ಯಂತ ನಿರುತ್ಸಾಹದಿಂದ ಈ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದೇನೆ. ಕಾರಣವಿಷ್ಟೆ. ಈಗಾಗಲೇ ಅನೇಕ ಮಿತ್ರರು ಹೇಳಿದ್ದಾರೆ, ನಾನು ಜನರಲ್ ಆಗಿ ಮಾತನಾಡಿ ಸಮಯ ಹಾಳು ಮಾಡುವುದಕ್ಕೆ ಹೋಗುವುದಿಲ್ಲ. ನಾನು ಸ್ಪೆಸಿಫಿಕ್ ಆಗಿ ಪರಿಣಿತರು, ತಜ್ಞರು ಇದರ ಬಗ್ಗೆ ಗಹನವಾಗಿ ವಿಚಾರ ಮಾಡಿ, ಚಿಂತನೆ ಮಾಡಿ ಏನೇನು ವರದಿಗಳನ್ನು ಕೊಟ್ಟಿದ್ದಾರೆ. ಅದರ ಆಧಾರದ ಮೇಲೆ ಕೆಲವು ವಿಷಯಗಳನ್ನು ಆಯ್ದು ಸದನದ ಮುಂದಿಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಸರ್ಕಾರ ಅಲ್ಲಿಂದ ಇಲ್ಲಿಯವರೆಗೆ ನಡೆದುಕೊಂಡುಬಂದ ದಾರಿ ಏನು ? ಸಾಧನೆ ಏನು ? ಹಿಂದಿನ ಮುಖ್ಯ ಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲರು ಹೇಳಿದರು, 1964ರಲ್ಲಿ ಅಸ್ತಿಭಾರ ಹಾಕಿದರೂ ಇನ್ನೂ ಕೂಡ ಅರ್ಧ ಕೆಲಸ ಆಗಿಲ್ಲವೆಂದರು. ಅರ್ಧ ಅಲ್ಲ, ಕಾಲು ಭಾಗ ಕೂಡ ಕೆಲಸ ಮಾಡಿಲ್ಲ. ಇದರಿಂದ 12 ಲಕ್ಷ ಎಕರೆಗೆ ನೀರಾವರಿ ಆಗಬೇಕು. 1964ರಿಂದ ಅವ್ಯಾಹತವಾಗಿ ಕರ್ನಾಟಕ ರಾಜ್ಯದ ಗಮನ ಸೆಳೆದು, ಸರ್ಕಾರದ ಗಮನ ಸೆಳೆದು ಇಷ್ಟೊಂದು ಸುದೀರ್ಘವಾದ ಕಾಲದಲ್ಲಿ ಕೆಲಸ ಮಾಡಿ ನಾವು ಇದುವರೆಗೆ ನೀರು ಕೊಟ್ಟಿದ್ದು 1,29,606 ಎಕರೆಗೆ ಮಾತ್ರ ಸರ್ಕಾರ ಕೊಟ್ಟ ವರದಿ ಪ್ರಕಾರ ನಾನು ಹೇಳುತ್ತಿದ್ದೇನೆ. ಎರಡು ಲಕ್ಷ ಎಕರೆಗೆ ನೀರುಕೊಟ್ಟಿದ್ದಾರೆ. 12 ಲಕ್ಷ ಎಕರೆ ಭೂಮಿಗೆ ನೀರು ಕೊಡಬೇಕಾಗಿದೆ ಈ ಯುಕೆಪಿ. ಮುಖಾಂತರ ಯುಕೆಪಿ ಆಯಕಟ್ಟಿನಲ್ಲಿ ನನ್ನ ಮತಕ್ಷೇತ್ರ ಬರುವುದರಿಂದ ಅಷ್ಟಕ್ಕೆ ಸೀಮಿತವಾಗಿ ಹೇಳುತ್ತಿದ್ದೇನೆ. ಸರ್ಕಾರದಲ್ಲಿ ಒಂದು ಸಂಸ್ಥೆ ಇದೆ, ಸೆಂಟ್ರಲ್ ಮೆಕ್ಯಾನಿಕಲ್ ಆರ್ಗನೈಸೇಷನ್ ಎಂದು, ಅವರು 1992ರಲ್ಲಿ ಸಮೀಕ್ಷೆ ಮಾಡಿ ಸರ್ಕಾರಕ್ಕೆ ವಿಶದವಾದ ವರದಿ ಕೊಟ್ಟಿದ್ದಾರೆ. ಅದರಲ್ಲಿ ಹೇಳಿದ್ದಾರೆ. ಯಾವ ಗತಿಯಲ್ಲಿ ನಾವು ಇದುವರೆಗೆ ಕಾರ್ಯಕ್ರಮ ಹಾಕಿಕೊಂಡು ಕೆಲಸ ಸಾಧಿಸಿದ್ದೇವೆ. ಅದನ್ನು ನೋಡಿದರೆ ಕೃಷ್ಣ ಬೇಸಿನ್ ವರ್ಕ್ಸ್ ಮುಗಿಯಬೇಕಾದರೆ 24 ವರ್ಷ ಬೇಕು, ಕಾವೇರಿ ಬೇಸಿನ್ ಕೆಲಸ ಮುಗಿಯಬೇಕಾದರೆ 8 ವರ್ಷ ಬೇಕು, ಗೋದಾವರಿ ಕೆಲಸ ಮುಗಿಯಬೇಕಾದರೆ 5 ವರ್ಷ ಬೇಕು ಎಂದು ಸರ್ಕಾರದ ಅಂಗವಾದ ಸೆಂಟ್ರಲ್ ಮೆಕ್ಯಾನಿಕಲ್ ಆರ್ಗನೈಸೇಷನ್ ಎಂಬ ಸಂಸ್ಥೆ ಏನಿದೆ ಆ ಸಂಸ್ಥೆಯವರು ವರದಿ ಕೊಟ್ಟಿದ್ದಾರೆ. ನಾನು ಅದನ್ನು ತಮಗೆ ಕಳುಹಿಸಿಕೊಡುತ್ತೇನೆ. 1992ನೇ ನವೆಂಬರ್ 24 ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಡೀಟೈಲ್ ಆಗಿ ಬಂದಿದೆ. ಅವರು ವಿವರವಾಗಿ ವರದಿ ಕೊಟ್ಟಿದ್ದಾರೆ. ಸಮಯಕ್ಕೆ ಸರಿಯಾಗಿ ನಾವು ಕೆಲಸ ಮಾಡುತ್ತಾ ಹೋದರೆ ಸರ್ಕಾರಕ್ಕೆ ಏನು ಬೆನಿಫಿಟ್ ಬರುತ್ತದೆ. ಕೃಷಿಕರಿಗೆ ಏನು ಬೆನಿಫಿಟ್ ಬರುತ್ತದೆಂದು ಹೇಳಿದ್ದಾರೆ. ಒಂದು ವೇಳೆ 8 ವರ್ಷದಲ್ಲಿ ಕಾರ್ಯಸಾಧನೆ ಮಾಡಿದರೆ 19180 ಕೋಟಿ ರೂಪಾಯಿ ಉತ್ಪನ್ನ ಈ ಆಯಕಟ್ಟಿನ ಮುಖಾಂತರ ಕರ್ನಾಟಕಕ್ಕೆ ಬರುತ್ತದೆಂದು ಅವರು ಸಮೀಕ್ಷೆ ಮಾಡಿ ಹೇಳಿದ್ದಾರೆ. ಆದರೆ ನಾವು ಸಾಧನೆ ಮಾಡಬೇಕಾದುದು ಅಂದರೆ 8 ವರ್ಷದಲ್ಲಿ ಇದನ್ನು ಮುಗಿಸಬೇಕಾಗುತ್ತದೆ. ಒಂದು ವರ್ಷ ಸ್ಪೇರ್ ಇಡಬೇಕಾಗುತ್ತದೆ. ಕೆಲವು ಕುಷನ್ ವರ್ಕ್ಸ್ ಇರುತ್ತವೆ. ನಾವು ಡ್ಯಾಂ ಕಟ್ಟಿರುತ್ತೇವೆ, ಕೆನಾಲ್ ವರ್ಕ್ಸ್ ಉಳಿದಿರುತ್ತದೆ. 1999ರಲ್ಲಿ ಅಂದರೆ ಇನ್ನು 6 ವರ್ಷಗಳಲ್ಲಿ ನಾವು ಕೆಲಸ ಮುಗಿಸಬೇಕಾಗುತ್ತದೆ. ಅವರು ಏನು ಹೇಳಿದ್ದಾರೆಂದರೆ, ನಾವು 6 ವರ್ಷಗಳಲ್ಲಿ ಕೆಲಸ ಮುಗಿಸಬೇಕಾದರೆ, ಕೃಷ್ಣ ಬೇಸಿನ್‌ಗೆ ಸಂಬಂಧಪಟ್ಟ ಹಾಗೆ 3176 ಕೋಟಿ ರೂಪಾಯಿ ಬೇಕೆಂದು ಹೇಳಿದ್ದಾರೆ. ಎಸ್ಕಲೇಷನ್ ಕಾಸ್ಟ್ ಹಿಡಿದುಕೊಂಡು ಹೇಳಿದ್ದಾರೆ. ಪ್ರತಿ ವರ್ಷ ಎಷ್ಟು ಖರ್ಚು ಮಾಡಿದರೆ ಎಷ್ಟು ಸಾಧನೆ

ಮಾಡಬಹುದೆಂದರೆ ಅವರು 1992ರಲ್ಲಿ ಹೇಳಿದ ಪ್ರಕಾರ ಪ್ರತಿ ವರ್ಷ ಕೃಷ್ಣ ಬೇಸಿನ್‌ಗೆ 533 ಕೋಟಿ ರೂಪಾಯಿ ಖರ್ಚು ಮಾಡಿದರೆ 6 ವರ್ಷಗಳಲ್ಲಿ ಗುರಿ ಮುಟ್ಟಬಹುದೆಂದು ಹೇಳಿದ್ದಾರೆ. 1990ರಿಂದ ತಮ್ಮ ಸಾಧನೆಯನ್ನು ಈ ಸದನದ ಮುಂದಿಡುವುದಕ್ಕೆ ಇಷ್ಟಪಡುತ್ತಿದ್ದೇನೆ. 1990–91ರಲ್ಲಿ ಹಣ ಇಟ್ಟಿದ್ದು 107 ಕೋಟಿ, ಖರ್ಚು ಮಾಡಿದ್ದು 98 ಕೋಟಿ, 91–92ರಲ್ಲಿ ಇಟ್ಟ ಹಣ 107 ಕೋಟಿ, ಖರ್ಚು ಮಾಡಿದ್ದು 98 ಕೋಟಿ. ಆದರೆ ನಿಮ್ಮ ಇಲಾಖೆಯ ಅಂಗ ಸಂಸ್ಥೆಯವರು ತಮ್ಮ ವರದಿಯಲ್ಲಿ 500 ಚಿಲ್ಲರೆ ಕೋಟಿ ರೂಪಾಯಿಗಳನ್ನು ಇಡಬೇಕೆಂದು ಹೇಳಿದ್ದಾರೆ. 1991–92ರಲ್ಲಿ 107 ಕೋಟಿ ರೂಪಾಯಿ ಇಟ್ಟು 98 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದರೆ 92–93 ರದ್ದು ನೋಡಿದರೆ ಬಹಳ ಖೇದವಾಗುತ್ತದೆ. ನಾನು ಸೌಮ್ಯವಾದ ಶಬ್ದ ಉಪಯೋಗಿಸುತ್ತೇನೆ. ನಾನು ಫಿಸಿಷಿಯನ್ ಆದ್ದರಿಂದ ಉಗ್ರವಾದ ಭಾಷೆಯನ್ನು ಉಪಯೋಗಮಾಡಬಾರದು.

ನೀವು ಹಣ ಇಟ್ಟಿದ್ದು 155 ಕೋಟಿ ರೂಪಾಯಿ. ಆದರೆ ಖರ್ಚು ಮಾಡಿದ್ದು, ನಿನ್ನೆ ಉತ್ತರದ ಪ್ರಕಾರ ಮಾನ್ಯ ಉಪಮುಖ್ಯಮಂತ್ರಿಗಳು ಕೊಟ್ಟಿದ್ದು ಲೇಟೆಸ್ಟ್ ಇನ್‌ಫರ್ಮೇಷನ್ ಪ್ರಕಾರ 51 ಕೋಟಿ ಎಂದು ಹೇಳಿದ್ದಾರೆ. ಆದರೆ ಪುಸ್ತಕದಲ್ಲಿ 76 ಕೋಟಿ ಎಂದು ಹೇಳಿದ್ದಾರೆ. ನಿನ್ನೆ ಸದನದಲ್ಲಿ ಕೊಟ್ಟಿದ್ದೇ ಖಚಿತವಾದ ಉತ್ತರ ಎಂದು ತಿಳಿದುಕೊಂಡಿದ್ದೇನೆ. ಆದರೆ ಒಂದು ವರ್ಷದಲ್ಲಿ ತಾವು 155 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳಿ ಕೇವಲ 51 ಕೋಟಿ ಖರ್ಚು ಮಾಡಿದ್ದೀರಿ. ಹೀಗಾದರೆ ಸಾಧನೆ ಯಾವಾಗ ? ಮೊನ್ನೆ ವೀರೇಂದ್ರ ಪಾಟೀಲರು ಹೇಳಿದರು. ನಾವು ಮಾತನಾಡುವುದಕ್ಕೆ ಮತ್ತು ನಮ್ಮ ಸಾಧನೆಗೆ ಬಹಳ ಅಂತರ ಇದೆ, ಇದಕ್ಕೆ ಜವಾಬ್ದಾರಿ ಯಾರು ? ಆಫೀಸರ್ಸ್ ಹೊಟ್ಟೆಪಾಡಿಗೆ ನೌಕರಿಗೆ ಬಂದಿರುತ್ತಾರೆ. ಎಷ್ಟೇ ಉನ್ನತ ಅಧಿಕಾರಿಗಳು ಇರಲಿ ಅವಧಿ ಪೂರ್ಣ ಸೇವೆ ಮಾಡಿ ರಿಟೈರ್ ಆಗಿ ತಮ್ಮ ಮನೆಗೆ ಅವರು ಹೋಗುತ್ತಾರೆ. ಆದರೆ ನಾವು we are accountable to the party, we have given promises to the public...

ಆದರೆ ಏನು ಆಶ್ವಾಸನೆ ಕೊಟ್ಟಿದ್ದೇವೆ ಅದರ ಗತಿ ಏನು ? ನಮ್ಮಲ್ಲಿ ಏನಾದರೂ ವಿವೇಚನೆ ಇದೆಯೇ ? ಆತ್ಮಾವಲೋಕನ ಎನ್ನುವುದು ಒಂದು ಇದೆಯೇ ? ನಾವು ಚುನಾಯಿತ ಪ್ರತಿನಿಧಿಗಳು. ಎಲ್ಲಾ ಪಕ್ಷದವರು, ಪಕ್ಷಾತೀತವಾಗಿ ವಿಚಾರ ಮಾಡೋಣ. ನಾವು ಹೇಳುತ್ತೇವೆ. ಇದೇ ಸದನದಲ್ಲಿ ಪ್ರತಿಯೊಬ್ಬ ಮುಖ್ಯಮಂತ್ರಿ, ಪ್ರತಿಯೊಬ್ಬ ನೀರಾವರಿ ಮಂತ್ರಿ, ಪ್ರತಿಯೊಬ್ಬ ಮಂತ್ರಿಗಳೂ ಹೇಳುತ್ತಿದ್ದಾರೆ. ಇಲ್ಲ. ಯುದ್ಧ ತಳಹದಿಯಿಂದ ಕೆಲಸ ಮಾಡುತ್ತೇವೆ ಎಂದು. ಯುದ್ಧ ತಳಹದಿ ಎಲ್ಲಿ ? ಈ ವರ್ಷ 203 ಕೋಟಿ ರೂಪಾಯಿ ಇಟ್ಟಿದ್ದೀರಿ. ಆದರೆ ಸಮಗ್ರವಾಗಿ ನಮಗೆ ರಿಕ್ವೈರ್‌ಮೆಂಟ್ ಬೇಕಾಗಿರತಕ್ಕದ್ದು 1200 ಕೋಟಿ ರೂಪಾಯಿ ಸಮಗ್ರ ಕರ್ನಾಟಕದ ಯೋಜನೆಗಳಿಗೆ ಬೇಕಾಗುತ್ತದೆ. ಆದರೆ ಈ ವರ್ಷ 900 ಕೋಟಿ ರೂಪಾಯಿ ಎಂದು ಹೇಳಿದ್ದೀರಿ. ಇದು ಸಹಜ. ಬಡ್ಜೆಟ್‌ನಲ್ಲಿ ಇಡುವುದು ಸುಲಭ. 2000 ಕೋಟಿ ಎಂದೂ ನಮೂದು ಮಾಡಬಹುದು. ಆದರೆ ಸಾಧನೆ ಮಾಡಬಹುದೇ ? ಅದಕ್ಕೆ ನಾನು ಒತ್ತುಕೊಡುತ್ತಿದ್ದೇನೆ. 1989ರಲ್ಲಿ ಚುನಾವಣೆ ಆದಮೇಲೆ 1990ರಿಂದ ಇಲ್ಲಿಯವರೆಗೆ ಪ್ರಶ್ನೋತ್ತರ ಮೂಲಕ, ಗಮನ ಸೆಳೆವ ಸೂಚನೆ ಮುಖಾಂತರ, ಬಡ್ಜೆಟ್ ಹಾಗೂ ಆಯವ್ಯಯದಲ್ಲಿ ಪ್ರತಿಯೊಂದೂ ಹಂತದಲ್ಲಿ ಎರಡೂ ಮನೆಯಲ್ಲಿ ಸುದೀರ್ಘ ಕೂಲಂಕಷ ಚರ್ಚೆ ಆದರೂ ಕೂಡ ಎಚ್ಚರಿಕೆ ಯಾವಾಗ ? ಆಂಧ್ರದಲ್ಲಿ ಏನು ಸಾಧನೆ ಮಾಡಿದ್ದಾರೆ ? 1964ನೇ ಇಸವಿ ಬೇಡ, 1976ರಲ್ಲಿ ಏನು ರಾದ್ಧಾಂತ ಆಯಿತು ? ಆಗ ದೇವರಾಜ ಅರಸ್ ಅವರು ಮುಖ್ಯಮಂತ್ರಿಗಳಾಗಿದ್ದಾಗ, ಅವರು ಬಚಾವತ್ ಪ್ರೊಸೀಡಿಂಗ್ಸ್ ಏನು ಇತ್ತು ಅದನ್ನು ಬಾಯ್‌ಕಾಟ್ ಮಾಡಿ ಹೊರಬಂದಮೇಲೆ ಆಗ 70–80 ಟಿಎಂಸಿ ಹೆಚ್ಚು ಕೊಟ್ಟರು ಅವತ್ತು.

ಮೊದಲು ನಮಗೆ 757 ಟಿಎಂಸಿ ಕೊಟ್ಟಿರಲಿಲ್ಲ. ಕೇವಲ ಸುಮಾರು 600 ಟಿಎಂಸಿ ಅಡಿ ನೀರು

ಕೊಟ್ಟಿದ್ದರು. ಸಿಡಿದೆದ್ದು ಪ್ರೊಸೀಡಿಂಗ್ಸ್ ಬಾಯ್‌ಕಾಟ್ ಮಾಡುತ್ತೇವೆಂದು ಬಂದಮೇಲೆ 70–80 ಟಿಎಂಸಿ ಹೆಚ್ಚು ನೀರು ಕೊಟ್ಟರು. ಅಂದಮೇಲೆ ಉಪಯೋಗ ಮಾಡಿದ್ದು ಏನು? ನಮ್ಮದು ಕಮಿಟ್‌ಮೆಂಟ್ 4,48,500 ಹೆಕ್ಟೇರ್‌ಗೆ ನೀರು ಕೊಡಬೇಕು. ಆದರೆ ಇದುವರೆಗೆ ಪೊಟೆನ್ಷಿಯಲ್ ಎಷ್ಟು ಕ್ರಿಯೇಟ್ ಮಾಡಿದ್ದೇವೆ? ಹೆಚ್ಚುವರಿ 1 ಲಕ್ಷ ಕೂಡ ಅಲ್ಲ. ಅದು ಬರೀ 80 ಸಾವಿರ. ಪೊಟೆನ್ಷಿಯಲ್ ಕ್ರಿಯೇಟ್ ಮಾಡಿದ್ದು 2 ಲಕ್ಷ. ಇನ್ನೂ ಕಾಡ ವರ್ಕ್ ಆಗಿಲ್ಲ. ದೊಡ್ಡ ದೊಡ್ಡ ಬಿಲ್ಡಿಂಗ್ಸ್ ಬರುತ್ತಾ ಇವೆ. ಕೋಟ್ಯಾಂತರ ರೂಪಾಯಿ ಖರ್ಚು ಮಾಡಿದ್ದೀರಿ. ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ಬಂದಿದೆ; ಸಾಯಿಲ್ ಕನ್‌ಸರ್‌ವೇಷನ್ ಡಿಪಾರ್ಟ್‌ಮೆಂಟ್ ಬಂದಿದೆ; ಎಕ್ಸ್‌ಪರ್ಟ್ಸ್ ಬಂದಿದ್ದಾರೆ. ಅವರು ಏನು ಕೆಲಸ ಮಾಡುತ್ತಿದ್ದಾರೆ? ಪೊಟೆನ್ಷಿಯಲ್ 2 ಲಕ್ಷ ಎಕರೆ ಕ್ರಿಯೇಟ್ ಮಾಡಿದ್ದೇವೆಂದು ಹೇಳುತ್ತಿದ್ದೀರಿ. ಆದರೆ ಮಾಡಿರುವುದು 80 ಸಾವಿರ ಮಾತ್ರ. ಏಕೆ, ರೈತರಿಗೆ ಸಾಯಿಲ್ ಕನ್‌ಸರ್ವೇಷನ್ ಕೆಲಸ ಮಾಡಿಲ್ಲವೇ? ಮುಖ್ಯವಾಗಿ ಅದನ್ನು ಮಾಡಬೇಕು. ನಾವೆಲ್ಲರೂ ಕೂಡಿ ಏನು ಮಾಡುತ್ತಿದ್ದೇವೆಂದು ಅರ್ಥ ಆಗುತ್ತಾ ಇಲ್ಲ. ಈಗ ಪ್ರಥಮದಲ್ಲಿ ಸಾಕಷ್ಟು ಪ್ರಭಾವಯುತ, ಸಾಕಷ್ಟು ಅನುಭವಸ್ಥರಾದ ರಾಜಕೀಯ ವರ್ಚಸ್ಸು ಇರುವ ಒಬ್ಬ ವ್ಯಕ್ತಿ ಈ ಖಾತೆ ನಿರ್ವಹಣೆ ಮಾಡುತ್ತಿದ್ದಾರೆ. ಅದಕ್ಕಾಗಿ ಸಧ್ಯದ ಉಪಮುಖ್ಯಮಂತ್ರಿಗಳ ಕೈಯ್ಯಲ್ಲಿ ಈ ಕಾರ್ಯಸಾಧ್ಯ ಆಗದಿದ್ದರೆ ನಾವು ಕೈ ಎತ್ತಿ ಸುಮ್ಮನೆ ಕುಳಿತುಕೊಳ್ಳಬೇಕಾಗುತ್ತದೆ. ಇವತ್ತು ಆಂಧ್ರಪ್ರದೇಶದಲ್ಲಿ ಏನು ಮಾಡಿದ್ದಾರೆ? ಅವರಿಗೆ 857 ಟಿಎಂಸಿ ಅಡಿ ನೀರು ಅಲಾಟ್ ಮಾಡಿದ್ದು ನಮಗೆ 757 ಟಿಎಂಸಿ ಅಡಿ ನೀರು ಅಲಾಟ್ ಮಾಡಿದ್ದಾರೆ. ಅವರು 857 ಟಿಎಂಸಿ ಅಡಿ ನೀರನ್ನು ಸಮಗ್ರ ಉಪಯೋಗ ಮಾಡಿಕೊಂಡಿದ್ದಾರೆ. 5 ವರ್ಷದಲ್ಲಿ ಎಲ್ಲಾ ಕಂಪ್ಲೀಟ್ ಆಯಿತು. 10 ವರ್ಷದ ಮೊದಲೇ ಕಂಪ್ಲೀಟ್ ಮಾಡಿ ತೆಲುಗು–ಗಂಗಾ ತೆಗೆದುಕೊಂಡಿದ್ದಾರೆ. ಹಿಂದೆ ಅವರಿಗೆ ಬಚಾವತ್ ಅವಾರ್ಡ್‌ನಲ್ಲಿ ಹೆಚ್ಚು ಏಕೆ ಸಿಕ್ಕಿತು ಎಂದರೆ It was a fait accompli. Nagarjunasagar was completed because the nation has spent crores and crores of rupees on that project and it has been completed. Let the particular state which has completed to have this benefit ಎನ್ನುವ ದೃಷ್ಟಿಯಿಂದ ಅವರಿಗೆ ಹೆಚ್ಚು ನೀರು ಅಲಾಟ್ ಮಾಡಿದ್ದರು. Therefore, Once again through Telugu–Ganga Project, there will be another fait–accompli by 2000 years....

ಈಗ ಮದ್ರಾಸಿಗೆ ನೀರು ಕೊಡುತ್ತೇವೆಂದು ನೆಪಮಾಡಿ ನೀರು ಕೊಡಬೇಕಾದರೆ ಯಾವ ಗಾತ್ರದ ಕೆನಾಲ್ ಬೇಕಾಗಿತ್ತು ಅದಕ್ಕಿಂತಲೂ 70 ಪರ್ಸೆಂಟ್ ಹೆಚ್ಚು ಗಾತ್ರದ ಕೆನಾಲ್ ಅನ್ನು ಈಗ ತೋಡುತ್ತಿದ್ದಾರೆ. ಅದು ಎಲ್ಲರಿಗೂ ಕಾಣುತ್ತಿದೆ. ಅವರು ನೀರು ಬಿಡುತ್ತಾರೆ. ಈಗ ಅವರು ಸಾವಿರಾರು ರೂಪಾಯಿ ಖರ್ಚುಮಾಡಿದ್ದೇವೆಂದು ಹೇಳುತ್ತಾರೆ. ಅದಕ್ಕೆ ಸೆಂಟ್ರಲ್ ಗೌರ್ನಮೆಂಟ್ ಪರ್ಮಿಷನ್ ತೆಗೆದುಕೊಂಡಿಲ್ಲ; ಎಕ್ಸಸ್ ನೀರು ಉಪಯೋಗ ಮಾಡಿಕೊಂಡಿದ್ದೇವೆಂದು ಹೇಳುತ್ತಾರೆ. ಹೆಚ್ಚು ನೀರು, ಹಣ, ಖರ್ಚುಮಾಡಿದವರಿಗೆ ಹೋಗುತ್ತದೆ. ನಾವು ಹಣ ಖರ್ಚು ಮಾಡಲಿಲ್ಲ ನ್ಯಾಷನಲ್ ವೇಸ್ಟ್ ಆಗುತ್ತದೆಂದು ಅವರಿಗೆ ನೀರು ಕೊಡುತ್ತಾರೆ. when the question of review comes... ಜಲಸಂಪತ್ತು ನ್ಯಾಷನಲ್ ಸಂಪತ್ತು ಎಂದು ತಿಳಿದುಕೊಂಡು ಅವರಿಗೆ ಕೊಡುತ್ತಾರೆ. ಅದಕ್ಕಾಗಿ ನಾನು ಮಾನ್ಯ ಉಪಮುಖ್ಯಮುಂತ್ರಿಗಳಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುವುದೇನೆಂದರೆ ನಾವು ಇಲ್ಲಿ ಕೇವಲ ಮಾತನಾಡುವುದಲ್ಲ, ತಮ್ಮ ಸಹಾಯಕ್ಕೆ ಒಬ್ಬರು ಮಂತ್ರಿಗಳನ್ನು ಕೂಡ ಕೊಟ್ಟಿದ್ದಾರೆ. He has to go and pitch his tent there. ಅಲ್ಲಿ ಅವರು ಕೂಡಬೇಕು. ಅವರಿಗೆ ವಿಧಾನಸೌಧದಲ್ಲಿ ಕೆಲಸ ಇಲ್ಲ. ಅವರು ಕೃಷ್ಣ ಬೇಸಿನ್‌ನಲ್ಲಿ ಮತ್ತು ಕಾವೇರಿ ಬೇಸಿನ್‌ನಲ್ಲಿ ಅವರು ಕೂಡಬೇಕು. ಅವರು ಸದನಕ್ಕೆ ಉತ್ತರ ಕೊಡಲಿಕ್ಕೆ ಮಾತ್ರ ಬರಬೇಕು. ಅಲ್ಲಿ ಕುಳಿತರೆ ಇದು ಸಾಧ್ಯವಾಗುತ್ತದೆ. ನಾವೇನು

ಮಾತನಾಡುತ್ತೇವೆ ಎನ್ನುವುದು ನಮಗೆ ಅರಿವು ಇಲ್ಲ. ಈಗ ಬಜೆಟ್‌ನಲ್ಲಿ ಮಾನ್ಯಮುಖ್ಯಮಂತ್ರಿಗಳು ಏನು ಮಂಡನೆ ಮಾಡಿದ್ದಾರೆಂದರೆ ಇಷ್ಟೊಂದು ಗಾತ್ರದ ಯೋಜನೆಗಳನ್ನು ನಾವು ಕಂಪ್ಲೀಟ್ ಮಾಡಬೇಕಾದರೆ ಬಹಳಷ್ಟು ಹಣ ಬೇಕಾಗುತ್ತದೆ. ರೈತರಿಂದ ನಿಧಿಯನ್ನು ಸಂಗ್ರಹಮಾಡಿ 500 ಕೋಟಿ ರೂಪಾಯಿ ನಿಧಿಯನ್ನು ಸಂಗ್ರಹ ಮಾಡಿ ನೀರಾವರಿ ಸಲುವಾಗಿ ಉಪಯೋಗ ಮಾಡುತ್ತೇವೆಂದು ಆಯವ್ಯಯಪತ್ರದಲ್ಲಿ ಹೇಳಿದರು. ರೈತರು ಸರ್ಕಾರಕ್ಕೆ ಬಂದು ರೊಕ್ಕ ಕೊಡುತ್ತಾರೇನು ? ಯಾವ ರೈತರೂ ಸರ್ಕಾರಕ್ಕೆ ಬಂದು ರೊಕ್ಕ ಕೊಡುವುದಿಲ್ಲ. ಅದಕ್ಕಾಗಿ ನಾವೇನು ಮಾಡಿದ್ದೇವೆಂದರೆ ಸ್ಥಳೀಯವಾಗಿ ಕೆಲವು ನಿಗಮಗಳನ್ನು ಸ್ಥಾಪನೆ ಮಾಡಿದರೆ ಜನರ ಮೇಲೆ ವಿಶ್ವಾಸ ಹುಟ್ಟಿಸತಕ್ಕಂಥಹ ಮ್ಯಾನೇಜಿಂಗ್ ಡೈರೆಕ್ಟರ್ ನೀವು ಅಪಾಯಿಂಟ್‌ಮೆಂಟ್ ಮಾಡಿ. ಒಂದು ಕಮಿಟಿಯನ್ನು ನೀವು ಅಲ್ಲಿಗೆ ಕೊಡಿರಿ. ಅವರ ಮೇಲೆ ವಿಶ್ವಾಸ ಮೂಡಿಸಿದರೆ ಜನರೇ ಬಾಂಡ್‌ಗಳನ್ನು ಕೊಂಡುಕೊಳ್ಳುತ್ತಾರೆ.

ಷೇರ್ಸ್‌ಗಳನ್ನು ಕೊಂಡುಕೊಳ್ಳುತ್ತಾರೆ ಅಥವಾ ಕಾಂಟ್ರಿಬ್ಯೂಷನ್ ಕೊಡುತ್ತಾರೆ. ಯುಕೆಪಿ ಭಾಗದಲ್ಲಿ ತಿರುಗಾಡಿ ನೋಡಿ ನೀವು. ಅಲ್ಲಿ ಜನರು ಹಣ ಕೊಡಲಿಕ್ಕೆ ತಯಾರಿದ್ದಾರೆ. ವಿಶ್ವಬ್ಯಾಂಕಿಗೆ ಏತಕ್ಕೆ ಹೋಗುತ್ತಾರೆ ಅವರು ಎಂದು ಹೇಳುತ್ತಾರೆ. ವಿಶ್ವಬ್ಯಾಂಕಿನವರು 26 ಕಂಡೀಷನ್ಸ್ ಹಾಕುತ್ತಾರೆ. ನಾವು ಹಣ ಕೊಡುತ್ತೇವೆ ಸರ್ಕಾರ ಏತಕ್ಕೆ ಉಪಯೋಗ ಮಾಡುವುದಿಲ್ಲವೆಂದು ಕೇಳುತ್ತಾರೆ. ನೂರರಲ್ಲಿ ತೊಂಭತ್ತು ಭಾಗ ಆಂಧ್ರಪ್ರದೇಶದವರು ಕಂಟ್ರಾಕ್ಟರುಗಳು ಇದ್ದಾರೆ. ಅವರು ಏತಕ್ಕೆ ಬರುತ್ತಾರೆಂದರೆ ಆಂಧ್ರಪ್ರದೇಶದವರಿಗೆ ನೀರಾವರಿ ವಿಷಯದಲ್ಲಿ ಎಷ್ಟು ಜಾಗೃತರಾಗಿದ್ದಾರೆ ಎಷ್ಟು ಮುಂದಾಲೋಚನೆಯುಳ್ಳವರಾಗಿದ್ದಾರೆ ಎಂಬುದೂ ಇದು ಇಡೀ ಭಾರತದೇಶಕ್ಕೆ ಗೊತ್ತಿದೆ. ತಮಗೆ ಮತ್ತು ಇಡೀ ಕರ್ನಾಟಕಕ್ಕೆ ಅಲ್ಲ. They have got a vested interest. ಅವರು ಏನು ಮಾಡುತ್ತಾರೆಂದರೆ ನಮ್ಮಲ್ಲಿ ಅಡ್ವಾನ್ಸ್ ತೆಗೆದುಕೊಳ್ಳುತ್ತಾರೆ ನಮ್ಮ ಇಂಜಿನಿಯರ್ ಕಡೆಯಿಂದ. ಎಲ್ಲಾ ಮೆಷಿನರಿ ಟ್ರ್ಯಾಲಿ ಪ್ರತಿಯೊಂದನ್ನು ಖರೀದಿ ಮಾಡುತ್ತಾರೆ. ಅವುಗಳನ್ನೆಲ್ಲಾ ಕಡೆಗೆ ಸಾಗಾಣಿಕೆ ಮಾಡುತ್ತಾರೆ. ಏಕೆಂದರೆ ತೆಲುಗು ಗಂಗಾ ಪ್ರಾಜೆಕ್ಟ್‌ನಲ್ಲಿ ಅವರೇ ಕಂಟ್ರಾಕ್ಟ್ ತೆಗೆದುಕೊಂಡಿರುತ್ತಾರೆ. ಇದು ಗ್ಲೋಬಲ್ ಕಂಟ್ರಾಕ್ಟ್ ಆಗಿದೆ. ಯುಕೆಪಿಯ ಜನರು ಏನು ಹೇಳುತ್ತಿದ್ದಾರೆಂದರೆ ನೀವು ಒಂದು ಏಜೆನ್ಸಿ ತಯಾರು ಮಾಡಿ; ಹಣ, ನಾವು ಹಣ ಕೊಡುತ್ತೇವೆಂದು ಹೇಳುತ್ತಾರೆ. ವಿಶ್ವಬ್ಯಾಂಕಿಗೆ ಹೋಗುವುದು ಬೇಡವೆಂದರು ಹೇಳುತ್ತಾರೆ. ನಮ್ಮಲ್ಲಿ 90 ಎಕರೆಗೆ ನೀರಾವರಿ ಮಾಡಲಿಕ್ಕೆ ಅನುಕೂಲ ಮಾಡಿಕೊಟ್ಟಿದ್ದಾರೆ. ಎರಡು–ಮೂರು ಎಕರೆ ಇಟ್ಟುಕೊಂಡಿರತಕ್ಕ ಒಬ್ಬ ಬಡ ರೈತ ಹರಿಜನ ರೈತ ಇವತ್ತು ಶ್ರೀಮಂತನಾಗಿದ್ದಾನೆ. ವರ್ಷಕ್ಕೆ ಎರಡು ಬೆಳೆ ತೆಗೆಯುತ್ತಾನೆ. ಅವನ ಇವತ್ತು ದುಡಿಯುತ್ತಿದ್ದಾನೆ. ಇನ್‌ವೆಸ್ಟ್ ಮಾಡುವುದು ಬೇಕಾಗಿಲ್ಲ. ಸ್ವತಃ ಆತನ ಭೂಮಿಯಲ್ಲಿ ಬೆಳೆ ಬೆಳೆಯುತ್ತಿದ್ದಾನೆ. ಅದಕ್ಕೆ ಅಷ್ಟು ರುಚಿ ಹತ್ತಿದೆ. ಸ್ವತಃ ನಾವೇ ರೊಕ್ಕ ಕೊಡುತ್ತೇವೆ. ಇವರು ವಿಶ್ವ ಬ್ಯಾಂಕಿಗೆ ಏತಕ್ಕೆ ಹೋಗುತ್ತಾರೆ ಅವರು 26 ಕಂಡೀಷನ್ಸ್‌ಗಳನ್ನು ಹಾಕುತ್ತಾರೆ, ಯೋಜನೆಗಳು ಟೈಮ್‌ಗೆ ಸರಿಯಾಗಿ ಮುಗಿಯುವುದಿಲ್ಲವೆಂದು ಜನರು ತಿಳಿದುಕೊಂಡು ಹೇಳುತ್ತಿದ್ದಾರೆ. ಈಗ ಮಾನ್ಯ ವೀರೇಂದ್ರಪಾಟೀಲ್‌ರವರು ಹೇಳಿದಂತೆ ಸರ್ಕಾರದಲ್ಲಿ ಎಷ್ಟು ಲೋಪದೋಷಗಳಿವೆಯೆಂದು ನಾನು ಹೇಳುತ್ತಿದ್ದೇನೆ. ಏತನೀರಾವರಿ ನಿಗಮವನ್ನು 1986ರಲ್ಲಿ ರಚನೆ ಮಾಡಲಾಯಿತು. ರಚನೆಯಾದ ಮೇಲೆ ಅದು ಕಂಪನಿ ಆಕ್ಟ್ ಪ್ರಕಾರ ರಿಜಿಸ್ಟರ್ ಆಗಬೇಕಾದರೆ ಒಂದು ವರ್ಷ ಹಿಡಿಯಿತು. ಆಕ್ಟ್ ಪಾಸ್ ಆದಮೇಲೆ ಎಷ್ಟೋ ಲೋಪದೋಷಗಳು ಇವೆ. ನಿಗಮವನ್ನು ನಬಾರ್ಡ್‌ನವರು ರೈತರಿಗೆ ಹಣ ಕೊಡುತ್ತಾರೆನ್ನುವ ಉದ್ದೇಶದಿಂದ ರಚನೆ ಮಾಡಿದ್ದೇವೆ. ನಬಾರ್ಡ್‌ನವರು ಬೇಗ ಸಾಲ ಕೊಡುತ್ತಾರೆಂದು ಒಳ್ಳೆಯ ಉದ್ದೇಶದಿಂದ ರಚನೆ ಮಾಡಿದ ಮೇಲೆ ನಮ್ಮ ನಿಯಮಾವಳಿಗಳು ಏನಿದ್ದವು ಅದನ್ನು ನಿಗಮದವರು ಕಾರ್ಯಗತ ಮಾಡುವುದು ಯಾವಾಗ ? 1991ನೇ ಇಸವಿ ಮೇ ತಿಂಗಳಿನಲ್ಲಿ ನಬಾರ್ಡ್‌ನವರು ಏನು ಸೂಚನೆ ಕೊಟ್ಟರು ಅದಕ್ಕನುಗುಣವಾಗಿ ನಾವು ಕಾನೂನು

ತಿದ್ದುಪಡಿ ಮಾಡಿದ್ದೇವೆ. ಅದು ಆದಮೇಲೆ ನಿಗಮಕ್ಕೆ ವೃಥಾ ಬೈಯುವುದರಲ್ಲಿ ಏನು ಅರ್ಥವಿದೆ ? ಅವರು ಕೆಲಸ ಮಾಡಲಿಲ್ಲವೆಂದರೆ ಏನು ಕೆಲಸ ಮಾಡಬೇಕು ? 1986ರಲ್ಲಿ ರಚನೆ ಆದದ್ದು ವಿಧಿಪೂರಕ ನಿಯಮಗಳು ತಿದ್ದುಪಡಿಯಾದದ್ದು ಅದು ಕಾರ್ಯಗತಕ್ಕೆ ಬಂದದ್ದು 19ನೇ ತಾರೀಖು ಮೇ 1991ರಲ್ಲಿ. ಅಂದರೆ ದೀಡ್ ವರ್ಷ ಆಯಿತು. ಈ ದೀಡ್ ವರ್ಷದಲ್ಲಿ ಕೂಡ ನಿಗಮ ಉತ್ತಮ ಕೆಲಸ ಮಾಡಿದೆ; 23 ಪ್ರಾಜೆಕ್ಟ್‌ಗಳಿಗೆ ಮಂಜೂರಾತಿಯನ್ನು ತೆಗೆದುಕೊಂಡಿದ್ದಾರೆ. 7 ಪ್ರಾಜೆಕ್ಟ್‌ಗಳಿಗೆ sanction is being awaited.. 1986ನೇ ಇಸವಿಯಿಂದ 1992ನೇ ಇಸವಿಯವರೆಗೆ ಇಷ್ಟು ವರ್ಷಗಳವರೆಗೆ ಎಷ್ಟು ಜನ ಮ್ಯಾನೇಜಿಂಗ್ ಡೈರೆಕ್ಟರ್‌ಗಳನ್ನು ಅಪಾಯಿಂಟ್ ಮಾಡಿದ್ದೀರಿ ತಾವು ?

ಆವರೇಜ್ 18 ಜನ ವ್ಯವಸ್ಥಾಪಕ ನಿರ್ದೇಶಕರುಗಳನ್ನು ಮಾಡಿದ್ದಾರೆ. ಈ ಆರು ವರ್ಷಗಳಲ್ಲಿ 18 ಜನ ವ್ಯವಸ್ಥಾಪಕ ನಿರ್ದೇಶಕರು ! ಇವರಲ್ಲಿ ಕೆಲವು ಜನ ಎಂಟು ದಿವಸ, ಹತ್ತು ದಿವಸ, ಹದಿನೈದು ದಿವಸ, ಒಬ್ಬರು ಇಂಜಿನಿಯರ್ ಮಾತ್ರ ಎಂ.ಡಿ. ಯಾಗಿ 15 ತಿಂಗಳು ಇದ್ದರು. ಇನ್ನಿಬ್ಬರು 10 ತಿಂಗಳು ಇದ್ದರು. ಆದರೆ ಎಂತಹ ಎಂ.ಡಿ.ಗಳು ಅವರು Executive Engineer Officiating or Incharge Chief Engineer... ಅವರಿಗೆ ಪೂರ್ಣವಾದ ಅಧಿಕಾರವೂ ಇಲ್ಲ, ಸಮಾನ ಹುದ್ದೆ ಕೂಡ ಇಲ್ಲ. ಪೂರ್ಣ ಅಧಿಕಾರ ಇಲ್ಲದವರು, ಸಮಾನ ಹುದ್ದೆ ಇಲ್ಲದವರು ಏಕೆಂದರೆ ಅದಕ್ಕೆ ಸಮಾನವಾದ ಹುದ್ದೆ ಎಂದರೆ ಚೀಫ್ ಇಂಜಿನಿಯರ್, ಅವರು ಯಾವ ನಿರ್ಣಯವನ್ನೂ ತೆಗೆದುಕೊಳ್ಳುವಹಾಗಿಲ್ಲ. ಇಷ್ಟಾದರೂ ಕೂಡ ಅವರು 404 ಪ್ರಾಜೆಕ್ಟ್‌ಗಳನ್ನು ಐಡೆಂಟಿಫೈ ಮಾಡಿದ್ದಾರೆ. ಕೃಷ್ಣಾ ಬೇಸಿನ್ ಬಗ್ಗೆ ನನಗೆ ಗೊತ್ತು. ಕಾವೇರಿ ಬೇಸಿನ್ ಬಗ್ಗೆ ಗೊತ್ತಿಲ್ಲ. ಈ ಸದನದ ಸಮಯ ಸ್ವಲ್ಪ ಹೋದರೂ ಪರವಾಗಿಲ್ಲ. ಏಕೆಂದರೆ ಇದು ಬಹಳ ಮಹತ್ವದ ವಿಷಯ. 404 ಯೋಜನೆಗಳನ್ನು ಐಡೆಂಟಿಫೈ ಮಾಡಿ ಸುಮಾರು 280 ಕೋಟಿ ಖರ್ಚುಮಾಡಿದರೆ ಮೂರು ಲಕ್ಷ ಎಕರೆ ಭೂಮಿಯನ್ನು ನೀರಾವರಿ ಮಾಡಬಹುದು ಎಂಬುದನ್ನು ವರದಿ ಮಾಡಿದ್ದಾರೆ. ನೀವು ಅವರಿಗೆ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್ಸ್ ಹುದ್ದೆ ಕೊಟ್ಟಿಲ್ಲ.

ಕಾವೇರಿಯಲ್ಲಿ ಮೂರು ವಿಭಾಗಗಳನ್ನು ಮಾಡಿದ್ದೀರಿ. ಕೃಷ್ಣಾಗೆ ಎರಡು ವಿಭಾಗ ಮಾಡಿದ್ದೀರಿ. ಆದರೆ ಕೃಷ್ಣಾದ್ದು ವ್ಯಾಪ್ತಿ 10 ಜಿಲ್ಲೆಗಳು. ಕಾವೇರಿಯ ವ್ಯಾಪ್ತಿ ಕೇವಲ ಐದು ಜಿಲ್ಲೆ. ಅದರ ಜಿಯಾಗ್ರಾಫಿಕಲ್ ಜ್ಯೂರಿಸ್ಡಿಕ್ಷನ್ ಕೇವಲ 17 ಪರ್ಸೆಂಟ್. ಆದರೆ ಕೃಷ್ಣಾದ್ದು ಜಿಯಾಗ್ರಫಿಕಲ್ ಜ್ಯೂರಿಸ್ಡಿಕ್ಷನ್ 69.7 ಪರ್ಸೆಂಟ್ ನೀವು ಏನು ಮಾಡಿದ್ದೀರಿ ? ಮೂರು ವಿಭಾಗವಾಗಿ ಕೊಟ್ಟರೂ ಕೂಡ ಆದರೆ ನೀವು ಏನು ಮಾಡಿದ್ದೀರಿ. ಮೂರು ವಿಭಾಗವಾಗಿ ಕೊಟ್ಟರೂ ಕೂಡ ಅಂಡರ್‌ಸ್ಟಾಫ್ ಮಾಡಿದ್ದೀರಿ. ಕಾವೇರಿಯಲ್ಲಿರುವುದು ಜಿಯಾಗ್ರಾಫಿಕಲ್ ಜ್ಯೂರಿಸ್ಡಿಕ್ಷನ್ ಕೇವಲ 17 ಪರ್ಸೆಂಟ್ ಮಾತ್ರ. ಆದರೆ ಇಲ್ಲಿ ಮೂರು ವಿಭಾಗ ಮಾಡಿ ಮತ್ತೆ ಯೋಜನೆ ಖರ್ಚು ಕೂಡ ಅದರ ಪ್ರಕಾರವೇ ಕೊಟ್ಟಿದ್ದೀರಿ. ಅಲ್ಲಿ ಇರತಕ್ಕಂಥ ಸಿಬ್ಬಂದಿವರ್ಗ ಖಾಯಂ ಆಗಿದ್ದಾರೆ. ಇಲ್ಲಿ ಮಾಡಿರತಕ್ಕಂಥ ಸಿಬ್ಬಂದಿ ಇನ್ನೂ ಖಾಯಂ ಆಗಿಲ್ಲ. ಇಷ್ಟೆಲ್ಲಾ ಅಡಚಣೆ ಇದ್ದರೂ ಕೂಡ 404 ಹೊಸ ಯೋಜನೆಗಳನ್ನು ಐಡೆಂಟಿಫೈ ಮಾಡಿ ಆ ನೀರನ್ನು ನಾವು ಟ್ಯಾಪ್ ಮಾಡಬಹುದು. ಏಕೆಂದರೆ ಮಾನ್ಯ ಉಪ ಮುಖ್ಯಮಂತ್ರಿಗಳು ಸ್ಪೀಕರ್ ಆಗಿದ್ದಾಗ ಎರಡು–ಮೂರು ಕಡೆ ಭಾಷಣ ಮಾಡಿದ್ದನ್ನು ನಾನು ಓದಿ ಸಂತೋಷಪಟ್ಟೆ. ಅವರೂ ಕೂಡ ಇದನ್ನು ವಾಸ್ತವವಾಗಿ ಕಂಡುಹಿಡಿದು, 99ರವರೆಗೂ ನಾವು ಇದನ್ನು ಉಪಯೋಗ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೆ ಎಲ್ಲೆಲ್ಲಿ ನೀರು ಇದೆ ಅದು ಸ್ಟ್ರೀಮ್ಸ್ ಆಗಲಿ, ಸಣ್ಣ ನದಿಯಾಗಲೀ, ದೊಡ್ಡ ನದಿ ಇರಲಿ, ಅಲ್ಲಲ್ಲಿ ಬ್ಯಾರೇಜ್, ಸಣ್ಣ ಸಣ್ಣ ಅಣೆಕಟ್ಟು ಕಟ್ಟಿ ಅದರಿಂದ ಉಪಯೋಗ ಮಾಡತಕ್ಕಂಥ ಕೆಲಸ ಮಾಡಬೇಕು ಎಂದು ಅವರೇ ಭಾಷಣ ಮಾಡಿದ್ದನ್ನು ನಾನು ಓದಿದ್ದೇನೆ. ಅವರಿಗೆ ಕೂಡ ಇದನ್ನು ನೆನಪು ಕೊಡುತ್ತಿದ್ದೇನೆ. ಅದು ನಿಜ, ಏಕೆಂದರೆ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳಿಗೆ ಲ್ಯಾಂಡ್ ಅಕ್ವಿಸಿಷನ್ ಪ್ರಾಬ್ಲಮ್ ಬರುತ್ತದೆ. ಈ ಲ್ಯಾಂಡ್ ಅಕ್ವಿಸಿಷನ್

ಪ್ರಾಬ್ಲಮ್ ನಮ್ಮ ಸತ್ವವನ್ನು ಹೀರಿಬಿಡುತ್ತದೆ. ಇಷ್ಟೆಲ್ಲಾ ಅನುಭವ ಬಂದಮೇಲೆ ಏಕೆ ಡೆಪ್ಯೂಟಿ ಕಮೀಷನರ್‌ಗೆ ಔಟ್‌ರೇಟ್ ಪರ್ಚೇಸ್‌ಗೆ ಪವರ್ಸ್ ಕೊಡಬಾರದು ? ಈ ಔಟ್‌ರೇಟ್ ಪರ್ಚೇಸ್ ಮಾಡಬೇಕಾದರೆ ಹಣ ಖರ್ಚು ಮಾಡಬೇಕು. ಅದಕ್ಕಿಂತ ಡಬಲ್ ಖರ್ಚನ್ನು ಈಗ ಮಾಡುತ್ತಿದ್ದೇವೆ. In terms of not only paying the compensation but in terms of the escalation of the cost for clearing the project. why can't you make an amendment to the Land Acquisition Act? You empower the divisional Commissioner to purchase the land outright..

ಇದಕ್ಕೆ ಒಂದು ಲೋಕಲ್ ಕಮಿಟಿ ಮಾಡಿ. ಪ್ರತಿಯೊಂದು ವಿಧಾನಸೌಧಕ್ಕೆ ಏಕೆ ಬರಬೇಕು ? ಸ್ಥಳೀಯವಾಗಿ ಹೆಚ್ಚು ಅಧಿಕಾರ ಕೊಡಬೇಕೆಂಬ ಉದ್ದೇಶದಿಂದ ನಾವು ನಿಗಮವನ್ನು ಸ್ಥಾಪನೆ ಮಾಡಿದ್ದುದು. ಈ ಕಾರಣಕ್ಕೇ ಕೃಷ್ಣ ಜಲಾನಯನ ಅಭಿವೃದ್ಧಿ ಪ್ರಾಧಿಕಾರ ಮಾಡಿದ್ದೇವೆ. ಅದು ಇಲ್ಲಿಂದ ಪಾಸ್ ಆಗಿ ರಾಷ್ಟ್ರಾಧ್ಯಕ್ಷರ ಒಪ್ಪಿಗೆಗೆ ಕಳಿಸಿದ್ದುದು ಇನ್ನೂ ಬಂದಿಲ್ಲ. ಇದು ಒಂದಲ್ಲ ಇಂತಹ ಎರಡು ಸ್ವಾಯತ್ತ ಸಂಸ್ಥೆಗಳನ್ನು ನಿರ್ಮಾಣ ಮಾಡಿ ಅದರ ಮುಖಾಂತರ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲವೆಂದರೆ ಹೇಗೆ ? ನಾವು ಶಾಸನ ಮಾಡುತ್ತೇವೆ, ಅದರಲ್ಲಿ ವಿಶ್ವಾಸ ಇಡುವುದಿಲ್ಲ. ಒಂದು ಕೈಯಲ್ಲಿ ಕೊಡುವುದು, ಇನ್ನೊಂದು ಕೈಯಿಂದ ಕಸಿಯುವುದು, ಸುದೈವದಿಂದ ನಮಗೆ ಹಿರಿಯ ಮತ್ತು ಬಹಳ ವಿವೇಚನೆ ಶಕ್ತಿಯುಳ್ಳಂಥ ಒಬ್ಬ ಧುರೀಣರು ಸಿಕ್ಕಿದ್ದಾರೆ. ನೀರಾವರಿ ಮತ್ತು ಲೋಕೋಪಯೋಗಿ ಖಾತೆಗಳಿಗೆ ಇವರಿಬ್ಬರೂ ಖಾತೆಗಳಿಗಷ್ಟೇ ಮುಖ್ಯವಲ್ಲ, ಇಡೀ ಕ್ಯಾಬಿನೇಟ್‌ನಲ್ಲಿ ಕೂಡ ಮಹತ್ವದ ವ್ಯಕ್ತಿಗಳಾಗಿದ್ದಾರೆ. ಈ ಸದನದ ಎಲ್ಲರ ವಿಶ್ವಾಸಕ್ಕೆ ಪಾತ್ರರಾಗಿದ್ದಾರೆ. ಅವರಾದರೂ ಯಾವ ರೀತಿ ಆಲೋಚನೆ ಮಾಡಿ ಇದಕ್ಕೆ ಒಂದು ಪರಿಹಾರ ಕಂಡುಹಿಡಿಯುವ ವಿಚಾರ ಮಾಡುತ್ತಾರೆ ಎಂಬುದು ಅವರಿಗೇ ಬಿಟ್ಟಿದ್ದುದು. ಆದರೆ ಅವರಿಗೆ ಸಂಪೂರ್ಣ ಸಹಕಾರ ಕೊಡತಕ್ಕಂಥಾದ್ದು ನಮ್ಮ ಕರ್ತವ್ಯ ಆದ್ದರಿಂದ ನಾವು ಶಾಸಕರು ಇನ್ನುಮುಂದೆ ಸುಮ್ಮನೆ ಕೂಡುವ ಹಾಗಿಲ್ಲ. ನಾವು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡುತ್ತಿದ್ದೇವೆ. ಸರ್ಕಾರಕ್ಕೆ ಇದು ಕೊನೆಯ ಎಚ್ಚರಿಕೆ. ನಾವು ಮೂರು ಜಿಲ್ಲೆಯವರು ಏನಿದ್ದೇವೆ, ಗುಲ್ಬರ್ಗಾ, ಬಿಜಾಪುರ, ಮತ್ತು ರಾಯಚೂರು, ನಾವು ಇನ್ನು ಮುಂದೆ ಸುಮ್ಮನೆ ಕೂಡುವುದಿಲ್ಲ. ಸರ್ಕಾರದ ಮುಂದೆ ಪಿಕೆಟಿಂಗ್ ಮಾಡಬೇಕಾಗುತ್ತದೆ, ವಿಧಾನಸೌಧದ ಮುಂದೆ ಪಿಕೆಟಿಂಗ್ ಮಾಡಬೇಕಾಗುತ್ತದೆ. ಇದು ಇನ್ನು ಮುಂದೆ ಯಾವ ಸ್ವರೂಪವನ್ನು ತೆಗೆದುಕೊಳ್ಳುತ್ತದೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಇದಕ್ಕೆ ಈ ವರ್ಷ 203 ಕೋಟಿ ಇಟ್ಟಿರುವುದು ಏನೂ ಸಾಲದು. ನೀವು 500 ಕೋಟಿಯನ್ನು ಈ ವರ್ಷ ಖರ್ಚುಮಾಡಲೇಬೇಕು. ಅದನ್ನು ಖರ್ಚು ಮಾಡದಿದ್ದರೆ ಅದೇ ಹಿಂದಿನ ಧಾಟಿಯಲ್ಲಿ ಹೋದ ಹಾಗೆ ಆಗುತ್ತದೆ.

ಅದಕ್ಕಾಗಿ ನಾನು ಅತ್ಯಂತ ಕಳಕಳಿಯಿಂದ ಕೇಳುತ್ತಿದ್ದೇನೆ. ನನ್ನ ಹತ್ತಿರ ಸಾಕಷ್ಟು ಮೆಟೀರಿಯಲ್ ಇದೆ, ಆದರೆ ಸಮಯ ಇಲ್ಲ. ತಾವೂ ಸಹ ಉದಾರಬುದ್ಧಿಯಿಂದ ಇಷ್ಟು ಹೊತ್ತು ಮಾತನಾಡಲು ಅನುಕೂಲ ಮಾಡಿಕೊಟ್ಟಿದ್ದೀರಿ. ವಿದ್ಯುಚ್ಛಕ್ತಿ ಮತ್ತು ಲೋಕೋಪಯೋಗಿ ಇಲಾಖೆಯ ಬಗ್ಗೆ ಅನೇಕ ವಿಚಾರಗಳನ್ನು ಮಾತನಾಡಬಹುದಿತ್ತು. ನಮ್ಮ ಮಾನ್ಯ ಸದಸ್ಯರಾದ ಮೇಟಿಯವರು ಬಹಳ ಚೆನ್ನಾಗಿ ಹೇಳಿದರು. ಎಲ್ಲರೂ ಕೂಡ ತಮ್ಮ ತಮ್ಮ ಕ್ಷೇತ್ರಗಳ ಸಮಸ್ಯೆಗಳ ಬಗ್ಗೆ ಹೇಳಿದರು. ಅದೇರೀತಿ ನಾನೂ ಕೂಡ ಹೇಳುತ್ತಿದ್ದೇನೆ. ನಮ್ಮ ಯಾದ್‌ಗಿರಿ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆಯಲ್ಲಿ ಅತ್ಯಂತ ದೊಡ್ಡ ತಾಲ್ಲೂಕು, ಇಲ್ಲಿ ಎರಡು ವಿಧಾನ ಸಭಾ ಕ್ಷೇತ್ರಗಳಿವೆ. ಇಲ್ಲಿ 110 ಕೆವಿ. ಮಂಜೂರಾಗಿ, ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಆಗಿ ಎರಡು ವರ್ಷವಾಯಿತು. ಇವತ್ತಿನವರೆಗೆ ಅಸ್ತಿಭಾರ ಹಾಕಿ ಎಂದು ಹೇಳಿದರೆ, ಯಾರು ಅಸ್ತಿಭಾರ ಹಾಕುವುದಕ್ಕೆ ತಯಾರಿಲ್ಲ. ಆಡಳಿತಾತ್ಮಕ ಮಂಜೂರಾತಿ ಮತ್ತು ತಾಂತ್ರಿಕ

ಮಂಜೂರಾತಿ ಸಿಕ್ಕಿದೆ. ಟೆಂಡರ್ ಕರೆಯುತ್ತೇವೆಂದು ಎರಡು ವರ್ಷವಾಯಿತು. ಇನ್ನೂ ಟೆಂಡರ್ ಸ್ಟೇಜ್‌ನಲ್ಲಿಯೇ ಇದೆ.

ಒಬ್ಬ ಮಾನ್ಯ ಸದಸ್ಯರು:– ಅಡಿಗಲ್ಲು ಹಾಕುವುದೇ ಅಥವಾ ಕಲ್ಲು ಹಾಕುವುದೇ ಅದಕ್ಕೆ ?

ಡಾ॥ಎ.ಬಿ. ಮಲಕರೆಡ್ಡಿ:– ಕಲ್ಲು ಹಾಕುವುದು, ಇದೊಂದು ನನ್ನ ಮತಕ್ಷೇತ್ರದಲ್ಲಿ ಆಗಬೇಕಾಗಿದೆ. ಎರಡು ಬರಬೇಕಾಗಿತ್ತು. ಆದರೆ ಬಂದಿಲ್ಲ. ವಡಿಗೇರಾದಲ್ಲಿ ಇನ್ನೊಂದು ಸ್ಯಾಂಕ್ಷನ್ ಆಗಿದೆ. ಇವಕ್ಕೆ ಟೆಂಡರ್ ಕೊಟ್ಟು, ತಕ್ಷಣ ಕಾರ್ಯಕ್ರಮ ಪ್ರಾರಂಭ ಮಾಡಬೇಕೆಂದು ತಮ್ಮ ಮುಖಾಂತರ, ಸರ್ಕಾರಕ್ಕೆ ಕಳಕಳಿಯಿಂದ ವಿನಂತಿ ಮಾಡಿಕೊಂಡು, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಮಹದೇವ್ (ನಂಜನಗೂಡು):– ಸನ್ಮಾನ್ಯ ಅಧ್ಯಕ್ಷರೇ, ಇಂದಿನ ಬೇಡಿಕೆಗಳಿಗೆ ಬೆಂಬಲ ವ್ಯಕ್ತಪಡಿಸುತ್ತಾ, ಕಬಿನಿ ಎರಡನೇ ಹಂತದ ಯೋಜನೆಗೆ ನಾನು ಒತ್ತಾಯ ಮಾಡಬೇಕಾಗಿದೆ. ಮೊದಲನೇ ಹಂತದ ಯೋಜನೆ ಮುಗಿಯುತ್ತಾ ಬಂದಿದೆ. ಸುಮಾರು 90 ಪರ್ಸೆಂಟ್ ಕೆಲಸ ಮುಗಿದಿದೆ, ಇನ್ನು 10 ಪರ್ಸೆಂಟ್ ಕೆಲಸ ಮುಗಿಯಲು, ಅಲ್ಲಿಗೆ ಸಾಕಾದಷ್ಟು ಹಣವನ್ನು ಬಿಡುಗಡೆ ಮಾಡಿಲ್ಲ. ಸರ್ಕಾರದವರು, ಹಣ ಬಿಡುಗಡೆ ಮಾಡಿದರೆ, ಜಾಗ್ರತೆಯಾಗಿ, ಎರಡನೇ ಹಂತದ ಕೆಲಸಗಳೂ ಮುಗಿಯುತ್ತವೆ. ಇದರಲ್ಲಿ ನಮ್ಮ ಸಮಸ್ಯೆ ಏನಾಗಿದೆ ಎಂದರೆ, ಮೊದಲನೇ ಹಂತದ ಕೆಲಸ ಬಹಳ ಮಂದಗತಿಯಿಂದ ನಡೆಯುತ್ತಿದೆ. ಎರಡನೇ ಹಂತದ ಕೆಲಸ ತೆಗೆದುಕೊಳ್ಳಬೇಕೆಂದರೆ, ಸಾಮಾನ್ಯವಾಗಿ 390–400ಕೋಟಿಯಷ್ಟು ಹಣ ಬೇಕಾಗುತ್ತದೆ. ಕಾವೇರಿ ಟ್ರಿಬ್ಯೂನಲ್ ಡಿಸ್ ಪ್ಯೂಟ್ ಇರುವುದರಿಂದ, ಈ ಬಗ್ಗೆ ವಿವರವಾಗಿ ಚರ್ಚೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ತೀರಾ ಆಳವಾಗಿ ಹೋಯಿತೆಂದರೆ, ಸರಿ ಕಾಣುವುದಿಲ್ಲವೆಂದು ನನ್ನ ಭಾವನೆ. ಆದರೆ, ಔಟ್‌ಲೈನ್ ಒಂದನ್ನು ತಮ್ಮ ಮುಖಾಂತರ, ಸರ್ಕಾರದ ಗಮನ ಸೆಳೆಯಲಿಚ್ಛಿಸುತ್ತೇನೆ. ನಮ್ಮಲ್ಲಿ ಕಪಿಲಾ ನದಿ ಇದೆ. ಈ ಕಪಿಲಾ ನದಿಯಿಂದ ನಾವು ಏನಾದರೂ ಉಪಯೋಗ ಪಡೆದುಕೊಳ್ಳಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ತಮಿಳುನಾಡು ಮೆಟ್ಟೂರು ಡ್ಯಾಮ್ ಇದೆ. ನಮ್ಮಲ್ಲಿ ನಂಜನಗೂಡು ಹತ್ತಿರ, ಹೆಗ್ಗಡದೇವನಕೋಟೆಯಲ್ಲಿ ಕಬಿನಿ ಡ್ಯಾಮ್ ಅಣೆಕಟ್ಟನ್ನು ಕಟ್ಟಿದ್ದಾರೆ. ಬಹುಶಃ ಈ ಅಣೆಕಟ್ಟು ಕಟ್ಟಿದ್ದಾರೆ ಎನ್ನುವ ಹೆಮ್ಮೆ ನಮಗಿದೆಯೇ ಹೊರತು ಬಹುಶಃ ಇದರ ಹೆಚ್ಚಿಗೆ ಉಪಯೋಗವನ್ನು ಮೆಟ್ಟೂರು ಡ್ಯಾಮಿನವರು ಪಡೆಯುತ್ತಿದ್ದಾರೆ. ನಾವು ವಾಟರ್ ಸ್ಟೋರೇಜ್ ಮಾಡಿ, ಆ ನೀರನ್ನು ಮೆಟ್ಟೂರು ಡ್ಯಾಮಿಗೆ ಬಿಡುತ್ತಿದ್ದೇವೆ. ಸ್ವಾಭಾವಿಕವಾಗಿ ಹೋಗತಕ್ಕ ನೀರು ಅಲ್ಲಿ ಸ್ಟೋರೇಜ್ ಮಾಡಿ, ಹೆಚ್ಚಿಗೆ ನೀರನ್ನು ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಎಷ್ಟು ನೀರು ಇಟ್ಟುಕೊಳ್ಳಬೇಕೋ ಅಷ್ಟು ನೀರು ಇಟ್ಟುಕೊಂಡು, ಬಾಕಿ ನೀರನ್ನು, ಎಲ್ಲವನ್ನೂ ಉಪಯೋಗ ಮಾಡಿಕೊಳ್ಳುವುದಕ್ಕಾಗಿಲ್ಲ. ಈ ನೀರು ಸೀದಾ ಮೆಟ್ಟೂರು ಡ್ಯಾಮಿಗೆ ಹೋಗಬೇಕಾಗಿದೆ. ತಮಿಳುನಾಡು ಸರ್ಕಾರದವರು ಬಹಳ ವರ್ಷಗಳಿಂದ, ಬಹಳ ತ್ಯಾಗ ಮಾಡಿಕೊಂಡು ಬಂದಿದ್ದಾರೆ. ಈ ತಮಿಳುನಾಡು ಸರ್ಕಾರದ ಮೆಟ್ಟೂರು ಡ್ಯಾಮ್ ವತಿಯಿಂದ ಬರತಕ್ಕ ಅಚ್ಚುಕಟ್ಟು ಪ್ರದೇಶ ಯಾವುದೂ ಅಚ್ಚುಕಟ್ಟು ಇಲ್ಲದೇ ಇದ್ದಂಥ ಪ್ರದೇಶವನ್ನು ಅವರು ಬಿಟ್ಟಿಲ್ಲ. ಸೆಂಟ್ರಲ್ ಗವರ್ನಮೆಂಟಿನಿಂದ ಹಣದ ಸಹಾಯವನ್ನೂ ಅವರು ಪಡೆದುಕೊಂಡಿದ್ದಾರೆ. ರಾಜ್ಯಸರ್ಕಾರದ ಹಣವನ್ನೂ ಉಪಯೋಗಿಸಿಕೊಂಡಿದ್ದಾರೆ. ಸೆಂಟ್ರಲ್ ಗವರ್ನಮೆಂಟ್ ಯೋಜನೆಯನ್ನೂ ಉಪಯೋಗಿಸಿಕೊಂಡಿದ್ದಾರೆ. ಅಲ್ಲಿ, ಅವರು ಅಚ್ಚುಕಟ್ಟು ಅಲ್ಲದಿರುವಂಥ ಯಾವೊಂದು ಪ್ರದೇಶವನ್ನೂ ಬಿಟ್ಟಿಲ್ಲ. ನಮ್ಮ ಕಪಿಲಾ ನೀರಿನಿಂದ ಅವರು ಏನೇನು ಮಾಡಿಕೊಳ್ಳಬಹುದೋ ಆ ಎಲ್ಲಾ ಅನುಕೂಲವನ್ನೂ ಅವರು ಪಡೆದುಕೊಂಡಿದ್ದಾರೆ. ಆದರೆ, ನಾವು ಕಪಿಲಾ ನದಿಯಿಂದ ಏನು ಅನುಕೂಲ ಪಡೆಯಬಹುದೋ ಆ ಅನುಕೂಲವನ್ನು ಸಾಕಾದಷ್ಟು ರೀತಿಯಲ್ಲಿ ಕರ್ನಾಟಕ ಸರ್ಕಾರ ಉಪಯೋಗ ಮಾಡಿಕೊಂಡಿಲ್ಲ. ಇವತ್ತು ಅನ್ಯಾಯವಾಗಿರುವುದು

ನಮಗೆ ಹೊರತು, ತಮಿಳುನಾಡಿನವರಿಗೇನೂ ಆಗಿಲ್ಲ. ಡ್ಯಾಮ್ ಕಟ್ಟಿದ್ದೇವೆ, ಆ ಡ್ಯಾಮ್ ಸಾಮಾನ್ಯವಾಗಿ ಒಂದನೇ ಹಂತಕ್ಕೆ ಬಂದಿದೆ. ಎರಡನೇ ಹಂತದಲ್ಲಿ ಏನಾಗಿದೆ ಎಂದರೆ, ಇದಕ್ಕೆ 5–6 ತಾಲ್ಲೂಕುಗಳು ಸೇರುತ್ತವೆ. ಇಲ್ಲಿ ರಾಯಚೂರು, ಗುಲ್ಬರ್ಗಾ ಪರಿಸ್ಥಿತಿ ಇದೆ. ಚಾಮರಾಜನಗರ, ನಂಜನಗೂಡು, ಗುಂಡ್ಲುಪೇಟೆ. ಯಳಂದೂರು, ಕೊಳ್ಳೆಗಾಲ ಹೀಗೆ 7–8 ತಾಲ್ಲೂಕುಗಳಲ್ಲಿ ಇರತಕ್ಕ ಜನ. ಮಳೆ ಆಶ್ರಯದಲ್ಲಿ ಜೀವನ ಮಾಡತಕ್ಕ ರೈತರು. ಅಲ್ಲಿ ಸಾಮಾನ್ಯವಾಗಿ ಸಣ್ಣ ರೈತರು, ಅತಿ ಸಣ್ಣ ರೈತರು, ಮತ್ತು ಮಧ್ಯಮ ವರ್ಗದ ರೈತರು ಜಾಸ್ತಿ ಇದ್ದಾರೆಯೇ ಹೊರತು, ಬಹುಶಃ ಯಾರೂ ಉತ್ತಮವಾದ ರೈತರು ಇಲ್ಲ.

ಒಂದು ಸಲಹೆಯನ್ನು ಸರ್ಕಾರಕ್ಕೆ ನಾನು ಕಳಕಳಿಯಿಂದ ಕೊಡಲಿಕ್ಕೆ ಇಚ್ಛೆಪಡುತ್ತೇನೆ. ನಮ್ಮಲ್ಲಿ ಕಬಿನಿ ಡ್ಯಾಮ್ ಮತ್ತು ನುಗು ಡ್ಯಾಮ್ ಅಂತ ಇದೆ. ಈ ನುಗೂ ಡ್ಯಾಮ್ ತಾಂತ್ರಿಕ ಇಲಾಖೆಯವರಿಗೆ ಗೊತ್ತಿದೆ. ಸರ್ಕಾರಕ್ಕೂ ಗೊತ್ತಿದೆ. ಮಳೆ ಆಶ್ರಯದಿಂದಲೇ ಈ ಡ್ಯಾಮ್ ತುಂಬಬೇಕು. ಇದಕ್ಕೆ ಯಾವುದೂ ಇನ್‌ಫ್ಲೋ ಪರ್ಮನೆಂಟ್ ಆಗಿ ಬರತಕ್ಕಂಥ ರಿಸೋರ್ಸ್ ಇಲ್ಲ. ಆ ನುಗೂ ಡ್ಯಾಮ್ ಕಟ್ಟಿ ಬಹುಶಃ ಸುಮಾರು 28 ಸಾವಿರ ಎಕರೆ ಅಚ್ಚುಕಟ್ಟು ಪ್ರದೇಶದ ಜನರು ಸಫರ್ ಮಾಡುತ್ತಿದ್ದಾರೆ. ಏಕೆಂದರೆ ಆ ಡ್ಯಾಮ್ ಆಶ್ರಯದಲ್ಲಿ ನೀರು ಪಡೆದುಕೊಂಡು ಅಚ್ಚುಕಟ್ಟು ಪ್ರದೇಶದಲ್ಲಿ ಇರಿಗೇಷನ್ ಮಾಡಿಕೊಳ್ಳೋಣ ಅಂತ ಇದ್ದರೆ ಅದು ಸಾಧ್ಯವಾಗುತ್ತಿಲ್ಲ. ಆ ನುಗೂ ಡ್ಯಾಮ್‌ಗೆ ಸಕಾಲದಲ್ಲಿ ನೀರು ಬರುತ್ತಿಲ್ಲ. ಬಂದರೂ ಕೂಡ ಉಪಯೋಗವಾಗುವುದಿಲ್ಲ. ರೈತರು ಗದ್ದೆ ವಗೈರೆ ಮಾಡಿಕೊಳ್ಳುವುದಕ್ಕಾಗುವುದಿಲ್ಲ. ವಾಟರ್ ರೇಟ್ ತಪ್ಪಿಸಿಕೊಳ್ಳುವುದಕ್ಕೂ ಆಗುವುದಿಲ್ಲ. ಏತಕ್ಕೆಂದರೆ ನುಗು ಅಚ್ಚುಕಟ್ಟು ಪ್ರದೇಶಕ್ಕೆ ಬಂದು ಬಿಟ್ಟಿದೆ. ಟೋಟಲಿ ಈ ನುಗು ಡ್ಯಾಮ್ ಫೈಲ್ಯೂರ್ ಆಗಿದೆ. ನಾನು ಒಂದು ಸಲಹೆಯನ್ನು ಸರ್ಕಾರಕ್ಕೆ ತಮ್ಮ ಮುಖಾಂತರ ಮಾಡುತ್ತೇನೆ. ಮನವಿಯಗಳನ್ನು ನಾನು ಮುಖ್ಯಮಂತ್ರಿಗಳಿಗೆ ಕೊಟ್ಟಿದ್ದೇವೆ. ಹಿಂದಿನ ಮುಖ್ಯಮಂತ್ರಿಗಳಿಗೂ ಕೊಟ್ಟಿದ್ದೇನೆ. ಈಗಿನ ಮುಖ್ಯಮಂತ್ರಿಗಳಿಗೆ ಕೊಡುತ್ತಿದ್ದೇನೆ. ಅದು ಕಾರ್ಯಗತ ಆಗುವ ತನಕ ನಾನಂತೂ ಈ ಹೋರಾಟ ಬಿಡುವುದಿಲ್ಲ. ಕಬಿನಿ ಜಲಾಶಯದಿಂದ ನುಗು ಜಲಾಶಯಕ್ಕೆ ಒಂದು ಲಿಫ್ಟ್‌ಇರಿಗೇಷನ್ ಮಾಡಿಕೊಟ್ಟರೆ ಒಳ್ಳೆಯದು. ಇದರಿಂದ ಈ ನುಗು ಜಲಾಶಯದಿಂದ ಯಾವ ಯಾವ ಅಚ್ಚುಕಟ್ಟು ಪ್ರದೇಶ ಬರುತ್ತದೆ ಅದರಲ್ಲಿ 10–15 ಸಾವಿರ ಎಕರೆ ಪ್ರದೇಶದ ರೈತರಿಗೆ ಅನುಕೂಲವಾಗುತ್ತದೆ. ಕಬಿನಿ ಜಲಾಶಯದಿಂದ ನುಗು ಜಲಾಶಯಕ್ಕೆ ಏತ ನೀರಾವರಿ ವ್ಯವಸ್ಥೆ ಕೂಡಲೇ ಮಾಡಿ ಕೊಡಬೇಕು. ಇದು ಬಹಳ ಅಗತ್ಯವಾದ ವಿಚಾರ. ಇವತ್ತು ಅಲ್ಲಿನ ರೈತರು ಕಣ್ಣೀರಿನಲ್ಲಿ ಕೈತೊಳೆಯುತ್ತಿದ್ದಾರೆ. ಬೆಳೆ ಇಲ್ಲದೆ ಸಾಲಗಾರರಾಗಿದ್ದಾರೆ. ವಾಟರ್ ರೇಟ್ ಕಟ್ಟದೇ ಇರತಕ್ಕಂಥ ಪರಿಸ್ಥಿತಿ ಇದೆ. ಆ ನುಗು ಡ್ಯಾಮ್ ತುಂಬದೇ ಇರತಕ್ಕಂಥದ್ದು ಪರಿಸ್ಥಿತಿ ಇದೆ. ಇದಕ್ಕೆ ಸಲ್ಯೂಷನ್ ಏನಾದರೂ ಮಾಡಬೇಕು. ಈ ನೀರಾವರಿಗೆ ಖರ್ಚುಮಾಡತಕ್ಕಂಥ ಹಣ ಸದುಪಯೋಗವಾಗಬೇಕಾದರೆ ಕಬಿನಿ ಡ್ಯಾಮ್‌ನಿಂದ ನೂಗು ಡ್ಯಾಮ್‌ಗೆ ವ್ಯವಸ್ಥೆ ಮಾಡಿ ಕೊಟ್ಟರೆ, ಏತ ನೀರಾವರಿಯಿಂದ ಅನುಕೂಲವಾಗುತ್ತದೆ. ಬಹುಶಃ ಅಲ್ಲಿ ಸುಮಾರು 14 ಸಾವಿರ ಎಕರೆ ಪ್ರದೇಶ ನೀರಾವರಿಯಾಗುತ್ತದೆ. ನೂಗು ಅಚ್ಚುಕಟ್ಟು ಪ್ರದೇಶದಲ್ಲಿ 14 ಸಾವಿರ ಎಕರೆ ನೀರು ಸಾಲದೆ ನಿಂತಿದೆ. ಸಮಸ್ಯೆ ಇದೆ. ಅಲ್ಲಿ ಇವತ್ತು ಪೂರ್ಣ ಪ್ರಮಾಣದಲ್ಲಿ ಭತ್ತ ಬೆಳೆಯುವುದಕ್ಕಾಗುವುದಿಲ್ಲ ಅಂತಹ ಪರಿಸ್ಥಿತಿಯಲ್ಲಿ 14 ಸಾವಿರ ಅಚ್ಚುಕಟ್ಟು ಪ್ರದೇಶದ ರೈತರು ಬಹಳ ತೊಂದರೆ ಪಡುತ್ತಿದ್ದಾರೆ. ಈ ತೊಂದರೆಯನ್ನು ನೀಗಿಸಲು ಕಬಿನಿ ಜಲಾಶಯದಿಂದ ಏತ ನೀರಾವರಿ ಯೋಜನೆ ಮಾಡಿ ಕೊಟ್ಟರೆ ಅನುಕೂಲವಾಗುತ್ತದೆ. ಏಕೆಂದರೆ ಅಲ್ಲಿ ದೊಡ್ಡಸಾಗರ ಕೆರೆ ಇದೆ. ಆ ಯೋಜನೆ ತೆಗೆದುಕೊಳ್ಳಬೇಕಾಗಿತ್ತು. ಕಬಿನಿ ಎರಡನೇ ಹಂತದ ಯೋಜನೆಯನ್ನು ತೆಗೆದುಕೊಂಡಿದ್ದಾರೆ. ಕಬಿನಿ ಎರಡನೇ ಹಂತ ತೆಗೆದುಕೊಳ್ಳಬೇಕಾದರೆ ಕಾವೇರಿ ಟ್ರಿಬ್ಯೂನಲ್ ವಗೈರೆ ಇದೆಲ್ಲಾ ಮುಗಿಯಬೇಕು. ಅದು ಬಹಳ ಕಷ್ಟವಾಗುತ್ತದೆ. ಅದಕ್ಕೆ ನಮಗೆ ಸ್ವಲ್ಪ ರಿಲೀಫ್ ಕೊಡಬೇಕು.

ಇವೆಲ್ಲಾ ನಮ್ಮ ಕ್ಷೇತ್ರಕ್ಕೆ ಬರುತ್ತವೆ. ಆ ರಿಲೀಫ್ ಸಿಗಬೇಕಾದರೆ ಇವತ್ತಿನ ದಿವಸ ಕಬಿನಿ ಡ್ಯಾಮ್‌ನಿಂದ ಈ ಡ್ಯಾಮ್‌ಗೆ ಏತನೀರಾವರಿ ಯೋಜನೆ ಮಾಡಿಕೊಟ್ಟರೆ 14 ಸಾವಿರ ಎಕರೆ ಪ್ರದೇಶದ ಜನರಿಗೆ ಇವತ್ತು ಅನುಕೂಲವಾಗುತ್ತದೆ. ಅದನ್ನು ಮಾಡಿಕೊಡಬೇಕೆಂದು ನಾನು ತಮ್ಮನ್ನು ಒತ್ತಾಯ ಮಾಡುತ್ತೇನೆ ಮತ್ತು ಕಬಿನಿ ಜಲಾಶಯದಿಂದ 20 ಮೆಗಾವಾಟ್ಸ್ ವಿದ್ಯುಚ್ಛಕ್ತಿ ಉತ್ಪಾದನೆ ಮಾಡುವುದಕ್ಕೆ ಅನುಕೂಲವಾಗುತ್ತದೆಂದು ನಾನು ಸರ್ಕಾರಕ್ಕೆ ತಿಳಿಸಲು ಇಷ್ಟಪಡುತ್ತೇನೆ. ಇದನ್ನು ಸಹ ತಾವು ಪರಿಶೀಲನೆ ಮಾಡಬೇಕು; ಮತ್ತೆ ನಮ್ಮಲ್ಲಿ ಹುಲ್ಲಹಳ್ಳಿ ರಾಮಪುರ ಚಾನಲ್ ಅಂತ ಇದೆ. ಅದು ನೂರಾರು ವರ್ಷಗಳ ಚಾನಲ್ಸ್ ಅವು ಚಾನಲ್ಸ್‌ಗಳೆಲ್ಲಾ ಇವತ್ತು ಕಿತ್ತು ಹೋಗಿದೆ. ರೈತರು ಓಡಾಡುವುದಕ್ಕೆ ಫುಟ್ ಬ್ರಿಡ್ಜ್‌ಗಳಿದ್ದು, ಚಾನಲ್ ಪೂರ್ಣ ಹಾಳಾಗಿದೆ. ಜನತಾ ಸರ್ಕಾರದ ಕಾಲದಲ್ಲಿ ಅಂದಿನ ಲೋಕೋಪಯೋಗಿ ಮಂತ್ರಿಗಳಾಗಿದ್ದಂತಹ ಶ್ರೀ ದೇವೇಗೌಡರು ಬಂದು ವಿಸಿಟ್ ಮಾಡಿ ಕೊನೆಗೆ 2 ಕೋಟಿ ರೂಪಾಯಿ ಕೊಡುತ್ತೇನೆಂದು ಹೇಳಿದರು. ತಕ್ಷಣ ಅದನ್ನು ರೀ ಮಾಡ್ರನೈಜ್ ಮಾಡಿ ಎಂದು ಅಥವಾ ಇನ್ನೇನಾದರೂ ಮಾಡಿ ಎಂದು ಹೇಳಿದರು. ಸರ್ಕಾರ ಬಿದ್ದು ಹೋಯಿತು. ಅಲ್ಲಿಂದ ನಾವು ಬರಲಿಕ್ಕೆ ಆಗಲಿಲ್ಲ. ಅಂತಹ ಪರಿಸ್ಥಿತಿಯಲ್ಲಿ ಅದು ಅಲ್ಲಿಗೇ ನಿಂತು ಹೋಗಿದೆ. ಈಗ ಅದನ್ನು ಮಾಡಿಕೊಡಬೇಕೆಂದು ನಾನು ಸರ್ಕಾರದ ಗಮನ ಸೆಳೆಯುತ್ತಿದ್ದೇನೆ. ಮಾನ್ಯ ಉಪಮುಖ್ಯಮಂತ್ರಿಗಳು ಇದರ ಬಗ್ಗೆ ಕಾಳಜಿ ವಹಿಸಿ. ಅವರ ಬಗ್ಗೆ ನಮಗೆ ಗೌರವ ಇದೆ ಅವರು ಬಂದ ಮೇಲೆ ನಮಗೆ ಸಹಾಯವಾಗುತ್ತದೆಂದು ನಂಬಿದ್ದೇನೆ. ಹುಲ್ಲಹಳ್ಳಿ ರಾಮಪುರ ಚಾನಲ್ ಎಲ್ಲಾ ಹಾಳಾಗಿದೆ. ಅದು ಶಿಥಿಲವಾಗಿದೆ. ಆ ಚಾನಲ್ ಎಲ್ಲಾ ಮುಚ್ಚಿ ಹೋಗಿದೆ. ಇವತ್ತು ಲಕ್ಷಾಂತರ ಎಕರೆ ಆ ಪ್ರದೇಶದ ರೈತರಿಗೆ ಹಾನಿಯಾಗುತ್ತದೆ. ತೊಂದರೆಯಾಗುತ್ತದೆ. ಆದ್ದರಿಂದ ಹುಲ್ಲಹಳ್ಳಿ ರಾಮಪುರ ಚಾನಲ್ ರೀ ಮಾಡ್ರನೈಸೇಷನ್‌ಗೆ ಹಣವನ್ನು ಒದಗಿಸಿಕೊಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

6.20 ಪಿಎಂ

ನಮ್ಮಲ್ಲಿ ಪಿ.ಡಬ್ಲ್ಯೂ.ಡಿಗೆ ಸೇರಿದ ಚಾಮರಾಜನಗರ–ನಂಜನಗೂಡಿಗೆ ಮಧ್ಯೆ ಗುಂಡ್ಲೂ ನದಿಗೆ ಒಂದು ಸೇತುವೆ ಇದೆ. ಅದು ಒಂದೇ ಒಂದು ಸೇತುವೆ. ಅದರ ಮೇಲೆ ಒಂದು ವೆಹಿಕಲ್ ಮಾತ್ರ ಹೋಗಬಹುದು. ಎರಡು ವೆಹಿಕಲ್ ಒಂದೇ ಸಾರಿ ಹೋಗುವುದಕ್ಕಾಗುವುದಿಲ್ಲ. ಗಾಡಿಗಳು ಹೋಗುವುದಕ್ಕೂ ಕಷ್ಟ ಇದೆ. ಅದು ಸ್ಟೇಟ್ ಹೈವೇಗೆ ಬರುತ್ತದೆ. ಅದು ನೂರಾರು ವರ್ಷದ್ದು. ಯಾವಾಗ ಅದು ಬೀಳುತ್ತದೆಯೋ ಗೊತ್ತಿಲ್ಲ. ಅದನ್ನು ದಯವಿಟ್ಟು ಪಿ.ಡಬ್ಲ್ಯೂ.ಡಿ ಮಿನಿಸ್ಟರ್‌ರವರು ಹೊಸದಾಗಿ ಕಟ್ಟಿಸಬೇಕು. ನಾನು ಶಾಸಕ ಆದಾಗಿನಿಂದಲೂ ಕೇಳುತ್ತಿದ್ದೇನೆ. 1983ರಲ್ಲೂ ಇದನ್ನು ಕೇಳಿದ್ದೆ. ಈಗಲೂ ನಾನು ಕೇಳುತ್ತಿದ್ದೇನೆ. ಅದು ಬಿದ್ದರೆ ಅದರಿಂದ ಬಹಳ ಅನಾಹುತವಾಗುತ್ತದೆ. ಗುಂಡ್ಲೂ ನದಿಗೆ ಇದು ಸೇತುವೆ ಇದೆ. ಮಾನ್ಯ ರಂಗನಾಥ್‌ರವರು ಬಹಳ ಒಳ್ಳೆಯವರು, ಆದರೆ ಆ್ಯಕ್ಷನ್ ಮಾತ್ರ ಬಹಳ ಸ್ಲೋ; ಅದೇ ಒಂದು ಕಷ್ಟ. ಅವರು ದೊಡ್ಡ ಮನಸ್ಸು ಮಾಡಿ ಆ್ಯಕ್ಷನ್ ಸ್ಪೀಡಪ್ ಮಾಡಿದರೆ ನಮಗೆ ಸಹಾಯವಾಗುತ್ತದೆ. ಈ ಬ್ರಿಡ್ಜ್ ಬೀಳುವ ಪರಿಸ್ಥಿತಿಯಲ್ಲಿದೆ. ತಾವು ನೋಡಬೇಕಾದರೆ. ವಾಟಾಳ್ ನಾಗರಾಜ್ ಇದ್ದಿದ್ದರೆ ಚೆನ್ನಾಗಿತ್ತು. ಅವರಿಗೂ ಇದರಿಂದ ಕಷ್ಟದ ಪರಿಸ್ಥಿತಿ ಇದೆ. ಇದು ಕೊಯಮತ್ತೂರು ರೂಟ್‌ನಲ್ಲಿ ಬರುತ್ತದೆ. ಈ ಸೇತುವೆಯನ್ನು ಹೊಸದಾಗಿ ಕಟ್ಟಿಸುವುದಕ್ಕೆ ಮಂಜೂರಾತಿ ಕೊಟ್ಟು ಅದನ್ನು ಮಾಡಿಕೊಡಬೇಕೆಂದು ಮನವಿ ಮಾಡುತ್ತೇನೆ. ಇಜ್ಜಾಲ ಏತ ನೀರಾವರಿ ಬಗ್ಗೆ ಹೋದ ವರ್ಷ ಬಂಗಾರಪ್ಪನವರ ಕಾಲದಲ್ಲಿ ಪ್ರಸನ್ನಕುಮಾರ್‌ರವರು ಸೇರಿಸಿದ್ದರು. 50 ಲಕ್ಷ ರೂ.ಗೆ ಒಂದು ಇಜ್ಜಾಲ ಏತ ನೀರಾವರಿ ಯೋಜನೆಯು ಮಂಜೂರಾಗಿತ್ತು ಅದಕ್ಕೆ ಶಂಕುಸ್ಥಾಪನೆ ಮಾಡಬೇಕಾಗಿತ್ತು. ಅದೇನು ಆಗಿದೆಯೋ ಗೊತ್ತಿಲ್ಲ. ಮಂಜೂರಾಗಿದೆಯೋ, ಶಂಕುಸ್ಥಾಪನೆ ಮಾಡಬೇಕೋ, ಅದು ಯಾವ ಪರಿಸ್ಥಿತಿಯಲ್ಲಿ ಇದೆಯೋ ಎಂಬುದು ಗೊತ್ತಾಗುತ್ತಿಲ್ಲ.

ಅದನ್ನು ನಾವು ಬ್ಯಾಟ್ರಿ ತೆಗೆದುಕೊಂಡು ಹುಡುಕಬೇಕಾಗಿದೆ. ಈ ಏತ ನೀರಾವರಿ ಏನಾಗಿದೆ ? ಇದಕ್ಕೆ ಹಣ ಬಿಡುಗಡೆ ಆಗಿದೆಯೇ ಮಂಜೂರಾಗಿದೆಯೋ ಇಲ್ಲವೋ ಎಂಬುದು ತಿಳಿಯದೆ ನಾವು ಕತ್ತಲಲ್ಲಿ ಇದ್ದೇವೆ. ದಯವಿಟ್ಟು ಇಜ್ಜಾಲ ಏತ ನೀರಾವರಿ ಯೋಜನೆಯನ್ನು ನಮ್ಮ ಮೈನರ್ ಇರಿಗೇಷನ್ ಮಿನಿಸ್ಟರ್ ನೋಡಿಕೊಂಡು ಮಂಜೂರು ಮಾಡಿಕೊಡಬೇಕು. ಹಾಗೆಯೇ ಸಂಗಮದಿಂದ ಮತ್ತೊಂದು ಏತ ನೀರಾವರಿ ಯೋಜನೆ ಮಾಡಬೇಕೆಂದು ಕೇಳಿದ್ದೇನೆ. ಬಹುಶಃ ಅದು ಮಾಡಿದರೆ 5 ಸಾವಿರ ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯವಾಗುತ್ತದೆ. ಆಮೇಲೆ ಕಪಿಲಾ ನದಿಯಿಂದಲೂ ಏತ ನೀರಾವರಿ ಯೋಜನೆಯನ್ನು ಸಣ್ಣ ನೀರಾವರಿ ಮಂತ್ರಿಗಳು ಮಾಡಿಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಜೈಹಿಂದ್.

† ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ):- ಸನ್ಮಾನ್ಯ ಅಧ್ಯಕ್ಷರೇ, ಇಂದು ಸದನದಲ್ಲಿ ಮಂಡಿಸಿರತಕ್ಕಂಥ ಬೇಡಿಕೆಗಳಿಗೆ ನಾನು ಬೆಂಬಲವನ್ನು ವ್ಯಕ್ತಪಡಿಸುತ್ತಾ ನಮ್ಮ ಕೃಷ್ಣರಾಜಸಾಗರ ಅಚ್ಚುಕಟ್ಟುಪ್ರದೇಶದಲ್ಲಿ ಸುಮಾರು 14 ವರ್ಷಗಳ ಹಿಂದೆ ವಿ.ಸಿ.ನಾಲಾ ಆಧುನೀಕರಣ ಮಾಡತಕ್ಕಂಥ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಈ ಕಾಮಗಾರಿಯಿಂದ ನಾಲೆಯ ಕೊನೆ ಪ್ರದೇಶದ ಅಚ್ಚುಕಟ್ಟು ರೈತರಿಗೆ ವರಪ್ರದಾನವಾಗುತ್ತದೆ. ನಮ್ಮ ರೈತರು ನೀರಿನ ಬವಣೆಯನ್ನು ಬಹಳಷ್ಟು ಅನುಭವಿಸುತ್ತಾ ಅವರ ಉತ್ಪಾದನೆಯಲ್ಲೂ ಸಹ ಕುಂಠಿತಗೊಂಡು ಆರ್ಥಿಕವಾಗಿ ಹಿಂಜರಿದಿದ್ದಾರೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಸುಮಾರು 55 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಆ ಕಾಮಗಾರಿ ಪ್ರಾರಂಭವಾಗಿ ಇವತ್ತಿಗೂ ಅಂದರೆ 14 ವರ್ಷ ಕಳೆದರೂ ಸಹಾ ಇನ್ನೂ ಪೂರ್ಣವಾಗಿಲ್ಲ. ಪ್ರಸ್ತುತ ಅದು ಸುಮಾರು 92 ಕೋಟಿ ರೂಪಾಯಿ ಅಂದಾಜು ಆಗಿದೆ. ಈ ವಿ.ಸಿ. ನಾಲಾ ಆಧುನೀಕರಣ ಕೆಲಸ ಎಷ್ಟು ವರ್ಷದಲ್ಲಿ ಮುಗಿಯುತ್ತದೆಂದು ಗೊತ್ತಾಗುವುದಿಲ್ಲ. ಈ ನಾಲಾ ಆಧುನೀಕರಣ ಕಾಮಗಾರಿಯನ್ನು ತ್ವರಿತವಾಗಿ ಮುಗಿಸಿ ನಮ್ಮ ರೈತರಿಗೆ ಅನುಕೂಲ ಮಾಡಿಕೊಡಬೇಕೆನ್ನುವ ಮಾತನ್ನು ಆಗ್ರಹಪೂರ್ವಕವಾಗಿ ಒತ್ತಾಯಿಸುತ್ತೇನೆ. ಕೃಷ್ಣರಾಜಸಾಗರವನ್ನು ಕಟ್ಟಿ ಸುಮಾರು 60 ವರ್ಷಗಳಾಗಿದೆ. ಅಂದಿನಿಂದ ಇಂದಿನವರೆಗೂ ರೈತರ ಜಮೀನಿಗೆ ನೀರನ್ನು ಕೊಡುತ್ತಿರುವಂಥ ವಿತರಣಾ ನಾಲೆಗಳು ಹಾಗೂ ಉಪ ನಾಲೆಗಳು ಕೂಡಾ ದುರಸ್ತಿಯಾಗಬೇಕಾದಂಥ ಪ್ರಮೇಯ ಇದೆ. ಅದನ್ನೂ ಸಹಾ ವಿಶ್ವೇಶ್ವರಯ್ಯ ನಾಲಾ ಆಧುನೀಕರಣ ಕಾರ್ಯಕ್ರಮದ ಅಡಿಯಲ್ಲಿ ತೆಗೆದುಕೊಂಡು ಮಾಡಬೇಕು ಹಾಗೂ ವಿಸಿ ನಾಲಾ 2ನೇ ಹಂತದ ಯೋಜನೆಯನ್ನು ಕಾರ್ಯಗತ ಮಾಡಬೇಕೆಂದು ಸನ್ಮಾನ್ಯ ಉಪಮುಖ್ಯಮಂತ್ರಿಗಳಲ್ಲಿ ನಾನು ಒತ್ತಾಯಪೂರ್ವಕವಾಗಿ ಮನವಿ ಮಾಡುತ್ತೇನೆ. ಇದನ್ನು ಮಾಡಿದರೆ ನಮ್ಮ ಜಿಲ್ಲೆಯ ಹಲವು ಭಾಗಗಳು ವ್ಯವಸಾಯ ಯೋಗ್ಯ ಪ್ರದೇಶಗಳಾಗುತ್ತವೆ. ರೈತರಿಗೂ ಕೂಡ ಬಹಳಷ್ಟು ಸಹಕಾರಿಯಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲು ಇಷ್ಟಪಡುತ್ತೇನೆ. ನಮ್ಮ ಒಟ್ಟು ಅಚ್ಚುಕಟ್ಟು ಪ್ರದೇಶ 1 ಲಕ್ಷ 95 ಸಾವಿರ ಎಕರೆ. ಇದರಲ್ಲಿ ಪ್ರತಿ ಹೆಕ್ಟೇರ್ ನಿರ್ವಹಣ ವೆಚ್ಚವನ್ನ 120 ರೂಪಾಯಿ ಎಂದು ನಿಗದಿ ಮಾಡಲಾಗಿದೆ. ಆಮೇಲೆ ಇವತ್ತು ವ್ಯವಸಾಯ ಪ್ರದೇಶದ ಅಭಿವೃದ್ಧಿಗೆ ಅಥವಾ ನಾಲೆ ಅಭಿವೃದ್ಧಿಗೆ ಅಥವಾ ಬೇರೆ ಕಾಮಗಾರಿಗೆ ಹಣ ತೊಡಗಿಸದೆ ಇರತಕ್ಕಂಥ ಪರಿಸ್ಥಿತಿ ಇದೆ. ಹಾಗಾಗಿ ಪ್ರತಿ ಹೆಕ್ಟೇರ್‌ಗೆ ನಿರ್ವಹಣಾ ವೆಚ್ಚವನ್ನು ಸುಮಾರು 3 ನೂರು ರೂಪಾಯಿಗಳಿಗೆ ಹೆಚ್ಚಳ ಮಾಡಬೇಕು ಹಾಗೂ ವಿ.ಸಿ ನಾಲಾ ಪ್ರದೇಶದ ವ್ಯಾಪ್ತಿಗೆ 5 ಕೋಟಿ ಅನುದಾನವನ್ನು ಪ್ರಸಕ್ತ ಸಾಲಿನಲ್ಲಿ ಒದಗಿಸಿಕೊಡಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲು ಇಷ್ಟಪಡುತ್ತೇನೆ.

ನಮ್ಮ ನೀರಾವರಿಯ ಪ್ರದೇಶದಲ್ಲಿ ಬರತಕ್ಕಂಥ ಇರಿಗೇಷನ್ ಟ್ರಾಕ್ ರಸ್ತೆಗಳಾಗಲೀ, ಅಥವಾ ನಾಲಾ ಸರ್ವೀಸ್ ರಸ್ತೆಗಳಾಗಲೀ, ಇವುಗಳು ಈಗ ಜಿಲ್ಲಾಪರಿಷತ್ತಿನ ವ್ಯಾಪ್ತಿಯಲ್ಲಿವೆ. ಈಗ ಸೇತುವೆ ರಿಪೇರಿಗೆ ಒಬ್ಬರ ಹತ್ತಿರ ಮತ್ತು ರಸ್ತೆ ರಿಪೇರಿಗೆ ಒಬ್ಬರ ಹತ್ತಿರ ಹೀಗೆ ಕೇಳಬೇಕಾಗಿ ಬಂದಿದೆ. ಈ

ಇಬ್ಬಗೆಯ ನೀತಿಯಿಂದಾಗಿ ರೈತರಿಗೆ ಬಹಳ ಕಷ್ಟವಾಗುತ್ತಿದೆ. ಜಿಲ್ಲಾಪರಿಷತ್ತಿನ ಅಧಿಕಾರಿಗಳು ಈ ಇರಿಗೇಷನ್ ಟ್ರಾಕ್ ರೋಡ್‌ನಲ್ಲಾಗಲೀ ಅಥವಾ ನಾಲಾ ಸರ್ವೀಸ್ ರಸ್ತೆಯಲ್ಲಾಗಲಿ, ತಿರುಗಾಡತಕ್ಕಂಥ ಪ್ರಮೇಯವೂ ಇರುವುದಿಲ್ಲ. ಅವರಿಗೆ ಹೆಚ್ಚಿನ ಆಸ್ಥೆ ಇರುವುದಿಲ್ಲವಾದ ಕಾರಣ ಪುನಃ ಈ ರಸ್ತೆಗಳನ್ನು ನೀರಾವರಿ ಇಲಾಖೆಗೆ ಅನುದಾನ ಸಮೇತ ವಾಪಸ್ಸು ತೆಗೆದುಕೊಳ್ಳುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಜಿಲ್ಲೆಯ ಎಲ್ಲಾ ಶಾಸಕರ ಒಕ್ಕೊರಲಿನ ಒಂದು ಕೋರಿಕೆ ಏನೆಂದರೆ, ಅನೇಕ ವರ್ಷಗಳಿಂದ ಅನೇಕ ಲಿಫ್ಟ್ ಇರಿಗೇಷನ್ ಸ್ಕೀಮ್‌ಗಳನ್ನು ನಮ್ಮ ವಿ.ಸಿ. ನಾಲಾದ ಅಚ್ಚುಕಟ್ಟಿನ ಕೊನೆಯ ಭಾಗದಲ್ಲಿ ತೆಗೆದುಕೊಳ್ಳಬೇಕೆಂದು ಎಲ್ಲರ ಆಶಯಾಗಿದೆ. ಸುಮಾರು 17 ವಿವಿಧ ಯೋಜನೆಗಳು ಐದು ಕೋಟಿ ರೂಪಾಯಿಗಳ ವೆಚ್ಚದಲ್ಲಿ ತೆಗೆದುಕೊಳ್ಳಬೇಕೆಂದು ಅಂದಾಜು ಸಿದ್ಧವಾಗಿದೆ. ಅದನ್ನು ವಿಸಿ ನಾಲಾ ಆಧುನೀಕರಣ ಕಾಮಗಾರಿಯ ಅಡಿಯಲ್ಲಿ ತೆಗೆದುಕೊಳ್ಳಬೇಕೆಂಬ ಮಾತನ್ನು ಹೇಳಿ, ಪೂರಿಗಾಲಿ, ಹಾಗೂ ನಂಜಾಪುರ ಏತನೀರಾವರಿ ಯೋಜನೆಗಳು ಕೂಡ ನೆನೆಗುದಿಗೆ ಬಿದ್ದಿದೆ ಅದನ್ನೂ ಕೂಡ ಕೈಗೆತ್ತಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನೂ ಬೆಂಗಳೂರು–ಮೈಸೂರು ಹೆದ್ದಾರಿಯು ಅಲ್ಲಿನ ವಾಹನ ಸಂಚಾರದ ದಟ್ಟಣೆಗೆ ಅನುಗುಣವಾಗಿ ಇಲ್ಲ, ಅದನ್ನು ಎಕ್ಸ್‌ಪ್ರೆಸ್ ಹೈವೇ ಮಾಡುತ್ತೇವೆ ಎಂದು ಮಾನ್ಯ ಸಚಿವರು ಹೇಳಿಕೆ ನೀಡಿದ್ದಾರೆ. ಅಲ್ಲಿ ನಡೆಯುತ್ತಿರುವ ಅಪಘಾತಗಳನ್ನು ಪ್ರತಿನಿತ್ಯವೂ ನಾವು ನೋಡುತ್ತಾ ಇದ್ದೇವೆ. ಅಲ್ಲಿ ನಾವುಗಳು ಓಡಾಡುತ್ತಿರುವುದು ಬಹಳ ಕಷ್ಟಕರವಾದ ಸಮಸ್ಯೆಯಾಗಿದೆ. ಅದನ್ನು ವಿಸ್ತರಣೆಗೊಳಿಸಬೇಕು, ಹಾಗೂ ನಮ್ಮ ಮಂಡ್ಯ ಪ್ರದೇಶದಲ್ಲಿ ಇರತಕ್ಕಂಥ ರಸ್ತೆಯನ್ನು ಅಭಿವೃದ್ಧಿಗೊಳಿಸಿ ಅಲ್ಲಿ ದೀಪದ ವ್ಯವಸ್ಥೆಯನ್ನು ಕೂಡ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅನೇಕ ಕಾಮಗಾರಿಗಳು ನಮ್ಮಲ್ಲಿ ಸ್ಥಗಿತಗೊಂಡಿವೆ; ಅವುಗಳಿಗೆ ಎಲ್.ಓ.ಸಿ ಯನ್ನು ಬಿಡುಗಡೆ ಮಾಡಬೇಕೆಂದು ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ವಿದ್ಯುಚ್ಛಕ್ತಿಯ ಬಗ್ಗೆ ಹೇಳುತ್ತಾ, ನಮ್ಮ ಜಿಲ್ಲೆಯಲ್ಲಿ ಶ್ರೀರಂಗಪಟ್ಟಣ, ಬಸರಾಳು, ಬಿ.ಜಿ.ನಗರ, ಕೊಪ್ಪ ಇನ್ನೂ ಮುಂತಾದ ಕಡೆಗಳಲ್ಲಿ ವಿದ್ಯುತ್ ಉಪಕೇಂದ್ರಗಳನ್ನು ಪ್ರಾರಂಭ ಮಾಡುವುದಕ್ಕೆ ಈಗಾಗಲೇ ಕ್ರಮವನ್ನು ಕೈಗೊಂಡಿದ್ದಾರೆ. ಅವುಗಳನ್ನು ತ್ವರಿತಗತಿಯಲ್ಲಿ ಮಾಡಿ ಮಂಡ್ಯ ನಗರದ ಹೊರವಲಯದಲ್ಲಿಯೂ ಕೂಡ, ಅಸಿಟೇಟ್ ಫ್ಯಾಕ್ಟರಿ, ಮೈಸೂರ್ ಶುಗರ್ ಫ್ಯಾಕ್ಟರಿ ಮತ್ತು ಇಂಡಸ್ಟ್ರೀಯಲ್ ಎಸ್ಟೇಟ್‌ಗಳನ್ನು ಒಳಗೊಂಡಂತೆ ಒಂದು ವಿದ್ಯುತ್ ಉಪಕೇಂದ್ರವನ್ನು ಪ್ರಸಕ್ತ ಸಾಲಿನಲ್ಲಿ ಮಂಜೂರು ಮಾಡಬೇಕೆಂದು ಸನ್ಮಾನ್ಯ ಉಪ ಮಂತ್ರಿಯವರಲ್ಲಿ ಒತ್ತಾಯಪಡಿಸುತ್ತಾ, ಈ ಮುಖ್ಯ ಬೇಡಿಕೆಗಳನ್ನು ಕುರಿತು ಮಾತನಾಡಲು ಅವಕಾಶವನ್ನು ಕೊಟ್ಟ ತಮ್ಮನ್ನು ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† **ಶ್ರೀ ಶಫಿ ಅಹಮದ್ (ತುಮಕೂರು)** :– ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರುಗಳು ಸಭೆಯ ಮುಂದೆ ಬಹಳ ಮಹತ್ವವಾದ ಬೇಡಿಕೆಗಳನ್ನು ಇಟ್ಟಿದ್ದಾರೆ. ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿಯ ಸುಧಾರಣೆಯ ಮಹತ್ವ ಅಂಶಗಳು ಇದರಲ್ಲಿ ಇರುವುದರಿಂದ ಇದನ್ನು ಸ್ವಾಗತಿಸುತ್ತಾ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ನಮ್ಮ ರಾಜ್ಯದಲ್ಲಿರುವ ವಿದ್ಯುತ್‌ನ ಕುರಿತಾದ ಸಮಸ್ಯೆಗಳ ಬಗ್ಗೆ ನಮ್ಮ ಉಪ ಮುಖ್ಯಮಂತ್ರಿಯವರು ಇಡೀ ರಾಜ್ಯದಲ್ಲಿ ಪ್ರವಾಸ ಮಾಡಿ ಇರುವ ಸಮಸ್ಯೆಗಳ ಬಗ್ಗೆ ಅಧ್ಯಯನ ಮಾಡಿ ಅರ್ಥ ಮಾಡಿಕೊಂಡಿದ್ದಾರೆ. ಈ ಬಗ್ಗೆ ಅವರಿಗೆ ನಮ್ಮ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಮ್ಮ ತುಮಕೂರು ಜಿಲ್ಲೆಯಲ್ಲಿನ ಸಮಸ್ಯೆಗಳ ಬಗ್ಗೆ ಕೂಡ ಅವರು ಸ್ವಯಂ ನೋಡಿಕೊಂಡು ಬಂದಿದ್ದಾರೆ. ತುಮಕೂರು ನಗರದಲ್ಲಿ ಬಹಳ ಮುಖ್ಯವಾಗಿ ಅಂತರಸನ ಹಳ್ಳಿಯಲ್ಲಿನ ಪವರ್ ಸ್ಟೇಷನ್ ಬಗ್ಗೆ 1991ರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಶಂಕುಸ್ಥಾಪನೆ ಮಾಡಿ ಬಂದರು. ಆದರೆ ಕೆಲಸ ಮಾತ್ರ ಈವತ್ತಿನ ತನಕ ಪ್ರಾರಂಭ ಮಾಡಿಲ್ಲ. ಇದು ವಿಶ್ವಬ್ಯಾಂಕ್‌ನ ವತಿಯಿಂದ 18 ಕೋಟಿ ರೂಪಾಯಿಗಳ ಯೋಜನೆಯಾಗಿದೆ. ಈ ಬಗ್ಗೆ ಬೇಕಾಗುವ ಭೂಮಿಯನ್ನು ಮಾತ್ರ ಇವರು

ಸ್ವಾಧೀನಪಡಿಸಿಕೊಂಡಿದ್ದಾರೆ. ಟೆಂಡರ್ಸ್‌ನ್ನು ಕೂಡ ಕರೆದಿದ್ದೀರಿ, ಆದರೆ ಅವುಗಳನ್ನು ಇನ್ನೂ ಫೈನಲೈಸ್ ಮಾಡಿಲ್ಲ. ಅತಿ ಶೀಘ್ರದಲ್ಲಿಯೇ ಟೆಂಡರ್ಸ್‌ಗಳನ್ನು ಫೈನಲೈಸ್ ಮಾಡಿ ಕಾಮಗಾರಿಗಳನ್ನು ಪ್ರಾರಂಭ ಮಾಡಿದರೆ ಮಾತ್ರ ತುಮಕೂರು ಜಿಲ್ಲೆಯಲ್ಲಿ ಪವರ್ ಪ್ರಾಬ್ಲೆಮ್ ಬಗೆಹರಿಸಲು ಸಾಧ್ಯವಾಗುತ್ತದೆ. ಅದೇ ರೀತಿಯಲ್ಲಿ ಮೊನ್ನೆ ತಾನೇ ಕಿಬ್ಬಳ್ಳಿ ಪವರ್ ಸ್ಟೇಷನ್ ಮಾಡಿದ ಮೇಲೆ 400 ಮೆಗಾವ್ಯಾಟ್ಸ್ ವೋಲ್ಟೇಜ್ ಇಂಪ್ರೂವ್ ಆಗಿದೆ. ರೈತರು ಇತ್ಯಾದಿಯಾಗಿ ಎಲ್ಲರೂ ಈ ಸೌಲಭ್ಯವನ್ನು ಉಪಯೋಗಿಸಿಕೊಂಡು ತಮ್ಮ ಆರ್ಥಿಕೋನ್ನತಿಯನ್ನು ಸಾಧಿಸಿಕೊಂಡು,, ಈ ವ್ಯವಸ್ಥೆಯನ್ನು ಮಾಡಿದ ಬಗ್ಗೆ ಸರಕಾರದ ಬಗ್ಗೆ ಸಂತೋಷ ಪಟ್ಟಿದ್ದಾರೆ. ನಮಗೆ ಮುಖ್ಯವಾಗಿ ಅಂತರಸನಳ್ಳಿ ಪವರ್ ಸ್ಟೇಷನ್ ಸ್ವಾಪ್‌ಗ್ಯಾಪ್ ಅರೇಂಜ್‌ಮೆಂಟ್ ಮಾಡಿದರೆ ಮಾತ್ರ ನಮಗೆ ಅನುಕೂಲವಾಗುತ್ತದೆ. ಇದನ್ನು 1995ರಲ್ಲಿ ಪೂರ್ಣಗೊಳಿಸುತ್ತೇವೆಂದು ಹೇಳುತ್ತಿದ್ದೀರಿ. ಆದರೆ ಸ್ವಾಪ್‌ಗ್ಯಾಪ್ ಅರೇಂಜ್‌ಮೆಂಟ್ ಮಾಡಿದರೆ ಮಾತ್ರ ನಮ್ಮ ಸಮಸ್ಯೆಯು ಬಗೆಹರಿಯುತ್ತದೆ. ಈ ಬಗ್ಗೆ ತುಮಕೂರಿನ ಎಲ್ಲಾ ಶಾಸಕರುಗಳ ಪರವಾಗಿ ಮನವಿಯನ್ನು ಸಲ್ಲಿಸಿದ್ದೇವೆ. ಅದರ ಬಗ್ಗೆ ತಾವುಗಳೂ ಕೂಡ ಒಂದು ಆಶ್ವಾಸನೆಯನ್ನು ಕೊಟ್ಟು ಬಂದಿದ್ದೀರಿ. ಇದನ್ನು ತಮ್ಮ ಉತ್ತರದಲ್ಲಿ ಈಡೇರಿಸಬೇಕೆಂದು ಕೇಳಿಕೊಂಡು, ನಮ್ಮ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಹೇಳಬಯಸುತ್ತೇನೆ. ನಮ್ಮ ತುಮಕೂರು ನಗರಕ್ಕೆ ಕುಡಿಯುವ ನೀರಿಗಾಗಿ ಹೇಮಾವತಿ ಕುಡಿಯುವ ನೀರಿನ ಯೋಜನೆ ಮತ್ತು ಇರಿಗೇಷನ್ ಸಲುವಾಗಿಯೂ ಈ ಯೋಜನೆಯೂ ಇದೆ. ನಮ್ಮ ಜಿಲ್ಲೆಯಲ್ಲಿ ಸುಮಾರು 5600 ಹೆಕ್ಟೇರ್‌ಗಳಷ್ಟು ಇರಿಗೇಷನ್ ಆಗುತ್ತಾ ಇದೆ. ಅದರಲ್ಲಿ ನಮಗೆ ಬಾಟಲ್‌ನೆಕ್ ಇರುವುದು ಅಲೈನ್‌ಮೆಂಟಿನ ವಿಚಾರದಲ್ಲಿ. ಇದರಿಂದ ಹೆಚ್ಚಿನ ಕೆಲಸವು ಸಾಧನೆಯಾಗುತ್ತಾ ಇಲ್ಲ.

ಅಲ್ಲಿ 30 ಕೋಟಿ ರೂಪಾಯಿಯ ಬ್ಯಾಕ್‌ಲಾಗ್ ಇದೆ. ಆ ಬ್ಯಾಕ್‌ಲಾಗ್ ಅನ್ನು ಈವತ್ತು ನಾವು ಸರಿಪಡಿಸಿದರೆ ಮಾತ್ರ ಈ ಕೆಲಸವನ್ನು ಮುಂದುವರಿಸುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಈ ತಿಂಗಳು 30 ನೇ ತಾರೀಖಿನೊಳಗಾಗಿ ತಾವು 30 ಕೋಟಿ ರೂಪಾಯಿಯನ್ನು ಗೊರೂರು ಮತ್ತು ತುಮಕೂರು ಸರ್ಕಲಿನ ಹೇಮಾವತಿ ಯೋಜನೆಗೆ ಬಿಡುಗಡೆ ಮಾಡಿದರೆ ಕೆಲಸವನ್ನು ಮುಂದುವರಿಸುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ಅಷ್ಟೇ ಮಹತ್ವವಾದದ್ದು ಈ ಲ್ಯಾಂಡ್ ಅಕ್ವಿಸಿಷನ್ ಪ್ರಾಬ್ಲಮ್. ಈ ಲ್ಯಾಂಡ್ ಅಕ್ವಿಸಿಷನ್‌ನಲ್ಲಿ ಈವತ್ತು ಏನಾಗಿದೆ ಅಂದರೆ ಈ ಕನ್ಸೀಲಿಯೇಷನ್ ಕುಳಿತುಕೊಂಡರೆ ಇವತ್ತು ಸಾಧ್ಯವಾಗುತ್ತಿಲ್ಲ, ಅದ್ದರಿಂದ ಲೋಕ ಅದಾಲತ್‌ಗೆ ರೆಫರ್ ಮಾಡಿ ನೆಗೋಸಿಯೆಷನ್ಸ್‌ಮಾಡಿ ಲ್ಯಾಂಡ್ ಅಕ್ವಿಸಿಷನ್ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ತಾವು ಆದೇಶವನ್ನು ಕೊಟ್ಟರೆ ಅತಿ ಶೀಘ್ರದಲ್ಲಿ ನಾವು ಲ್ಯಾಂಡ್ ಪೊಸಿಷನ್ ತೆಗೆದುಕೊಂಡು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಹಿಂದೆ ನೀರಾವರಿಯ ಬಗ್ಗೆ ಏನು ಸರ್ವೇ ಮಾಡಿದ್ದರೋ ಆ ಅಲೈನ್‌ಮೆಂಟ್‌ನಲ್ಲಿಯೇ ಈ ಕೆಲಸವನ್ನು ಮಾಡಿಕೊಡಬೇಕೆಂದು ಈವತ್ತು ಕೊಳ್ಳುತ್ತೇನೆ. ಮೇಜರ್ ಇರಿಗೇಷನ್ ಮತ್ತು ಪವರ್ ಬಹಳ ಮುಖ್ಯವಾದದು. ಇವತ್ತು ಶಾರ್ಟೇಜ್ ಆಫ್ ಟ್ರಾನ್ಸ್‌ಫಾರ್ಮರ್ ಆಗಿದೆ. ಟ್ರಾನ್ಸಫಾರ್ಮರ್ ಏನಿದೆ ಅವುಗಳು ಪ್ರತಿದಿನ ವೋಲ್ಟೇಜ್ ಫ್ಲಕ್ಚುಯೇಷನ್‌ನಿಂದ ಸುಮಾರು ಟ್ರಾನ್ಸ್‌ಫಾರ್ಮರ್‌ಗಳು ಇಡೀ ನಮ್ಮ ಜಿಲ್ಲೆಯಲ್ಲಿಯೇ ಸುಟ್ಟುಹೋಗುತ್ತಿದೆ. ಇಡೀ ನಮ್ಮ ಜಿಲ್ಲೆಯಲ್ಲಿಯೇ 1200 ಟ್ರಾನ್ಸ್‌ಫಾರ್ಮರ್ಸ್ ಬೇಕಾಗಿದೆ. ಟ್ರಾನ್‌ಫಾರ್ಮರ್‌ಬೇಕೆಂದು ಸಾಕಷ್ಟು ಸಲ ನಾವು ಮನವಿಯನ್ನು ಮಾಡಿಕೊಂಡಿದ್ದೇವೆ. ಆದರೆ ಟ್ರಾನ್ಸ್‌ಫರ್ಮರ್‌ರನ್ನು ಇವತ್ತಿಗೂ ಒದಗಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ನನ್ನ ಕ್ಷೇತ್ರದಲ್ಲಿ 100 ಕೆ.ವಿ ಯ ಸುಮಾರು 25 ಟ್ರಾನ್ಸ್‌ಫಾರ್ಮರ್ಸ್ 63 ಕೆ.ವಿ.ಯ 63 ಟ್ರಾನ್ಸ್‌ಫಾರ್ಮರ್ಸ್ ಮತ್ತು 63 ಕೆ.ವಿ.ಯದು 63 ಟ್ರಾನ್ಸ್‌ಫಾರ್ಮರ್ಸ್ ಬೇಕಾಗಿದೆ. ಆದಕ್ಕೆ ತಾವು ಆದೇಶವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ಬಹಳ ಮುಖ್ಯವಾಗಿ ಮಾನ್ಯ ರಂಗನಾಥ್‌ರವರು ಅವರ ಕ್ಷೇತ್ರಕ್ಕೆ ಹೋಗಬೇಕಾದರೆ

ತುಮಕೂರನ್ನು ದಾಟಿಕೊಂಡು ಹೋಗಬೇಕು. ಅದರಲ್ಲಿಯೂ ನಮ್ಮ ಕರ್ನಾಟಕದ ಹೆಬ್ಬಾಗಿಲಾಗಿರುವ ತುಮಕೂರಿನಲ್ಲಿ ಇವತ್ತು ಬಹಳ ಸಮಸ್ಯೆ ಇದೆ. ನೆಲಮಂಗಲ ದಾಟಿದ ನಂತರ ತಾವೆಲ್ಲರೂ ಶಾಸಕರು ಅನುಭವಿಸುತ್ತಿದ್ದೀರಿ. ತುಮಕೂರು ದಾಟುವವರೆಗೂ ಪ್ರತಿನಿತ್ಯ 5 ರಿಂದ 6 ಆಕ್ಸಿಡೆಂಟ್ ಆಗಿರುತ್ತದೆ. ಇವತ್ತು ನ್ಯಾಷನಲ್ ಹೈವೆ ಬಹಳ ಮುಖ್ಯವಾಗಿರುವುದರಿಂದ ಎಲ್ಲಾ ಶಾಸಕರುಗಳು ನ್ಯಾಷನಲ್ ಹೈವೆಯ ಬಗ್ಗೆ ಮಾತನಾಡಿದ್ದಾರೆ. ಇವತ್ತು ತುಮಕೂರು ಮತ್ತು ನೆಲಮಂಗಲದ ಮಧ್ಯೆ ಇರುವ ನ್ಯಾಷನಲ್ ಹೈವೇಗೆ ಕೇಂದ್ರ ಸರ್ಕಾರದಿಂದ 30 ಕೋಟಿ ರೂಪಾಯಿ ಬಂದಿತ್ತು. ಅದನ್ನು ಕೊಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಆಶ್ವಾಸನೆಯನ್ನು ಮಾಡಿದ್ದರು. ಆ ಹಣವನ್ನಾದರೂ ಪಡೆದು ತಾವು ಪ್ರಿಲಿಮನರಿ ಸರ್ವೇ ಮತ್ತು ಅಕ್ವಿಸಿಷನ್ ಪ್ರೊಸಿಡಿಂಗ್ಸ್ ಅನ್ನು ಶುರುಮಾಡಿದರೆ ಈ ಸಮಸ್ಯೆಯನ್ನು ಹಂತಹಂತದಲ್ಲಿ ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ಪ್ರತಿನಿತ್ಯ 5 ರಿಂದ 6 ಆಕ್ಸಿಡೆಂಟ್ ಆಗುತ್ತಿದೆ. ಅಲ್ಲಿ ಟ್ರಾಫಿಕ್ frequency per minute 25–vehicles ಇದೆ. ಬಹಳ ಮಹತ್ವವಾಗಿ ಈ ರಸ್ತೆಯನ್ನು four–way track ಹೆದ್ದಾರಿಯನ್ನಾಗಿ ಮಾಡಿಕೊಡಬೇಕು. ಅದೇ ರೀತಿಯಾಗಿ ಮಾನ್ಯ ಮುಖ್ಯಮಂತ್ರಿಯವರು ಪ್ರತಿ ಶಾಸಕರಿಗೂ 20 ಲಕ್ಷ ರೂಪಾಯಿಯನ್ನು ಕೊಡುತ್ತೇವೆಂದು ಹೇಳಿ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ತಾವು ಇದನ್ನು ಬಿಡುಗಡೆ ಮಾಡುತ್ತೀರಿ ಅಂತ ನಮಗಂತೂ ನಂಬಿಕೆ ಇದೆ. ತಾವು ಇದನ್ನು ಅತಿ ಶೀಘ್ರದಲ್ಲಿ ಬಿಡುಗಡೆ ಮಾಡಿಕೊಟ್ಟರೆ ಅನುಕೂಲವಾಗುತ್ತದೆ. ಜಿಲ್ಲಾಪರಿಷತ್ತಿನಿಂದ ಟೇಕನ್ ಓವರ್ ರೋಡ್ಸ್ ಏನಿದೆ ಅದಕ್ಕೆ ಸುಮಾರು 5 ವರ್ಷಗಳಿಂದ ಒಂದು ಹಿಡಿ ಮಣ್ಣನ್ನು ಸಹ ಹಾಕುವುದಕ್ಕೆ ಸಾಧ್ಯವಾಗಿಲ್ಲ. ಆದ್ದರಿಂದ ತಾವು ದಯವಿಟ್ಟು 20 ಲಕ್ಷ ರೂಪಾಯಿಯನ್ನು ಬಿಡುಗಡೆ ಮಾಡಿಕೊಟ್ಟು ಅನುಕೂಲ ಮಾಡಿಕೊಡಬೇಕು ಕೇಳಿ ಕೊಳ್ಳುತ್ತೇನೆ. ನಮ್ಮ ಕ್ಷೇತ್ರಕ್ಕೆ ನಾವು ಬಜೆಟ್‌ನಲ್ಲಿ ಏನು ಕೇಳಿದ್ದೇವೆ ಅದನ್ನು ಸೇರಿಸಿ ಮಾಡಿಕೊಟ್ಟರೆ ಬಹಳ ಅನುಕೂಲವಾಗುತ್ತದೆ. ಬಹಳ ಮುಖ್ಯವಾಗಿ ತುಮಕೂರು, ಕೋಲಾರ ಮತ್ತು ಚಿತ್ರದುರ್ಗ ನಮ್ಮ ಹಳೆಯ ಮೈಸೂರು ಕರ್ನಾಟಕದಲ್ಲಿ ಮೈನರ್ ಇರಿಗೇಷನ್ ಕಟ್ಟೆಗಳಿಂದ ನಾವು ಇವತ್ತು ಇರಿಗೇಷನ್ ಅನ್ನು ಪಡೆಯುತ್ತಿದ್ದೇವೆ. ಕಳೆದ 5–6 ವರ್ಷಗಳಿಂದ ಜಿಲ್ಲಾಪರಿಷತ್ತಿನಿಂದ ಈ ಕೆರೆಗಳಿಂದ ಏನೂ ಉಪಯೋಗವಾಗಲಿಲ್ಲ. ಅಲ್ಲಿ ಕೆಲಸ ಆಗಲಿಲ್ಲ ಅಂತ ಮೈನರ್ ಇರಿಗೇಷನ್ಸ್‌ಗೆ ನಾವು ಅದನ್ನು ವಹಿಸಿಕೊಟ್ಟಿದ್ದೇವೆ. ಆದರೆ 30 ಕೋಟಿ ರೂಪಾಯಿಯನ್ನು ತಾವು ಬಜೆಟ್‌ನಲ್ಲಿ ಇವತ್ತು ಕೊಟ್ಟಿದ್ದೀರಿ. ಈ ಹಣ ಏತಕ್ಕೂ ಸಾಕಾಗುವುದಿಲ್ಲ. ಇವತ್ತು ಈ ಮೈನರ್ ಇರಿಗೇಷನ್ ಬಹಳ ಮುಖ್ಯವಾಗಿ ಹೆಚ್ಚಿನ ಹಣವನ್ನು ಕೊಡಬೇಕು. ಕನಿಷ್ಠಪಕ್ಷ ಇವತ್ತು 250 ಕೋಟಿ ರೂಪಾಯಿಗಳನ್ನಾದರೂ ಕೊಟ್ಟರೆ ಸಾಧ್ಯವಾಗುತ್ತದೆ. ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಅವರ ಬಜೆಟ್ ಭಾಷಣದಲ್ಲಿ ಕೆರೆ ಕಲ್ಯಾಣ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಕೋಲಾರ ಜಿಲ್ಲೆಯಲ್ಲಿ ಕೆಲಸವನ್ನು ಪ್ರಾರಂಭಿಸಿದ್ದಾರೆ. ಅದೇ ರೀತಿಯಾಗಿ ತುಮಕೂರು ಜಿಲ್ಲೆಯಲ್ಲಿಯೂ ಸಹ ಯಾವ ಹೊಸ ಕೆರೆಯನ್ನೂ ಮಾಡುತ್ತಿಲ್ಲ. ಬರೀ ಹಳೆ ಕೆರೆಗಳನ್ನು ದುರಸ್ತಿ ಮಾಡಿ ಹೂಳನ್ನು ಎತ್ತಿದರೆ ನಮ್ಮ ಇರಿಗೇಷನ್ ಏನಿದೆ ಅದನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಈ ಕೆರೆಕಲ್ಯಾಣದ ಬಗ್ಗೆ ಏನು ಆಶ್ವಾಸನೆಯನ್ನು ಕೊಟ್ಟಿದ್ದಾರೋ ಅದನ್ನು ತಾವು ಅಳವಡಿಸಿಕೊಂಡು ಅದಕ್ಕೆ ಸಾಕಷ್ಟು ಹಣವನ್ನು ಒದಗಿಸಿ ಈ ಕಾಮಗಾರಿಗಳನ್ನು ಮಾಡಿಕೊಡಬೇಕೆಂದು ಕೇಳಿಕೊಂಡು ಈ ಸಂದರ್ಭದಲ್ಲಿ ತಾವು ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಬೈರೇಗೌಡ:– ಮಾನ್ಯ ಅಧ್ಯಕ್ಷರೇ, 6.30 ಆಯಿತು.

ಅಧ್ಯಕ್ಷರು:– ಈಗ ತಾನೇ ತಾವೆಲ್ಲಾ ಹೇಳಿದ್ದೀರಿ. ನಾವು ಮಾತನಾಡುವುದಕ್ಕೆ ಅವಕಾಶವನ್ನು

ಕೊಡಿ, ಎಷ್ಟು ವೇಳೆಯಾದರೂ ಕುಳಿತುಕೊಳ್ಳುತ್ತೇವೆಂದು ತಾವು ಹೇಳಿದ್ದೀರಿ. ಮತ್ತೆ ಈಗ ತಾವೇ ಹೋಗುತ್ತೇವೆಂದರೆ ಹೇಗೆ ? ಉತ್ತರವನ್ನೂ ಸಹಿತ ಕೊಡುವುದಕ್ಕೆ ಒಪ್ಪಿಕೊಂಡಿದ್ದೀರಿ. ಮುಗಿಸೋಣ.

ಶ್ರೀ ಸಿ. ಬೈರೇಗೌಡ:– ಉತ್ತರವನ್ನು ನಾಳೆ ಕೊಡಿಸುತ್ತೀರಾ ?

ಅಧ್ಯಕ್ಷರು:– ನಾಳೆಯ ಕಾರ್ಯಕ್ರಮವೇ ಬೇರೆ ಇದೆ. ಅದಕ್ಕಾಗಿ ನಾನು ಇದನ್ನು ಮೊದಲೇ ಸದನದ ಮುಂದೆ ಇಟ್ಟೆ. ಅವರು ಉತ್ತರ ಕೊಡಬೇಕಾಗಿದೆ. ಅದಕ್ಕೆ ತಾವು ನಾವೆಲ್ಲಾ ಮಾತನಾಡುತ್ತೇವೆ. ಉತ್ತರ ಕೊಡಲಿ, ರಾತ್ರಿ 10 ಗಂಟೆಯಾದರೂ ಕುಳಿತುಕೊಳ್ಳುತ್ತೇವೆ. ಅಂತ ತಮ್ಮಿಂದ ಒಪ್ಪಿಗೆಯನ್ನು ಪಡೆದ ನಂತರ ನಾನು ಕಾರ್ಯಕ್ರಮವನ್ನು ಹಾಕಿಕೊಂಡೆ.

† ಶ್ರೀ ಎ.ಎಸ್. ನಾಡಗೌಡ (ಮುದ್ದೇಬಿಹಾಳ್):– ಮಾನ್ಯ ಅಧ್ಯಕ್ಷರೇ, ಸದನದ ಮುಂದೆ ಇರುವಂತಹ ಬೇಡಿಕೆಗಳನ್ನು ನಾನು ಸ್ವಾಗತಿಸುತ್ತಾ, ಮುಖ್ಯವಾಗಿ ಹಿರಿಯರಾದಂತಹ ಡಾ|| ಮಲಕರೆಡ್ಡಿಯವರು ಬಹಳ ಸುಗಮವಾಗಿ ಕೃಷ್ಣ ಯೋಜನೆಯ ಬಗ್ಗೆ ಈ ಸದನಕ್ಕೆ ಮಾಹಿತಿಯನ್ನು ಕೊಟ್ಟಿದ್ದಾರೆ. ನಾವು ಎರಡು ಸಾವಿರ ಇಸವಿಯಲ್ಲಿ ಈ ಕೃಷ್ಣ ಬೇಸನ್ ಅನ್ನು ಕಂಪ್ಲೀಟ್ ಮಾಡದೇ ಇದ್ದರೆ ನಮಗೆ ಪಡೆದಿರುವಂತಹ ಬಜಾವತ್ ಅವಾರ್ಡ್ ಪ್ರಕಾರ ಇರುವಂತಹ 750 ಟಿ.ಎಂ.ಸಿ ನೀರನ್ನು ಉಪಯೋಗ ಮಾಡಿಕೊಳ್ಳದೇ ಇದ್ದರೆ ಬೇರೆ ಈಗಿರುವಂತಹ ಆಂಧ್ರದಲ್ಲಾಗಲಿ, ಅಥವಾ ಮಹಾರಾಷ್ಟ್ರದವರಾಗಲಿ ಹೆಚ್ಚಿನ ನೀರನ್ನು ಪಯೋಗ ಮಾಡಿಕೊಳ್ಳಬೇಕು ಎನ್ನವಂತಹ ಅರ್ಥ ಅಲ್ಲಿ ತೋರಿಸುತ್ತದೆ. ಅದನ್ನು ತಿಳಿದುಕೊಳ್ಳುವುದು ಬಹಳ ಅವಶ್ಯಕತೆ ಇವತ್ತಿನ ದಿವಸ ಇದೆ. ಇದಕ್ಕೋಸ್ಕರ ಹೆಚ್ಚಿನ ದುಡ್ಡನ್ನು ಸರ್ಕಾರ ಬಿಡುಗಡೆ ಮಾಡಿ ವೇಗದಲ್ಲಿ ಕೆಲಸವನ್ನು ಕೈಗೊಂಡರೆ ಮಾತ್ರ ಇದನ್ನು ಮುಗಿಸಲಿಕ್ಕೆ ಸಾಧ್ಯವಿದೆ ಎಂದು ನನ್ನ ಅನಿಸಿಕೆಯಾಗಿದೆ. ಅದರ ಜೊತೆಗೆ ನಾನು ಹಿಂದೆ ಇದಕ್ಕೆ ಶ್ರಮ ವಹಿಸಿದಂಥ ಮಂತ್ರಿಗಳನ್ನು ಇವತ್ತು ಸ್ಮರಿಸದೆ ಇದ್ದರೆ ತಪ್ಪಾಗುತ್ತದೆ. ನಮ್ಮ ಹಿಂದಿನ ನೀರಾವರಿ ಸಚಿವರಾದಂತಹ ಮಲ್ಲಾರಿಗೌಡ ಪಾಟೀಲ್‌ರವರು ಮತ್ತು ಈ ಸಂದರ್ಭದಲ್ಲಿ ಹಿಂದಿನ ಮುಖ್ಯಮಂತ್ರಿಯವರನ್ನು ಕೂಡ ಸ್ಮರಿಸಬೇಕಾಗುತ್ತದೆ. ನೀರಾವರಿ ಯೋಜನೆಗ ದುಡ್ಡನ್ನು ಬಜೆಟ್‌ನಲ್ಲಿ ಕೊಟ್ಟಿದ್ದಾರೂ, ಸ್ವಲ್ಪವೇ ಹಣ ಖರ್ಚಾಗಿದೆ ಅನ್ನುವುದಕ್ಕೆ ಕಾರಣ ಇದೆ. ಹಲವಾರು ಕೇಸರ್ಸ್‌ಗಳು ಕೋರ್ಟಿನಲ್ಲಿ ಪೆಂಡಿಂಗ್ ಇರುವಂತಹ ಕೇಸಸ್ ಆಗಿದೆ. ಅದನ್ನು ಇತ್ಯರ್ಥಮಾಡಲು ಆಗದೇ ಇರುವಂತಹ ಕಾರಣದಲ್ಲಿ ಆ ಹಣವನ್ನು ಸರಿಯಾದ ರೀತಿಯಿಂದ ಉಪಯೋಗ ಮಾಡಲಿಕ್ಕೆ ಆಗಲಿಲ್ಲ, ಖರ್ಚು ಮಾಡಲಿಕ್ಕೆ ಆಗಲಿಲ್ಲ. ಇಷ್ಟಾದರೂ ಕೂಡ ನಮ್ಮ ಹಿಂದಿನ ಸಚಿವರಾಗಿದ್ದಂತಹ ಮಲ್ಲಾರಿ ಗೌಡರು ಯೋಜನೆಗಳನ್ನು ಎಲ್ಲೆಲ್ಲಿ ಇತ್ಯರ್ಥ ಮಾಡಬಹುದು. ಕೇಸನ್ನು ಎಲ್ಲಿ ಹಿಂದಕ್ಕೆ ತೆಗೆದುಕೊಳ್ಳಬಹುದೋ ಅಥವಾ ಮತ್ತೊಂದು ಮಾಡಬಹುದೋ ಅಲ್ಲಿ ನೆಗೋಸೀಯೇಷನ್ ಮಾಡಿ ತೆಗೆದುಕೊಂಡು ಪ್ರಾರಂಭ ಮಾಡಿದ್ದನ್ನು ನಾವೂ ಸಹಿತ ಕಣ್ಣಿನಲ್ಲಿ ನೋಡಿದ್ದೇವೆ. ಸುಮಾರು 5 ವರ್ಷದಿಂದ ಆಲಮಟ್ಟಿ ಡ್ಯಾಮಿನ ಕೆಲಸ ಆಗಿರಲಿಲ್ಲ. ಕಿಂಭಾವಿ ಕೆನಾಲ್‌ನ ಕೆಲಸವಾಗಿರಲಿಲ್ಲ. ಉಪಮುಖ್ಯಮಂತ್ರಿಗಳು ಅವರೇ ಸ್ವಂತ ಅಲ್ಲಿಗೆ ಹೋಗಿ ನೋಡಿದ್ದಾರೆ. ಸ್ನೇಹಿತರಾದಂತಹ ಮೇಟಿಯವರು ಗ್ಯಾಮನ್ ಇಂಡಿಯಾ ಕೆಲಸ ಸರಿಯಾಗಿ ನಡೆದಿಲ್ಲ ಅಂತ ಹೇಳಿದರು. I feel it is a reputed company.

ಗ್ಯಾಮನ್ ಇಂಡಿಯಾದವರು ಯಾವ ರೀತಿ ಯಾವ ವೇಗದಿಂದ ಕೆಲಸ ಮಾಡುತ್ತಿದ್ದಾರೆ ಅನ್ನುವುದನ್ನು ನಾವು ನೋಡಿದ್ದೇವೆ. ಆದರೆ ಹಿಂದಿರುವಂತಹ ಸರ್ಕಾರ 5 ವರ್ಷದಲ್ಲಿ ಮಾಡಲಾರದ ಕೆಲಸವನ್ನು ಪ್ರಾರಂಭವಾದರೂ ಮಾಡಿದ್ದೇವೆ, ಆದ್ದರಿಂದ ಸರ್ಕಾರ ಮಾಡಿದಂತಹ ಪ್ರಯತ್ನಕ್ಕೆ ನಾವೆಲ್ಲರೂ ಬೆಂಬಲವನ್ನು ಸೂಚಿಸದೇ ಇದ್ದರೆ ನಾವು ಮಾಡುತ್ತಿರುವಂತಹದ್ದು ಸರಿಯಲ್ಲ ಅನ್ನುವುದು ನನ್ನ ಅನಿಸಿಕೆಯಾಗಿದೆ. ನಾನು ಹೆಚ್ಚಿಗೆ ಸಮಯವನ್ನು ತೆಗೆದುಕೊಳ್ಳದೆ ಕೇವಲ ಕೆಲವೊಂದು ವಿಚಾರಗಳ ಬಗ್ಗೆ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಆಲಮಟ್ಟಿ ಲೆಫ್ಟ್ ಬ್ಯಾಂಕ್ ಕೆನಲ್

ಇದು ಬಹಳ ಮುಖ್ಯವಾದ ಕಾಲುವೆ. ಈ ಮಾತನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ ಅಂದರೆ ಮಾನ್ಯ ಸ್ನೇಹಿತರಾದಂತಹ ಮೇಟಿಯವರು ಹೇಳಿದರು. ನಾವು ಊದಿನ ಕಡ್ಡಿ ಇದ್ದಹಾಗೆ ಸುಟ್ಟುಕೊಂಡು ಎಲ್ಲರಿಗೂ ಸುಗಂಧವನ್ನು ಕೊಡುವಂತಹವರು ಅಂತ. ಇದು ನಿಜಕ್ಕೂ ನೂರಕ್ಕೆ ನೂರು ಸತ್ಯವಿರುವ ಮಾತಾಗಿದೆ. ಅಲಮಟ್ಟಿ ಮತ್ತು ನಾರಾಯಣಪುರದ ಜಲಾಶಯದಿಂದ ಬಿಜಾಪುರ ಜಿಲ್ಲೆಯ ಫಲವತ್ತಾದಂತಹ ಭೂಮಿ ಪೂರ್ತಿಯಾಗಿ ಮುಳುಗಡೆಯಾಗಿ ಹೋಗಿದೆ. ನಾನು ಹೋದಾಗಲೆಲ್ಲಾ ಭಾಷಣವನ್ನು ಮಾಡುತ್ತಿದ್ದೆ. ಎಲ್ಲೆಲ್ಲಿಯವರೊ ಬಿಜಾಪುರ, ಕೃಷ್ಣ ದಂಡೆಯ ಮೇಲೆ ವರಗಳು ಇವೆ ಅಂದರೆ ಓಡಿಕೊಂಡು ಬಂದು ಕನ್ಯೆಯನ್ನು ಕೊಡುವಂತಹ ಪರಿಸ್ಥಿತಿ ಮುಂಚೆ ಇತ್ತು. ಈಗ ಬಿಜಾಪುರ ಜಿಲ್ಲೆಯ ಹೊಳೆದಂಡೆಗೆ ಇರುವಂತಹ ಕೃಷ್ಣ ದಂಡೆಯ ಮೇಲೆ ಬರುವಂತಹ ಯಾರಾದರೂ ವರಗಳು ಇವೆ ಅಂದರೆ ಯಾರೂ ಕನ್ಯೆಯನ್ನು ಕೊಡುವಂತಹ ಪರಿಸ್ಥಿತಿಯಲ್ಲಿಲ್ಲ. ಆ ಜನರು ಕಂಗಾಲಾಗಿದ್ದಾರೆ. ನಾವು ಪೂರ್ತಿ ಫಲವತ್ತಾದ ಭೂಮಿಯನ್ನು ಕಳೆದುಕೊಂಡೆವು. ಸರಿಯಾದಂತಹ ರಿಹ್ಯಾಬಿಲಿಟೇಷನ್ಸ್ ಸ್ಕೀಮ್ಸ್ ಇಲ್ಲ, ಮತ್ತೊಂದು ಇಲ್ಲ, ಹೀಗಾಗಿ ಕೇವಲ ಒಂದೇ ಒಂದು ಆಸೆ ನಮಗೆ ಇರುವುದು ಅಂದರೆ ಆ ಲೆಫ್ಟ್ ಬ್ಯಾಂಕ್ ಕೆನಾಲ್ ಏನಿದೆ ಅದು ನಮಗೆ ಕನ್ಸೋಲೇಷನ್ ಪ್ರೈಸ್ ಇದ್ದಹಾಗೆ. ನಾವು ತ್ಯಾಗವನ್ನು ಏನು ಮಾಡಿದ್ದೇವೆ ಅದಕ್ಕೊಂದು ಪುರಸ್ಕಾರ ಏನು ಅಂದರೆ ನಮಗೆ ಲೆಫ್ಟ್ ಬ್ಯಾಂಕ್ ಕೆನಾಲ್ ಮಾತ್ರ. ಆ ಕನ್ಸೋಲೇಷನ್ ಕೊಡುವುದಕ್ಕೂ ಕೂಡ ಇವತ್ತು ವಿಳಂಬವಾಗುತ್ತಿದೆ. ಅದನ್ನು ಮಾನ್ಯ ಮಲ್ಲಾರಿಗೌಡ ಪಾಟೀಲರು ಪ್ರಾರಂಭ ಮಾಡಿಸಿದರು. ತಾವೇ ಸ್ವಂತ ಅಲ್ಲಿ ನಿಂತುಕೊಂಡು ಹೋಗಿ ಪ್ರಾರಂಭ ಮಾಡಿಸಿದರು.

ಈಗ ಏನಾಗಿದೆಯೆಂದರೆ ಈ ವರ್ಷಕ್ಕೆ ಕೇವಲ 12 ಕಿಲೋಮೀಟರ್ ತೆಗೆದುಕೊಳ್ಳಬೇಕೆನ್ನುವ ವಿಚಾರವಾಗಿದೆ. ಜನರಲ್ಲಿ ಎಷ್ಟೊಂದು ಉತ್ಸಾಹ ಬಂದಿದೆಯೆಂದರೆ ನಮ್ಮ ಯಾವ ಹೊಲ ಹೋದರೂ ಚಿಂತೆ ಇಲ್ಲ, ನಾವು ಅದನ್ನು ಕೊಡುವುದಕ್ಕೆ ಸಿದ್ಧರಿದ್ದೇವೆ, ನಾವು ಕನ್‌ಸೆಂಟ್ ಕೊಡುತ್ತೇವೆ. ಅಕ್ವಿಸಿಷನ್ ಪ್ರೊಸೀಡಿಂಗ್ಸ್ ಮತ್ತೊಂದು ನಡೆಯುವುದಕ್ಕೆ ನಾವು ಕನ್‌ಸೆಂಟ್ ಕೊಡುವುದಕ್ಕೆ ತಯಾರಾಗಿದ್ದೇವೆನ್ನುವ ಮಟ್ಟಕ್ಕೂ ಇವತ್ತು ಜನರು ಹೋಗಿದ್ದಾರೆ. ಅಲ್ಲಿರತಕ್ಕಂಥ ಲೋಕಲ್ ಕಂಟ್ರಾಕ್ಟರ್‌ಗಳನ್ನು ನಾವು ಇನ್ವಾಲ್ವ್ ಮಾಡಿಕೊಳ್ಳಬಹುದು. ಎಂಬ್ಯಾಂಕ್‌ಮೆಂಟ್ ಬಗ್ಗೆ ಮಾತ್ರ ನಾನು ಮಾತನಾಡುತ್ತಿದ್ದೇನೆ. ಈ ಕೆನಾಲ್ ಲೈನಿಂಗ್, ಸೊಫಿಸ್ಟಿಕೇಡ್ ಟೆಕ್ನಾಲಜಿ ಮತ್ತೊಂದು ಬೇಕಾಗುತ್ತದೆ. ಅದನ್ನು ಬೇರೆ ರೆಪ್ಯೂಟೆಡ್ ಕಂಟ್ರಾಕ್ಟರ್‌ಗೆ ಕೊಡಿ. ಆ ಮಾತು ಬೇರೆ. ಆದರೆ, ಎಂಬ್ಯಾಂಕ್‌ಮೆಂಟ್ ಮಾಡುವುದರಲ್ಲಿ ನೆಲ ಅಗೆದು ಕೆನಾಲ್ ತೋಡುವ ಕೆಲಸದಲ್ಲಿ ಲೋಕಲ್ ಜನರನ್ನು ಇನ್ವಾಲ್ವ್ ಮಾಡಿದರೆ ಅವರಿಗೂ ಕೂಡ ಹೆಚ್ಚಿನ ಆಸಕ್ತಿ ಬರುತ್ತದೆ. ಹೆಚ್ಚಿನ ಎಂಪ್ಲಾಯ್‌ಮೆಂಟ್ ಕೊಡುವುದಕ್ಕೂ ಸಾಧ್ಯವಾಗುತ್ತದೆ. ಹಿಂದೆ ಶ್ರೀ ಮಲ್ಲಾರಿಗೌಡ ಪಾಟೀಲ್‌ರವರು ಕೆಂಬಾವಿ ಕೆನಾಲ್‌ನಲ್ಲಿ ಈ ಪ್ರಯೋಗವನ್ನು ಮಾಡಿದ್ದಾರೆ, ಮತ್ತು ಅದರಲ್ಲಿ ಯಶಸ್ವಿ ಕೂಡ ಆಗಿದ್ದಾರೆ. ಅಲ್ಲಿ ಕೇವಲ ಒಂದು ವರ್ಷದಲ್ಲಿ 40 ಕಿಲೋಮೀಟರ್ ಕೆನಾಲ್ ಕೆಲಸವನ್ನು ಪೂರ್ತಿಗೊಳಿಸಿದ್ದಾರೆ. ಅದಕ್ಕೋಸ್ಕರ ಈ ಒಂದು ಉದಾಹರಣೆಯನ್ನು ತೆಗೆದುಕೊಂಡು ನಮ್ಮ ಆಲಮಟ್ಟಿಯಲ್ಲೂ ಕೂಡ ಈ ಕಾರ್ಯಕ್ರಮ ಹಾಕಿಕೊಂಡು ಕೆನಾಲ್ ಕೆಲಸವನ್ನು ಪೂರ್ತಿಗೊಳಿಸುವಂತಹ ಪ್ರಯತ್ನವನ್ನು ಮಾಡಬೇಕು. ಇದನ್ನು ಮಾಡಿದಾಗ 65 ಸಾವಿರ ಎಕರೆಗಳಿಗೆ ನಮ್ಮ ಮುದ್ದೇಬಿಹಾಳ ತಾಲ್ಲೂಕಿನಲ್ಲಿ ವಿಶೇಷವಾಗಿ ನೀರು ಕೊಡುವುದಕ್ಕೆ ಸಾಧ್ಯವಿದೆ. ನೀರಾವರಿ ಮಾಡುವುದಕ್ಕೆ ಸಾಧ್ಯವಿದೆ ಎಂಬುದನ್ನು ನಾವು ಪರಿಗಣಿಸಬಹುದು. ಇದರ ಜೊತೆಗೆ ಮುಳವಾಡ ಏತ ನೀರಾವರಿ. ಇದು ಬಿಜಾಪುರ ಜಿಲ್ಲೆಯಲ್ಲಿರುವ ಇನ್ನೊಂದು ಬೃಹತ್ ಯೋಜನೆಯಾಗಿದೆ. ಅದನ್ನೂ ಕೂಡ ಪ್ರಾರಂಭ ಮಾಡಿದಂತಹ ಶ್ರೇಯಸ್ಸು ಈ ಸರ್ಕಾರಕ್ಕೆ ಬರುತ್ತದೆ. ಆದರೆ, ಅದಕ್ಕೆ ಬಿಡುಗಡೆಯಾದ ಹಣವನ್ನು ಸರಿಯಾದ ರೀತಿಯಲ್ಲಿ ವೆಚ್ಚ ಮಾಡಿಲ್ಲ. ಅದಕ್ಕೆ ಸರ್ಕಾರ ಇನ್ನೂ ಹೆಚ್ಚಿನ ದುಡ್ಡನ್ನು ತೊಡಗಿಸಬೇಕಾಗಿದೆ. ಏತಕ್ಕೆಂದರೆ, ಇದರ ಮೊದಲ ಹಂತವನ್ನು ಮುಗಿಸುವುದಕ್ಕೆ 140 ಕೋಟಿ

ರೂಪಾಯಿಗಳು ಬೇಕಾಗುತ್ತದೆ. ಪೂರ್ತಿ ಯೋಜನೆಗೆ ಅಂದರೆ, ಮೂರನೇ ಹಂತವನ್ನು ಮುಗಿಸಬೇಕಾದರೆ ಒಂದು ಸಾವಿರ ಚಿಲ್ಲರೆ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಕೊನೇ ಪಕ್ಷ ಒಂದನೇ ಹಂತವನ್ನು ಪೂರ್ಣಗೊಳಿಸಿದಲ್ಲಿ ಬಾಗೇವಾಡಿ, ಬಸವನ ಬಾಗೇವಾಡಿ ಮತ್ತು ಅಲ್ಲಿರುವ ಸುತ್ತಮುತ್ತಲಿನ ಕ್ಷೇತ್ರವನ್ನು ನಾವು ನೀರಾವರಿ ಮಾಡುವುದಕ್ಕೆ ಸಾಧ್ಯವಿದೆ. ಅದಕ್ಕೆ ಪವರ್ ಪ್ರಾಬ್ಲಮ್ ಬರುವುದಿಲ್ಲ. ಏಕೆಂದರೆ, ಆಲಮಟ್ಟಿಯಿಂದ ಜನರೇಟ್ ಆಗುವಂತಹ ಎಲೆಕ್ಟ್ರಿಸಿಟಿಯನ್ನೇ ಈ ಲಿಫ್ಟ್ ಇರಿಗೇಷನ್‌ಗೆ ಬಳಸಬೇಕೆನ್ನುವುದು ಹಿಂದೆ ಮಾಡಿದಂತಹ ಯೋಜನೆಯಾಗಿದೆ. ಅದಕ್ಕೆ ತಾವು ಆ ಕಡೆ ನೋಡದೆ ಇದಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಇವೆರಡು ಬಹಳ ಮುಖ್ಯವಾದಂಥ ಯೋಜನೆಗಳು ನಮ್ಮ ಬಿಜಾಪುರ ಜಿಲ್ಲೆಗೆ ಸಂಬಂಧಪಟ್ಟಿರುವುದಾಗಿದೆ. ಅದರ ಜೊತೆಜೊತೆಗೆ ಮತ್ತೊಂದು ಮುಖ್ಯವಾದ ವಿಷಯವೆಂದರೆ, ಅಡಿಷನಲ್ ಸಬ್‌ಮರ್ಜ್ ಆಗುತ್ತದೆ. ಅದು ಏಕೆ ಆಗುತ್ತದೆ ಎಂದರೆ ನೀರಿನ ಮಟ್ಟ ಹೆಚ್ಚಾಗಿದೆಯೆಂದು ನಾನು ಹೇಳುತ್ತಿಲ್ಲ. ಈ ಸರ್ವೆ ಮಾಡುವಂತಹ ಸಂದರ್ಭದಲ್ಲಿ ಒಮ್ಮೊಮ್ಮೆ ಲೋಪದೋಷಗಳು ಆಗಿರುತ್ತದೆ. ಡಿಮಾರ್ಕೇಷನ್ ತೋರಿಸುವುದರಲ್ಲಿ ಸ್ವಲ್ಪ ಲೋಷದೋಷಗಳಾಗಿರುತ್ತವೆ. ಈಗ ಉದಾಹರಣೆಗೆ, ನಮ್ಮ ಊರಿನಲ್ಲಿ ನನ್ನ ಹೊಲದಲ್ಲಿ ಏನಾಗಿದೆಯೆಂದರೆ ಸಬ್‌ಮರ್ಜ್ ಎಫ್.ಆರ್.ಎಲ್. ಕಲ್ಲು ಹಾಕಿ ಅಲ್ಲಿ ಮಾರ್ಕ್ ಮಾಡಿ ಏನು ಹೋಗಿದ್ದರು, ಅದಕ್ಕಿಂತ ಹೆಚ್ಚಾಗಿ ನಾವು ಹೊಲಗಳನ್ನು ಕಳೆದುಕೊಳ್ಳುತ್ತಿದ್ದೇವೆ. ಈ ರೀತಿಯಾಗಿ ಹಲವಾರು ಹಳ್ಳಿ ದಂಡೆಯಲ್ಲಿರತಕ್ಕಂಥ ಎಡದಂಡೆ, ಬಲದಂಡೆ ಪೂರ್ತಿಯಾಗಿ ಅಡಿಷನಲ್ ಸಬ್‌ಮರ್ಜ್ ಆಗಿರುವಂತಹ ಭೂಮಿಗಳಿಗೆ ಪರಿಹಾರವನ್ನು ಕೊಡುವ ಬಗ್ಗೆ ಯೋಚನೆ ಮಾಡಬೇಕು. ಈಗ ಮಲೇರಿಯಾ, ಕಾಲರಾ ಜಾಸ್ತಿಯಾಗುತ್ತಿದೆ. ಇಂಥ ನಾನಾ ರೀತಿಯ ರೋಗಗಳು ಮುಳುಗಡೆಯಾಗದೆ ಇರುವಂತಹ ಕೆಲವು ಹಳ್ಳಿಗಳಲ್ಲೂ ಕೂಡ ಜಾಸ್ತಿಯಾಗುತ್ತಿದೆ. ಅದು ಏನಾಗಿದೆಯೆಂದರೆ ಅವು ಹೈಯರ್ ಅಪ್ಸ್‌ನಲ್ಲಿರುವುದರಿಂದ ಮತ್ತು ನಾವು ಇದನ್ನು ಡಿಸ್ಟೆನ್ಸ್‌ವೈಸ್ ತೆಗೆದುಕೊಂಡಾಗ ಅದು ಬಹಳ ಹತ್ತಿರ ಇದೆ. ಇಲ್ಲಿ ನೀರು ಇದ್ದರೆ ಅದರ ಮೇಲುಗಡೆ ಊರುಗಳಿವೆ. ಉದಾಹರಣೆಗೆ, ನನ್ನ ಕ್ಷೇತ್ರದಲ್ಲಿ ಹುಲಕುಂಟೆ ಎನ್ನುವ ಒಂದು ಊರು; ಅದೇ ರೀತಿಯಾಗಿ ಅಮರಗೋಳ್, ಬಯಲ್‌ಪುರ್, ಹಡಗಲಿ ಎನ್ನುವ ಊರುಗಳು ಬಹಳ ಹತ್ತಿರವಿರತಕ್ಕಂಥಾದ್ದು. ಅವುಗಳನ್ನು ಸಬ್‌ಮರ್ಜ್ ಎಂದು ಕನ್ಸಿಡರ್ ಮಾಡಿಲ್ಲ. ಪ್ರಾಕ್ಟಿಕಲಿ ಸಬ್‌ಮರ್ಜ್ ಆಗುವುದಿಲ್ಲವೆಂದು ಅವನ್ನು ಸಬ್‌ಮರ್ಜ್ ಪ್ಲಾನ್‌ನಲ್ಲಿ ತೆಗೆದುಕೊಂಡಿಲ್ಲ. ಇವತ್ತು ನಾವು ಅಲ್ಲಿ ಈ ಎಪಿಡೆಮಿಕ್ಸ್ ಬಗ್ಗೆ ನಮ್ಮ ಡಿ.ಹೆಚ್.ಓ (ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ್)ರವರಿಂದ ಅಂಕಿ–ಅಂಶಗಳನ್ನು ತೆಗೆದುಕೊಂಡು ನೋಡಿದಾಗ ಅಲ್ಲಿ ಸಿಕ್ಕಾಪಟ್ಟೆ ಜಾಸ್ತಿಯಾಗಿರುವುದು ಕಂಡುಬರುತ್ತದೆ. ಆದ್ದರಿಂದ, ಇದರ ಬಗ್ಗೆಯೂ ಸರ್ಕಾರ ಚಿಂತನೆ ಮಾಡಬೇಕು. ಅಂತಹ ಹಳ್ಳಿಗಳನ್ನು ರಿಹ್ಯಾಬಿಲಿಟೇಟ್ ಮಾಡುವಂಥ ಒಂದು ಯೋಜನೆಯನ್ನು ಸರ್ಕಾರ ಹಾಕಿಕೊಳ್ಳಬೇಕು. ಈ ರಿಹ್ಯಾಬಿಲಿಟೇಷನ್ ಅನ್ನು ವಿಂಗಡಣೆ ಮಾಡಿ ಅದನ್ನು ರೆವಿನ್ಯೂ ಇಲಾಖೆಗೆ ಕೊಟ್ಟುಬಿಟ್ಟಿದ್ದಾರೆ. ಇದು ತಾಪತ್ರಯವಾಗಿ ಬಿಟ್ಟಿದೆ. ನಾವು ರೆವಿನ್ಯೂ ಇಲಾಖೆಗೆ ಗಂಟು ಬೀಳಬೇಕೋ ? ಇವರಿಗೆ ಗಂಟು ಬೀಳಬೇಕೋ ? ಎಂಬುದು ಅರ್ಥವೇ ಆಗುವುದಿಲ್ಲ. ಕನೆಕ್ಟೆಡ್ ವಿಷಯುಗಳನ್ನು ಮಾತನಾಡಬೇಕಾದರೆ ನಾವು ಉಪ ಮುಖ್ಯಮಂತ್ರಿಗಳನ್ನು ಕೇಳಬೇಕು.

ಅವರು ಹೇಳುತ್ತಾರೆ: ಈ ರಿಹ್ಯಾಬಿಲಿಟೇಷನ್ ಸ್ಕೀಮ್ಸ್ ರೆವಿನ್ಯೂ ಡಿಪಾರ್ಟ್‌ಮೆಂಟಿಗೆ ಬರುತ್ತದೆ. ನೀವು ಅವರಲ್ಲಿಗೆ ಹೋಗಿ ಮನವಿ ಮಾಡಿಕೊಳ್ಳಿ ಎಂದು. ನಾವು ಎಷ್ಟೊಂದು ಏಜೆನ್ಸಿ ಕಡೆ ಹೋಗಬೇಕೆಂಬುದು ನಮಗೆ ತಿಳಿಯುತ್ತಿಲ್ಲ. ಆದ್ದರಿಂದ, ರಿಹ್ಯಾಬಿಲಿಟೇಷನ್ ಅನ್ನು ರೆವಿನ್ಯೂ ಡಿಪಾರ್ಟ್‌ಮೆಂಟಿಗೆ ಏನು ಕೊಟ್ಟಿದ್ದೀರಿ. ಅದನ್ನು ಪುನಃ ದಯವಿಟ್ಟು ಇರಿಗೇಷನ್ ಇಲಾಖೆಯವರು ತೆಗೆದುಕೊಂಡು ನಮಗೆ ಅನುಕೂಲ ಮಾಡಿಕೊಡುವಂಥ ಒಂದು ಯೋಜನೆ ಹಾಕಿ. ಈ ಪ್ರಾಜೆಕ್ಟ್

ಏರಿಯಾದಲ್ಲಿ ಸಂಬಂಧಪಟ್ಟ ಇಂಜಿನಿಯರ್ಸ್ ಜೊತೆಯಲ್ಲಿ ನಮಗೆ ಕಾಂಟ್ಯಾಕ್ಟ್ ಹೆಚ್ಚಾಗಿರುತ್ತದೆ. ನಾವು ಅವರ ಹತ್ತಿರ ಹೋಗಿ ಇರತಕ್ಕ ತೊಂದರೆಗಳನ್ನು ಹೇಳಿಕೊಳ್ಳಬಹುದು, ಅದನ್ನು ಕಾರ್ಯರೂಪಕ್ಕೆ ನ[illegible]ಹುದು. ಇವತ್ತು ರಿಹ್ಯಾಬಿಲಿಟೇಷನ್ ಕಮಿಟಿ ಮೀಟಿಂಗ್ ಎಂದು ನಾವು ಜಿಲ್ಲೆಯಲ್ಲಿ ಮಾಡುತ್ತೇವೆ. ಮೀಟಿಂಗ್ ಅನ್ನು ತಿಂಗಳಿಗೊಮ್ಮೆ ಮಾಡುತ್ತೇವೆ. ಮೊನ್ನೆ ಇಲ್ಲಿ ಅಧಿವೇಶನ ನಡೆಯುತ್ತಿರಬೇಕಾದರೆ ಅಲ್ಲಿ ಒಂದು ಮೀಟಿಂಗ್ ಇಟ್ಟುಕೊಂಡರು. ನಮಗೆ ಯಾರಿಗೂ ಆ ಮೀಟಿಂಗ್‌ಗೆ ಹೋಗುವುದಕ್ಕಾಗಲಿಲ್ಲ. ನಮಗೆ ಅಲ್ಲಿ ಏನು ರೆಸಲ್ಯೂಷನ್ ಪಾಸ್ ಆಯಿತು ಎನ್ನುವುದು ಗೊತ್ತಿಲ್ಲ. ಆದ್ದರಿಂದ, ದಯವಿಟ್ಟು ಅದನ್ನು ಇರಿಗೇಷನ್ ಡಿಪಾರ್ಟ್‌ಮೆಂಟಿಗೆ ಪುನಃ ವಹಿಸಿಕೊಡಿ. ಮೊದಲು ಅದನ್ನು 'ಕಾಡಾ' ದಲ್ಲಿ ಮಾಡುತ್ತಿದ್ದರು.ತಾವು ಅದನ್ನು ಅವರಿಗೆ ವಹಿಸಿದರೆ ಚೆನ್ನಾಗಿರುತ್ತದೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಕಾಂಪನ್‌ಸೇಷನ್ ಎಂದರೆ ಭೂಮಿ ಪೂರ್ತಿ ಮುಳುಗಡೆ ಆಗಿರುವಂತಹ ಜನರು ಏನಿದ್ದಾರೆ the people who have totally lost their lands in submergence ಅವರಿಗೆ ವಿಶೇಷವಾದಂತಹ ಒಂದು ಯೋಜನೆ ' ಕಾಡಾ'ದಲ್ಲಿ ಇದೆ. ಮೊದಲು 35 ಸಾವಿರ ರೂಪಾಯಿ ಕೊಡುತ್ತಿದ್ದರು. ಈಗ ಅದನ್ನು 60 ಸಾವಿರ ರೂಪಾಯಿಗಳೆಂದು ಮಾಡಿದ್ದಾರೆಂದು ಕೇಳಿದ್ದೇನೆ. ಆದರೆ, ಇದು ಯಾವ ರಿಹ್ಯಾಬಿಲಿಟೇಷನ್ ಸೆಂಟರ್‌ಗೋಸ್ಕರ ಪೂರ್ತಿ ಹೊಲವನ್ನು ಕಳೆದಕೊಂಡ ರೈತರು ಇದ್ದಾರಲ್ಲಾ ಅವರಿಗೆ ಅನ್ವಯವಾಗುತ್ತಿಲ್ಲ. ಈ ತಾರತಮ್ಯ ಏಕೆ ಎಂಬುದು ನಮಗೆ ತಿಳಿಯುತ್ತಿಲ್ಲ. Afterall, they have also lost the lands for the project itself. ಅವನೂ ಪ್ರಾಜೆಕ್ಟ್‌ನಿಂದ ಅಫೆಕ್ಟೆಡ್ ಆದಂಥ ಮನುಷನೇ. ಅವನಿಗೆ ಏಕೆ ತಾರತಮ್ಯ ಮಾಡುತ್ತಿದ್ದೀರೋ ಗೊತ್ತಿಲ್ಲ. ನಮ್ಮಲ್ಲಿ 35, 40, 75 ಎಕರೆಗಳು, ಒಂದು ಕಡೆ ನೂರು ಎಕರೆಗಳಷ್ಟು ಹೊಲವನ್ನು ರೈತ ಕಳೆದುಕೊಂಡಿದ್ದಾನೆ. ಅವನಿಗೆ ಇದು ಲಾಭವಾಗುವುದಿಲ್ಲ. ಇದು ಅವನಿಗೆ ಅನ್ವಯಿಸುವುದಿಲ್ಲ. ಆದರೆ, ಯಾರು ಮುಳುಗಡೆ ಪ್ರದೇಶದಲ್ಲಿ ಎಂದರೆ, ಎಲ್ಲಿ ಕ್ಯಾಚ್‌ಮೆಂಟ್ ಏರಿಯಾದಲ್ಲಿ ಸಬ್‌ಮರ್ಜ್ ಆಗಿದೆ ಅವರಿಗೆ ಮಾತ್ರ ಇದು ಅನ್ವಯವಾಗುತ್ತದೆ ಎನ್ನುವಂತಾದ್ದು ಇದೆ.

ಇಲ್ಲಿ ಆಗುತ್ತಿರುವಂತಹ ತಾರತಮ್ಯವನ್ನು ತಪ್ಪಿಸಿ ಇವರಿಗೂ ಕೂಡ ಆ ಒಂದು ಲಾಭವನ್ನು ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ ಮತ್ತು ಅದೇ ರೀತಿಯಾಗಿ ಈ ಹಳ್ಳಿಗಳಿಗೆ ಹೆಚ್ಚಿನ ಸೌಕರ್ಯಗಳನ್ನು ಕೊಡಬೇಕು. ಅದರಲ್ಲೂ ವಿಶೇಷವಾಗಿ ಪವರ್ ವಿಷಯವಾಗಿ ಹೇಳುವುದಾದರೆ ನಮ್ಮಲ್ಲಿ ಎಲ್ಲಾ ಲಿಫ್ಟ್ ಇರಿಗೇಷನ್ ಮಾಡಿಕೊಂಡಿದ್ದಾರೆ. ಚಿಕ್ಕಪುಟ್ಟ ರೈತರೆಲ್ಲಾ ಲಿಫ್ಟ್ ಇರಿಗೇಷನ್ ಮಾಡಿಕೊಂಡಿದ್ದಾರೆ. ಆದರೆ, ನಾವು ಟೈಲ್ ಎಂಡರ್ಸ್ ಇರುವುದರಿಂದ ನಮಗೆ ಸರಿಯಾದ ರೀತಿಯಲ್ಲಿ ಎಲೆಕ್ಟ್ರಿಸಿಟಿ ಸಪ್ಲೈ ಆಗುತ್ತಿಲ್ಲ. ನಮ್ಮ ಮಾಜಿ ಸಚಿವರಾದಂತಹ ದಿವಂಗತ ಶ್ರೀ ದೇಶ್‌ಮುಖ್ ಅವರು ಪವರ್ ಮಿನಿಸ್ಟರ್ ಆಗಿದ್ದಾಗ 33 ಕೆ.ವಿ.ಎ. ಸ್ಟೇಷನ್ ಆಗಬೇಕೆಂದು ಹೇಳಿ ಸುಮಾರು ಆರು ವರ್ಷದ ಹಿಂದೆಯೇ ಈ ಯೋಜನೆಯನ್ನು ಮಾಡಬೇಕೆಂದು ತಯಾರು ಮಾಡಿ ಇಟ್ಟಿದಂತಹ ಯೋಜನೆಯನ್ನು ಇಲ್ಲಿವರೆಗೂ ಅದನ್ನು ನಾವು ಮುಂದಕ್ಕೆ ತರುವುದಕ್ಕಾಗುತ್ತಿಲ್ಲ. ಅದರ ಬಗ್ಗೆ ಕೇಳಿದರೆ ಹಣವಿಲ್ಲ. ಮತ್ತೊಂದಿಲ್ಲ ಎಂದು ಹೇಳುತ್ತಾರೆ. ನನ್ನ ತೊಂದರೆ ನನಗೇ ಗೊತ್ತು, ನಮ್ಮ ಕ್ಷೇತ್ರದಲ್ಲಿ ಏನು ಹೇಳುತ್ತಾರೆಂದರೆ ನಮ್ಮ ಪಕ್ಷದವರು ಮಾಡಿದಂತಹ ಕೆಲಸವನ್ನು ಇವರು ಮಾಡುತ್ತಿಲ್ಲ ಎನ್ನುವಂತಹ ಆರೋಪವನ್ನು ಇವತ್ತು ಮಾಡುತ್ತಿದ್ದಾರೆ. ಇದನ್ನು ನಾವು ಸೂಕ್ಷ್ಮವಾಗಿ ವಿಚಾರ ಮಾಡಬೇಕು. ಯಾವುದೇ ಸರ್ಕಾರವಾಗಿರಲಿ, ಹಿಂದೆ ಮಾಡಿರುವುದೇ ಆಗಿರಲಿ, ಮುಂದೆ ಮಾಡುವಂತಾದ್ದೇ ಆಗಿರಲಿ, ಆ ಯೋಜನೆಯನ್ನು ನಾವು ಜಾರಿಗೆ ಕೊಟ್ಟಾಗ ಮಾತ್ರ ನಮಗೆ ಒಳ್ಳೆಯ ಹೆಸರು ಬರುತ್ತದೆ ಎನ್ನುವಂತದ್ದು ನನ್ನ ಅಭಿಪ್ರಾಯವಾಗಿದೆ. ಅಂದು ಆ ಯೋಜನೆಯನ್ನು 8ನೇ ಪಂಚವಾರ್ಷಿಕ ಯೋಜನೆಯಲ್ಲಿ ಕಂಪ್ಲೀಟ್ ಮಾಡಬೇಕು ಎಂದು ಹಾಕಿಕೊಂಡರು; ಆದರೆ ಈವರೆಗೂ ಅದರ ಬಗ್ಗೆ ಯಾವ ರೀತಿಯಾದಂತಹ ತಿಳುವಳಿಕೆ ಬಂದಿಲ್ಲ ಮತ್ತು ಅದರ ಬಗ್ಗೆ ಇನ್ನು ಪ್ರೊಸಿಡಿಂಗ್ಸ್ ಸ್ಟಾರ್ಟ ಆಗಿಲ್ಲ. ಲ್ಯಾಂಡ್ ಅಕ್ವೈರ್

ಮಾಡಬೇಕು ಎಂದು ಹೇಳಿ ಕಾಂಪನ್ಸೇಷನ್ ಹಣವನ್ನು ಟ್ರಷ್ಟ ಹೆಡ್‌ಗೆ ಈಗಾಗಲೇ ತುಂಬಿದ್ದಾರೆ. ಆದರೆ ಇದುವರೆಗೂ ಈ ಬಗ್ಗೆ ಇಂಟರೆಸ್ಟ್ ತೆಗೆದುಕೊಳ್ಳುತ್ತಿಲ್ಲ. ಇದನ್ನು ತಾವು ಸರಿಯಾದ ರೀತಿಯಿಂದ ನೇರವೇರಿಸಿ ಕೊಟ್ಟರೆ ನಮ್ಮ ಹಳ್ಳಿ ಜನ ತಮಗೆ ಸದಾಕಾಲ ಚಿರಋಣಿಯಾಗಿರುತ್ತಾರೆ ಎನ್ನುವಂತಹ ಮಾತನ್ನು ಹೇಳಿ ನಾನು ಹೆಚ್ಚಿನ ಸಮಯವನ್ನು ತೆಗೆದುಕೊಳ್ಳದೆ ಮಾನ್ಯ ಪಿಡಬ್ಲ್ಯೂಡಿ ಮಂತ್ರಿಗಳನ್ನು ಒಂದು ಮಾತು ಕೇಳುತ್ತೇನೆ. ಇದನ್ನು ನನ್ನ ಮತಕ್ಷೇತ್ರಕ್ಕೆ ಎಂದು ಕೇಳುತ್ತಿಲ್ಲ. ಇವತ್ತು ಜಿಲ್ಲಾಪರಿಷತ್ತಿನಲ್ಲಿ ಇರುವಂತಹ ರಸ್ತೆಗಳನ್ನು ತೆಗೆದು ಪಿಡಬ್ಲ್ಯೂಡಿಗೆ ಕೊಟ್ಟಿದ್ದಾರೆ. ಆದರೆ ದುಡ್ಡನ್ನು ಪಿಡಬ್ಲ್ಯೂಡಿಗೆ ಹೆಚ್ಚಿಗೆ ಕೊಡಬೇಕಾಗಿತ್ತು. ಹೆಚ್ಚಿಗೆ ದುಡ್ಡನ್ನು ಬಿಡುಗಡೆ ಮಾಡಿಲ್ಲ. ನನ್ನ ಮತಕ್ಷೇತ್ರದಲ್ಲಿ ಸುಮಾರು 15–16 ಲಕ್ಷ ರೂಪಾಯಿಗಳ ಕೆಲಸ ಆಗುವಂತಹ ಜಿಲ್ಲಾಪರಿಷತ್ತಿನಿಂದ ಇರುವಂತಹ ರಸ್ತೆಗಳನ್ನು ಪಿಡಬ್ಲ್ಯೂಡಿಗೆ ಟ್ರಾನ್ಸ್‌ಫರ ಮಾಡಿದ್ದಾರೆ. ಆದರೆ ಹಣ ಬಿಡುಗಡೆ ಯಾಗಿಲ್ಲ. ಅಂದಮೇಲೆ ನಾವು ಯಾವರೀತಿ ಕೆಲಸ ಮಾಡಬೇಕು? ಅದನ್ನು ಪಿಡಬ್ಲ್ಯೂಡಿಗೆ ಕೊಡುವುದರಲ್ಲಿ ಅರ್ಥ ಏನು ಇತ್ತು ಎಂದು ನಾನು ಕೇಳುತ್ತೇನೆ. ಜಿಲ್ಲಾ ಪರಿಷತ್ತಿನಲ್ಲಿ ಮಾಡುತ್ತಿರುವಂತಹ ಕೆಲಸವನ್ನು ತೆಗೆದುಕೊಟ್ಟಾಗ ಹೆಚ್ಚಿನ ದುಡ್ಡನ್ನು ಕೊಟ್ಟರೆ ಅದಕ್ಕೆ ಪ್ರಯೋಜನವಾಗುತ್ತಿತ್ತು. ನಾನು ಸನ್ಮಾನ್ಯ ಮಂತ್ರಿಗಳಿಗೆ ಮನವಿ ಮಾಡಿಕೊಳ್ಳುತ್ತೇನೆ ದಯವಿಟ್ಟು ಇಲ್ಲಿ ಮಾನ್ಯ ಮುಖ್ಯಮಂತ್ರಿಯವರು ಎಲ್ಲರೂ ಇದ್ದಾರೆ. ತಾವು ಇದರ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡಿ, ಹೆಚ್ಚಿನ ಹಣ ಬಿಡುಗಡೆ ಮಾಡುವಂತಹ ಒಂದು ಯೋಜನೆಯನ್ನು ಹಾಕಿಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಂಡು ಮತ್ತು ಚಿಕ್ಕ ನೀರಾವರಿ ಮಂತ್ರಿಗಳು ನಮ್ಮ ಜಿಲ್ಲೆಯವರು ಆಗಿದ್ದಾರೆ. ಬಿಜಾಪುರ ಜಿಲ್ಲೆಯ ಆಗುಹೋಗುಗಳ ಬಗ್ಗೆ ಅವರು ಪ್ರತಿಯೊಂದು ವಿಷಯಗಳನ್ನು ಅರಿತಿದ್ದಾರೆ. ಅವರು ಬಿಜಾಪುರ ಜಿಲ್ಲೆಯಲ್ಲಿ ವಿಶೇಷವಾಗಿ ಹಿಂದುಳಿದ ಜನಾಂಗ ಯಾವುದು ಎಂದು ನಾನು ಹೇಳಬೇಕಾಗಿಲ್ಲ.

ಯಾರು ಒಂದು ಈ ಪ್ರೊಜೆಕ್ಟ್‌ನಿಗಾಗಲೀ ಮತ್ತು ಬಿಜಾಪುರ ಜಿಲ್ಲೆಯಲ್ಲಿ ಶೋಷಿತ ವಾದಂಥ ಜನರು ಇದ್ದಾರೆ ಎನ್ನುವಂಥದ್ದು ಅವರಿಗೆ ಚೆನ್ನಾಗಿ ಗೊತ್ತಿದೆ. ನಮ್ಮಲ್ಲಿ ಜಾತಿ ಮತದ ಮೇಲೆ ಶೋಷಣೆ ಎಂದು ಹೇಳುತ್ತಿಲ್ಲ. ನಮಗೆ ನ್ಯಾಚುರಲ್ ಕೆಲಾಮಿಟೀಸ್ ನಿಂದ ಎಲ್ಲರೂ ನಾವು ಬಡಜನರಾಗಿದ್ದೇವೆ. ನನ್ನ ಮನೆಯಲ್ಲೇ ನಾಡಗೌಡ ಎನ್ನುವವನು ಹೆಂಡಿ ಕೆಲಸ ಬಳಿಯುತ್ತಿದ್ದಾನೆ. ನಾನೂ ನಾಡಗೌಡ, ಅವನೂ ನಾಡಗೌಡ, ಹೆಂಡಿ ಕೆಲಸ ಬಳಿಯುತ್ತಾನೆ. ಈ ರೀತಿಯಾಗಿರುವಂಥ ನಾವು ಆರ್ಥಿಕ ಮಟ್ಟವನ್ನು ಎತ್ತಬೇಕಾ ದರೆ ನಿಜವಾಗಿಯೂ ತಮ್ಮ ಯೋಜನೆಯಲ್ಲಿ ಹೆಚ್ಚಿನ ಒಂದು ಅವರ ಯೋಜನೆಯಲ್ಲಿ ಹೆಚ್ಚಿನ ಶಕ್ತಿಯನ್ನು ಕೊಡಬೇಕು. ಅವರಿಗೆ ಹೆಚ್ಚಿನ ದುಡ್ಡನ್ನು ಬಿಡುಗಡೆಮಾಡಬೇಕು. ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ನಾವು ವೈಂಡ್‌ಆಫ್ ಮಾಡುತ್ತೇವೆ ಎನ್ನುವಂಥ ಮಾತನ್ನು ನಾನು ಕೇಳಿದ್ದೇನೆ. ಅದು ಸರಿಯಲ್ಲ ಎಂದು ನನ್ನ ಅನಿಸಿಕೆ. ಏಕೆಂದರೆ

ಕಾರ್ಪೊರೇಷನ್‌ನದು ಏನೂ ತಪ್ಪಿಲ್ಲ. ಸರಿಯಾದಂಥ ರೀತಿಯಿಂದ ದುಡ್ಡನ್ನು ಬಿಡುಗಡೆ ಮಾಡಿ; ನಬಾರ್ಡ್‌ನವರು ದುಡ್ಡನ್ನು ರಿಲೀಸ್ ಮಾಡಲಿಲ್ಲ ಎಂಬ ಕಾರಣಕ್ಕೋಸ್ಕರ ತಾವು ಹೆಚ್ಚಿನ ದುಡ್ಡನ್ನು ಬಿಡುಗಡೆ ಮಾಡದೇ ಇಂಥವಂಥ ಕಾರಣಕ್ಕೆ ಇವತ್ತು ಆ ಕಾರ್ಪೊರೇಷನ್ ಅನ್ನು ಮುಚ್ಚಿಹಾಕುತ್ತೇವೆ ಎಂದರೆ ಅದರ ಅರ್ಥವೇನು ? ಎಂದು ನಾನು ಕೇಳುತ್ತೇನೆ. ಆ ಕಾರ್ಪೊರೇಷನ್ ಏನು ತಪ್ಪು ಮಾಡಿದೆ ? ಅಧಿಕಾರಿಗಳಿಗೆ ದುಡ್ಡು ಕೊಟ್ಟರೆ ತಾವಾಗಿಯೇ ಕೆಲಸ ಮಾಡುತ್ತಾರೆ. ಆಮೇಲೆ ಪೋಸ್ಟಿಂಗ್ಸ್ ಯಾವ ರೀತಿಯಲ್ಲಿ ಮಾಡುತ್ತಾರೆ ಎಂದು ನೋಡಿದರೆ ಬಹಳ ವಿಚಿತ್ರ ಇದೆ. ತಾವೆಲ್ಲರೂ ತಿಳಿದು ಕೊಳ್ಳಬೇಕು. ಮೂರು ತಿಂಗಳಲ್ಲಿ ನಾಲ್ಕು ತಿಂಗಳಲ್ಲಿ ರಿಟೈರ್ ಆಗುವಂಥವರನ್ನು ಅಲ್ಲಿ ಎಂ. ಡಿ. ಎಂದು ಹೇಳಿ ಪೋಸ್ಟಿಂಗ್ ಮಾಡುತ್ತಾರೆ. ಅವನಿಗೆ ಏನೂ ಆಸಕ್ತಿ ಇರುವುದಿಲ್ಲ. ಆರಾಮಾಗಿ ಇರುತ್ತಾನೆ. ಲೀವ್ ಹಾಕುತ್ತಾರೆ. ಒಂದು ತಿಂಗಳು ಆಫೀಸ್‌ನಲ್ಲಿ ಇರುತ್ತಾನೆ. ಮನೆಗೆ ಹೋಗಿಬಿಡುತ್ತಾನೆ. ಈ ರೀತಿ ಆಗುತ್ತಿರುವಂಥದ್ದನ್ನು ತಪ್ಪಿಸುವಂಥ ಜವಾಬ್ದಾರಿ ಇಡೀ ನಮ್ಮ ಸಚಿವ ಸಂಪುಟದ ಮೇಲೆ ಇದೆ ಎನ್ನುವಂಥ ಮಾತನ್ನು ಹೇಳು ತ್ತೇನೆ. ಏಕೆಂದರೆ ಅವರಿಗೆ ಹೆಚ್ಚಿನ ದುಡ್ಡನ್ನು ಬಿಡುಗಡೆ ಮಾಡಬೇಕು. ನಾವು ಮಲ್ಲಿಕಾರ್ಜುನ ಪ್ರಸನ್ನ ಅವರು ಇದ್ದಾಗ ನೋಡಿದ್ದೇವೆ. ಮಲ್ಲಿಕಾರ್ಜುನ ಪ್ರಸನ್ನರವರಿ ಗಿಂತ ಮುಂಚೆ ಕೇವಲ ಲಿಫ್ಟ್ ಇರಿಗೇಷನ್‌ಗೆ ಕಾರ್ಪೊರೇಷನ್‌ಗೆ ದುಡ್ಡು ಎರಡು ಕೋಟಿ ರೂಪಾಯಿ ಮಾತ್ರ ಇಟ್ಟಿದ್ದರು. ಎರಡು ಕೋಟಿ ಯಾವುದಕ್ಕೆ ಎಂದರೆ ಅದು ಕೇವಲ ಸ್ಯಾಲರಿ ಕಾಂಪೊನೆಂಟ್‌ಗೆ ಮಾತ್ರ. ಈ ರೀತಿಯಾಗುವುದರಿಂದ ಅವರಿಗೆ ಹೆಚ್ಚಿನ ದುಡ್ಡು ಬಿಡುಗಡೆ ಮಾಡಿದರೆ ಅದನ್ನು ನಾವು ಪೂರ್ತಿಗೊಳಿಸುವುದಕ್ಕೆ ಸಾಧ್ಯವಿದೆ ಎನ್ನುವಂಥ ಮಾತನ್ನು ನಾವು ಇಲ್ಲಿ ಪರಿಗಣಿಸಬೇಕಾಗುತ್ತದೆ.

ಎನ್ನುವಂಥ ವಿಷಯವನ್ನು ಹೇಳುತ್ತೇನೆ. ಅದೇ ರೀತಿ ತಮ್ಮಲ್ಲಿ ಒಂದು ವಿಷಯ. ಲಿಫ್ಟ್ ಇರಿಗೇಷನ್ಸ್ ನಮಗೆ ಬರುವಂಥ ಕ್ಷೇತ್ರದಲ್ಲಿ ಏನಾಗುತ್ತಿದೆ ಎಂದರೆ ಅದು ಮುಂದೆ ಪ್ರೊಜೆಕ್ಟ್ ಅಫೆಕ್ಟೆಡ್ ಪೀಪಲ್ ಇದ್ದೇವೆ. ಅದನ್ನು ಕಾಡಾದಿಂದ ತೆಗೆದುಕೊಳ್ಳುತ್ತಾರೆ ಎಂದು ಹೇಳಿದರು. ಆ ಕಾಡಾದವರು ಏನು ಎಂದರು ಎಂದರೆ ನಮಗೆ ಬೇಡ We have transferred all these projects to Lift Irrigation Corporation ಎಂದು ಹೇಳಿದರು. ಈಗ ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್‌ಗೆ ಕೇಳಿದರೆ ನಮ್ಮ ಹತ್ತಿರ ದುಡ್ಡಿಲ್ಲ. ನಮ್ಮ ಹತ್ತಿರ ನಬಾರ್ಡ್‌ನವರು ಅಗ್ರಿ ಆಗುತ್ತಿಲ್ಲ. ಇದನ್ನು ಆರ್ ಅಂಡ್ ಆರ್ ವರ್ಕ್ಸ್‌ನಲ್ಲಿ ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ನಾವು ಎಲ್ಲಿಗೆ ಹೋಗಬೇಕು ಎಂದು ಗೊತ್ತಿಲ್ಲ. ಅದಕ್ಕೋಸ್ಕರ ಇದರ ಬಗ್ಗೆ ಒಂದು ಸರಿಯಾದಂಥ ಚಿಂತನೆಯನ್ನು ಮಾಡಿ ಈ ಯೋಜನೆಯನ್ನು ಕಾರ್ಯಗತಗೊಳಿಸಬೇಕಾದರೆ ಅವರವರಿಗೆ ಸೀಮಿತವಾಗಿನ ತಕ್ಕಂಥ ಕೆಲಸದಲ್ಲಿ ಅವರಿಗೆ ಹೆಚ್ಚಿನ ಒಂದು ದುಡ್ಡನ್ನು ಕೊಟ್ಟು ಇಲಾಖೆಯನ್ನು ಸರಿಯಾದ ರೀತಿಯಿಂದ ನಡೆಸಿದರೆ ಮಾತ್ರ ಸಫಲವಾಗುತ್ತದೆ ಎನ್ನುವಂಥ ಮಾತನ್ನು

ಈ ಸಂದರ್ಭದಲ್ಲಿ ಹೇಳಿ ಹೆಚ್ಚಿನ ಸಮಯವನ್ನು ತೆಗೆದುಕೊಳ್ಳದೆ ತಾವು ಕೊಟ್ಟಂಥ ಅವಕಾಶಕ್ಕೆ ತಮಗೆ ನಾನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಜೈ ಹಿಂದ್.

ಅಧ್ಯಕ್ಷರು:- ಯಾರು ಮಾತನಾಡುವವರು ಇಲ್ಲವೇ ?

ಶ್ರೀ ವಾಟಾಳ ನಾಗರಾಜ್ :- ಏನು ಇಷ್ಟೊಂದು ಧಾರಾಳ ಇವತ್ತು ?

ಅಧ್ಯಕ್ಷರು :- ತಮ್ಮ ಆಜ್ಞೆಯ ಮೇರೆಗೆ ಮಾಡಿದ್ದೇನೆ. ಇದು ನನ್ನದಲ್ಲ. ನನ್ನ ರೂಲ್ಸ್ ಪ್ರಕಾರ ಹೊರಟಿದ್ದೆ. ತಾವೆಲ್ಲಾ ಕೇಳಿಕೊಂಡ ಕೂಡಲೇ ಸರಿ ಎಂದು ಹೇಳಿದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ:-ನಮಗೆ ಬಹಳ ಅನುಕೂಲ ಮಾಡಿಕೊಟ್ಟರು.

ಶ್ರೀ ಬಿ. ರಾಜುಗೌಡ:- ಪತ್ರಕರ್ತರೆಲ್ಲಾ ಹೋಗಿದ್ದಾರೆ. ಅಲ್ಲಿ ಒಬ್ಬರೂ ಇಲ್ಲ.

ಶ್ರೀ ಕೆ. ಹೆಚ್. ರಂಗನಾಥ್:- ನಾಳೆ ಉತ್ತರವನ್ನು ಕೊಡೋಣ.

ಅಧ್ಯಕ್ಷರು:- ಎಲ್ಲಾ ಸದನದ ಸದಸ್ಯರ ಒಪ್ಪಿಗೆ ಇದ್ದರೆ ಆಗಬಹುದು.

ಶ್ರೀ ಬಿ. ರಾಜುಗೌಡ:- ಪತ್ರಕರ್ತರು ಇಲ್ಲ. ದಯಮಾಡಿ ನಾಳೆಗೆ ಹಾಕಿ.

ಅಧ್ಯಕ್ಷರು:-ಎಲ್ಲಾ ಸದನದ ಸದಸ್ಯರ ಒಪ್ಪಿಗೆ ಇದ್ದರೆ ನಾಳೆ ತೆಗೆದುಕೊಳ್ಳೋಣ. ಏಕೆಂದರೆ ನಾನು ಹೇಳಿದ್ದೇನೆ. ಇವತ್ತು ಮುಗಿಸೋಣ ಎಂದು ಹೇಳಿ.

ಶ್ರೀ ಪಿ ಜಿ. ಆರ್. ಸಿಂಧ್ಯ:-ನಾಳೆ ಒಂದು ಗಂಟೆ ಮುಂಚೆ ಸೇರೋಣ. ಇದು ನಮ್ಮ ಸಲಹೆ. ಸೇರಿ ಸಭೆಯ ಕಾರ್ಯಕಲಾಪಗಳನ್ನು ಮಾಡೋಣ. ಒಂಭತ್ತೂವರೆಗೆ ಸೇರೋಣ.

ಶ್ರೀ ವಾಟಾಳ್ ನಾಗರಾಜ್:- ನಮ್ಮ ಸದಸ್ಯರುಗಳು ಕರೆಗಂಟೆ ಬಾರಿಸುತ್ತಿದ್ದರೂ ಹತ್ತು ಗಂಟೆಗೆ ಬರುವುದು ನಮ್ಮ ಶಾಸಕರುಗಳು. ತಮಗೆ ಗೊತ್ತಿದೆ. ನಮ್ಮದೇನೂ ಅಭ್ಯಂತರವಿಲ್ಲ. ನಾವು ಒಂಭತ್ತುವರೆಗಲ್ಲ ಬೆಳಿಗ್ಗೆ 7 ಗಂಟೆಗೆ ಕರೆದರೂ ನಾವು ಬರುತ್ತೇವೆ

ಅಧ್ಯಕ್ಷರು:- ಇದಕ್ಕೆ ಎಲ್ಲಾ ಸದಸ್ಯರ ಒಪ್ಪಿಗೆ ಇದೆಯೇ ?

ಶ್ರೀ ವಾಟಾಳ್ ನಾಗರಾಜ್:- ನಮಗೆ ಇಲ್ಲಿ ತಾವು ಮಲಗಿಕೊಳ್ಳುವಂಥ ವ್ಯವಸ್ಥೆ ಊಟದ ವ್ಯವಸ್ಥೆ ಮಾಡಿಕೊಟ್ಟರೆ ನಾವು ಇಲ್ಲೇ ಇರುತ್ತೇವೆ.

ಶ್ರೀ ಹೆಚ್. ಏಕಾಂತಯ್ಯ:- ಆ ವ್ಯವಸ್ಥೆ ಬಗ್ಗೆ ಬೇಡ.

ಅಧ್ಯಕ್ಷರು:- ಸದನದ ಕಲಾಪವನ್ನು ಮುಂದುವರಿಸಿ ನಾಳೆ ಬೆಳಿಗ್ಗೆ ಒಂಭತ್ತೂ ವರೆಗೆ ಕೂಡುವುದು.

(ಸದನವು 6-55 ಮುಕ್ತಾಯಗೊಂಡು ಮತ್ತೆ 17- -93ರ ಬೆಳಿಗ್ಗೆ 9-30 ಗಂಟೆಗೆ ಮತ್ತೆ ಸಮಾವೇಶಗೊಳ್ಳಲು ನಿಶ್ಚಯಿಸಿತು.

(† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)